'ಕೃಷ್ಣಕುಮಾರ'

ಮನೋಹರ ಗ್ರಂಥ ಪ್ರಕಾಶನ ಸಮಿತಿ
ಧಾರವಾಡ.

ಅಮ್ಮೆಂಬಳ ಶಂಕರ ನಾರಾಯಣ

ಮನೋಹರ ಗ್ರಂಥಮಾಲೆಯ ೬೫-೬೬ನೆಯ ಕುಸುಮ

ವಿ. ಪ್ರ. ೨

ಮಿಂಚಿನ ಹುಡಿ

(ಎಂಟು ಏಕಾಂಕಗಳ ಸಂಗ್ರಹ)

ಬರೆದವರು :

ಶ್ರೀ. ಕೃಷ್ಣಕುಮಾರ

ಎಪ್ರಿಲ್-ಜೂನ್
೧೯೪೪

ಬೆಲೆ
೨-೮-೦.

ಮನೋಹರ ಗ್ರಂಥ ಪ್ರಕಾಶನ ಸಮಿತಿ
ಧಾರವಾಡ

ಸಾಹಿತ್ಯ ವಿಷಯದಲ್ಲಿ ಸಲಹೆಗಾರರು :

ಶ್ರೀ. ದ. ರಾ. ಬೇಂದ್ರೆ ಎಂ. ಎ.,
ಶ್ರೀ. ವಿ. ಕೃ. ಗೋಕಾಕ ಬಿ. ಎ., (ಆಕ್ಸಫರ್ಡ್)
ಶ್ರೀ. ರಂ. ಶ್ರೀ. ಮುಗಳಿ ಎಂ. ಎ., ಬಿ. ಟಿ.

ಸಂಪಾದಕ :

ಜಿ. ಬಿ. ಜೋಶಿ

ಈ ನಾಟಕಗಳನ್ನು ಆಡುವುದಕ್ಕೆ ಪರವಾನಿಗೆಯು ಆವಶ್ಯಕತೆಯೇನಿಲ್ಲ; ಮಾತ್ರ ಗ್ರಂಥಕರ್ತರಿಗಾಗಲಿ, ಪ್ರಕಾಶಕರಿಗಾಗಲಿ ತಪ್ಪದೆ ತಿಳಿಸಬೇಕು. ಆದರೆ ಈ ನಾಟಕಗಳನ್ನು ಯಾರೂ ಹಣಕ್ಕಾಗಿ ಅಭಿನಯಿಸಕೂಡದು.

ಮುದ್ರಕರು :
ಉಷಾ ಪ್ರೆಸ್,
ಮೈಸೂರು.

ಪ್ರಕಾಶಕರು :
ಜಿ. ಬಿ. ಜೋಶಿ
ಮನೋಹರ ಗ್ರಂಥಮಾಲಾ
ಧಾರವಾಡ.

ಮೊದಲ ಮಾತು

ಇಂದಿನ ಕನ್ನಡ ಸಾಹಿತ್ಯ ಕೆಲವೊಂದು ಅಂಶಗಳಲ್ಲಿ ಅನೇಕ ರಾಷ್ಟ್ರೀಯ ಹಾಗೂ ಅಂತರ್‍ರಾಷ್ಟ್ರೀಯ ಸಾಹಿತ್ಯಗಳ ಮಟ್ಟಕ್ಕೆ ಮುಟ್ಟುತ್ತಲಿದೆಯೆಂಬ ಮಾತನ್ನು ನಾವು ಈಗಲೀಗ ಕೇಳುತ್ತಿದ್ದೇವೆ. ಕಾವ್ಯದಲ್ಲಿಯೂ ಸಣ್ಣ ಕತೆಗಳಲ್ಲಿಯೂ ನಮ್ಮ ಸಾಹಿತ್ಯ ಕೆಲವಂಶಗಳಲ್ಲಿ ಬೇರೆ ಕೆಲ ಸಾಹಿತ್ಯಗಳ ನೆಲೆಯನ್ನೂ ಮೀರುವಂತಿದೆ ಎಂದೂ ಕೆಲವರು ಗಟ್ಟಿಸುತ್ತಿದ್ದಾರೆ. ಹೀಗಿದ್ದರೂ ಸಾಹಿತ್ಯ-ಕಲಾಕೃತಿಗಳಲ್ಲಿ ಸರ್ವಶ್ರೇಷ್ಠ ರೂಪವಾದ ನಾಟಕ ಕನ್ನಡದಲ್ಲಿ ಸಾಕಷ್ಟು ಪ್ರಗತಿ ಪಡೆದಿಲ್ಲವೆಂಬ ಕೊರಗು-ನುಡಿಯೂ ಆಗಾಗ ಕೇಳುತ್ತಿದೆ. ಸಾಹಿತ್ಯದ ಮುಖ್ಯ ರೂಪಗಳನ್ನು ಅವುಗಳ ಕಲಾಂಶದ ದೃಷ್ಟಿಯಿಂದ ಮಾತ್ರ ನಾಲ್ಕು ಮೆಟ್ಟಿಲಾಗಿ ಏರಿಸಿಟ್ಟಲ್ಲಿ, ಮೊದಲು ಕವನ, ನಂತರ ಕಥೆ, ಆಮೇಲೆ ಕಾದಂಬರಿ, ಎಲ್ಲಕ್ಕೂ ಮೇಲೆ ನಾಟಕ ಎನ್ನಬಹುದು. ಈ ಮೆಟ್ಟಿಲುಗಳನ್ನೊಪ್ಪಿದರೆ, ನಮ್ಮ ಸಾಹಿತ್ಯ ಇನ್ನೂ ಸರ್ವತೋಪರಿಯಾಗಿ ಪ್ರಗತಿಗೊಂಡಿಲ್ಲವೆಂದೂ ಜನತೆಯೂ ಸಾಹಿತ್ಯವೂ ಪರಸ್ಪರೋನ್ಮುಖಿಗಳಾಗಿ ಸಾಗಿಲ್ಲವೆಂದೂ ಹೇಳಬೇಕಾಗುತ್ತದೆ. ಏಕೆಂದರೆ ಕವನ-ಕತೆಗಳಿಗಿಂತ ಕಾದಂಬರಿ-ನಾಟಕಗಳು ಹೆಚ್ಚು ಸಾಮಾಜಿಕ ಸಾಹಿತ್ಯರೂಪಗಳು. ಕತೆ-ಕವನಗಳಲ್ಲಿ ಕಿವಿ ಪ್ರಾಧಾನ್ಯ; ಓದೂ ಉಂಟು. ಕಾದಂಬರಿಯಲ್ಲಿ ಓದು ಪ್ರಾಧಾನ್ಯ; ಕಲ್ಪನೆಯ ಕಣ್ಣೂ ಉಂಟು. ನಾಟಕದಲ್ಲಿಯೋ ನೋಟವೇ ಪ್ರಾಧಾನ್ಯ. ಈ ಕಾರಣದಿಂದ ಕವನಕ್ಕಿಂತ ಕತೆಯಲ್ಲಿ, ಕತೆಗಿಂತ ಕಾದಂಬರಿಯಲ್ಲಿ, ಕಾದಂಬರಿಗಿಂತ ನಾಟಕದಲ್ಲಿ ಸಾಮಾಜಿಕ ವ್ಯಾಪ್ತಿ ಹೆಚ್ಚು. ನಾಟಕದಲ್ಲಂತೂ ಪಾತ್ರಗಳ ಹಾಗು ಪ್ರೇಕ್ಷಕರ ಇಮ್ಮಡಿ ವ್ಯಾಪ್ತಿ. ಅಂತೇ ನಾಟಕ ರಚನೆಯಲ್ಲಿ, ಪ್ರದರ್ಶನದಲ್ಲಿ ಎಲ್ಲಕ್ಕೂ ಹೆಚ್ಚಿನ ಕಲೆಯ ಕುಸುರಿಗೆ ಎಡೆಯಿದೆ.

ಜನಜೀವನ ಸಾಹಿತ್ಯಗಳು ತಾಯಿ ಮಗುವಿದ್ದಂತೆ. ತಾಯಿಯೊಡನೆ ಹೊರಟ ಎಳೆಯನೊಬ್ಬ, ತಾಯ ಬೆರಳು ಹಿಡಿದು ಹೊರಟಿದ್ದರೂ ಅವಳಿಗಿಂತ ಎರಡು ಹೆಜ್ಜೆ ಮುಂದಿದ್ದು ಅವಳನ್ನೇ ತಾನು ಜಗ್ಗಿ ನಡೆಯುತ್ತಾನೆ. ಬೆರಳು ಬಿಟ್ಟು ಮುಂದೋಡಿದರೂ, ತಾಯಿ ಹೋಗಬೇಕೆನ್ನುವ ದಾರಿಯಲ್ಲೇ ತನ್ನ

ಮುಂದಾಳುತನವಿರಬೇಕೆಂಬ ಹಂಬಲವೂ ಆ ಮಗುವಿಗೆ ಇರುತ್ತದೆ. ಒಮ್ಮೊಮ್ಮೆ ತನ್ನ ಮುಂದುಗಾರಿಕೆಯ ಓಟದಲ್ಲಿರುವಾಗ ತಾಯಿ ಬೇರೆ ಬೀದಿಗೆ ಹೊರಳಿದರೆ, ಮಗು ತಟ್ಟನೋಡಿ ಬಂದು ಮತ್ತೆ ತಾಯಿಗಿಂತ ಮುಂದೋಡಿ ಸಾಗುತ್ತದೆ. ಆ ಮಗುವಿಗೆ ತಾಯ ರಕ್ಷಣೆಯೂ ಇರುತ್ತದೆ; ಅವಳ ದಾರಿಯನ್ನು ತಿಳಿದುಕೊಳ್ಳುವ ಮುನ್ನೋಟವೂ ಇರುತ್ತದೆ. ಜನಜೀವನಕ್ಕೆ ತಾಯ್ತನದ ಹಿರಿಮೆಯಿದೆ; ಹೆಣ್ಣಿನ ಮುದಗಮನವೂ ಇದೆ. ಸಾಹಿತ್ಯಕ್ಕೆ ಮಗುವಿನ ಮುಂದಾಳ್ತನವೂ ಇದೆ; ಹೊಂದಿಕೊಂಡಿರುವ ಹಂಬಲವೂ ಇದೆ. ಹೀಗುಂಟು ಸಾಹಿತ್ಯ ಜನಜೀವನಗಳ ಹತ್ತುಗಡಿ.

ಆದರೆ ನಮ್ಮ ನಾಡಿನಲ್ಲಿ ಏನಾಗಿದೆ! ತಾಯಿ ಮುದುಕಿಯೇ? ಮಗುವಿಗೆ ಚಾಪಲ್ಯ ಕಡಮೆಯೇ? ಅಥವಾ, ನಮ್ಮ ನಾಡಿನಲ್ಲಿ ಈ ತಾಯಿ ಮಕ್ಕಳು ಒಬ್ಬರೊಬ್ಬರನ್ನು ತಪ್ಪಿಸಿಕೊಂಡಿದ್ದಾರೆಯೇ! ಬೇರೆಲ್ಲ ನಾಡುಗಳಲ್ಲಿ ಹಲವಾರು ಸಾಹಿತ್ಯ ರೂಪಗಳೂ ಪರಿಪೂರ್ಣವಾಗಿ ಬೆಳೆಯುತ್ತಿರುವಾಗ, ಅದರಲ್ಲೂ ನಾಟಕ ಸಾಕಷ್ಟು ಪುಷ್ಟಿಗೊಳ್ಳುತ್ತಿರುವಾಗ, ನಮ್ಮಲ್ಲಿ ಮಾತ್ರ ನಾಟಕವೇ ಹಿಂದೆ ಬಿದ್ದ ಕಾರಣವೇನು ಎಂಬದು ತೊಡಕಿನ ತೊಡಕಾಗಿದೆ.

ಹಳಗನ್ನಡ ಸಾಹಿತ್ಯದಲ್ಲೂ ನಾಟಕ ಪ್ರಧಾನಸ್ಥಾನ ಪಡೆಯಲಿಲ್ಲ. ಅದಕ್ಕೊಂದು ಸಮಾಧಾನ ಹೇಳಿಕೊಳ್ಳಬಹುದು: ನಾಟಕ ದೃಶ್ಯಕಾವ್ಯವಾದುದರಿಂದ, ಕನ್ನಡ ನಾಡಿನಲ್ಲಿ ಅನೇಕವಾಗಿದ್ದ ನಾಟಕಗಳು ಆಗ ಅಟ್ಟಾಲಿಕೆ ಬಿಟ್ಟು ಬರೆಹಕ್ಕಿಳಿಯುವ ಆವಶ್ಯಕತೆ ಬರಲಿಲ್ಲ ಎಂದು. ಹೋದ ಶತಮಾನದ ಕೊನೆಗೆ ಹಾಗು ಈ ಶತಮಾನದ ಆರಂಭಕ್ಕೆ ನಾಟಕಕ್ಕೆ ಸ್ವಲ್ಪ ಮಹತ್ವ ಬಂದಿತ್ತು. ಆದರೆ ಇವುಗಳಲ್ಲಿ ಬಹಳ ನಾಟಕಗಳು ಹೊತ್ತಿಗೆಯ ಕಟ್ಟು ಮೀರಿ ಅಟ್ಟಾಲಿಕೆಯೇರಲಿಲ್ಲ. ಈಗೀಗ ಈ ನಾಟಕಗಳು ಪ್ರೌಢ ಸಾಹಿತ್ಯದಲ್ಲಿ ಸೇರಿಕೊಂಡು ಆಗಾಗ ಪಠ್ಯಪುಸ್ತಕಗಳ ಪಟ್ಟಕ್ಕೆ ಕೂಡುವದುಂಟು. ಇದೇ ಕಾಲದಲ್ಲಿ ಕರ್ನಾಟಕ ರಂಗಭೂಮಿಯೂ ಒಳ್ಳೇ ಊರ್ಜಿತ ಸ್ಥಿತಿಗೆ ಬಂದಿತಲ್ಲದೆ, ಕೆಲವಾರು ಹೆಸರಾದ ನಟರೂ ಆಗಿಹೋದರು. ಆದರೆ ಆ ರಂಗಭೂಮಿಯ ಹಲವು ನಾಟಕಗಳು ಸಾಹಿತ್ಯಕ್ಕಿಳಿಯದೇ ಹೋದುವು. ಈಗೀಗಲಂತೂ ಕನ್ನಡದ ನಾಟಕ ಸಾಯುತ್ತ ನಡೆದಿದೆ. ಕನ್ನಡದಲ್ಲಿ,

ಕೆಲವೊಂದು ವಿಶಿಷ್ಟ ಸಾಹಿತಿಗಳನ್ನು ಬಿಟ್ಟರೆ ಜನಸಾಮಾನ್ಯರಲ್ಲಿ ನಾಟಕಕ್ಕೆ ಎಡೆ ತಪ್ಪುತ್ತಲಿದೆ.

ಉದಾಹರಣೆಗೆಂದು ಈ ಸಂಗ್ರಹದ ಮಾತನ್ನೇ ತೆಗೆದುಕೊಳ್ಳುವಾ. ಈ ಸಂಗ್ರಹದಲ್ಲಿ ಬಂದ ನಾಟಕಗಳೆಲ್ಲ ಬಹುಶಃ ಹತ್ತು ಹನ್ನೆರಡು ವರ್ಷಗಳ ಹಿಂದೆಯೇ ಬರೆದುವು. ಇಷ್ಟು ದಿನವೆಲ್ಲ ಇವು ಬೆಳಕು ಕಾಣದೆ ಬಿದ್ದಿದ್ದವು. ಇವಲ್ಲದೆ ಒಂದೆರಡು ಪೂರ್ಣ ನಾಟಕಗಳೂ ದೂಳ ತಿನ್ನುತ್ತಲಿವೆ ಇನ್ನೂ. ಮನೋಹರ ಗ್ರಂಥಮಾಲೆಯವರು, ನನ್ನ "ಜೀವನ" ಆ ಮಾಲೆಯಲ್ಲಿ ಪ್ರಕಟವಾದಂದಿನಿಂದಲೇ ದುಂಬಾಲ ಬಿದ್ದಿದ್ದರೇನೋ ನಿಜ — "ನನ್ನ ಗ್ರಂಥ ಇನ್ನೊಂದೆರಡಾದರೂ ತಮ್ಮ ಮಾಲೆಯಲ್ಲಿ ಬರಲೇಬೇಕೆಂದು". ನಾನು ನನ್ನ ನಾಟಕಗಳನ್ನು ಮುಂದೊಡ್ಡುತ್ತಿದ್ದೆ; 'ನಾಟಕ ನಮ್ಮ ಜನಕ್ಕೆ ಹೆಚ್ಚಾಗಿ ಹಿಡಿಯುವದಿಲ್ಲ; ನಿನ್ನ ಕತೆ ಕಾದಂಬರಿಯೇನಾದರೂ ಕೊಡು' ಎಂದು ಅವರು. ಹೀಗಾಗಿ ಅವರಿಗೂ ನನಗೂ ಹಟ ಬಿತ್ತು. ಕಳೆದ ಹತ್ತು ವರ್ಷದಲ್ಲಿ ನನ್ನದೊಂದೂ ಬರೆಹ ಹೊರಬೀಳದುದಕ್ಕೆ (ಬೇರೆ ದೊಡ್ಡ ಕಾರಣಗಳಿದ್ದರೂ) ಈ ಹಟವೂ ಒಂದು ಸಣ್ಣ ಕಾರಣ. ಈ ಅವಧಿಯಲ್ಲಿ ನನ್ನದೊಂದು ಪೂರ್ಣನಾಟಕದ ಮೂಲಪ್ರತಿ ಕಳೆದೂ ಹೋಯಿತು.* ಕೊನೆಗೆ ಹಾವೇರಿ ನ್ಯಾಯನೆಂಬಂತೆ ಸಂಪಾದಕರು ಈ ಏಕಾಂಕ ನಾಟಕಗಳನ್ನು ಪ್ರಸಿದ್ಧಿಸಲು ಒಪ್ಪಿಕೊಂಡರು; ಇದಾದ ಮೇಲೆ ಒಂದು ಕಾದಂಬರಿಯನ್ನು ಕೊಡುವದಾಗಿ ನಾನು ಒಪ್ಪಿಕೊಂಡೆ.

ನಾಡಿನ ಓದುಗರ ನಾಡಿಯನ್ನು ಬಲ್ಲ ನಮ್ಮ ಸಂಪಾದಕರು 'ನಾಟಕ ನಮ್ಮ ಜನಕ್ಕೆ ಹೆಚ್ಚಾಗಿ ಹಿಡಿಯುವದಿಲ್ಲ' ಎಂದುದರಲ್ಲಿ ತುಂಬ ಸತ್ಯಾಂಶ

---

* ಶ್ರೀ ಕೃಷ್ಣಕುಮಾರರ "ಮೂರು ಶಕ್ತಿಗಳು" ಇಲ್ಲವೆ "ಕನ್ನಡ ರಾಣಿ" ಎಂಬ ಮೂರಂಕಿನ ಇಡೀ ನಾಟಕ, ೮-೧೦ ವರ್ಷಗಳ ಹಿಂದೆ ಪ್ರೊ. ಮುಗಳಿಯವರಿಗೆ ಓದಲು ಕೊಟ್ಟಾಗ ಕಳೆದುಹೋಗಿದೆಯಂತೆ. ಆ ನಾಟಕ ಬೆಳವಡಿ ಮಲ್ಲಮ್ಮನನ್ನು ಅಧಿಕರಿಸಿ ಬರೆದದ್ದು. ನಮ್ಮ ಗೆಳೆಯರ ಬಳಗದಲ್ಲಿ ಯಾರಲ್ಲಾದರೂ ಆ ಮೂಲಪ್ರತಿ ಕಣ್ಣುತಪ್ಪಿ ಉಳಿದಿದ್ದಲ್ಲಿ ದಯುವಿಟ್ಟು, ನಮಗಾಗಲೀ, ಶ್ರೀ ಕೃಷ್ಣಕುಮಾರರಿಗಾಗಲೀ ಕಳಿಸಬೇಕೆಂದು ಬಿನ್ನಹ.

—ಸಂ. ಮ. ಗ್ರ. ಮಾಲೆ.

ವಿದೆಯೆಂದು ನಾನು ನಂಬಿದ್ದೇನೆ. ಅಂತೇ ನಮ್ಮ ನಾಡಿನಲ್ಲಿ ನಾಟಕ ಇನ್ನೂ ತುದಿ ಮುಟ್ಟಲಿಲ್ಲ. ಶ್ರೀ. ಕೈಲಾಸಂ ಅಂಥ ಪ್ರತಿಭಾಶಾಲಿಗಳಿಗೂ ನಾಡ ಜನದಲ್ಲೆಲ್ಲ ದೊರೆಯಬೇಕಾಗಿದ್ದ ಮನ್ನಣೆ ಪೂರಾ ದೊರೆಯದಿರುವುದು ಕೊರಗಿನ ಮಾತು. ಹತ್ತು ವರ್ಷಗಳ ಹಿಂದಿನ ಪರಿಸ್ಥಿತಿ ಈಗಲೂ ಹಾಗೇ ಇದೆ; ಅಥವಾ ಹೆಚ್ಚು ಕೀಳಾಗಿದೆ ಎನ್ನಬೇಕು. ಇದು ನಾಡು ಸರ್ವಾಂಗೀಣವಾಗಿ ಬೆಳೆಯುತ್ತಿಲ್ಲ, ಜನಕ್ಕೆ ವ್ಯಕ್ತಿತ್ವದ ಕಣ್ಣು ತೆರೆದಿಲ್ಲ, ಸಂಸ್ಕೃತಿಯ ಕಣ್ಣು ಮೂಡಿಲ್ಲ ಎಂಬುದರ ಗುರುತು. ಈ ನೋಟ ಹುಟ್ಟಬೇಕಾದರೆ ನಾಡಿನಲ್ಲಿ ಎರಡು ತರದ ಪರಿಸ್ಥಿತಿಯ ಆವಶ್ಯಕತೆ ಇರುತ್ತದೆ. ಒಂದು, ನಾಡ ಜನವೆಲ್ಲ ಹೊಟ್ಟೆಬಟ್ಟೆಯ ಚಿಂತೆಯಿಲ್ಲದೆ ಸುಖ ಶಾಂತಿ ಸಮೃದ್ಧಿಗಳಲ್ಲಿ ನಲಿಯುತ್ತಲಿರಬೇಕು. ಆಗ ಕಲೆ ತಾನೇ ತಾನಾಗಿ ಕೊನರೊಡೆದು ಮೊಗ್ಗಾಗಿ ಅರಳಿ ಅಲರಾಗಿ ನನೆಕೊನೆಮೊಗುವದುಂಟು. ಅಂತಹ ಸೌಭಾಗ್ಯವನ್ನು ಕರ್ನಾಟಕ ಹಿಂದೆ ಉಳಿದೆಲ್ಲ ಪ್ರಾಂತಗಳಿಗಿಂತ ಹೆಚ್ಚಾಗಿ ಅನುಭವಿಸಿತು. ಎರಡನೆಯದಾಗಿ, ಅತಿ ದಾರುಣವಾದ ರಾಷ್ಟ್ರೀಯ ವಿಪ್ಲವವಾದರೂ ಬರಬೇಕು. ಆಗ ವ್ಯಕ್ತಿತ್ವದ ಹಾಗು ಸಂಸ್ಕೃತಿಯ ಕಣ್ಣುಗಳು ಜ್ವಾಲಾಮುಖಿಯಂತೆ ಪ್ರಸ್ಫುಟಿಸಿ ಬರುತ್ತವೆ. ಆಗ ಕಲೆ ತನ್ನ ಕಾಲೀ ಸ್ವರೂಪದಲ್ಲಿ ತೀವ್ರವಾಗಿ ಹುರುಪಳಿಸಿ ಹುಟ್ಟಿಬರುತ್ತದೆ. ನಮ್ಮ ನಾಡಿನಲ್ಲಿ ಮೊದಲನೆಯ ಸುಖಸಮೃದ್ಧಿಯ ಪರಿಸ್ಥಿತಿಯಂತೂ ಇಲ್ಲವೇ ಇಲ್ಲ. ರಾಜಕೀಯ ಮುರುಗಡೆಗಿಂತಲೂ ಆರ್ಥಿಕ ಮುರುಗಡೆ ನಮ್ಮನ್ನು ಹಿಪ್ಪೆಸಿಪ್ಪೆಯಾಗಿ ಮಾಡಿದೆ. ವಿದ್ಯೆ ಗುದ್ದು ಸೇರಿದೆ. ಆದರೆ ಎರಡನೆಯ ಪರಿಸ್ಥಿತಿ ನಮ್ಮ ಭಾರತದಲ್ಲೆಲ್ಲಾ ಹುರುಪಳಿಸುತ್ತಿರುವದಾದರೂ ಕನ್ನಡಿಗರಿಗೆ ಅದರ ಕಾವು ಹತ್ತಬೇಕಾದಷ್ಟು ಹತ್ತಿಲ್ಲ. ಹತ್ತಿದ್ದರೂ ಜನ ತಮ್ಮ ತಮ್ಮ ಮೈಯುಳಿಸಿಕೊಳ್ಳುವದರಲ್ಲಿದ್ದಾರಲ್ಲದೆ ನಾಡ ಜೀವನವನ್ನುಳಿಸಲು ಹೆಚ್ಚಾಗಿ ಹೆಣಗುತ್ತಿಲ್ಲ. ಹೀಗಾಗಿ ರಾಷ್ಟ್ರೀಯ ವಿಪ್ಲವಗಳಲ್ಲಿ ಹುಟ್ಟಿ ಬರುವ ತೀವ್ರರೂಪದ ಕಲೆಯೂ ನಮ್ಮಲ್ಲಿ ಸಾಕಷ್ಟು ಕಂಡುಬರುತ್ತಿಲ್ಲ. ಕರ್ನಾಟಕದಲ್ಲಿ ಜನತಾವಾದಿಯಾದ ನಾಟಕಕಲೆಯೇ ಅಧಿಕಾಂಶದಲ್ಲಿ ಹಿಂದೆ ಬಿದ್ದುದಕ್ಕೆ ನನಗೆನ್ನಿಸುವ ಕಾರಣ ಇದು.

ನಾಟಕ ಹಿಮ್ಮೆಟ್ಟಿದುದಕ್ಕೆ ಸಿನೆಮಾ ಕಾರಣವೆಂದು ಬಹುಜನ ಹೇಳುವ ಮಾತು ಅಷ್ಟು ಸರಿಯಲ್ಲ. ನಮ್ಮ ನಾಡಿನಲ್ಲಿ ಸಿನೆಮಾ ವ್ಯವಸಾಯವಾಗಲಿ

ಸಿನೆಮಾ ಥೇಟರುಗಳಾಗಲಿ ಮಿತಿಮೀರಿದ್ದರೆ ಇದನ್ನೊಪ್ಪಬಹುದಾಗಿತ್ತು. ನಾಲ್ಕು ನಾಡುಗಳಲ್ಲಿಯ ಸ್ಥಿತಿಯನ್ನು ಮನಗಂಡರೆ ಇದರ ಸತ್ಯ ಗೊತ್ತಾಗುವುದು. ಉದಾಹರಣೆಗೆ ಒಳನಾಡಾದ ಮಹಾರಾಷ್ಟ್ರ-ಗುಜರಾತ ಗಳನ್ನೂ ಹೊರನಾಡಾದ ಚೀನ-ರೂಸಗಳನ್ನೂ ನೋಡುವ. ಮಹಾರಾಷ್ಟ್ರ ಗುಜರಾತಗಳಲ್ಲಿ ಸಿನೆಮಾ ಬಂದ ಹೊಸದರಲ್ಲಿ ನಾಟಕ ಸ್ವಲ್ಪ ಹಿಮ್ಮೆಟ್ಟಿದ್ದರೂ ಮುಂದೆ ಅಲ್ಪಾವಧಿಯಲ್ಲಿಯೇ, 'ಸಿನೆಮಾದ ದಾರಿ ಬೇರೆ ತನ್ನ ದಾರಿ ಬೇರೆ' ಎಂದು ತಿಳಿದೊಡನೆ ನಾಟಕ ಮತ್ತೆ ನಿಜಸ್ಥಾನಕ್ಕೆ ಬಂತು. ಮಹಾರಾಷ್ಟ್ರ ದಲ್ಲಿ ಕೆಲವು ನಾಟಕಗಳ ನಟರು ಸಿನೆಮಾ ನಟರಂತೇ ಗಳಿಸುತ್ತಲಿದ್ದಾರೆ. ಕತೆ ಕಾದಂಬರಿಗಳಂತೆ ನಾಟಕ ಪುಸ್ತಕಗಳು ಹೇರಳವಾಗಿ ಹೊರಬರುತ್ತವೆ. ಗುಜರಾತದಲ್ಲೂ ಸಿನೆಮಾ ನಾಟಕಕ್ಕೆ ಅಡ್ಡಬಂದಿಲ್ಲ. ವಾರವಾರಕ್ಕೂ ಮುಂಬೈ, ಸುರತ, ಅಹಮ್ಮದಾಬಾದಗಳಲ್ಲಿ ಸಾರುವ ನಾಟಕಗಳ ಡಂಗುರ ಗಳನ್ನು ಕೇಳಿಯೂ, ಕೆಲವು ಪಾರಸಿ ಕಂಪನಿಗಳು ಸಹ ನಮ್ಮ ಪೌರಾಣಿಕ ನಾಟಕಗಳನ್ನಾಡಿ ಈಗಲೂ ಹಣವನ್ನೂ ಕೀರ್ತಿಯನ್ನೂ ಗಳಿಸುತ್ತಿರುವದನ್ನು ಕಂಡೂ ನಾನು ದಂಗಾಗಿದ್ದೇನೆ. ಚೀನದಲ್ಲಿ ಈಗಣ ವಿಪ್ಲವ ಕಾಲದಲ್ಲಿಯೂ ನಾಟಕ ಹೊಸರೂಪ ತಾಳುತ್ತಲಿದೆ. ರೂಸದಂಥ ಕೂಲಿಕಾರರ ನಾಡಿನಲ್ಲಿ ನಾಟಕಕ್ಕಿದ್ದ ಮನ್ನಣೆ ಸಿನೆಮಾಕ್ಕೂ ಇದೆಯೋ ಇಲ್ಲವೋ ಎಂದು ಒಮ್ಮೊಮ್ಮೆ ಸಂದೇಹವುಂಟಾಗುತ್ತದೆ. ಮಾಸ್ಕೋದಲ್ಲಿ ಸಿನೆಮಾ ಥೇಟರುಗಳಷ್ಟೇ ವಿಪುಲ ವಾಗಿ ನಾಟಕ-ಥೇಟರುಗಳು ಉಂಟೆಂಬದು ಅಚ್ಚರಿಯ ಮಾತಲ್ಲ. ರೂಸದಲ್ಲಿ ಈಗೀಗ ನಾಟಕಗಳ ನಟರೇ ಸಿರಿವಂತರ ಜಾತಿಯವರಾಗುತ್ತಿದ್ದಾರೆ. ಸಿನೆಮಾ ಕಲೆ ಪರಮಾವಧಿಗೇರಿದ ಈ ನಾಡುಗಳಲ್ಲಿ ನಾಟಕವೂ ಘನತೆ ಪಡೆ ಯುತ್ತಿರುವಾಗ, ಆ ಕಲೆಯ ಗಂಧವೇ ಇಲ್ಲದ ನಮ್ಮ ನಾಡಿನಲ್ಲಿ ಸಿನೆಮಾ ನಾಟಕವನ್ನು ನುಂಗಿತೆನ್ನುವದು ನಗೆಗೇಡಿನ ಮಾತೇ ಸರಿ!

ಸಿನೆಮಾದ ದಾರಿ ನಾಟಕದ ದಾರಿ ಬೇರೆ ಬೇರೆ ಎಂಬದು ನಿಜವಾದ ಮಾತು. ಕಾದಂಬರಿ ಕಾವ್ಯವನ್ನೂ, ಕತೆ ಕಾದಂಬರಿಯನ್ನೂ ನುಂಗದೆ, ಅವು ಪರಸ್ಪರ ಪೂರಕವಾಗಿ ಬೆಳೆಯುವದು ಸಾಧ್ಯವಿದ್ದಂತೆ ಸಿನೆಮಾ ನಾಟಕ ಗಳೂ ಜೋಡಿಯಾಗಿ ಬೆಳೆಯುವದು ಸಾಧ್ಯ. ಇವೆರಡೂ ಒಂದನ್ನೊಂದು ಮುಸಳಿಸುವ, ಕಿತ್ತಿಹಾಕುವ ಕಲೆಗಳು ಅಲ್ಲವೇ ಅಲ್ಲ. ಸೂಕ್ಷ್ಮವಾಗಿ ನೋಡಿ ದರೆ ಇವುಗಳ ಕ್ಷೇತ್ರವೂ ಬೇರೆ ಬೇರೆಯೆಂಬದು ತಿಳಿಯುವುದು. ಸಿನೆಮಾ

ದೃಷ್ಟಿಪ್ರಧಾನವಾದದ್ದು. ಕಣ್ಣು ರಂಜನೆ ಅದರ ಸಾಧ್ಯ; ಕಣ್ಕಟ್ಟು ಕಣ್ಮಾಯೆ ಅದರ ಹಿರಿ ಸಾಧನೆಗಳು. ಒಳ್ಳೇ ಪಾತ್ರಗಳೂ ದಿಗ್ದರ್ಶನವೂ ನಾಟಕಕ್ಕೂ ಸಿನೆಮಾಕ್ಕೂ ಬೇಕೇಬೇಕು. ಆದರೆ ಸಿನೆಮಾದಲ್ಲಿ ನಮ್ಮ ಕಣ್ಣು ನೋಟವನ್ನು ನಾವು ಕ್ಯಾಮೆರಾದ ಕಣ್ಣೊಳಗಿಂದ ಪೋಣಿಸಿ ನೋಡಬೇಕಾಗುತ್ತದೆ. ಮೇಲಾಗಿ ಎಲ್ಲಾ ನೆರಳಿನಾಟ. ಕ್ಯಾಮೆರಾದ ಕೈವಾಡವೇ ಸಿನೆಮಾದ ಜೀವಾಳ. ನೋಟಕರಿಗೂ ಪಾತ್ರಗಳಿಗೂ ನಡುವೆ ಅಪ್ರತ್ಯಕ್ಷವಾದ ಕ್ಯಾಮೆರಾ ಯಾವಾಗಲೂ ನಿಲ್ಲುತ್ತದೆ. ಹಾಗೆಯೇ ತೆರೆಯೂ ಎದುರು ನಿಲ್ಲುತ್ತದೆ. ನಾಟಕದಲ್ಲಿ ತೆರೆ ತೆರೆಯುತ್ತದೆ. ಅಲ್ಲದೆ ನೋಟಕರ ಹಾಗು ಪಾತ್ರಗಳ ನಡುವೆ ಬೇರೆ ಕಣ್ಣೊಂದು ಹಣಕುವದಿಲ್ಲ. ರಂಗಭೂಮಿ ತೆರೆದಂತೆಯೇ ನಮ್ಮಂತರಂಗವೂ ಸಾಕ್ಷಾತ್ತಾಗಿ ತೆರೆಯಲು ಆಸ್ಪದವಿರುತ್ತದೆ. ಪಡಿನೆರಳಿನಾಟದ ಬದಲು ಜೀವಂತತನದ ಸಕೃದ್ದರ್ಶನವಿರುತ್ತದೆ. ಈ ಮಾತನ್ನು ನಾವು ಬಗೆದರೆ, ಯಾವದು ಹೆಚ್ಚು, ಯಾವುದು ಕಡಮೆ ಎಂಬುದರ ಮಾತು ಬಿಟ್ಟರೆ, ಇವೆರಡರ ದಾರಿ ಬೇರೆಬೇರೆಂಬುದಾದರೂ ಸಿದ್ಧವಾಗದಿರದು. ಆದುದರಿಂದ ಸಿನೆಮಾಗಳಿಂದ ನಾಟಕ ಅಳಿಯುವದು ಸಾಧ್ಯವಿಲ್ಲ. ಸಾಹಿತ್ಯ, ಜೀವನ ಹಾಗು ಕಲೆಗಳ ಆವಿಷ್ಕಾರಕ್ಕೆ ಅನುವಾಗಿ ಬಂದ ಹೊಸದೊಂದು ವಾಹನ ಸಿನೆಮಾ. ನಾಟಕದ ಬೇರಡಗಿಸುವ ಕರಿಕೆಯಲ್ಲವದು.

ಇತ್ತೀಚೆ ಏಕಾಂಕ ನಾಟಕಗಳು ಪ್ರಮಾಣದಲ್ಲಿ ಸ್ವಲ್ಪ ಮಟ್ಟಿಗೆ ಹೆಚ್ಚಾಗುತ್ತಿವೆ. ಪೂರ್ಣನಾಟಕಗಳೂ ಏಕಾಂಕ ನಾಟಕಗಳಿಂದ ಹಿಮ್ಮೆಟ್ಟಬಹುದೆಂಬದು ನೆಲೆಯಿಲ್ಲದ ಮಾತು. ಸಣ್ಣಕತೆ ಹಾಗು ಕಾದಂಬರಿಗಳು ಹೇಗೆ ಬೇರೆ ಬೇರೆ ದಾರಿಯಲ್ಲಿ ಬೆಳೆಯುವದು ಸಾಧ್ಯವೋ ಹಾಗೆಯೇ ಏಕಾಂಕ ನಾಟಕಗಳೂ ಪೂರ್ಣ ನಾಟಕಗಳೂ ಬೆಳೆಯುವದು ಸಾಧ್ಯ. ಈ ನಮ್ಮ ನಾಡಿನಲ್ಲಿ ಏಕಾಂಕ ನಾಟಕಗಳೂ ಪೂರ್ಣ ನಾಟಕಗಳೂ ಇನ್ನೂ ಹೆಚ್ಚು ಹೆಚ್ಚು ಹುಟ್ಟಬೇಕು; ರಂಗಭೂಮಿಯನ್ನು ಮುಟ್ಟಬೇಕು. ಇಲ್ಲವಾದರೆ ಜನಮನವನ್ನು ಕುದುರಿಸುವ ಕೊನರಿಸುವ ದೊಡ್ಡ ಸಾಧನೆಯನ್ನು ನಾವು ಕಳೆದುಕೊಂಡಂತೆ; ಅಷ್ಟರ ಮಟ್ಟಿಗೆ ನಮ್ಮ ಸಾಹಿತ್ಯ ಕುಂಟಾದಂತೆ.

ಇತ್ತೀಚೆ ಓದುವ ನಾಟಕಗಳು, ಆಡುವ ನಾಟಕಗಳು ಎಂದೆರಡು ವಿಧಾನವುಂಟಾಗಿದೆ. ಮೊದಲನೆಯ ತರದ ನಾಟಕಗಳು ಹೆಚ್ಚಾಗಿ ಚರ್ಚೆ

ಹಾಗು ತತ್ತ್ವಪ್ರಧಾನವಾದುವು. ಎರಡನೆಯುವು ಹೆಚ್ಚಾಗಿ ವಸ್ತು, ಸನ್ನಿವೇಶ ಹಾಗು ಅಭಿನಯಪ್ರಧಾನವಾದುವು. ಆದರೆ ಮೊದಲನೆಯುವನ್ನು ಆಡಲು, ಎರಡನೆಯುವನ್ನು ಓದಲು ಬಾರದೆಂದಲ್ಲ. ಓದುವದರಿಂದಲೂ ಬಹು ಮಟ್ಟಿಗೆ ನೋಡಿದಷ್ಟೇ ಅನುಭವವನ್ನು ವಿದಗ್ಧರು ಪಡೆಯಲು ಸಾಧ್ಯವಿದೆ. ಬರೆಹಕ್ಕಿಳಿದ ನಾಟಕಗಳೆಲ್ಲವೂ ರಂಗಕ್ಕಿಳಿಯೇ ತೀರುವವೆಂದೇನಿಲ್ಲ. ಆದುದರಿಂದ ಎಲ್ಲ ನಾಟಕಗಳೂ ಮೊದಲು ಓದುವ ನಾಟಕವಾಗಲು ಅಭ್ಯಂತರವೇನಿಲ್ಲ. ಆ ರೂಢಿ ಹೆಚ್ಚಬೇಕು ನಮ್ಮ ಜನದಲ್ಲಿ.

ಈ ಸಂಗ್ರಹದಲ್ಲಿ ಎಂಟು ಏಕಾಂಕ ನಾಟಕಗಳಿವೆ. ಕೆಲವು ಪ್ರಹಸನ ಕೆಲವು ವಿಡಂಬನಗಳು; ಆದರೂ ಎಲ್ಲವುಗಳಲ್ಲೂ ಎರಡರ ಅಂಶ ಇಲ್ಲದಿಲ್ಲ. ಈ ನಾಟಕಗಳೆಲ್ಲಾ ಒಳಗಿನ ಒತ್ತಾಸೆಗಾಗಿ, ಕಂಡದ್ದು ಕಲ್ಪಿಸಿದ್ದು ಹಿಡಿಸಲಾರದಾಗಿ ಬರೆದಂಥವು. ಇವುಗಳಲ್ಲಿ ವ್ಯಂಗ್ಯ, ವಿಡಂಬನೆ, ಕೊಂಕು ವಸ್ತುಚಿತ್ರ ಹೇಗೇ ಇದ್ದರೂ ಒಟ್ಟಾರೆ ಇವುಗಳನ್ನು ನಾನು ನಿರೂಪಣೆಗಳು ಎನ್ನುತ್ತೇನೆ. ಇವುಗಳಲ್ಲಿ ಬಹುಶಃ ಎಲ್ಲ ರಂಗಕ್ಕೆ ತಕ್ಕುವೆನ್ನಬಹುದು. ಈ ನಾಟಕಗಳನ್ನು ಬರೆಯುವಾಗ "ತೆರೆಯ ಹಿಂದೆ" ಎಂಬ ನಾಟಕದಲ್ಲಿ ವ್ಯಕ್ತವಾದ ಇಂದಿನ ನಾಟಕಗಳ ತೊಂದರೆ ತೊಡಕುಗಳೆಲ್ಲ ನನಗೆ ವಿದಿತವಾಗಿದ್ದರೂ, ಅವು ನನ್ನ ಲೆಕ್ಕಣಿಕೆಗೆ ಎಡರಾಗಲಿಲ್ಲ ಮಾತ್ರ. ಆದರೆ ಆಡುವ ನಾಟಕಗಳೂ ಕೂಡ ಮೊದಲು ಓದಲೂ ತಕ್ಕವಾಗಿರಬೇಕೆಂಬ ಮಾತನ್ನು ನೆನಪಿನಲ್ಲಿಟ್ಟುಕೊಂಡೇ ಇವನ್ನು ಬರೆದಿದ್ದೇನೆ. ಅಂತೇ ಈ ನಾಟಕಗಳನ್ನು ಮೊದಲು ಓದುಗರ ಎದುರಿಗೇ ಇರಿಸುತ್ತಿದ್ದೇನೆ.* ಇಲ್ಲಿ ಬರುವ ಪಾತ್ರಗಳೆಲ್ಲ ಬಹುಶಃ ನಮ್ಮ ಸಮಾಜದವೇ ಆದರೂ ಒಂದೂ ವ್ಯಕ್ತಿಸೂಚಕವಾದುದಿಲ್ಲ. ಪಾತ್ರಗಳ ಹೆಸರಾರಿಸುವಾಗ ನನ್ನ ಗೆಳೆಯರ ಹೆಸರುಗಳನ್ನೇ ಬಳಸುವದೊಂದು ನನ್ನ ರೂಢಿ. ಪರ್ಯಾಯವಿಲ್ಲದಲ್ಲಿ, ವ್ಯಕ್ತಿ ವೈತ್ಯಯವಿಲ್ಲದಲ್ಲಿ, ನಿಮಿತ್ತ ಮಾತ್ರವಾಗಿ ಹಾಗೆ ಮಾಡಿದ್ದೇನೆ. ಇನ್ನುಳಿದ ಹೆಸರುಗಳು ಕೇವಲ ಸಂದರ್ಭವಾಚಕಗಳು.

'ಹಾಳುಗಂಡು' ಹಾಗೂ 'ರಾಯರ ಮದಿವೆ' ಇವೆರಡು ಹಿಂದೆ ಜಯಕರ್ನಾಟಕ ಗ್ರಂಥಮಾಲೆಯಲ್ಲಿ ಬಂದುವು. ಉಳಿದುವು ಮೊಟ್ಟ

---

* "ಹಾಳುಗಂಡು" "ರಾಯರ ಮದುವೆ" ಹಾಗು "ಮಿಸ್ ಚಾರುಗಾತ್ರಿ" ಇವು ಈ ಮೊದಲೇ ಧಾರವಾಡ, ಪುಣೆ ಪಟ್ಟಣಗಳಲ್ಲಿ ಅಭಿನಯಿಸಲ್ಪಟ್ಟವೆ.

ಮೊದಲಿಗೆ ಹೊರಬರುತ್ತಲಿವೆ. ಇವುಗಳಲ್ಲಿ ಒಂದೆರಡು ಇತ್ತೀಚೆ ಬರೆದುವಾದರೂ ಹೆಚ್ಚು ಹಿಂದೆಯೇ ಬರೆದಂತಹವು. ಹತ್ತು ವರ್ಷಗಳ ಮೇಲಾದರೂ ಈ ಏಕಾಂಕಗಳು ನನ್ನ ಗೆಳೆಯರಾದ ಮನೋಹರ ಗ್ರಂಥಮಾಲೆಯ ಸಂಪಾದಕರ ಒಲುಮೆ, ಬಲುಮೆ, ನೆರವುಗಳಿಂದಲೇ ಹೊರಬಂದುವು. ಅದಕ್ಕಾಗಿಯೂ, ಹಲವು ಕಾರಣಗಳಿಂದ ಇಷ್ಟು ದಿನ ಕೈಬಿಟ್ಟ ಲೆಕ್ಕಣಿಕೆಯನ್ನು ಆದರದಿಂದ ಮತ್ತೆ ನನ್ನ ಕೈಯಲ್ಲಿಟ್ಟುದಕ್ಕಾಗಿಯೂ, ಅವರಿಗೆ ನನ್ನ ಧನ್ಯವಾದಗಳು. ಈ ಸಂದರ್ಭದಲ್ಲಿ ನನಗೆ ಹುರುಪುಗೊಟ್ಟ ಬೇರೆ ಗೆಳೆಯರಿಗೂ ತುಂಬ ವಂದನೆಗಳು.

ಕೃಷ್ಣಕುಮಾರ

ಕೃತಜ್ಞತೆ

ನನ್ನ ಕಾಡಾಟವನ್ನೆಲ್ಲ ತಡೆದುಕೊಂಡು ನಮ್ಮ ಗ್ರಂಥಮಾಲೆಯಲ್ಲಿ ತಮ್ಮ ಏಕಾಂಕಗಳ ಈ ಸಂಗ್ರಹವನ್ನು ಪ್ರಕಟಿಸಲು ಅನುಮತಿ ಕೊಟ್ಟಿದ್ದಕ್ಕಾಗಿ ನಾನು ಶ್ರೀ. ಕೃಷ್ಣಕುಮಾರರಿಗೆ ಅತ್ಯಂತ ಕೃತಜ್ಞನಾಗಿದ್ದೇನೆ.

ಈ ಏಕಾಂಕಗಳಲ್ಲಿ ಶ್ರೀ. ಕೃಷ್ಣಕುಮಾರರು ತೀರ ಉತ್ತರ ಕರ್ನಾಟಕದ ಬಳಕೆಯ ಮಾತುಗಳನ್ನೆ ಬಳಸಿದ್ದಾರೆ. ಅದರಿಂದ ಮಂಗಳೂರು, ಮೈಸೂರಿನವರಿಗೆ ತೊಂದರೆಯಾಗಬಹುದೆಂದು ತಿಳಿದು 'ಅರ್ಥವಿವರಣೆ' ಯೊಂದನ್ನು ಕೊಡಲಾಗಿದೆ. ಅದನ್ನು ನೋಡಿಕೊಂಡರೆ ಈ ನಾಟಕಗಳನ್ನು ಓದಲು ಎಷ್ಟೊ ಸುಗಮವಾದೀತೆಂದು ನಂಬಿದ್ದೇನೆ.

ಈ ಸಂಗ್ರಹಕ್ಕೆ ಹೊದಿಕೆ-ಚಿತ್ರ ಬರೆದುಕೊಟ್ಟ ಗೆಳೆಯ ರಾಘವೇಂದ್ರರಿಗೆ ಉಪಕೃತನಾಗಿದ್ದೇನೆ.

ಸಂಪಾದಕ

ಅರ್ಥವಿವರಣೆ

ಉತ್ತರ ಕರ್ನಾಟಕದ ಮಾತಿನ ಕೆಲವೊಂದು ವಿಶಿಷ್ಟ ಪ್ರಯೋಗಗಳನ್ನು ತಿಳಿದುಕೊಳ್ಳದಿದ್ದರೆ, ಇತರರಿಗೆ ಈ ನಾಟಕಗಳನ್ನೋದುವದು ಕಷ್ಟಸಾಧ್ಯ. ಮೊದಲನೆಯದಾಗಿ ಹಲವು "ಎ" ಕಾರಾಂತಗಳು "ಇ" ಕಾರಾಂತಗಳಾಗುತ್ತವೆ:—ತಲೆ=ತಲಿ; ನಡತೆ=ನಡತಿ; ಮನೆ=ಮನಿ; ಕೊಡೆ=ಕೊಡಿ; ಬಲೆ=ಬಲಿ. "—ಆಗ" ಎಂಬುದು ಸಪ್ತಮೀ ಪ್ರತ್ಯಯ:— ಕೊರಳಾಗ=ಕೊರಳಲ್ಲಿ; ಮನಿಯಾಗ=ಮನೆಯಲ್ಲಿ; ಕೇಳೂದ್ರಾಗ=ಕೇಳುವಷ್ಟರಲ್ಲಿ. "—ಅರ" ಎಂದರೆ—ಆದರೂ; ನೀನರ=ನೀನಾದರೂ; ಏನರ=ಏನಾದರೂ ಮದಿವ್ಯಾಗರ=ಮದುವೆಯಲ್ಲಾದರೂ. "—ಅಲಾ" ಎಂದರೆ—ಅಲ್ಲಾ, ಬೇಡವೇ? ಎಂಬರ್ಥ. ಅಥವಾ ಮೈಸೂರಿನ "ಕಣೊ" ಎಂದರೂ ಸರಿ:—ಮಾಡಲಾ=ಮಾಡಬೇಡವೇ ಅಥವಾ ಮಾಡು ಕಣೊ. "—ಹತ್ತು ಎಂಬ ಕ್ರಿಯಾಪದದ ಪ್ರಯೋಗವೂ ಬಹಳ ವಿಚಿತ್ರವಾಗಿದೆ. ಉದಾ: ಬೆನ್ನುಹತ್ತು, ಚಿಂತೆಹತ್ತು, ನೌಕರಿಹತ್ತು, ಮಾಡಹತ್ತು; ಸಾಮಾನ್ಯವಾಗಿ ಹತ್ತು=ತೊಡಗು. ಇವಲ್ಲದೆ ಇನ್ನೂ ಕೆಲವು ಶಬ್ದಗಳು ಮಾತು ಮಾತಿಗೂ ಅನಿವಾರ್ಯವಾಗಿ ಹಾಸುಹೊಕ್ಕಿನಂತೆ ಬರುತ್ತವೆ. ಅಂಥವುಗಳಲ್ಲಿ ಮುಖ್ಯವಾದ ಕೆಲವನ್ನು ಕೆಳಗೆ ಅಕ್ಷರಾನುಕ್ರಮದಲ್ಲಿ ಕೊಡಲಾಗಿದೆ.

•

ಅಕ್ಕರತೆ=ಆರ್ದ್ರತೆ, ಪ್ರೀತಿ, ತಯಾರಿ.
ಅಗದೀ=ತೀರಾ.
ಅಡಚಣೆ=ತೊಂದರೆ.
ಅನಕಾ=ಅಂತೂ, ಸದ್ಯದ ಮಟ್ಟಿಗೆ.
ಅರ್ಭಾಟ=ಅತ್ಯುತ್ತಮ, ಚೆನ್ನಾಗಿ.
ಅರಿ=ಅರೆ, ಕಡಮೆ.
ಅಳಪಕ್ಕಿ=ಕೈಲಾಗದವ.
ಅಸಾಮಿ=ವ್ಯಕ್ತಿ.
ಅಸಿಮಿಸಿ=ಹಸಿಬಿಸಿ, ತಕರಾರು.
ಆಚೆನಾಗ=ಕಷ್ಟದಲ್ಲಿ.

ಆಹೇರು=ಉಡುಗೊರೆ, ಕಾಣಿಕೆ.
ಈಡುಮಾಡು=ಪೂರೈಸು.
ಈ ಸರೆ=ಈ ಸಲ.
ಉಲಕೋಚಿ=ತುಂಟ.
ಎಡ್ಡು=ಎರಡು, ಸೊಕ್ಕು.
ಎಣ್ಣೀಗುಂಡಿ=ಲೆಕ್ಕಕ್ಕೆ ಹತ್ತದ ವ್ಯಕ್ತಿ
ಎದಿಬಾಯ್ಬಿಡು=ಗೋಳಾಡು.
ಎಪ್ಪೀಹಾಕು=ಮೋಸಮಾಡು.
ಏಬೇ=ಅಬ್ಬೆ.
ಏರಗಟ್ಟರು=ಅವಶ್ಯವಾಗಿರು.

ಐಟು=ಆಢ್ಯತೆ.
ಐತಿ=ಇದೆ.
ಐಬು=ಕೊರತೆ, ಜರಬು.
ಒಂಟೇಹಿಡಿತ=ತಪ್ಪದ ಹಿಡಿತ.
ಕಟ್ಟೆ ಒಗೀರಿ=ಬದಿಗಿರಿಸಿರಿ.
ಕರಾಮತಿ=ಯುಕ್ತಿ, ಸಾಹಸ.
ಕಾಳಜೀ=ಚಿಂತೆ.
ಕಾಲಾಗ=ದೆಸೆಯಿಂದ
ಕಿಸಾಮತಿ=ಮಹತ್ಕಾರ್ಯ.
ಕೆಬ್ಬೈಕೆಲಬ್ಬೈಅನಿಸು=ದಣಿಸು.
ಕೆರಕೊ=ತುರಿಸಿಕೊ.
ಕೈಊರಿದರ=ಸೋತರೆ.
ಕೈಕಾಲುಮಾತಾಡು=ದಣಿ.
ಕೌಲೆತ್ತಿನ ಕೆಲಸ=ಹೊಂಗುಟ್ಟುತ್ತ ತಲೆ ಹಾಕುವದು.
ಕಂತ್ರಾಟ=ಕಾರಸ್ಥಾನ.
ಕಂಪೂ=ಗುಂಪು.
ಖಚೀತ=ನಿಶ್ಚಿತ, ಖರೆ.
ಖಟಪಿಟ=ಪ್ರಯತ್ನ.
ಖಬರು=ಎಚ್ಚರ.
ಖರೇ=ನಿಜ, ನಿಜವಾದ.
ಖಾತ್ರಿ=ನಿಶ್ಚಿತ.
ಖಾನಾವಳಿ=ಹೋಟೆಲ್ಲು.
ಖೋಡಿ=ಕೇಡಿ, ಅರಿಷ್ಟ.
ಗಚ್ಚಾಗಿ=ಗಟ್ಟಿಯಾಗಿ.
ಗಟ್ರೇಕಾದ ಕಳೆ=ಗಂಡು ಹುಡುಗರ ಟ್ರೇನಿಂಗ ಕಾಲೇಜಿನ ಭಾಸ.
ಗಡಾಗಡಾ=ಬೇಗಬೇಗ.
ಗಾಗರಿ=ಹಲುಬು.
ಗಿರಹ=ಗೃಹ.
ಗಿಲ್ಲಾ=ಚಾಡಿ, ವರ್ತಮಾನ.
ಗೆಜ್ಜಿಗೆ=ಕೆನ್ನೆಗೆ.
ಗಂಗಾಳಮುರಿಗೆ=ಹುಡುಗರ ಒಂದು ಆಟ.
ಘೋಟಾಳ್ಯಾಗ=ಪೇಚಾಟದಲ್ಲಿ.
ಚರಟಾ ಬೆಳಗು=ಬೈದು ಅನ್ನು.
ಚಾಟವಮಾಡು=ಸರಿಮಾಡು.
ಚುರುಕು=ಹುಷಾರ.
ಚೈನಿ=ಸುಖಭೋಗ.
ಛಲೋ=ಒಳ್ಳೇ, ಚಲೋ.
ಜಕಾತಿಕಟ್ಟೆ=ಸುಂಕದ ಕಟ್ಟೆ.
ಜಬರು=ಶಿಸ್ತು, ಠೀವು.
ಜೀನಹಂಕತನ=ಜಿಪುಣತನ.
ಜೀವಕಳಕೋ=ಅತಿ ಪ್ರೀತಿ ತೋರು.
ಜೀವ ಚುರುಚುರು ಅನ್ನು=ಉತ್ಸುಕನಾಗು.
ಝುಕ್ಕಸ್ತಾನ=ಗತಿ ಕಾಣುತ್ತಾನೆ.
ಟಕಪು=ಪುಕಟ.
ಟಿರಕ=ಬೆಲೆಯಿಲ್ಲದ.
ಠ್ಯಾ ಅನಿಸು=ಹಣ ಮುಳುಗಿಸು.
ಢೋಂಗ=ಸೋಗು.
ತರಾತುರಿ=ಗಡಿಬಿಡಿ, ಜಗ್ಗಾಟ.
ತಳಕುಹಾಕು=ಜೋಡಿಸು, ಸಿಕ್ಕಿಸು.
ತಲಾಟಿ=ಸರ್ಕಾರಿ ಶಾನುಭೋಗ.
ತಲಿ ಚಿಟ್ಟ ಅನ್ನು=ಬೇಜಾರವಾಗು.
ತ್ರಾಸು=ತೊಂದರೆ.

ತುಡುರಿದೆ=ಅಬ್ಬರಿಸಿದೆ.
ತುಸು=ಕೊಂಚ, ಸ್ವಲ್ಪ.
ತೋದಿಕೊಳ್ಲಿ=ಹೇಳಿಕೊಳ್ಳಲಿ.
ದವರ್ಮ್ಹಿಡೀರಿ=ತಾಳಿರಿ.
ದೀಡ=ಒಂದೂವರೆ.
ದಿವಾಕ=ಸೊಕ್ಕು.
ದಿಂಡರಕಿ ಉರುಳು=ಶರಣಾಗತನಾಗು
ದುಗುಣಿ=ಇಮ್ಮಡಿ.
ದುಬಾರಿ=ತುಟ್ಟಿ.
ಧಾಡಿ=ಕೇಡು.
ನಡಕೊಳ್ಳು=ಹರಕೆ ಸಲ್ಲಿಸು.
ನಡತಿ=ಸಂಪ್ರದಾಯ.
ನಳ=ನಲ್ಲಿ.
ನಿಗ್ಗರ=ತೊಂದರೆ.
ನೀಗಿ=ಮುಗಿದು, ಕೈಲಾಗು.
ನಿಟ್ಟು=ದಿಕ್ಕು.
ನಿನ್ನಿನ ತೊಟ್ಟು=ನಿನ್ನೆಯಿಂದ
ಪರಸಂಗ=ಪ್ರಸಂಗ.
ಫಸಗಿ=ಮೋಸ.
ಫಾರೀಕತ್ತು=ಬಿಡುಗಡೆ.
ಬಾಗವಾನ್ರಾಕಿ=ಪಲ್ಯ ಮಾರುವವಳು
ಬಾಲಾಬಡಿ=ವಶವಾಗಿರು.
ಬಾವುಗ=ಗಂಡುಬೆಕ್ಕು.
ಬಿನ್‌ಯತ್ತಾ=ಬಾಲವರ್ಗ.
ಬಿಟ್ಟೀ=ಪುಕ್ಕಟೆ ಕೆಲಸ.
ಬೆರ್ಕಿ=ಚತುರ.
ಬೇತು=ಯೋಜನೆ.
ಬೇಜಮಿ=ಏರ್ಪಾಡು.
ಬೇಸಿ=ಚೆನ್ನಾಗಿ.
ಬೈಲುಕಡೆ=ಶೌಚಕ್ಕೆ.
ಬೋಡಂತಿಮಾಡು=ಟೀಕಿಸು.
ಭಡಕ್ಕನ=ಬೇಗನೆ.
ಭಡತಿ=ಭರತಿ, ಹೆಚ್ಚಾಗು.
ಭಾಗಾದಿ=ದಾಯಾದಿ.
ಭಾಳ=ಬಹಳ.
ಭೋಳೆ=ಸರಳ ಸ್ವಭಾವದ.
ಮಜಕೂರು=ಸಮಾಚಾರ.
ಮಜಾ=ಮೋಜು, ಚಮತ್ಕಾರ.
ಮನಾರ=ಮನವಾರೆ, ಮನಸ್ಸಿಗೆ ಬಂದಷ್ಟು, ಹೆಚ್ಚಿಗೆ.
(ಮನಿ) ತೊಳದ್ಹೋತು = ಹಾಳಾಯಿತು.
ಮನ್ನೆ=ಮೊನ್ನೆ
ಮಸಲತ್ತು=ಯುಕ್ತಿ.
ಮಸಾರಿ=ಕೆಂಪುಭೂಮಿ.
ಮಾರಿ=ಮೋರೆ, ಪಿಡುಗು, ದುರ್ಗಾ.
ಮ್ಯಾಗ=ಮೇಲೆ
ಮಿಜಿಮಿಜಿ=ಅನುಮಾನ.
ಮುಗಲಿಗೆ ಹಗ್ಗಾ ಹಾಕು=ನೀಗದ ಸಾಹಸಕ್ಕೆ ಕೈಹಾಕು.
ಮುರಕೊಂಡು=ಕಡಮೆಮಾಡಿ.
ಮೊಸಡಿ=ಮುಖ.
ಮುಂಜಾಳ್ಹೋಗಾ=ಬೆಳೆ ಹಾಳಾಗಲಿ.
ಮುಂದ್ಯಾಗ=ಸಮಾಜದಲ್ಲಿ.
ಯುಮುಕು=ಒಯ್ಯಾರ.
ಯತ್ತಾ=ವರ್ಗ.

ರಾವೇರು=ವ್ಯೈದುಂಬು.
ರಿದ್ಧಿ=ಹೆರಿಗೆಯ ವ್ಯೈಲಿಗೆ.
ರೂ ಹಾಕು=ಅಂದದ್ದೇ ಅನ್ನು.
ರೌಡು=ಉತ್ಸಾಹ, ಅಬ್ಬರ.
ರೌಸಿನಿಂದ=ಆರ್ಭಟದಿಂದ.
ರಂಗ=ಉತ್ಸಾಹ, ಕಳೆ.
ರಂಭಾಟ=ಗಲಾಟೆ.
ಲಗು=ಬೇಗ.
ಲಡ್ದು=ಹುಳುಕು.
ವರದಿ=ಕಟ್ಟಪ್ಪಣೆ.
ವರ್ಮ=ದ್ವೇಷ.
ವಾಜ್ಮಿ=ಸರಿ, ಯೋಗ್ಯ.
ವಾಲಗಾ=ಫಜೀತಿ.
ಶಕಣ=ಶಕುನ.
ಶಾವಿಗೀಬಾನಾ ಬಸಿಯೋದು=
ಮದುವೆ ಹೂಡೋದು.
ಸಜ್ಜ ನೇಜವಾನಿ=ಪಕ್ವಾನ್ನದ ಸಮಾರಂಭ.
ಸಜ್ಜಾಗಿ=ಸಿದ್ಧವಾಗಿ.

ಸಣಮಾಡು=ನಮಸ್ಕಾರಮಾಡು.
ಸಾಚೇ=ಸರಳ ಸ್ವಭಾವದ.
ಸಾವಿರೂಲಾಗು=ಒಂದಾಗು.
ಸುಕನೂರ್ತಿ=ಶುಕ್ಲವೃತ್ತಿ.
ಸಂಪಾಗಿ=ಹದವಾಗಿ.
ಹತೀಲೆ=ಹತ್ತಿರ.
ಹರ್ಲಿ=ಅಪವಾದ.
ಹಳ್ಳಾ ಹಿಡಿ=ಹಾಳಾಗು.
ಹಳ್ಳ ಒಗೆದು=ಪರೀಕ್ಷೆ ಮಾಡಿ.
ಹರೇಮಿತನ=ತಂತ್ರಗಾರಿಕೆ.
ಹವಣಿ=ಹದವಾಗಿ.
ಹಸಾ=ಹದಾ, ಅಚ್ಚುಕಟ್ಟು.
ಹಿಕ್ಮತ್ತು=ತಂತ್ರ.
ಹೂಲೀ ಎಬ್ಬಿಸು=ಬೊಬ್ಬಾಟಮಾಡು
ಹೊಟ್ಟೇಕಿಚ್ಚು=ಮತ್ಸರ.
ಹೊಡೀ ಛಕಡಿ=ಕೆಲಸ ಸಾಗಿಸು.
ಹಂಗಾರ=ಹಾಗಾದರೆ.
ಹಾಂಗ=ಹಾಗೆ.
ಹೀಂಗ=ಹೀಗೆ.

ಅರ್ಪಣೆ

ಹೊಸ-ಹಳೆಯ ಸಂಪ್ರದಾಯಗಳ ಎಳೆದಾಟಕ್ಕೆ
ಬಲಿಯಾಗಿ ಕಣ್ಗಂಡೂ, ಮನಗಾಣದೆ, ಮೆಲ್ಲನೆ
ಮಾರ್ಪಡುತ್ತಿರುವ ನಮ್ಮ ಸಮಾಜದ ಸೆಳವಿಗೆ
ಸಿಕ್ಕರೂ ಸಿಗದಂತೆ ಬಾಳನ್ನು ಮೇಳವಿಸಿಕೊಂಡ
ನನ್ನ ತಂದೆ-ತಾಯಿ, ಅಣ್ಣ-ಅಕ್ಕಂದಿರೇ
ಮುಂತಾದ ಬಳಗದವರಿಗೆಲ್ಲ ಈ ಪುಸ್ತಕ
ಮುಡುಪಾಗಿ ಸಲ್ಲಿಸಿದೆ.

—ಕೃಷ್ಣಕುಮಾರ

ಪರಿವಿಡಿ

ಮಿಸ್ ಚಾರುಗಾತ್ರಿ

(ಒಂದು ಪ್ರಹಸನ)

ಪಾತ್ರಗಳು

ಮಿ. ದೇಸಾಯಿ	::	ಷೋಕಿನ ಕಾಲೇಜ ವಿದ್ಯಾರ್ಥಿ
ಮಿ. ಶೀಗಿಹಳ್ಳಿ	::	ಅದೇ ಕಾಲೇಜಿನ ಫೆಲೊ
ಮಿ. ಸಂಗನಗೌಡರು	::	ಇವರಿಬ್ಬರ ಸಹಪಾಠಿ (ಈಗ ಲಾ ಕಾಲೇಜಿನ ವಿದ್ಯಾರ್ಥಿ)
ಮಿಸ್ ಚಾರುಗಾತ್ರಿ	::	ಅದೇ ಕಾಲೇಜಿನ ಚೆಲುವೆ
ಮಿಸ್ ರಿಬೆಕ್ಕಾ	::	ಇವಳ ಸಹಪಾಠಿ

ಅಲ್ಲದೆ ಒಬ್ಬಿಬ್ಬರು ಗೆಳೆಯರು

ಪಾತ್ರಪರಿಚಯ

ವಿ. ದೇಸಾಯಿ ....ಕಾಲೇಜಿನ ಜೂನಿಯರ್ ಕ್ಲಾಸಿನ ವಿದ್ಯಾರ್ಥಿ. ಕಾಲೇಜು ಈತನನ್ನು ಬಿಡಲೊಲ್ಲದೋ, ಈತ ಕಾಲೇಜನ್ನು ಬಿಡಲೊಲ್ಲನೋ ಎಂಬದು ಈತನಿಗಿಂತ ಕಿರಿಯರಾಗಿದ್ದೂ ಈಗ ಈತನನ್ನೂ ಮೀರಿ ಮುಂದೆ ಹೋಗಿದ್ದ ಎಷ್ಟೋ ಗೆಳೆಯರಿಗೆ ತಿಳಿಯದ ಮಾತಾಗಿತ್ತು. ಶೀಗಿಹಳ್ಳಿ ಇಂತಹವರಲ್ಲೊಬ್ಬ. ದೇಸಾಯಿ ತುಂಬಾ ಶೋಕಿನ ಹಾಗು ತಕ್ಕಮಟ್ಟಿಗೆ ಹಣಗಾರನಾದ ಹುಡುಗ. ನಾಲ್ಕುಜನಕ್ಕೆ ಆತ ಬೇಕೆನಿಸುವ ಗುಣಗಳಲ್ಲಿ ಎಬಡತನ, ದುಂದುಗಾರಿಕೆ, ನಗೆಗೇಡಾದರೂ ಹಚ್ಚಿಕೊಳ್ಳದ ಗಟ್ಟಿತನ ಹಾಗು ಈ ಮೂಲಕವಾದ ಒಂದು ಒಳ್ಳೆಯತನ ಇವೇ ಮುಖ್ಯ. ಶೀಗಿಹಳ್ಳಿ ಜಾಣ; ಸ್ವಲ್ಪ ಕೊಂಕಿಗೆ ಮೆಚ್ಚಿದವ. ದೇಸಾಯಿಗೆ ಬುದ್ಧಿಗಲಿಸುವದಕ್ಕೂ, ಅದರೊಡನೆ ಸ್ವಲ್ಪ ಮೋಜು ಬಾಡಿಸಿಗೊಳ್ಳುವದಕ್ಕೂ ಆತ ಹೂಡಿದ ಹೂಟವೇ ಈ ಪ್ರಹಸನದ ವಸ್ತು. ಚಾರುಗಾತ್ರಿಯ ಪ್ರೀತಿಗೆ ಪಾತ್ರನಾದ ಈತನಲ್ಲಿ ಅಂತಃಕರಣವಂತೂ ಇದ್ದೇ ಇದೆ; ಒಡನೆ ಹುಡುಗಾಟವೂ ಇದೆ. ಚಾರುಗಾತ್ರಿ ಇಂದಿನ ಕಾಲೇಜುಗಳಲ್ಲಿ ಯುವಕರ ಎದೆಸೆಳೆಯುವ ಚೆಲುವೆಯರಲ್ಲೊಂದು ಮಾದರಿ. ಈ ಪ್ರಹಸನಕ್ಕೆ ಅವಳ ಅಸ್ತಿತ್ವವು ಹೂರಣದಂತಿರುವದರಿಂದ ಇದಕ್ಕೆ ಅವಳ ಹೆಸರು ಕೊಟ್ಟಿದೆ. ರಿಬೆಕ್ಕಾ—ಸಂಗನಗೌಡರಂತೆ ಅವಳದೂ ಪೋಷಕ ಪಾತ್ರವೇ.

೧ನೇ ನೋಟ

(……ಕಾಲೇಜಿನ ವರಾಂಡದ ಒಂದು ಕಂಬಕ್ಕೆ ಆತು ನಿಂತು ಮಿ॥ ಶೀಗಿಹಳ್ಳಿ ಯಾವುದೋ ಒಂದು ಪತ್ರವನ್ನು ಓದುತ್ತ, ಹರ್ಷ ಆಶ್ಚರ್ಯ ಗಾಂಭೀರ್ಯಗಳನ್ನೂ ಹಾಗೂ ಕೊನೆಗೊಂದು ಹುಚ್ಚುನಗೆಯನ್ನೂ ಪ್ರಕಟಿಸುತ್ತಿರುವನು. ಆಚೆಗೆ ಕಾಲೇಜಿನ ನೋಟೀಸು-ಬೋರ್ಡು ನೋಡುತ್ತ ನಿಂತ ಸಂಗನಗೌಡರು ಆತನ ನಗೆಯಿಂದ ಆಕರ್ಷಿತರಾಗಿ ಆತನ ಕಡೆಗೆ ಬಂದು ಬೆನ್ನುಚಪ್ಪರಿಸುತ್ತ ಮಾತನಾಡುವರು. ವೇಷ ಕಾಲೇಜ ಸ್ಟೂಡೆಂಟ್ಸಗೆ ತಕ್ಕಂತೆ.)

ಸಂ. ಗೌ :—ಮತ್ತೇನ್, ಮಿಸ್ಟರ್ ಶೀಗಿಹಳ್ಳಿ, ನಿಮಗೇನು ಲೆಕ್ಚೆರಿನ ಕಾಳಜೀ ಅಂತೂ ಇಲ್ಲಾ; ಆದರ ಇತ್ತೀಚೆಗೆ ಕಾಲೇಜಿನ ನೋಟ್ಸಿನ ಕಿಂತ ಈ ಪತ್ರಗಳ ಪಾರಾಯಣವನ್ನೇ ನೀವು ಹೆಚ್ಚಿಸಿದ ಹಂಗ ಕಾಣಸ್ತದ. ಇನ್ನ ಈ ಕಾಲೇಜು, ಈ ಪರೀಕ್ಷಾ, ಇದರ ಗೊಡವಿ ಬಿಡ್ರಿ; You must get married very soon my boy! ಇಲ್ಲದಿದ್ರ ಈ ಹುಚ್ಚು ಇನ್ನೂ ತಲಿಗೇರೀತು!

ಶೀಗಿ :—ಗೌಡ್ರೇ ಹುಚ್ಚು ನನ್ನ ತಲೀಗೇರೋದುಲ್ಲಾ. ಈ ಪತ್ರಾ ನೀವೂ ನೋಡ್ರಿ. ಅಂದ್ರ ಹುಚ್ಚು ಯಾರ ತಲೀಗೇರೇದನ್ನೋದು ಗೊತ್ತಾಗ್ತದ. (ಆತನ ಕೈಗೆ ಪತ್ರವನ್ನು ಕೊಡುತ್ತಾ) ನೋಡ್ರಿ! ನಿಮ್ಮ ಕೇವಲ ಪರಮ ಮಿತ್ರನ ಕಾರಭಾರಿದು.

ಸಂ. ಗೌ :—(ಪತ್ರವನ್ನು ನೋಡುತ್ತಾ) ಹೌದಲ್ರಿ ಶೀಗಿಹಳ್ಳಿ! ನಮ್ಮ B. K. ನ ಪತ್ರ ಇದೂ! (ಸ್ವಲ್ಪ ಓದಿ) ಏನು ಹುಚ್ಚಾಚಾರ ಬರೆದಾನ್ರೆಪಾ ನಮ್ಮ ದೇಸಾಯಿ! Love Letter ಆದ್ರೂ decency, dignity, ಸ್ವಲ್ಪ ಆದ್ರೂ ಬ್ಯಾಡೇ!

ಶೀಗಿ :—ಇಲ್ಲದಿದ್ರ ಹುಚ್ಚು ಅನ್ನೋದ್ಯಾಕಂಗ್ರೀ ಮತ್ತೇ! ಹೇಳಿ ಕೇಳಿ ನಮ್ಮ ದೇಸಾಯ್ರೆಪಾ ಅವಾ!

ಸಂ. ಗೌ :—ಬರಾಬ್ಬರಿ! ತನ್ನ ಕಿಮ್ಮತ್ತಿಗೆ ತಕ್ಕಾಂಗ ಬರದಾನ ಬಿಡ್ರಿ. ಆದ್ರ, ಇವಾ ನಿಮ್ಮ ಗಂಟಿಗೆ ಗಂಟಬಿದ್ದನಲ್ಲಾ! ಜ್ವಾಕಿರ್ರೀ, ಅಂದೆ. ನಮ್ಮ ಕಾಲೇಜಕ್ಕ ನಿಮ್ಮಂಥಾ ಸ್ಕಾಲರು ಒಂದು ಶಿಖರಾ ಆದ್ರ,

ಚಾರುಗಾತ್ರಿಯಂಥಾ ಚಲುವಿ ಒಂದು ಕಳಸಾ; ಈ ಜೋಡೀ ಕೂಡಿರ ಬೇಕಂತಸ ನಮ್ಮದುತೂ ಲೆಕ್ಕ ಐತಿ.

ಶೀಗಿ :—ಆದ್ರ ನಮ್ಮ ಗಂಟು ನಮ್ಮ ಕೈಯಾಗ ಗಟ್ಟಿಮುಟ್ಟ ಅದ ಬಿಡ್ರಿ. ಈ ದೇಸಾಯಿಯಂಥ ನೂರಮಂದಿ ಚಾರುಗಾತ್ರಿ ಕಾಲಾಗ ಉಳ್ಳಾಡ್ಯಾರು.

ಸಂ. ಗೌ :—ನೀವೂ ಬಿಡ್ರೆಪಾ ಮಹಾ ಜೆರ್ಕಿ; ಮುಗಿಲಿಗೆ ಹಗ್ಗ ಹಾಕಾವ್ರು! ಹಂಗಾದ್ರ, ಮಿಸ್ ಚಾರುಗಾತ್ರಿನೇ ಈ ಪತ್ರಾ ನಿಮ್ಮ ಕೈಗೆ ಕೊಟ್ಟಾರ ಕಾಣಸ್ತದ?

ಶೀಗಿ :—ಹೌದು; ಆಸಿಗ್ಗೊಮ್ಮೆ ಬ್ಯಾಸಿಗ್ಗೊಮ್ಮೆ ಇಂಥಾ ಪತ್ರ Dispose off ಮಾಡೋ ಪಾಳೀ ನಮಗ ಬಂದೇ ಬರ್ತದನ್ರಿ. ಎಷ್ಟಂದ್ರೂ ಕಾಲೇಜದ ವಾತಾವರಣ! ಆದರ ಈಗ ಈ ದೇಸಾಯೀ ಪಾರುಪತ್ಯ ಮಾತ್ರ ಚನ್ನಾಗಿ ಮಾಡ್ಬೇಕಂತ ಮಾಡೀನಿ. ಅದಕ್ಕ ಏನಂತೀರಿ. ಹೇಳ್ರಿ?

ಸಂ. ಗೌ :—ಹೊಗಲಿ ಬಿಡ್ರಿ ಮಿಸ್ಟರ್ ಶೀಗಿಹಳ್ಳಿ. He is after all a simpleton ಶುದ್ಧ ಎಬಡ್ರೆಪಾ ಅವ. Dont take it seriously. ಕಾಲೇಜದಾಗ ಇಂಥಾವು ನಡ್ಯೋವಸಂತ ನೀವಽ ಅಂತೀರಲ್ಲಾ!

ಶೀಗಿ :—(ನಗುತ್ತ) ಮಿಸ್ಟರ್ ಗೌಡಽರ್ I never take such things seriously nor does Miss Charugatri. ಆದರ ಈ ದೇಸಾಯೀದು ಸ್ವಲ್ಪ ಫಜೀತಿ ಮಾಡೋಣಂತ ಮಾಡೇನಷ್ಟೆ! Just a little fun ರೆಪಾ! ನಾನೂ ಈಗ ಆ ದೇಸಾಯಿ ಹಾದೀನs ನೋಡಲಿಕ್ಕೆ ಹತ್ತೀನಿ. ಫಸ್ಟ ಬೆಲ್ಲೂ ಆತೂ; ಇನ್ನೂ ಯಾಕ ಬಂದಿಲ್ಲೊ ಜೋಕುಮಾರಾ!

ಸಂ. ಗೌ :—ಯಾಕಽ ದೇಸಾಯಿ ಇಂದ ಇನ್ನೂ ಕಾಲೇಜಿಗೆ ಬಂದಿಲ್ಲೇನು?

ಶೀಗಿ :—ಇನ್ನೂ ಇಲ್ಲ್ರೀ; ಆದರ ಇದೇನು ನೀವು ಒಳ್ಳೇ ಅಪರೂಪವಾಗಿ ಬಂದೀರಿ ಕಾಲೇಜಿಗೆ? Convocationದ ತಯಾರಿ ಕಾಣಸ್ತಽವ.

ಅಲ್ಲ್ರೀ, ನಿಮ್ಮ ಲಾ ಕಾಲೇಜಕ್ಕ ಯಾವ..........ಕರಾ ಪ್ರಿನ್ಸಿಪಾಲ ಆದ್ದಾಂಗಾತು; ಕರ್‍ಸ್ಸಿಂಡೀಕರಾನೋ, ಕೇಳಿದಕರಾನೋ, ಜೋಗುಳದ ಕರಾನೋ, ಕರಾ ಮರತ ಕರಾನೋ?

ಸಂ. ಗೌ:—ಯಾವ ಎಮ್ಮೀಕರಾನೋ ಯಾವ ಬಲ್ಲಾ; ಒಂದೊಂದು ಪಾರ್ಟಿಗೊಂದು........ಕರಾ; ಇನ್ನೂ ಅನ್ಯಾಯ ನಡದೈತಿ. ಇರ್ಲಿ; ಆ ಕಾನೊಕೇಶನ್ನದ ನೋಟೀಸು ಅಷ್ಟ ಪೂರಾ ನೋಡತೇನಿ.

ಶೀಗಿ:—ಆಗಲಿ, ನಡೀಲಿ, ನಡೀಲಿ, ನಿಮ್ಮ ಕೆಲ್ಸಾ. (ಸಂಗನಗೌಡರು ಮತ್ತೆ ನೊಟೀಸುಬೋರ್ಡಿನತ್ತ ಹೋಗಲು, ಇತ್ತಕಡೆಯಿಂದ ಬರುತ್ತಿದ್ದ ದೇಸಾಯಿಯನ್ನು ನೊಡಿ......) ಗೌಡ್ರs ನಮ್ಮ ಅಸಾಮಿ ಇಲ್ಲೇ ಬಂತಲ್ಲ್ರೀ. ಆತು ಸ್ವಲ್ಪ ಮಾತಾಡ್ಸಿ ನೋಡತೇನಿ.

(ದೇಸಾಯಿ ಒಳ್ಳೇ ಅಪ್‌ಟುಡೇಟ್ ಡ್ರೆಸ್ಸಿನಲ್ಲಿ ಪ್ರವೇಶಿಸಿ ಒಂದೇ ನಿಟ್ಟಿನಲ್ಲಿ ನೆಟ್ಟ ನೋಟದಿಂದ ನೋಡುತ್ತ ಆಳವಾದ ಎಣಿಕೆಯಲ್ಲಿ ಮುಳುಗಿದಂತೆ ನಿಲ್ಲುತ್ತಾನೆ. ನಡುನಡುವೆ ಹುಸಿನಗೆಯನ್ನು ಮೀಸೆಯಲ್ಲಿಯೇ ಅರಳಿಸುತ್ತಿರುವನು.)

ದೇಸಾಯಿ:—That's it ಅದs ಅಂದೆ. It's eleven twenty five (**Wrist Watch**ನ್ನು ನೋಡುತ್ತ) ಇಷ್ಟು ಹೊತ್ತು ಯಾಕಾ ತಪಾ ಅಂತ ಫೋಟಂಳ್ಯಾಗ ಬಿದ್ದಿದ್ದೆ....ಇವತ್ತ First period ಪ್ರಿನ್ಸಿಪಾಲಂದು ಅಂದಮ್ಯಾಲ ಅವಳು ಕ್ಲಾಸಿಗೆ ಬಂದs ಬರುತಾಳಂತ ತಿಳಿದಿದ್ದೆ. (ಕಾರಿನ ಸದ್ದಾಗಲು ಹೊರಗಡೆಯ ನಿಟ್ಟಿಗೆ ನೋಡುತ್ತ ಹರ್ಷವನ್ನು ಸೂಚಿಸುತ್ತ) ಹೌದs ಬಂತ್ನೋಡು ನಮ್ಮ nightingaloo ಹೌದ್! ಹೌದ್! ಹೌದ್ ಹುಡುಗೀ! ಏನ್ ಯಮಕ ಅಂದೀ! ಕಾರಿನೊಳಗಿಂದ ಇಳಿಯೋದೂ ಒಂದ್ ಸೊಬಗs!

(ಮುಗುಳುನಗೆ ನಗುತ್ತ ನಿಲ್ಲುವನು.)

ಶೀಗಿ:—(ದೇಸಾಯಿ ಕಡೆ ನೋಡುತ್ತಾ) ಮತ್ತೇನು ಮಿಸ್ಟರ್ ದೇಸಾಯಿ? ಏನೋ Deep reverie ಒಳಗಿಂದ್ದಾಂಗ್ಹ ಕಾಣಿಸ್ತsದ? ಯಾಕೋ ಕಣ್ಣು ಕುಲುಕುಲು ನಗ್ತಾವಲ್ಲ್ರೀ?

(ದೇಸಾಯಿ ತಲ್ಲೀನನಾಗಿಯೇ ಇರುವನು.)

ಸಂ. ಗೌ :—(ನೋಟೀಸುಬೋರ್ಡನ್ನು ನೋಡುತ್ತ ನಿಂತವರು ಗಾಬರಿಯಿಂದ ದೇಸಾಯರಿಗೆ) ಏನ್ರಿ ಮಿಸ್ಟರ್ ದೇಸಾಯಿ ನಿಮ್ಮ ಹೆಸರ್ಲೆ ಏನೋ Warning ಬಂದೈತಲ್ಲ Office ನಿಂದ!

ಶೀಗಿ :—ಗೌಡ್ರs, ಇಲ್ಲಿ ಬರ್ರಿ—ನೋಡ್ಬರ್ರಿಲ್ಲೆ ದೇಸಾಯರ ಹದಾನs! ಅಲ್ಲೇನ್ ನೋಡತೀರಿ! ನೋಟೀಸೂ ನೋಟೀಸು ಆ Warniugu ತಗೊಂಡು ಏನು ಸುಟ್ಟಾರು ಬರ್ರಿ ದೇಸಾಯ್ರು.

ಸಂ. ಗೌ :—ಮತ್ತೇನ್ರಪಾ....ಮತ್ತ ಹೊಸಾ ಸುದ್ದಿ ಅದು?

ಶೀಗಿ :—ನೋಡ್ಬರ್ರಿಲ್ಲೇ. ಎಲ್ಲಾ ನಿಂತಲ್ಲೇ ಏನು ನಿಮ್ಮ ಮಾತು? (ದೇಸಾಯರು ಮುಗುಳುನಗೆ ನಗುತ್ತ ಮೀಸೆಯ ಮೇಲೆ ಕೈಯೆಳೆಯುತ್ತಾ ಹುಬ್ಬು ಕುಣಿಸುತ್ತಿರುವರು.)

ಸಂ. ಗೌ :—(ಈಚೆಗೆ ಬಂದು ದೇಸಾಯರು ನೋಡುತ್ತಿದ್ದ ಕಡೆಗೆ ನೋಡಿ) ಓಹೋs! ಅದಕ್ಕs ಅಂದ್ನಿ. ಅವಾಗಿಂತೊಂಟೂ ಎಷ್ಟು ಕರದ್ರೂ ಬರೇವಲ್ಲ್ರಿ ದೇಸಾಯ್ರು. ಈಗ ಗುಟ್ಟು ಗೊತ್ತಾತ್ ಬಿಡ್ರಿ.

ದೇ :—(ಈಚೆಗೆ ನೋಡುತ್ತ) ಅಲ್ಲಿ ನೋಡ್ರಿ....ಹ್ಯಾಂಗ ಬರ್ತೇದ—ಹ್ಯಾಂಗ್ ನೋಡ್ರಿ ನವಿಲು ಅಂತೀನಿ. (ಒಮ್ಮೆಲೆ ದುಗುಡದಿಂದ) ಅದs ಅದs ಈ ಹೆಣ್‌ಗೋಳವರ ಎಷ್ಟಪಾ ಅಂತೇನಿ ಸೊಕ್ಕು. (ಕೆರೆಯ ಕಡೆ ನೋಡುತ್ತ, ಸನ್ನೆ ಮಾಡುತ್ತ) ಸರೀಬ್ಯಾಡ್ರಿ. ಯಾರಾದ್ರು ದಾರೀ ಬಿಟ್ಟಗಿಟ್ಟೀರಿ. Don't move an inch. (ಕ್ಷೋಭದಿಂದ) ಅಲ್ಲೇ ನಿಂದರ್ರಿ....ಬೇಕಾದ್ರ ಸುತ್ತು ಹಾದು ಬಂದಾರು. ಇಲ್ಲದಿದ್ರ ಅಲ್ಲೇ ನಿಂತಾರು. ಈ ಹೆಣ್‌ಗೋಳು ಸೆಟ್ಟೇತಾಯ್ತಂಗ....ಬರತಿದ್ರ ನಾವು ಅಲ್ಲಿರ್ತs ಇವರಿಗೆ ಹಾದೀ ಬಿಡಬೇಕಂತ; ಅದ್ಕಾಕ ಮಸs ಅದೂ ಅಂತೇನಿ ನಾನು. (ಕೈಸೊತ ಮನಸ್ಸಿನಿಂದ) ಹೌದs! ಹೌದs! ಘಾತಾ ಮಾಡಿದ್ರು ನೋಡು, No Courage! ಹೇಡಿ ನನ್ನ ಮಕ್ಕಳ ತಂದು.

ಶೀಗಿ :—ನಿಮ್ಮಂಥಾ ಧೈರ್ಯ ಪಾಪಾ, ಹೊಸದಾಗಿ ಕಾಲೇಜಕ್ಕೆ ಬಂದು ಹೌಹಾರಿದ ಆ F. Y. ದ ಹುಡುಗರಿಗೆ ಹ್ಯಾಂಗ ಬಂದೀತ್ರೀ? ಆರೇಳು ವರ್ಷದ ಸಂಬಂಧದಿಂದ ನೀವು ಕಾಲೇಜದ Hero ಆಗ್ಬಿಟ್ಟೀರಪಾ! ಹೌದಲ್ರೀ ಸಂಗನಗೌಡ್ರs?

(ಸಂಗನಗೌಡರು ತಲೆಹಾಕಿ ಹುರುಪಿನ ಸಮ್ಮತಿ ಕೊಡುವರು.)

ದೇ :—ಇವರ್ಪ್ಲೇನು ನಾವು ತಿಂದದ್ದು ಗಂಟು! ನಾವು ಪಾರಿಯೊಳಗs ನಿಂದ್ರ ವರ್ರೆಪಾ. ಅನ್ನಿ Will you please move a little ಅಂತ, ಅಂದ್ರ Whole heartedly miss ಅಂತ ನಾವೂ ಹಾದಿ ಬಿಟ್ಟೇ ವಂತ ಆವ್ಯಾಲ! ಯಾಕ್ರೀ ಮಿಸ್ಟರ್ ಗೌಡರ್! ವಾಜ್ಮಿ ಹೌದಿಲ್ಲೊ ನಾ ಅಂಬೋದು? ಇಲ್ಲಿ ಬರ್ರಿ. ಇತ್ಲಾಗ ನಾವು ಹಾದ್ಯಾಗs ನಿಂದ್ರೋಣ. ಈ ಹೆಣ್ಗಳ ಹಿಂಡು ಏನು ಮಾಡ್ತದೋ ನೋಡ್ಯಾರೇ ನೋಡೋಣ. These are days of equality. ಅಂದ ಮ್ಯಾಲ ಇವರು ಖರೇ ಅಂದ್ರ ನಮ್ಮ ಹೆಗಲಮ್ಯಾಲ ಕೈಹಾಕಿಕೊಂಡು ಅಡ್ಯಾಡಬೇಕ್ರೆಪಾ (ಗೌಡರ ಹೆಗಲಮೇಲೆ ಕೈಹಾಕುತ್ತ) ಹೌದಲ್ಲ್ರೀ ಗೌಡ್ರ! ಅಂಥಾದ್ದು ಈ ಸೊಕ್ಕಿನ ಹೆಣ್ಗೋಳು ಬಂದ್ರ ನಾವ್ಯಾಕ್ರೆಪಾ ಹಾದೀ ಬಿಡೋದು ಅಂತೀನಿ?

ಶೀಗಿ :—ಸೈ ಅಂದೆ; ದೇಸಾಯರ! ಹೋಗಲಿ ಮೈಗೆ ಮೈ ತಾಕಿಸಿಗೋತs; ನಾವೆಲ್ಲಿ ಬ್ಯಾಡ ಅಂತೇವಿ! ಹೌದಲ್ಲ್ರೀ?

ದೇ :—ಎಲ್ಲೀದ್ರೀ; ಕರುಳು ಕಾಟೀ ಕಾಣದಾಗ ಕೊರಳು ಕಂಠೀ ಬೇಡ್ತೆಂತs; ಬರೇ ಸೆರಗು ತಾಕಲ್ರೆಪಾ. ಅಷ್ಟs ಸಾಕು.

ಸಂ. ಗೌ :—ಅದ್ಯಾಕೇಳ್ರಿ! ನಿಮ್ಮಂಥವರಿಗೆ ಅಷ್ಟೇ ಏನು ಕಿಮ್ಮತ್ತು?

ದೇ :—ಗೌಡರs, ಮಿಸ್ಟರ್ ಶೀಗಿಹಳ್ಳಿ, ನಾ ಹೇಳ್ಲ್ಯ—ಅಂತೂ ನಿಮ್ಮ Life is worth for nothing ನೋಡ್ರಿ, ಆತ್ರೆಪಾ ಮಕ್ಕಳs.... ನೀವು ಬಿ. ಏ. ಆದ್ರೀ; ಫೇಲೂ ಆದ್ರಿ. ಆದರ ಏನ್ರೆಪಾ ನೀವು ಮಾಡಿದ್ದು ಕಿಸಾಮತಿ? ಈ ವರ್ಷಾನೂ ನಾ ನಪಾಸಾದದ್ದು ನನ್ನ ಪುಣ್ಯಾನs. ಈ ವರ್ಷ ನಮ್ಮ ಕ್ಲಾಸಿಗೆ ಎಂಥಾ ಹಕ್ಕಿ ಬಂದದ ನೋಡ್ರಿ. ಇಂಥಾ ಪುಣ್ಯ ಸಿಕ್ಕೀತ್ರೆs? ಅದಕ್ಕs ಈ ವರ್ಷ ನಾನೂ ಮತ್ತು ಕಾಲೇಜು Join ಆಗಿನಿ; ಮತ್ತೀs, Front seatನ ಹಿಂದೇ ಕೂಡ ಲಿಕ್ಕೆ ಹತ್ತೀನಿ.

ಶೀಗಿ :—ಅದ್ಯಾಕ್ರೀ ಮತ್ತ ಹೋದ ವರ್ಷs....s

ದೇ :—ಥೂ ನಿನು........ನಿಮ ಅದೇನ್ರಿ ಕರಪಿ. ಮಾರೀ ನೋಡಿದ್ರ, ಅದೇನೊ ಅಂತಾರಲ್ಲಾ ಹಾಂಗ! ನಾ ನಪಾಸಾದರೂ ಅಷ್ಟs ಹೋತು

ಆ ಮೂರಾಯ್ತು ಪಾಸಾದ್ರು ಅಷ್ಟs ಸಾಕು. ಇಕಾ ಇತ್ಲಾಗ ನೋಡ್ರಿs ನಮ್ಮ Nightingale ಹ್ಯಾಂಗ ಬರ್ತದs. ಸ್ವಲ್ಪ ತಡೀರಿ (ಚಿಟಿಕೆ ಹೊಡೆದು) One minute (ಆಚೆಯಿಂದ ಲೇಡಿ ಸ್ಟೂಡೆಂಟ್ಸ ಬರುತ್ತಿರುವುದನ್ನು ನೋಡಿ ಲಗುಬಗೆಯಿಂದ Camera ಹಚ್ಚಿ snap-shot ತಕ್ಕೊಳ್ಳುವನು) Come along ಸಂಗನಗೌಡ್ರs, ಇತ್ಲಾಗ ಬರ್ರಿ. ಇತ್ಲಾಗ. ಇತ್ಲಾಗ ನಿಂದರ್ಬೇಕ್ರಿ, ಹೀಂಗ (ಎಂದು ಸಂಗನಗೌಡರನ್ನು ನಡುವೆ ಎಳೆಯುವನು.)

ಸಂ. ಗೌ :—(ಕೊಸರಿಕೊಳ್ಳುತ್ತ) ನಾವಲ್ಲರೆಪಾs ಸುಮ್ಮನೆ, ಮತ್ತೇನ ಬೇಕಾದ್ದ ಹೇಳ್ರಿ....ಮಾಡೇನು, ಇಂಥಾದ್ದಕ್ಕ ಮಾತ್ರ........

ಶೀಗಿ :—ಇದರೊಳಗ ಏನ್ರಿ ಗೌಡ್ರs........ಇಷ್ಟ್ಯಾಕ Serious ತಿಳಕೋತೀರಿ? ಸುಮ್ಮನs ಸ್ವಲ್ಪ ಮಜಾರೆಪಾ, ನೀವು ಕಾಲೇಜು ಬಿಟ್ಟಾಕ್ಷಣಕ್ಕs Romancoo ಬಿಡಬೇಕಂತ ಹೇಳಿದೇನೊ? ಏನೋ ನಮ್ಮ ದೇಸಾಯರ ಖುಶೀರೆಪಾ.

ಸಂ. ಗೌ :—ಛೀ,—ಏಳ್ರಿ. ಎಲ್ಲಿ ಮಜಾ, ಅಲ್ಲಿ ಮಜಾರೆಪಾ.

ಶೀಗಿ :—ಬಿಡ್ಲಿ ಬರ್ರೀ ದೇಸಾಯ್ರs, ನೀವs ನಿಂದರ್ರಿ;—ನಡೀರಿ, ಇವೆಲ್ಲಾ Cowards!

ದೇ :—ಹಂಗಾದ್ರ ನಾನೂ ಒಲ್ಲೆ ಬಿಡ್ರಿ; (ಶೀಗಿಹಳ್ಳಿ ಜಗ್ಗುತ್ತಿರಲು) ಇಲ್ಲ ಬಿಡ್ರೀ; (ಎಂದು ಕೊಸರಿಕೊಳ್ಳುವನು.)

ಶೀಗಿ :—ಏನ್ರಿ ದೇಸಾಯಿ, ನಿಮ್ಮಂಥವರೆಲ್ಲ ಹೀಂಗಂದ್ರ ಹ್ಯಾಂಗ? ನೀವೂ ಎಲ್ಲೋ ಅಭಿನವ ರುಷ್ಯಶೃಂಗರೇ ಆದಿರೆಲ್ಲಾ! ನೀವು ಈ Lady studentsಗೆ ಇಷ್ಟು ಹೆದರಬೇಕೆ? ಥೂ, ನಿಮ ನಿಮ!

ದೇ :—ನಡೀರಿ ಹಾಂಗಾರ, ನಿಂದ್ರೋಣು. ನಾ ಹೆದರತೇನಿ ಅಂತೀರೇನು? ಬರ್ರಿ ಬರ್ರಿ ಗೌಡ್ರ, ದಾರಿ ಕಟ್ಟೋಣ. (ಗೌಡರನ್ನು ಎಳೆದು ಮೂವರೂ ದಾರಿ ಕಟ್ಟುವಂತೆ ನಿಂತು ಹರಟೆಗೆ ಆರಂಭಿಸುವ ಹೊತ್ತಿಗೆ ಚಾರುಗಾತ್ರಿ ಹಾಗು ರಿಬೆಕ್ಕಾ ಒಯ್ಯಾರದಿಂದ ಬರುವರು; ಇಬ್ಬರ ಕೈಯಲ್ಲಿಯೂ Collage books ಹಾಗೂ ಕೊಡೆ; ಕಾಲಲ್ಲಿ Cross bar ಚಪ್ಪಲಿ; ಉಟ್ಟದ್ದು ಜರದಂಚಿನ ರೆಸ್ಮಿಯ ಪತ್ತಲ; ರಿಬೆಕ್ಕಾ ಉಟ್ಟದ್ದು ಜರದಂಚಿನ

ಸೀರೆ; ತಲೆಯಮೇಲೆ ಸೆರಗು ಹೊತ್ತಿದ್ದಾಳೆ; ಚಾರುಗಾತ್ರಿಯ ತಲೆಯಲ್ಲಿ ಸಂಪಿಗೆಯ ದಂಡೆ, ಹಣೆಯಲ್ಲಿ ಮಿಂಚುವ ಕುಂಕುಮದ ಚಿಕ್ಕೆ; ಕಿವಿಯಲ್ಲಿ ಉಯ್ಯಾಲೆಯಾಡುವ ಡೋಲು; **Brooch** ಹಾಕಿ ಸೆರಗನ್ನು ಸರಿಪಡಿಸಿದೆ; ಬಲಹೆಗಲು ಪೂರಾ ತೆರೆದು ಹಸರು ಬಣ್ಣದ ಪೋಲ್ಕಾ ಮಿನುಗುತ್ತಿದೆ; ಕೊರಳಲ್ಲಿ ಒಂದೇ ಒಂದು ಗೋಪಿನೆಳೆ; ಬರಬರುತ್ತಾ ದಾರಿಯಲ್ಲಿ **Desai & Co.** ನಿಂತಿರುವದರಿಂದ ಸ್ವಲ್ಪ ತಡವರಿಸುವರು; ಚಾರುಗಾತ್ರಿಯು ಸಮೀಪಿಸಿದ ಸನ್ನೆ ತಿಳಿದು ದೇಸಾಯಿಯು ಮೋರೆ ತಿರುವಿ, ಬೆಚ್ಚಿಬಿದ್ದವನಂತೆ ಮಾಡಿ ದಾರೀ ಬಿಡುವನು. ಚಾರುಗಾತ್ರಿ ಹಾಗೂ ರಿಬೆಕ್ಕಾ ಇಬ್ಬರೂ **Desai & Co.**ದ ನಡುವೆ ಹಾದುಹೋಗುವಾಗ, ಶೀಗಿಹಳ್ಳಿ ಚಾರುಗಾತ್ರಿ ಒಬ್ಬರನ್ನೊಬ್ಬರು ಕಣ್ಸನ್ನೆಯಿಂದ ನೋಡಿ ನಗುತ್ತಿರಲು ಚಾರುಗಾತ್ರಿಯ ಕೊಡೆಯು ಜಾರಿಬೀಳಲು, ಅದನ್ನು ರಿಬೆಕ್ಕಾ ಎತ್ತಿಕೊಡುವಳು. ಅವರಿಬ್ಬರೂ ಮುಂದಕ್ಕೆ ಸಾಗಿಹೋಗುವರು.)

ಶೀಗಿ:—ಹ್ಯಾಂಗದರೀ? ಯಾಕರೀ—ನೀವs ಬಿಟ್ಟರೆಲ್ಲ ದಾರೀನ? ಶತ್ರುಸೇನೆ ಏರಿಬರುವದರಗಿಂತ ಮೊದಲs ಪಲಾಯನ ಹೇಳಿಸಿದರೆಲ್ಲ!

ಸಂ. ಗೌ:—ಛೆ, ಛೆ, ದೇಸಾಯರಲ್ಲಿ ಇಷ್ಟ ಇಲ್ಲ ಅಂತ ತಿಳಿದೀರೇನು? ಆದರೇನು? ಸುಮ್ಮನs ಬಿಟ್ಟು ಬರ್ರಿ. It is only condescension for decency's sake!

ಶೀಗಿ:—ಅದಿರ್ಲಿರೀ; ಆದರ ದೇಸಾಯಿ, ನಿಮಗೇನುs ಇಷ್ಟರs Presence of mind ಇಲ್ಲ ಅಲ್ಲಾ! ಕೊಡಿ ಬಿದ್ರ ಎತ್ತಿಕೊಡಬೇಕಿಲ್ಲೊ? ಅಲ್ಲೆ ಇದ್ರಿ You could have obliged her and claimed her thanks. ಒಂದು ಛಲೋ ಚಾನ್ಸು ಕಳಕೊಂಡ್ರಿ.... Not at all chivalrous.

ಸಂ. ಗೌ:—ಹಂ! ಹಂ! ಹಂ! What a nobie conception of chivalry ಪಾ!

ದೇ:—ಹೌದು, ಇದು ಸಧ್ಯದ ಯುಗದ ಧರ್ಮರೀ, ಗೌಡರs—Fashion of the day (ಚಾರುಗಾತ್ರಿಯು ಹೋದಕಡೆ ನೋಡುತ್ತ) ಈಗ ನೋಡ್ರಿ; ಈ ಜೋಡಿ ಕೂಡಿದ್ಮ್ಯಾಲೆ ಲೇಡೀಜ ರೂಮು ಹ್ಯಾಂಗ ಡೌಲಾತು?

ಶೀಗಿ :—(ನಗುತ್ತ) ದೇಸಾಯರೆ ಇವೆಲ್ಲಾsss (ಸಂಗನಗೌಡರನ್ನು ತೋರಿಸುತ್ತ) Old fashioned water birdsರ್ರಿ. ಅವ್ವನ ಕುಲಾಯಿ ಕಟ್ಟಿಕೊಂಡ ಕುನ್ನಿಗಳು.

ದೇ :—ನಾನೂ ಅದs ಅಂದೆ, We must go with the stream ರೆಪಾ! ಈಗಿನ ದಿವಸದಾಗ ಎಲ್ಲಾ ಹಿಂದ........ಈಗಿನ ಹೆಂಗಸರಾರೇs ಏನ ಬಿಡ್ರಿ.

ಸಂ. ಗೌ :—ಯಾಕs ದೇಸಾಯರs. ಸೂಲು ತಪ್ಪಿ ಮಾತಾಡೋ ಹಾಂಗ ಕಾಣಸ್ತದs? ಎಚ್ಚರಾsಂದೆ?

ಶೀಗಿ :—ಏನಿಲ್ಲ. ಎಳೀ ಹಿಡಿದs ಹೊಂಟಾರ. ನುಂಗತಾರ ನೊಡ್ರಿ ಹಚಡಾ ಇನ್ನು ಒಂದು ಸ್ವಲ್ಪ ಹೊತ್ತಿನ್ಯಾಗs........(ದೀರ್ಘವಾಗಿ ನಗುತ್ತ) What ಸಂಗನಗೌಡರs ಈ ಕಾಲೀಜ ಬಿಟ್ಮ್ಯಾಲೆ ನೀವೇನೊ ಸ್ವಲ್ಪ Flat witted ಮತ್ತ Prosaic ಆದ್ಹಾಂಗ ಕಾಣಸ್ತೀರಿ. Don't you see, he is sweet upon the dove? (ಕಣ್ಣುಮುಟಿ) ಅವರೂ.... ಈಗs Mid youth's dream ದಾಗ ಇದ್ದಾರ್ರಿ.

ಸಂ. ಗೌ :—ಓಹೊ! I see; now the nut is cracked ನನಗೆ ಇದೆಲ್ಲಾ ಗೊತ್ತಿದ್ದಿಲ್ಲ ಬಿಡ್ರಿ. ಹಂಗಾರೇನು ಕಾನಿಗಿ ಬಾನಾ ಬಸಿಯೋದು ಅನ್ನಿ, ಗಡಾನs!

ಶೀಗಿ :—ಮತ್ತೇನು ದೇಸಾಯರ ನೋಡೇ ಬಿಡ್ರಿಲ್ಲಾ ಒಂದುಕೈ, ಅನುಮಾನ ಯಾಕ! Just try your luck. (ದೇಸಾಯರು ನಗುತ್ತಿರುವರು, ಗಂಟೆಯಾಗುವದು.)

ಸಂ. ಗೌ :—Ah! the bell goes!

ಶೀಗಿ :—ಯಾಕರಿ ದೇಸಾಯರs, ಗಂಟೆ ಆತಲ್ಲ, ಕ್ಲಾಸಿಗೆ ಹೋಗೋದಿಲ್ಲೇನು?

ದೇ :—ಹೋಗತೇನ್ರೆಪಾ, ಹೋಗತೇನಿ. Term ತುಂಬಲಿಕ್ಕೆ ದಿನಾ ಕಡಿಮೆ ಬಿದ್ದರ ಈ ವರ್ಷಾನೂ ಕಾಲೇಜಿನ ಕ್ಲಾರ್ಕನ ಹೆಣಕ್ಕ

ಹಣಾ ಬಡೀಬೇಕಾದೀತು. (ಹಿಂದೆ ಮುಂದೆ ನೋಡುತ್ತ ಹೊರಡುವನು) ಆದರೆ ನಾಳಿನ Sunday ದಿವಸ Hostelಗೇ ಬರ್ರಿಲಾ ಊಟಕ್ಕೆ. ಬಾಸುಂದೀಪುರೀ ಆದ ಮರಿಬ್ಯಾಡ್ರಿ ಮತ್ತ. ನಿಮ್ಮನ್ನ ಬಿಡುಹಾಗಿ ಲ್ಲರೀ ಶೀಗಿಹಳ್ಳಿ ಮತ್ತs. (ಹೋಗುವನು)

ಸಂ. ಗೌ :—ಶೀಗಿಹಳ್ಳಿ Officeಗೆ ಹೋಗಿ Convocation forms ಇಸಗೊಂಡು ಮನೀಗೆ ಹೋಗತೇನಿ ಈಗ. ಹೊಟ್ಟ್ಯಾಗ ಡೊಂಬರು ಆಡತಾರ. ಇವರ್ದೇನು ಸುಡತೀರಿ ದೇಸಾಯರ್ನ. (ಸಂಗನಗೌಡರು ಆಫೀಸಿನತ್ತ ಹೋಗುವರು. ಶೀಗಿಹಳ್ಳಿಯು ಪ್ರತೀಕ್ಷೆಯಲ್ಲಿರುವಾಗಲೇ ಮಿಸ್ ಚಾರುಗಾತ್ರಿಯೇ ಮೊದಲಾದ ಲೇಡಿ ಸ್ಟೂಡೆಂಟ್ಸು ಕ್ಲಾಸಿಗೆ ಹೋಗುವದಕ್ಕಾಗಿ ಬರುವರು.)

ಶೀಗಿ :—Halloo! Charugatri, are you going to the class so soon? The bell has just gone! We have at least five minutes at our disposal. ಸ್ವಲ್ಪ ಮಾತಾಡೋಣಲ್ಲ! ಇಷ್ಟೇನು ಅವಸರ? Let the fellow finish his roll call.

ಚಾರು :—Yes! yes! Rebecca—there is no hurrry yet. ಸ್ವಲ್ಪ ತಡೆಯೋಣಲ್ಲ.

ರಿಬೆ :—ಒಲ್ಲೆs ನಮ್ಮಪ್ಪ! I feel awkward at that awful stamping. ಅದಕ್ಕ Late ಮಾಡೋದರಗಿಂತ ತುಸು ಲಗೂನ ಹೋಗೋದು ಒಳ್ಳೆಯದು.

ಚಾರು :—Look here Mr. Shigihalli. I care a fig for those hang dogs. Let them stamp and bring down the hell, why care! ಇರಲಿ ನಿಂದ್ರು ರಿಬೆಕಾ, ಸ್ವಲ್ಪ ಹರಟಿ ಹೊಡೆಯೋಣಲ್ಲ ಶೀಗಿಹಳ್ಳಿಯವರ ಕೂಡ.

ರಿಬೆ :—ಅದೇಕೋ! ಮಿಸ್ಟರ ಶೀಗಿಹಳ್ಳಿಯವರ ಭೆಟ್ಟಿ ಇತ್ತೀಚೆಗೆ ಇಷ್ಟು ಅಪರೂಪ ಆಗೇದ ಏನು?

ಶೀಗಿ :—ಅದೇನಿಲ್ಲಾ ರಿಬೆಕ್ಕಾ ಇದರೊಳಗ ಮುಚ್ಚಿಡೋದು ಏನದ? We do meet almost every day. ಗೊತ್ತಿಲ್ಲದವಳ ಹಾಂಗ ಮಾತಾಡ್ತೀಯಲ್ಲ!

ರಿಬೆ :—ಹುಂ! ಅದು ನನಗ ಗೊತ್ತದ, ಆದರ ನನಗ ಇನ್ನೂ ಒಂದು ಮಾತು ಗೊತ್ತದ. ಇತ್ತಿಚೆಗೆ ನಿಮ್ಮನ್ನ ಕಾಣದಿದ್ದರ ಇವಳಿಗೆ ಹೊತ್ತೇ ಹೋಗುವದಿಲ್ಲ. ಇದು ನಿಮಗ ಗೊತ್ತಿರಲಿಕ್ಕೇ ಇಲ್ಲ.

ಚಾರು :—(ರಿಬೆಕ್ಕಾನ ಬೆನ್ನು ಚಪ್ಪರಿಸುತ್ತ) ಇರಲಿ ಬಿಡು. ನೀ ಇಲ್ಲದ್ದೊಂದು ಏನಾರ ಹೇಳಬ್ಯಾಡ ಸಾಕು.

ರಿಬೆ :—ಹಾಂ! ಇದೆಲ್ಲ ಇಲ್ಲದ ಸುದ್ದೇನು? (ಕ್ಲಾಸಿನ ಕಡೆಗೆ ಹೋಗುತ್ತ) ಆಗಲಿ ಹಾಗಾದರ ಇನ್ನುಮ್ಯಾಲೆ ಇದ್ದದ್ದ ಹೇಳತೀನಿ.

(ರಿಬೆಕ್ಕಾ ಮುಂದುವರಿಯುವಳು)

ಶೀಗಿ :—(ಚಾರುಗಾತ್ರಿಯು ಕೈಯಲ್ಲಿಯ ಒಂದುಪುಸ್ತಕವನ್ನು ತೆಗೆದುಕೊಳ್ಳುತ್ತಾ) Is this the book I gave you? Have you finished reading it?

ಚಾರು :—(ಆತನ ಕೈಯಿಂದ ಅದನ್ನು ತಿರುಗಿ ತೆಗೆದುಕೊಳ್ಳುತ್ತಾ) ಈ ಪುಸ್ತಕ ಮುಗಧಾಂಗ ಆತನ್ನರಿ. But now, I want all your notes on Shelley.

ಶೀಗಿ :—But what about the notes, I gave you with this book?

ಚಾರು :—Well, ಅದೇನೋ ನನಗೆ ಗೊತ್ತಿಲ್ಲ. Some how I can't follow your notes unless you yourself explain them to me.

ರಿಬೆ :—(ಹಿಂದಿರುಗಿ) ಚಲೋ ಹಂಚಿಕೆ ಅದ ಅಲ್ಲ, ಇವರ Notes ಇಸಗೊಂಡು Shelfನ ಮೇಲೆ ಒಗೆಯುವದರಗಿಂತ—ಇವರನ್ನೇ hand bagದಲ್ಲಿ ಹಾಕಿಕೊಂಡು ತಿರುಗಾಡಿದರ ಒಳ್ಳೇದಾದೀತು.

ಶೀಗಿ :—ಅವಕ್ಕ ಇನ್ನೂ ದಿವಸವ ರಿಜೆಕ್ಕಾ; ನೀನೂ ಸ್ವತಃ ತೀದವಳೇ ಇದ್ದೀದಿ. ಹೆಚ್ಚಿಗೆ ಹೇಳೋದೇನು?

ಚಾರು :—(ರಿಬೆಕ್ಕಾಗೆ) ಮತ್ತೆ ಬಂದೆಯಾ? ಕ್ಲಾಸಿನ ಚಿಂತೀ ಬಹಳ ಮಾಡತಿದ್ದಿ. ಯಾಕೆ ಹೋಗಲಿಲ್ಲ?

ರಿಬೆ :—ಅದು ನಮ್ಮ ಗ್ರಹಚಾರಾ. The Principal has started the class already.

ಶೀಗಿ :—Then what about your Role?

ರಿಬೆ :—Don't you worry the clerk will mark us present. We are always supposed to be present.

ಶೀಗಿ :—But still however............

ಚಾರು :—However ಚಿಂತಿ ನಿಮಗ ಗಂಡಸರಿಗೆ, ನಮಗೇನು? ನಮ್ಮ ನಂಬರಿಗೆ ಉತ್ತರಾ ಕೊಡೋ Chivalrous gentlemen ಎಷ್ಟೋ ಇರ್ತಾರ, ಕ್ಲಾಸಿನಾಗ; ನಡೀರಿ ಶೀಗಿಹಳ್ಳಿ ಕ್ಲಾಸು ಸುರು ವಾಗಿಬಿಟ್ಟದಂದವ್ಯಾಲ Libraryಗೇ ಹೊಗೋಣ. ರಿಬೇಕ್ಕಾನೂ ಬರತಾಳ.

ಶೀಗಿ :—ನಿಮಗ ರೋಲಿನ ಚಿಂತಿ ಇಲ್ಲದಿದ್ದರೇನಾಯಿತು. ಫೆಲೊ ಆದ ತಪ್ಪಿಗೆ ನಮ್ಮ ಕೊರಳಿಗೊಂದೇನಾದ್ರು ಉರಲು ಇದ್ದೇ ಇರುತ್ತದಲ್ಲಾ. I must run now. ನಾ ಹೋಗ್ತಿನಿ. ಆಂ....

(ಚಾರುಗಾತ್ರಿಯ ಕಡೆಗೆ ನೋಡುತ್ತ ಹೋಗುವನು.)

ರಿಬೆ :—ಅದೇಕೋ? ನಾ ಏನು ಎಣ್ಣಿಗುಂಡೇನು? ಹೋಗು ಬೇಕಾದರ ನೀ ಒಬ್ಬಾಕೀನ, ನಾ ಹೋಗ್ತೇನಿ. ನನ್ನಷ್ಟಕ್ಕ. (ಹೋಗಹತ್ತುವಳು)

ಚಾರು :—ಆತು, ನಿನಗೂ Notes ಕೊಡುವವರು ಒಬ್ಬರು ಇದ್ದೇ ಇಪ್ಪಾರ; ನನಗ ಯಾಕ ಅದರ ಚಿಂತಿ?

ರಿಬೆ :—ನಾನೂ ಅದs ಅಂತೀನಿ (ಹೋಗುವಳು)

(ಇತ್ತ ಚಾರುಗಾತ್ರಿಯು ಹೋಗುತ್ತಿರಲು ಅವಳ ಎದುರಿನಿಂದ ಮಿಸ್ಟರ ದೇಸಾಯಿಯವರು ಧಾವಿಸಿ ಬರುವರು. ಇಬ್ಬರು ಒಬ್ಬರನ್ನೊಬ್ಬರು

ಸಂಧಿಸಿ ಎತ್ತ ಹೋಗುವದೆಂದು ಅತ್ತಿತ್ತ ಆಲೆದಾಡಿ—ದೇಸಾಯರಿಗೆ ಏನೂ ತಿಳಿಯದಂತಾಗಿ ಹೋಗುವಾಗ ಅವಳ ಪುಸ್ತಕ ತಾಗಿ ಅದು ಕೆಳಗೆ ಬೀಳುವದು.)

ದೇ :—Oh, I am sorry (ಎಂದು ಬಗ್ಗಿ ಪುಸ್ತಕವನ್ನು ಕೊಡುತ್ತ) ತಾಕ್ತೇನು ನಿಮಗ? I am really sorry. I never meant it.

ಚಾರು :—Oh No! thank you very much that is very kind of you. Thank you. (ನಗುತ್ತ ಹೋಗುವಳು)

ದೇ :—Please excuse ಆಂ! (ಕಿಲಿಕಿಲಿ ನಗುವನು) Splendid success ನೋಡಿರಿ. ಇಷ್ಟು ದಿನ ಕಣ್ಣೆತ್ತಿ ನೋಡಲಿಕ್ಕಿದ್ದಿಲ್ಲ ಹುಡುಗೀ ಹೇಗೆ ಹಾದಿಗೆ ಬಂದಳು! ಹುಡುಗ ಯಾರು ನಾನು? ಹಾರೋ ಹಕ್ಕಿ ರೆಕ್ಕೀ ಎಣಿಸೋ ಅವ ನಾನು; ನನ್ನ Love-letter ಮುಟಿಧಾಂಗ ಕಾಣತದ. I expect her reply this evening. ಉತ್ತರಾ ಬರೆದೂ ಹಾಕಿದಾಂಗ ಕಾಣಸ್ತದs. ಶೀಗಿಹಳ್ಳಿಗೆ ಆ ಪತ್ರ ಬಂದಿರಬಹುದು, ಈಗಾಗಲೇ. ಇರಲಿ. ನಾಳೆ ಹೇಗಿದ್ದರೂ ಅವರು ನಮ್ಮಲ್ಲೀ ಬರತಾರಲ್ಲ. ಎಲ್ಲs ತಿಳಿದ ತಿಳಿತದ. I must get her reply soon. Else my heart won't rest in peace. ಆತು; ಇನ್ನ ನಾವೂ ಅಷ್ಟು ಲಾಯಬ್ರರೀಗೆ ದರ್ಶನಾ ಕೊಡೋಣಲ್ಲಾ! (ಹೋಗುವನು)

ತೆರೆಯಿಳಿಯುವದು.

೨ನೇ ನೋಟ.

(ಆ ರವಿವಾರ ದೇಸಾಯರ ಆಮಂತ್ರಣದ ಮೇರೆಗೆ ಹಾಸ್ಟೆಲ್ಲಿಗೆ ಊಟಕ್ಕೆಂದು ಹೋಗುತ್ತ, ಹಾಸ್ಟೆಲ್ಲಿನ ದಾರಿಯಲ್ಲಿ ಗೇಟಿನ ಹತ್ತಿರ ಶೀಗಿಹಳ್ಳಿ-ಸಂಗನಗೌಡರು ಎದುರುಬದುರಾಗಿ ಬಂದು ಭೆಟ್ಟಿಯಾಗುವರು. ಶೀಗಿಹಳ್ಳಿ ಶರ್ಟು ಹಾಗು ಪಯ್ಜಾಮಾ, ಸಂಗನಗೌಡರು ಪಂಜಾಬಿ ಹಾಗೆ ಧೋತರ ಧರಿಸಿರುವರು. ಇಬ್ಬರೂ ಸಾದಾ ಕೆರವು ಮೆಟ್ಟಿರುವರು.)

ಶೀಗಿ :—ಏನು ಗೌಡ್ರಽ! ಎಷ್ಟು ಲಗೂ ಬಂದ್ರಿ. ಆದರ ನಮ್ಮ Host ದೇಸಾಯಿ ಕಾಣೋದಿಲ್ಲಲ್ಲಾ! ನಿಮ್ಮೊಬ್ಬರನ್ನೇ ಹಾಸ್ಟೆಲ್ ಗೇಟು ಕಾಯಲಿಕ್ಕೆ ನಿಂದ್ರಿಸಿ ಹೋಗ್ಯಾನೇನು? ಆದಿತ್ಯವಾರದ ಫೀಸ್ಟ ನಿಮ್ಮನ್ನ ಲಗೂ ಎಳಕೊಂಡ್ಬಂತ ಕಾಣಸ್ತಽದ?

ಸಂ. ಗೌ :—ಇಲ್ರೀ, ಬಂದು ಒಂದೈದು ಮಿನೀಟಾತು! ದೇಸಾಯ್ರು ಈಗ ಬರತೇನಂತ ಹೇಳಿ ಹೋಗ್ಯಾರ; ಬರ್ರಿ ಅವರ ಕೋಣೆಯಲ್ಲಿ ಹೋಗಿ ಕೂಡೋಣ.

ಶೀಗಿ :—ನೀವು ದೇಸಾಯಿನ್ನ ಮಾತಾಡಿಸಿ ನೋಡಿದ್ರಿಲ್ಲೊ? ಏನಂತಽದ ಆಸಾಮಿ?

ಸಂ. ಗೌ :—ಅರ್ಭಾಟ ಐತ್ರಿ; Maniaದ temperature ಇನ್ನೂ ಏರುವುದರೊಳಗಽ ಐತಿ. ನಿಮ್ಮ ಹಂಚಿಕೆ ಪುಟ್ಟಾಪೂರಾ ಕೈಗೂಡುವ ಹಾಂಗ ಕಾಣಸ್ತದ. ಆದರ ಒಮ್ಮೊಮ್ಮೆ ಅನಸ್ತದ ಇದರೊಳಗ ನಾವು ಯಾಕ ಕೈ ಹಾಗಬೇಕೂ ಅಂತ. ಅವರದೇನೊ-ಇವರದೇನೊ!

ಶೀಗಿ :—ಎಲ್ಲೀ ಅವರದರೀ? ಎಲ್ಲಾ ಇವರದಽ ಸೌಭಾಗ್ಯ. ನನಗ ಗೊತ್ತಿಲ್ಲ; ಚಾರುಗಾತ್ರಿಯೇನು ಹಸಿಬಿಸಿ ಹುಡುಗೀಂತ ತಿಳಿದಿರೇನು? ನೀವೇನು ಹಿಂದ ಸರಿಬ್ಯಾಡ್ರಿ, ನೋಡಿಯಾದರೂ ನೋಡ್ರಿ—ಮಜಾ. ಸುಮ್ಮನ ಹುಚ್ಚು ಹುಚ್ಚು ಬಡೀತದ ತೀರಿತು. ಈಗ ಎಂಟು ತಿಂಗಳಾತು. ನೋಡೇ ನೋಡ್ತೇನಿ—ಕಾಲೇಜಕ್ಕೆ ಅರ್ಧತಾಸು ಮೊದಲೇ ಬಂದು Ladies ರೂಮಿನ ಕಾವಲುಗಾರನ ಹಾಗೆ ನಿಂತಿರತಾನ.

ಹುಟ್ಟಾ ಸಾಲ ಸುದ್ದ Rollಗೆ ಬರದ ಮಗ—ಇವನ ರೋಲು ಹೇಳಿ ಹೇಳಿ ನನಗ ಸಾಕಾತು—ಇಂತವಾ ಈಗ ಚಾರುಗಾತ್ರಿ ಕಾಲೇಜದಾಗ ಇರೋತನಕಾ ಇವನೂ ಅಲ್ಲೇ ಸೇರಿರತಾನ.

ಸಂ. ಗೌ :—ಹೌದರೀ; ಡೌಲೀನ್ ಮಾಡ್ತಾನ್; ವಿಚಿತ್ರ ಡ್ರೆಸ್ ಏನು ಮಾಡ್ತಾನ? ಒಂದೆರಡು ಸಲ ಸುಳ್ಳು ಸುಳ್ಳು ಮಾತಾಡಸೋ ಪ್ರಯತ್ನಾನೂ ಮಾಡಿದ್ಹಂಗ ಕಾಣಸ್ತದ. ಮೊನ್ನೆ ಕಾಲೇಜದ Gatheringನಲ್ಲಿ ನೋಡಿದೆವಲ್ಲ. General Secretary ಬೆನ್ನ ಹತ್ತಿ ಸುಮ್ಮಸುಮ್ಮನ Ladies Roomನಾಗ ಸುತ್ತಾಡತಿದ್ದ. ಸ್ವಲ್ಪಾದರೂ Discrimination ಬೇಕೋ ಬ್ಯಾಡೋ?

ಶೀಗಿ :—You are quite right. ಹೀಂಗ ಹುಚ್ಚು ಹುಚ್ಚು ಬಡದರ ಅದೇನು Loves ಅದೂ? ನನಗಂತೂ ಅನಸ್ತದ ನೋಡರಿ ಗೌಡ್ರ– In love discrimination should play as much part as the heart, ಇವನದು ಇದೂ Loves—ಎಲ್ಲಾದರೂ Mimicry ಇದೂ; ಇದು Mimicry! ಇವಾ High school ನಾಗ ಇದ್ದಾಗಿನಿಂದ ನಾ ಇವನ ಗುಣ ಬಲ್ಲೆ.

ಸಂ. ಗೌ :—ಆದ್ರ, ಮಿಸ್ಟರ್ ಶೀಗಿಹಳ್ಳಿ, ಈಗ ಮಾತ್ರ ದೇಸಾಯೀ ಅವಸ್ಥೆ ತೀರಾ ಹಣ್ಣಂಣು ನೀರ್‌ನೀರಾಗ್ಯೈತಿ, ನೋಡ್ರಿ. ನೀವು ಬಂದಿರಲ್ಲಾ, ಅದಕೂ ಮುಂಚೆ ಚಾರುಗಾತ್ರಿಗೆ ತಾ ಪತ್ರಾ ಬರದ ಸಂಗತಿಯೆಲ್ಲಾ ಹೇಳ್ತಿದ್ದ. ಮತ್ತ ನಿಮ್ಮ ಏರ್ಪಾಡಿನ ಪ್ರಕಾರ ನಿಮ್ಮ Address ಗೇ ಚಾರುಗಾತ್ರೀ Reply ಕೂಡಾ ತನಗ ಬಂದಿರಬಹುದಂತ ನಿಮ್ಮ ದಾರೀನs ನೋಡ್ತಿದ್ದಾ.

ಶೀಗಿ :—ನಾಯೆಲ್ಲಾ ಸಜ್ಜಾಗೇ ಬಂದೆನ್ನೋಡ್ರಿ. ನಾಯೀನೂ ಹಸ್ತsದ, ಪಿಟ್ಟ್ಯೂ ಹಳಸೇದ; ಒಂದ ಕೈ ಮಜಾ ತೋರಿಸ್ತೀನಿ; ಅಂದ್ರ He should remember it forerver. ನಿಮ್ಮದೇನು ಹೆಚ್ಚಿನ ಕೆಲಸಿಲ್ಲಾ ಬರೇ ನನಗ ಅನುಕೂಲಾಗಿ ಮಾತಾಡ್ತಿರಿ, ಆತು.

ಸಂ. ಗೌ :—ಬರೇ ಕೌಲೆತ್ತಿನ ಕೆಲ್ಸ ಹೌದಲ್ಲೋ; ಅಷ್ಟ ಮಾಡ್ತೀನಿ ಬಿಡ್ರಿ. ಇರಿಯೋದು ಹಾಯೋದು ನನ್ನಕಡ್ಲಿಂದ ಆಗಾಕಿಲ್ಲ.

ಶೀಗಿ :—ಅದೆಲ್ಲಾ ನನಗ ಬಿಟ್ಟ ಬಿಡ್ರಿ. ನಾ ಸನ್ನೀ ಮಾಡಿದ್ಹಾಂಗ ಹೊತ್ತೂ ಹದಾ ನೋಡಿ, ಹುಷಾರಿತನದಿಂದ ಹಗ್ಗಜಗ್ಗಾ ಇರ್ರಿ, ತೀರ್‍ತು.ಅಲ್ಲಿ ನೋಡ್ರಿ, ದೇಸಾಯಿ ಕೋಣೆಗೆ ಬಂದಾ; ಕರೀತಾನ್ನಡ್ರಿ. ಹೋಗೋಣ.

(ಇಬ್ಬರೂ ಹೋಗುವರು; ತೆರೆಯೇಳುವದು. ದೇಸಾಯಿಯು ಕೋಣೆ; ಅದು ಒಬ್ಬ ರಸಿಕವಿದ್ಯಾರ್ಥಿಗೆ ಒಪ್ಪುವಂತೆ ಸಿಂಗರಿಸಲ್ಪಟ್ಟದೆ. ಬಲಗಡೆ ಮೂಲೆಗೆ ಅಡ್ಡವಾಗಿ ಮಚ್ಛರದಾಣಿಯಿಂದ ಮುಚ್ಚಿದ ಮೆರಗಿನ ಪಲ್ಲಂಗ; ಎಡಗಡೆಯ ಮೂಲೆಯಲ್ಲಿ ಒಂಧು ಗ್ರಾಮಫೋನ್; ಅದರ ಬದಿಯಲ್ಲಿ ಒಂದು ಬೆಡಗಿನ ಸ್ಟ್ಯಾಂಡಿನ ಮೇಲೆ ಎರಡು ಆಕ್ಸಿಡಾಯಿಜ ಪ್ರೇಮಿನ ಫೋಟೊ, ಅವುಗಳ ಬದಿಯಲ್ಲೆ ೪-೫ ಅಲ್ಬಂ; ನಡುವೆ ಒಂದು ಕೊಳಲು ಅಡ್ಡಾಗಿದೆ. ಇವೆರಡು ಮೂಲೆಗಳ ನಡುವೆ, ಎದುರಿಗೆ ಒಂದು ಹೊಸ ಮಾದರಿಯ ಕನ್ನಡಿಯ ಸಾಯಿಡುಬೋರ್ಡು, ಅಧರ ಮೇಲೂ ಮೂರು ಬೆಳ್ಳಿಯ ಕಟ್ಟಿನ ಫೋಟೋಗಳು; ಅಲ್ಲದೆ ಸುಗಂಧದೆಣ್ಣೆ, ಫೇಸ್‌ಪೌಡರ್, ಇವಿನಿಂಗಿನ್‌ಪ್ಯಾರೀಸ್ ಮುಂತಾದವುಗಳ ಅಂದಚಂದದ ಸೀಸೆ, ಡಬ್ಬಿ, ಕುಡಿಕೆಗಳು; ಗ್ರಾಮಫೋನಿನ ಎರಡೂ ಬದಿಯಲ್ಲಿ ಒಂದೊಂದು ಹೂವಿನ ಹಂಡೆಯ ಸ್ಟ್ಯಾಂಡೂ ಇವೆ; ಎಡದ ಗೋಡೆಗೆ ಹೊಂದಿ ಅಭ್ಯಾಸದ ಟೇಬಲ್ಲೂ, ಸೆಲ್ಫ, ಒಂದು ಕುರ್ಚಿ; ಅದರ ಎದುರಿನ ಗೋಡೆಗೆ—ಬಲಗಡೆಗೆ–ಹೊಂದಿ ಒಂದು ಡ್ರೆಸ್ಸಿಂಗ್ ಆಲ್ಮಿರಾ; ಒಂದು ಈಝೀಚೇರು, ಪಲ್ಲಂಗದ ಕಾಲಿಗೆ, ಖುರ್ಚಿಗಳ ಬೆನ್ನಿಗೆ ಕೋಟುಗಳು ಪ್ಯಾಂಟುಗಳು ಅಂಟಿಕೊಂಡಿವೆ. ಟೇನಿಸ್ ರಾಕೆಟ್ಟುಗಳು ಆಲ್ಮೀರಾದ ತಲೆಯ ಮೇಲಿಂದ ಹಣಿಕೆ ಹಾಕುತ್ತಿವೆ. ಕೋಣೆಯ ನಟ್ಟನಡುವೆ ಒಂದು ಸುಂದರವಾದ ಟೀಪಾಯ ಸುತ್ತು ಮೂರು ಕುರ್ಚಿಗಳು. ಕೋಣೆಯಲ್ಲಿ ಒಟ್ಟಾರೆ ಎದ್ದುಕಾಣುವ ವಸ್ತುಗಳೆಂದರೆ ಅಲ್ಲಲ್ಲಿ ಜಾಗಿಸಿಟ್ಟ, ಇಲ್ಲವೆ ಗೋಡೆಗಳಿಗೆ ಡೌಲಾಗಿ ತೂಗಿಬಿಟ್ಟ ಫೋಟೋಗಳೇ. ಇವೆಲ್ಲಾ ಬಹುಶ: ಸಿನೇಮಾ ಸುಂದರಿಯರವೇ. ದೇಸಾಯಿ ಕುರ್ಚಿ ಹೊಂದಿಸಿ ತಲೆ ಬಾಚಿಕೊಳ್ಳುತ್ತಿರುವಾಗ ಶೀಗಿಹಳ್ಳಿ ಸಂಗನಗೌಡರು ಬರುವರು. ದೇಸಾಯಿ ತೊಟ್ಟದ್ದು ಹಸಿರು ಬಣ್ಣದ **Sports-frock** ಹಾಗೂ ಬಿಳೀ ಪ್ಯಾಂಟು, ಕಾಲಲ್ಲಿ ಶೆಮಾಯಿ ಲೆದರಿನ ಪಠಾಣ ಚಪ್ಪಲ್, ಬಾಯಲ್ಲಿ ಸಿಗಾರೆಟ್ಟು.)

ದೇ :—(ಶೀಗಿಹಳ್ಳಿಯನ್ನು ನೋಡಿ) Oh! Mr. Shigihalli; I was dying to see you; ಬರ್‍ರೆಪಾ, ಬರ್‍ರಿ.

ಶೀಗಿ :—ಮತ್ತಿನ್ನೂ ಉಳಿದೀರ್‍ಯ್ಯಾಂಗ? ಕೈಲಾಸದ ರೈಲು ತಪ್ಪಿತೇನು?

ಸಂ. ಗೌ :—ಇನ್ನೇನ್ರೀ ದೇಸಾಯಿರs; ಶೀಗಿಹಳ್ಳೀನು ಬಂದಾರಲ್ಲಾ; ನಿಮ್ಕೆಲಸಾ ಮುಗಿಧಾಂಗಂತs ತಿಳೀರಿ.

ದೇ :—(Fan ಚಾಲುಮಾಡಿ) ಮತ್ತ ನಿಮ್ದು ಹಾಯಿರಾನೂ ಬೇಕಾಬೇಕ್ನ ಮಗ; ಕೂಡ್ರುಸಾ, ಕೂಡ್ರಿ; ಗೌಡರs; ಶೀಗಿಹಳ್ಳೀ; ಕೂಡ್ರಿ. (ದೇಸಾಯಿ ಸಂಗನಗೌಡರು ಕುಳಿತುಕೊಳ್ಳುವರು; ಶೀಗಿಹಳ್ಳಿ ಕೊಳಲನ್ನು ತೆಗೆದು ಕೊಂಡು ಊದುವ ನಟನೆ ಮಾಡುವನು.)

ಸಂ. ಗೌ :—ಇದೇನ್ದೇಸಾಯ್ರs, ಗಾನದೇವ್ತಿ ಪ್ರಸನ್ನಾದ್ಲೇನ್ನಿಮಗs!

ದೇ :—ನಮಗಿನ್ನೂ ಯಾವ ದೇವ್ತಿನೂ ಒಲೀವಳ್ಳಲ್ರೀ; ಸುಮ್ಮನೆ art for art's sake ರೆಪಾ.

ಸಂ. ಗೌ :—ಈ ಟರ್ಮು ಈ Corner room ಹ್ಯಾಂಗ ಸಿಕ್ತಿತ್ರೀ ನಿಮ್ಗs? ಸಜ್ಜಮಾಡೀರೆಲ್ಲಾ Arrangematoo.

ದೇ :—ಇದರ ದಶೀಂದ ೨ ವರ್ಷ ಖಟಿಪಿಟಿ ಮಾಡಿನ್ರೀ. ಈ ಸಾರೆ Hostel peonದ್ದು ಮರ್ಜಿ ಆತ್ನಮ್ಯಾಲೇ. ನೋಡ್ರಿ, ಈ ರಸ್ತೇದ ಕಿಡಕಿಯೊಳಗಿಂದ, ನೋಡಿದ್ರ ಎಲ್ಲಾ ತರದ ಸೌಂದರ್ಯನೂ ಕಾಣಸ್ತsದ.

ಸಂ. ಗೌ :—(ಶೀಗಿಹಳ್ಳಿಯ ಸನ್ನೆಯ ಮೇರೆಗೆ ಒಂದು ಸುಂದರ ಫೋಟೋ ಸಮಿಾಪಿಸಿ) ಆ ರಸ್ತೇದ ಮ್ಯಾಗಿನ ಸೌಂದರ್ಯ ಸುಳಿದಾಡೋ ಸೌಂದರ್ಯಾಂತ, ಇಲ್ಲಿ ಕೆಲವು ಅಪರೂಪ ಸೌಂದರ್ಯದ ಮೂರ್ತಿಗಳನ್ನs ಕಟ್ಟಿ ಹಾಕೀರಲ್ಲಾ!

ದೇ :—ಗೌಡರs, Beauty ಇಲ್ಲದ್ದು Life ಏನ್ರೀ? ಯಾಕ ಅವರ್‍ಯಾರು ಗೊತ್ತಿಲ್ಲೇನು? (ಆ ಫೋಟೋ ತೋರಿಸಿ) ಈಕಿ World famous beauty ರೀ,—Janet Gaynor; ಯಾಕ್ ನೀವು Seventh Heaven ಮತ್ತ Midnight Kiss ನೋಡಿಲ್ಲೇನು? ನನ್ಕೇಳಿದ್ರ, ಈಕಿ Greta Garbo ನ್ಕಿಂತಾ ಮೇಲು; ಅದ್ಕೊಂಡ್ರಿ, ಶೀಗಿಹಳ್ಳೀ ನೋಡ್ತಿರೋ ಆಲ್ಬಮ್ಮಿನಾಗ ಈಕೀದೂ ಮತ್ತ Garboನ್ದೂ ಒಂದ್ Special sections ಮಾಡೇನಿ. (ಮತ್ತೊಂದು ತೋರಿಸಿ) ಈಕಿ ಯಾರ್ಗೊತ್ತದನೋ ಇಲ್ಲೋ? Marlene Dictrich ರೀ.

ಅಸ್ಸಲ್ ಜರ್ಮನ್ Beauty. Shanghai Express ದ Heroin ನ್ನೂ! ಓ ಅದಂತೀರಾ! (ಇನ್ನೊಂದನ್ನು ಲಕ್ಷಿಸಿ) Joan Crawford ಬಿಡ್ರಿ, ಆಕಿ ಖರೇ ಹೆಸರು Billy Cassin. ಆಕೇನು ಅಷ್ಟರಪ್ರೂರ್ತೆ; ಬರೇ ದುಂಡು ದುಂಡು ಮುಖ; ಆ Beauty ಯ Subtle touches ಮತ್ತ Expression ಅಂತಾರಲ್ಲಾ ಅದಿಲ್ಲ ನೋಡ್ರಿ ಆಕಿ Face ದೊಳಗ; ಆದ್ರ, ಇತ್ಲಾಗ ನೋಡ್ರಿ; ಈ Beauty ಹೇಳಿ ಮಾಡಿಸಿದ್ದು, ಈಕಿ Myrna Loy; The Great Ziegfeld ದಾಗ ನೋಡೀರಿಲ್ಲೊ? ನಮ್ಮ ಶೀಗಿಹಳ್ಳಿ ಯಂತು ನೋಡಿರಲಿಕ್ಕೇಬೇಕು! ಮತ್ತ ಈಕಿ ನೋಡ್ರಿ, The hiearious Clandette Colbert. ಅಲ್ರೀ ಶೀಗಿಹಳ್ಳೀ, ನಿಮ ಗೇನು Blonde ಸೇರ್ತsದೋ Brunnetteo? ಮೊನ್ನೆ ಮೊನ್ನೆ ಎರಡು new film finds ಬಂದಾವಲ್ಲಾ Judy Garland ಮತ್ತು that glamour girl Dorothy Lasmour; ಅವರ ಬಗ್ಗೆ ಏನ್ನಿಮ್ಮಭಿಪ್ರಾಯಾ?........ಓ, ಓ, ಸಂಗನಗೌಡ್ರs, ಸಾವ ಕಾಶ್, ಹಾಂಗ ಜಗ್ಗಬ್ಯಾಡ್ರೀ ಆಕಿನ್ನs! ಆ ಫೋಟೋ ಯಾರ್ದಂದ್ರೀ? Jean Harlow ರೆಪಾ; ಆಕಿ ಖರೇ ಹೆಸ್ರು Harlean Carpentier ಅಂತ. ಆಕೀ ಒಂದs ಉಸಲಿಗೆ ಮೂರು ಗಂಡರ್ನ Divorce ಮಾಡಿದಾಕಿ. ಅವಳ ಗೋಜಿಗೆ ಹೋಗಬ್ಯಾಡ್ರೀ. ಇನ್ನೂ ಕೆಲವು Rare Beauties ಬೇಕಾಗಿದ್ರ........ಮಿ. ಶೀಗಿಹಳ್ಳೀ ಆ ಅಲ್ಬಂ ಕೊಡ್ರಿಲ್ಲೇ........ಇಕಾ ಇದ್ರಾಗ ಅವs ನೋಡ್ರಿ, ಅಕಾ ಅಲ್ಲೆ ತೂಗ ಹಾಕಿದ Norma shearar ನ Enlargement ಇನ Originallu, ಇಕಾ ಇದರ ಮೊದಲ್ನೇ ಪೇಜಿನ್ಯಾಗ್ಯ್ಲ ಅದ ನೋಡ್ರಿ. ಆಕೀ Juliet ನ ಪಾರ್ಟು ಏನ್ ಗ್ರ್ಯಾಂಡ್ರಿ! ಈಕಿ ನೋಡ್ರಿ World's highest paid star ಈಗ. ಮೂರು ಲಕ್ಷ ಡಾಲರ್ರೀ! ಅಂ, ಇಲ್ಲಿ ಮತ್ತ ಅವs ನೋಡ್ರಿ, Ginger Rogers, Jeanette Macdonald, Rosalind Russel, Barbara Stanwick, Deanna Durbin, Rita Hayworth, Bette Davis ಇತ್ಯಾದಿ ಹೊಚ್ಚ ಹೊಸದಾದ Galasy.

ಸಂ. ಗೌ :—(ಅವುಗಳನ್ನೆಲ್ಲ ಪುಟ ತಿರುವಿ ನೋಡುತ್ತ) ಅಲ್ರೀ, ನೀವು ಆ Shirley Temple ಫೋಟೋ ಯಾಕಿಟ್ಟಿಲ್ರೀ? ಭಾಳ ಪ್ರಸಿದ್ಧಳಲ್ಲs ಆ ಹುಡ್ಗಿ ?

ಶೀಗಿ :—(ಫೋನೋ ಹಚ್ಚ ಹೋಗಿ, ಅರ್ಧಕ್ಕೇ ತಡೆದು) ಅದೇನ್ರೀ, ಎಷ್ಟೇ ಹೇಳಿನ್ನೂ, ಅದರೊಳಗೇನ್ Beauty ಕಂಡಾರು ದೇಸಾಯ್ರು? ಅವರು ಪಾಡಗಾಯಿಗೆ ಗುರಿಯುಡವ್ರಪಾ! (ದೇಸಾಯಿ ನಗೆಯಿಂದ ಸಮ್ಮತಿ ಸೂಚಿಸುವನು.)

ಸಂ. ಗೌ :—ದೇಸಾಯ್ರುs, ನಿಮಗ್ಯಾಕೋ Indian stars appeal ಆದ ಹಂಗ ಕಾಣೂದುಲ್ಲಲ್ಲರೀ?

ಶೀಗಿ :—ಆಗದs ಏನ್ರೀ ಗೌಡರ! Charity begins at home ಅನ್ನೋದು ಗೊತ್ತಿಲ್ಲಂತೀರೇನು ದೇಸಾಯಿಗೆ? ಆ ಬ್ಯಾಟೀನs ಅವರು ಸ್ವತಹಾನೇ ಆಡ್ತಾರ.

ದೇ :—ಅದಕ್ಕೊಂದು Special Albums ಅದರೀ ಗೌಡರs (ಅದನ್ನು ತೆಗೆದು ತೋರಿಸುತ್ತಾ) ಇವು ನೋಡ್ರಿ, ಇವೆಲ್ಲಾ ಸ್ವತಃ ನಾನೇ ನನ್ನ ಕ್ಯಾಮೆರಾದಿಂದ ತೆಗದದ್ದು. ಈ ಸುಲೋಚನಾ, ಸವಿತಾ, ಮಾಧುರೀ ರೋಷನ್, ಜಹನಾರಾ ಇವರ ಫೋಟೋಕ್ಕ Provincial competition ದಾಗ Prize ಸಿಕ್ಕ್ಯಾವರೀ!

ಸಂ. ಗೌ :—ಇಷ್ಟೆಲ್ಲಾ ನೀವು ಸ್ವತಃ ಹ್ಯಾಂಗ Snap ಮಾಡಿದ್ರೆಪಾ ?

ಶೀಗಿ :—ಅವರೇನ್ರೀ, ಬರೇ Snap ಯಾಕ, ಅನುವು ಸಿಕ್ಕರ Trappoo ಮಾಡವ್ರು! ಪುಣೆ-ಮುಂಬಯಿಯೊಳಗ ಆ ಕುದುರೆಗಳಿಗೆ ಓಟದ Race ಆದ್ರ ನಮ್ಮ ದೇಸಾಯಿಗೆ ಅಲ್ಲೇ ಫೋಟೋದ Raccoo, ನೋಡಿದ್ರಿಲ್ಲೊ ಆ ಆಲ್ಬಮ್ಮಿನ Varieties! ಆ ಚಿತ್ರದ Beauty, ಈ ಫೋಟೋದ Beauty ಸಾಲದ, ಈಗಂತೂ ಪ್ರತ್ಯಕ್ಷ Beauty ಬ್ಯಾಟಿಗೆ ಹೊಂಟಾರ ದೇಸಾಯ್ರು! ಹೌದಲ್ಲೊ ?

ದೇ :—(ಎಚ್ಚತ್ತು) ಹೌದ್ರೀ ಶೀಗಿಹಳ್ಳೀ; ನಾ ಆ ಮಾತು ಮರತsಬಿಟ್ಟಿದ್ದೆ! ಆ ಸುದ್ದೀಯೆಲ್ಲಾ ಸಂಗನಗೌಡರಿಗೂ ತುಸಾ ಹೇಳೀನಿ! ಈ ಕೆಲಸೊಂದು ಕೈಗೂಡಿದರ ಮತ್ತೇನ್ ಹೇಳಲ್ರೆಪಾ!

ಶೀಗಿ :—ಆ ಹೇಳೋದೊಂದ ಮಾತ್ರ ಮಾಡಬ್ಯಾಡೇನಪಾ! ಕೆಲಸ ಕೂಡ ತದೋ ನೀನs ಕೂಡತೀಯೋ ನೋಡೋಣಂತ!

ಸಂ. ಗೌ :—ಅಲ್ಲೀ ಮಟಾ ಅಷ್ಟ ದಮ್ ಹಿಡೀರೀಂದೆ!

ದೇ :—ಇಲ್ಲ್ರೀ, ಗೌಡರ, I am really serious about it. Oh! I am dying for love! you don't know how keen are the arrows of cupid. ಶಕುಂತಲಾದಾಗ ಕಾಳಿದಾಸಾ, ಅಂದರ ದುಷ್ಯಂತ ಹೇಳ್ತಾನಲ್ಲಾ 'ತವ ಕುಸುಮ ಶರತ್ವಂ ವಜ್ರಸಾರೀ ಕರೋಷೀ'ಂತ ಥೇಟ್ ಹಂಗsರೀ! ಅದಕ್ಕೂ ಹೆಚ್ಚs ಅನ್ನಬೇಕಾದ್ರ. That holy flame is burning my heart; ಹಾ – ಹಾ –; ಅವಳೊಬ್ಬಳು ನನ್ನವಳಾದರೆ, ಈ ಜೀವಾ ಕಿತ್ತಿ ನಿಮ್ಮ ಕಾಲಿಗೆ ಹೂವೇರಿಸ್ಹಾಂಗ ಏರಿಸ್ತೇನ್ರಿ ಗೌಡರs! (ಗೌಡರ ಕಾಲನ್ನು ಹಿಡಿಯ ಹೋಗಿ) Oh. I cant live without her! (ಗೌಡರು ಕಾಲನ್ನು ಕೊಸರಿಕೊಳ್ಳಲು, ಅವರನ್ನೇ ಅಪ್ಪಿಕೊಳ್ಳ ಹೋಗುವನು.)

ಶೀಗಿ :—(ದೇಸಾಯಿಯನ್ನು ಎಳೆಯುತ್ತ) ಎಲಾ ಇವನs! ಸಾವಕಾಶ್, ಸಾವಕಾಶ್; ನಾಕಮಂದಿ ನೋಡಿಯಾರು ಕೇಳಿಯಾರು; ಮೆಲ್ಲಗ ಮಾತಾಡಪ್ಪು! (ದೇಸಾಯಿ ಗಾಗರೆಯುತ್ತಿರಲು) ಯಾರು ಒತ್ತಿದ್ದಾರಪಾ ಇವನ ಗಂಟಲಾನs, ಅಂತೀನಿ!

ದೇ :—Oh! If not it is a living death and an ever dying life as Watson puts it.

ಸಂ. ಗೌ :—Not you I suppose.

ದೇ :—Me too.

ಶೀಗಿ :—ಮೀಟಕೀನಿ ನಿಂದ್ರು ನಿನ್ನ, ಈಗ ಯಾಕ ಹೇಳಲಿ. ಮುದಕೀ ನಿನ್ನ ಆಟ ಮುಂದ ಅದs ಆಗ ತಿಳೀತದ ಬಂಡ.

ದೇ :—ಇಲ್ರೀ, ಶೀಗಿಹಳ್ಳಿ! You must honour love as it should be. ನೀವು ಬೇಕಾದ್ದು ಹೇಳಿರೆಪಾ, ಕಣ್ಣಿಲೆ ನೋಡತೀರಿ. ಒಬ್ಬ ಹರೇದ ಹುಡುಗ love ದ್ದಶಿಂದ ಸಾಯತಾನ. ಕುಡಗೋಲು ಕುಂಬಳಕಾಯಿ ನಿಮ್ಮ ಕೈಯಾಗs ಯಾಕರೀ ಗೌಡ್ರ?

ಸಂ. ಗೌ :—ಅದು ಖರೇನs ಬಿಡ್ರಿ.

ದೇ :—ನಡೀರಲ್ಲ ಹಂಗಾರ ಚಹಾಕ್ಕ.

ಶೀಗಿ :—ಎಲ್ಲಾ ಆಗೇದಪಾ. ಕುಕ್ಕರಿಸು ಇಲ್ಲೇ. ಇಲ್ಲದಿದ್ದರ You go alone and have your tea.

ದೇ :—ಇಲ್ಲರೀ—I must have a cup now—Oh! I am dying to have it. I will be just coming; ಆಂ!

(ಹೋಗುವನು.)

ಶೀಗಿ :—ನೋಡಿರಿ ಅವನ್ನ Dying! the fellow should be dying for dying's sake. Dog on him.

ಸಂ. ಗೌ :—ಏನ್ರಿ ಮಿಸ್ಟರ ಶೀಗಿಹಳ್ಳೀ—ಇದೇನು ನಮ್ಮನ್ನ ಗೋಳಿಗೆ ಹಾಕಿದ್ರಿ. ನನಗs ಗಂಟು ಬಿದ್ದಿದ್ದನಲ್ಲಾ. ಒಳೇ ಫಜೀತಿ ಮಾಡತಿದ್ದ ಇವ. ನೀವು ಇದ್ದಿರಿ ಅಂತ ಸುಮ್ಮನಿದ್ದೆ. ಇಲ್ಲದಿದ್ದರೆ ತೆಗೆದು ಕೊಡತಿದ್ದೆ ಒಂದು ಗೆಡ್ಡಿಗೆ.

ಶೀಗಿ :—ನಾ ಒಂದು ಯುಕ್ತಿ ತಗದೀನಿ. ಬಾಣಾ ಪ್ರಯೋಗಸೋಣ ಏನು ಹೇಳ್ರಿ ಮತ್ತ ಹುಚ್ಚು ತಲೀಗೆರೇದ ನೋಡಿದರಲ್ಲ. ಇದೆಲ್ಲಾ ಮೊದಲನೇ ಅಂಕು. ಇನ್ನ ಮುಖ್ಯ ಆಟ ಮುಂದದ. ಅದಕ್ಕsನ ನಮ್ಮ Plan effective ಮಾಡೋಣೇನು ?

ಸಂ. ಗೌ :—ಮುಂಗೋಪಂತರಿಗೆ ಸಿಂದೀ ಅಂತೂ ಕುಡಿಸಿ ಇಟ್ಟೇರಿ. ಚೇಳು ಕಡಿಸಿ ಕೈಯಾಗ ಕೊಳೀ ಕೊಟ್ಟುಬಿಡಿರಿ. ಅಂದರ ಹತ್ತsದ ಬೆಂಕಿ ಲಂಕಾಕ್ಕ.

ಶೀಗಿ :—ಹಂಗಾರ ಈ ಕಾಗದ ತಗೊಳ್ರಿ ಗೌಡ್ರ—ಹಿಡಿರೀ ಈ ಪೆನ್ನ.

(ಎರಡನ್ನೂ ಕೊಡುವನು.)

ಸಂ. ಗೌ :—ಏನ್ರಿ ಶೀಗಿಹಳ್ಳಿ ನನ್ನ ಸುತ್ತs ತಂದ್ರೆಲ್ಲಾ?

ಶೀಗಿ :—ಹೌದು ಗೌಡ್ರs. You know, he is expecting a reply from her through me. ಅದಕ್ಕs ನೀವು ಬರೀರಿ ಮತ್ತs.

ಸಂ. ಗೌ :—ಯಾಕರೀ! ನೀವs ಬರಕೊಂಡು ತರತೇನಿ ಅಂತ ಅಂದಿದ್ದಿರಲ್ಲ?

ಶೀಗಿ :—ಇಲ್ಲ ಗೌಡರs! I am ready with the reply—You write it. ನಿಮ್ಮ patent hand writing ಅವನಿಗೆ ಗೊತ್ತಿಲ್ಲ. ನಾನು ಬರೆವರೆ ಪತ್ತೇ ಹತ್ತೀತು. ಇದು ತಗೊಳ್ಳರಿ (ಪತ್ರ ಇಡುವನು) ಇದು ಮಿಸ್ ಚಾರುಗಾತ್ರಿಗೆ ದೇಸಾಯಿ ಬರೆದ ಪತ್ರಾ; This is my draft reply. ನೀವೂ ಒಂತುಸಾ ತಲೀ ಉಪಯೋಗಿಸಿ ಅದಕ್ಕ ಸರಿಹೋಗುವ ಹಾಂಗ ಬರೀರಿ ಆತು. Hand writing ಮಾತ್ರ ನಿಮ್ಮ Patent Ladies' hand writing ಬರೀರಿ ಮತ್ತs.(ಗೌಡರು ಬರಿಯ ಹತ್ತುವರು. ಶೀಗಿಹಳ್ಳಿಯು ಅತ್ತಿತ್ತ ಅಡ್ಡಾಡಿ ಬಂದು) ಗೌಡರs Construe ಮಾಡಿದಿರೇನು? Bigin-ning ಹೇಗೆ ಮಾಡಿದಿರಿ? My dear ಓ, ಏನು My darling ಓ, ಏನು?

ಸಂ. ಗೌ :—My dear darling ಅಂದೀನಿ, ಇರಲಿ ಹೌದಲ್ಲೋ?

ಶೀಗಿ :—ನಿಮ್ಮನ್ನೇನು ಕೇಳುವದು! ಹೊಡೀರಿ. (ಅಡ್ಡಾಡ ಹತ್ತುವನು) Language ಮತ್ತ high flown ಇರಲಿ. ಈ ಪತ್ರ ಅವಗೂ ತಿಳಿದಿರಬಾರದು. (ಸ್ವಲ್ಪ ಅಡ್ಡಾಡಿ) ಎಲ್ಲಿಗೆ ಬಂತೋ ಸಂಗಯ್ಯ?

ಸಂ. ಗೌ :—ಮತ್ತೆಲ್ಲಿಗೆ? ಕುತ್ತಿಗೆಗೆ!

ಶೀಗಿ :—ನೋಡೋಣ (ನೋಡಿ) Oh, splendid ending, that is it. ಇಕಾ ಈ ನನ್ನ ಅಡ್ರೆಸ್ಸಿನ ಹಳೇ envelope ಹಿಡೀರಿ. ಇದರಲ್ಲಿ ಹಾಕಿ close ಮಾಡಿರಿ. ಓ—Here he is—ಬಂತಲ್ಲಾ ಸವಾರಿ....Come along Mr. Desai—

ಸಂ. ಗೌ :—ಬಿಸಿಬಿಸಿ ಚಹಾ ಬಿದ್ದು, ದೇಸಾಯರs ಹೊಟ್ಟಿ ತಣ್ಣಗಾತಿಲ್ಲೋ? ಕೂಡ್ರಿನ್ನ—

ದೇ :—ಏನು ತಣ್ಣಗಾಗತದರೀ; ಆ ಉರೀ ಎಂದೂ ತಣ್ಣಗಾಗೋದಿಲ್ಲ ಬಿಡರಿ.

ಶೀಗಿ :—ಅದನ್ನ ತಣ್ಣಗ ಮಾಡುವ ಔಷಧ ನನ್ನ ಹತೀಲೇ ಇರಲಿಕ್ಕೆ ನೀವ್ಯಾಕ ಚಿಂತಿಸ್ತೀರಿ. (ಕಾಗದವನ್ನು ತೋರಿಸಲು ಹೋಗುವನು. ಅದು ಅಂಟದೇ ಇದ್ದದ್ದು ನೋಡಿ ಬೆನ್ನು ಹಿಂದೆ ಹಿಡಿದು ಒತ್ತುತ್ತ) ಹೌದಲ್ಲೋ?

ಸಂ. ಗೌ :—ನಾನೂ ಅದs ಅಂತೀನಿ.

ಶೀಗಿ :—ಅಲ್ಲಾ, ದೇಸಾಯಿ; ನಿನ್ನದನಕs ಹಿಂಗಾತ ಅವಸ್ಥೀ. ಮುಂದೇನು ಗತಿ? ಹೀಂಗಾರ ನೀ ಏನು ಬಹಳ ದಿನ ಬದುಕೋ ಹಾಂಗ ಕಾಣೋದುಲ್ಲ.

ದೇ :—ಹೌದು, ನೀವs ನೊಡ್ರೆಪಾ—I am really dying

(ಶೀಗಿಹಳ್ಳಿಯ ಮೈಮೇಲೆ ಬೀಳುವನು.)

ಶೀಗಿ :—(ಅವನನ್ನು ಸರಿಸಿ) ಥೂ! ನಿನ ಮುಂಜಾಳ್ಳೋಗಾ.

ದೇ :—ಇಲ್ಲರೀ ಮಿಸ್ಟರ ಶೀಗಿಹಳ್ಳಿ. ಹಾಂಗನ್ನಬ್ಯಾಡ್ರೀ.

ಸಂ. ಗೌ :—ಹೌದರೀ ಮಿಸ್ಟರ್ ದೇಸಾಯಿ ನಮಗಷ್ಟು ಹೇಳ್ರೆಲ್ಲಾ.

ದೇ :—ಹೇಳತೇನ್ರೆಪಾ—ನಿಮ್ಮನ್ನ ಬಿಟ್ಟರ ಹ್ಯಾಂಗರೆಪಾ—

(ಎಂದು ಗೌಡರ ಮೈಮೇಲೆ ಬೀಳುವನು.)

ಸಂ. ಗೌ :—(ಸರಿಸುತ್ತ) ಹೌದ್ರೆಪಾ; ಸ್ವಲ್ಪ ಜೋಲಿ ಹಿಡಿರಿ; ನಮ್ಮ ಮೈಮ್ಯಾಲೆ ಬಿದ್ದರ ಏನು ಉಂಡೀರಿ?

ದೇ :—(ಇಬ್ಬರ ಕಡೆ ನೋಡುತ್ತ) Oh, my friends—ನಡುನೀರಾಗ ನನ್ನ ಕೈಬಿಡಬೇಡ್ರೆಪಾ ಮತ್ತ.

ಸಂ. ಗೌ :—ಸಾವs ನಿಮ್ಮ ಕೈ ಹಿಡಿದರ, ಆ ನಿಮ್ಮ ಗೌರಿ ಯಾರ ಕೈ ಹಿಡೀಬೇಕು ಮತ್ತs.

ಶೀಗಿ :—(ಪತ್ರ ಮುಂಚಾಚಿ) ದೇಸಾಯ್ರs ನೋಡ್ರಿಲ್ಲೆ! ಇದಕ್ಕೇನು ಹೇಳತೀರಿ? (ದೇಸಾಯರು ಪತ್ರವನ್ನು ಭಕ್ತಿಪೂರ್ವಕ ತೆಗೆದುಕೊಂಡು ಒಡೆದು ನೋಡಿ—ಆಶ್ಚರ್ಯ—ಆನಂದ—ಉದ್ರೇಕಗಳನ್ನು ಸೂಚಿಸುತ್ತ — ಅದಕ್ಕೆ ಮುದ್ದಿಟ್ಟು ಎದೆಗೊತ್ತಿ ಮತ್ತೆ ಓದಹತ್ತುವರು.)

ಶೀಗಿ :—ನಮಗಷ್ಟು ಹೇಳ್ರೆಲ್ಲಾ—ಹೇಳೋ ಹಾಂಗ ಇಲ್ಲೇನು? If it is strictly private we don't want to interfere.

ಸಂ. ಗೌ :—ಹೇಳ್ರೆಪಾ ಮತ್ತ ಸಕ್ಕರೀ ಸುದ್ದೀನ!

ದೇ :—ಹೇಳತೀನಿ ಬರ್ರೆಪಾ, ನೀವು ನನಗ ಹೊರಗಿನವರs (ಅಂತಾ ಗೌಡರ ಕೈ ಹಿಡಿದು ಎಳೆಯುವನು.)

ಸಂ. ಗೌ :—(ಕೊಸರಿಕೊಂಡು) ಹೌದ್ರೆಪಾ! ಅಲ್ಲಿಂದನs ಹೇಳ್ರಿ. ಅಪನವರ ಹುಚ್ಚು ಏನು ಮಾಡೀತು ಏನು ಬಿಟ್ಟೀತು ನೇಮುದ್ದಿಲ್ಲ.

ದೇ :—This is no ಹುಚ್ಚು my dear friend. This is sweet hallucination. (ಪತ್ರವನ್ನು ತೋರಿಸುವನು.)

ಸಂ. ಗೌ :—(ಅದನ್ನು ನೋಡಿ) Oh! beauty Romance—fortunate Mr. Desai—ಇದೇ ಖರೆ ದೈವ. You have won the lawrrels.

ಶೀಗಿ :—(ಸ್ವಗತ) ಕರೇ ದೆವ್ವ (ಪ್ರಕಟವಾಗಿ) ಏನ್ರಿ ದೇಸಾಯ್ರ—This is really a fortune. Congratulation Heaps of them. ಅಂತೂ ನಾವು ಮನಸಿನಾಗ ಮಾಡಿದಾಂಗ ಆತಲ್ರಿ ದೇಸಾಯ್ರ! ಇನ್ನಮುಂದೂ, ನಾವು ಮಾಡಿಧಾಂಗs ಆಗತದ. ಸೆರಗಿಗೆ ಗಂಟುಹಾಕಿರಿ ಗೌಡರs.

ಸಂ. ಗೌ :—ನಮ್ಮ ದೇಸಾಯ್ರ ಮುಂದ ಯಾರ್ರೀ?

ಶೀಗಿ :—ದೇಸಾಯರs ಇನ್ನ ವ್ಯಾಲ ಕೈಗೆ ಬಂದ ತುತ್ತು ಜಾರೀತು ನೋಡ್ರಿ—ದುಡ್ಡಿನ ಮಾರೀ ನೋಡೀರಿ—ಬಂಧು ಬಳಗ ಅಂದೀರಿ—ಎಲ್ಲಾ ಕಟ್ಟಿ ವಗೀರಿ—ಹತ್ತು ಸಾವಿರ ರೂಪಾಯಿ ಹೋದರೂ ಚಿಂತಿಲ್ಲ.

ದೇ :—ಛೆ! ಹೊಲಾ ಹೋಗಲಿ—ಮನೀ ಹೋಗಲಿ—ತಲೀ ಹೋಗಲಿ.

ಸಂ. ಗೌ :—ತಲೀ ಹೋಗೇದಂತ ಇದೆಲ್ಲ ನಡದದ.

ದೇ :—ಇದಕ್ಕ reply ಬರೀಬೇಕಲ್ಲರೀ (ಅತ್ತಿತ್ತ ಅಡ್ಡಾಡುವನು.)

ಶೀಗಿ :—ಅದಕ್ಕೆನರೀ—ನಾವೆಲ್ಲ ವ್ಯವಸ್ಥೆ ಮಾಡೋಣಂತ ನಡೀರಿ.

ದೇ :—ನೀವs ಬರೀಬೇಕ್ರತ್ತs I can't write such a beautiful and romantic language ರೆಪಾ. ಇರಲಿ! Let us enjoy the feast after the sweet news. Come along.

(ಹೋಗುವರು)

ತೆರೆಯಿಳಿಯುವದು.

೩ನೇ ನೋಟ

(ಸ್ಥಳ: ಒಂದು ರಸ್ತೆ)

(ದೇಸಾಯರು ಕೈಯಲ್ಲಿ ಕಾಗದವನ್ನು ಹಿಡಿದು ತಲೆ ತುರಿಸುತ್ತ ಬರುವರು; ವೇಷ: ಸಭ್ಯಗೃಹಸ್ಥರಿಗೊಪ್ಪುವ ವೂಲನ್ ಸೂಟು; ಬೂಟು; ಹ್ಯಾಟು ಇತ್ಯಾದಿ)

ದೇ :—ನನ್ನ ಪ್ರಿಯತಮಳಿಗೆ ಅದೇನು ಅಷ್ಟೊಂದು ಸಂಕಟಾ! ಈ ಸಲ ಮತ್ತೆ ರೊಕ್ಕ ಬೇಕಂತ ಬರದಾಳಪಾ! ಪಾಪ. She must be in some defficulties. ಅವಳಿಗೆ ಕೂಡಲೇ ಹಣ ಮುಟ್ಟೊ ಹಾಂಗ ಮಾಡುವದು ನನ್ನ ಪ್ರೇಮಕ್ಕೆ ಒಪ್ಪುವಂಥಾ ಮಾತು. ಇಲ್ಲದಿದ್ದ್ರ ನಮ್ಮ Status ದ ಕಿಮ್ಮತ್ತು ಕಟ್ಟೇತಲ್ಲಾ. ಆದರ ಈಗ ಮತ್ತೆಲ್ಲಿಂದ ಹಣ ತರಬೇಕೂ ಅಂತೀನಿ. ಬ್ಯಾಂಕಿನಾಗ ನಾ ಕೂಡಿಟ್ಟ ಹಣ ಎಲ್ಲಾ ತೀರಿತು. ಮನೀಯಿಂದ ತರಿಸಬೇಕಂದ್ರ ಎಷ್ಟಂತ? ಹೊಸ ಯುಕ್ತೀ ತಗಿಬೇಕು. 'ಪಕ್ಕ ಇದ್ದರ ಹಕ್ಕಿ-ರೊಕ್ಕ ಇದ್ದರ ಠಾಯರು'—ಅನ್ನೋದೇನು ಸುಳ್ಳಲ್ಲ. ಅಂತೂ ಈ ಸಲ ಉಂಗುರ ಒತ್ತೀ ಇಟ್ಟ ಹಣ ತರಲಿಕ್ಕೇಬೇಕು. ನಮ್ಮ ಶೀಗೀಹಳ್ಳಿನೂ ಹಣ ಬೇಕೆಂದಿದ್ದ. ಅವನ ಮರ್ಜೀನೂ ಹಿಡೀಬೇಕಲ್ಲ ಮತ್ತs. ಹೊತ್ತು ಬಂದಾಗ ಕತ್ತೀ ಕಾಲು ಹಿಡೀಬೇಕಂತ ಅಂದ ಮೇಲೆ ಯಾಕ ಹಿಂದು ಮುಂದ ನೋಡೋದು!

(ಶೀಗಿಹಳ್ಳಿ ಮತ್ತು ಗೌಡರು ಬರುವರು)
ವೇಷ: ಸಾದಾ ಗೃಹಸ್ಥರಿಗೊಪ್ಪುವಂತಹದು

ಶೀಗಿ :—ಏ ದೇಸಾಯಿ! ನಿಮ್ಮ ಕೋಣೆಯ ಕಡೆಗೇ ಹೊರಟಿದ್ವಿ. ಇಲ್ಲೇ ಭೆಟ್ಟಿಯಾತಲ್ಲ! ನಾ ಹೇಳಿದಷ್ಟು ವ್ಯವಸ್ಥಾ ಮಾಡೀ ಇಲ್ಲೊ?

ದೇ :—You mean your money—ಅದರದೇನು ದೊಡ್ಡ ಮಾತಲ್ಲ. ಹೇಗಾದರೂ ಆದೀತು.

ಶೀಗಿ :—ಇವತ್ತು ಮತ್ತೊಂದು ಪತ್ರ ಬಂದಿತ್ತು. ಗೌಡರ ಸಂಗತೀ ಕಳಿಸಿದ್ದೆ, ಮುಟ್ಟಿತಿಲ್ಲೋ? ಮತ್ತೇನು ವಿಶೇಷ ಮಜಕೂರು ನಮಗಷ್ಟು ಹೇಳಿರಲ್ಲ!

ದೇ :—ಈಗ ನೋಡಿರಿ. ಮತ್ತ ರೊಕ್ಕ ಅಂತ ಬರದಾಳ! ನಿಮ್ಮ ಹೇಳಿಕೆ ಪ್ರಕಾರ, ಇಲ್ಲೀ ತನಕಾ ರೊಕ್ಕಾ ಕೇಳಿದಾಗ ಕೊಟಗೋತನs ಬಂದೀನ್ರೀ. ಇಷ್ಟು ದಿನಾ ನಾ ಕೊಟ್ಟಿದ್ದರ ಅರ್ಧಾ ಕೊಟ್ಟಿದ್ದರ ಮತ್ತೊಂದು ಹೆಣ್ಣು ಬೇಕಾದ್ಹಾಂಗ ಸಿಗತ್ತಿತ್ತು. ಇದೇನ್ರಪಾ—ಹಾಲಿಲ್ಲ—ಬಟ್ಟಲಿಲ್ಲ, ಗುಟುಕ್ಕಂದು ಮೀಸೇ ಒರಿಸ್ಕೋಬೇಕಾಗೇದ.

ಶೀಗಿ :—ನಿಮಗ ಮೀಸೀನೇ ಇಲ್ಲಾಂದವ್ಯಾಲ ಆ ಪ್ರಸಂಗೇನು ಬರೋದಿಲ್ಲಬಿಡ್ರಿ.

ಸಂ. ಗೌ :—ಛಿ! ಛಿ! ಆದ್ರ, ಹಬ್ಬ ಹಸಾ ಹೋಳ್ಗಿ ತುಸಾ ಅಂದರ ಹ್ಯಾಂಗಾದೀತರೀ? ಅದರೊಳಗ ಮತ್ತ ಯಾರರನs! Your own better half ರೆಪಾ.

ದೇ :—ಬರೀ Better half ಯಾಕರೀ—My better whole and sole ರೆಪಾ; ಆದ್ರೆ........

ಶೀಗಿ :—ಅಂದಮೇಲೆ ನೀವು ಅಂತವರ ದಸೆಯಿಂದ ಹಿಂದುಮುಂದು ನೋಡುವಿರೆಂದ ಮೇಲೆ ನಮಗ ಕೊಟ್ಟ ವಚನ ಎಲ್ಲಿಯದು? ಹನುಮಪ್ಪನs ಹಗ್ಗಾ ತಿನ್ನುವಾಗ ಪೂಜಾರಿ ಪಾಯಸಾ ಬೇಡಿದಾನ್ನೋ ಹಾಂಗಾತು ನಮ್ಮ ಗತಿ.

ದೇ :—ಹಾಂಗ ಅನಬ್ಯಾಡ್ರಪಾ! ನಾ ದೇಸಾಯಿ, ಮಾತು ಮುರದೇನs? ನಿಮ್ಮ ದಸಿಯಿಂದನೂ ವ್ಯವಸ್ಥಾ ಮಾಡೇ ತೀರತೇನಿ ಮತ್ತ.

ಸಂ. ಗೌ :—ಹೌದು. ನಿಮ್ಮ ಮೇಲೆ ನಂಬಿಕೊಂಡು ಕುಂತೇವಿ ಎಲ್ಲಾದಕ್ಕೂ. ಅದರ ವ್ಯವಸ್ಥಾ ಏನು ಮಾಡೀರಿ?

ದೇ :—ವ್ಯವಸ್ಥಾನ? ನೋಡರೀ ಗೌಡರs—ನಿಮ್ಮೆದುರು ಬಚ್ಚಿಟ್ಟು ಏನು ಉಪಯೋಗ? ಸಧ್ಯಕ್ಕನಕಾ I am in great difficulty ಶೀಗಿಹಳ್ಳಿಯೂ ಹೇಳಿರಬಹುದಲ್ಲ! ರೂಪಾಯಿಯ ಬಗ್ಗೆ ನಿನ್ನೆ ಅವರೇ ಎಲ್ಲ ನನ್ನ ಪರವಾಗಿ ವ್ಯವಸ್ಥೆ ಮಾಡ್ಯಾರ. ಸಧ್ಯಕ್ಕೆ ನನ್ನ ಹತ್ತರ ಉಳಿದದ್ದು ಇದೊಂದು ಉಂಗುರ. ಅಂತ ಮತ್ತs "ತ್ವಮೇವ ಶರಣಂ ಮಮ" ಅಂತ ಅಂದೇನಿ ಶೀಗಿಹಳ್ಳೀಯವರಿಗೆ. ಯಾಕರೀ ಶೀಗಿಹಳ್ಳಿ?

ಶೀಗಿ :—ಓs ಹೋಃ—ಅದಕ್ಕೇಕೆ ಕಾಳಜಿ? ನಾನೆಲ್ಲ ಸಂಪೂರ್ಣ ವ್ಯವಸ್ಥೆ ಮಾಡೀನಿ. ನೀವು ಸರಾಫ ರಾಮರಾಯರ ಅಂಗಡಿಗೆ ಹೋಗೋದs ತಡ ನಿಮ್ಮ ಕೆಲಸಾತಂತ ತಿಳೀರಿ.

ಸಂ. ಗೌ :—ಅಂದರs!

ದೇ :—ಅಂದರs ಪಂದರs ಅಂಬೋ ಅನುಮಾನನs ಇಲ್ಲೇ ಇಲ್ಲರೀ! This is my last chance. I can't dis-appoint her and me too. Alright ಶೀಗಿಹಳ್ಳಿ! ಈಗ ರೂಪಾಯಿ ತೆಗೆದು ಕೊಂಡs ಬರತೇನಿ ಹುಗಾರs You be here. ಆದ್ರ (ಹೋಗ ಹೋಗುತ್ತ) ಹಣ ಸಿಗೋದು ಖಾತ್ರಿ ಹೌದಲ್ಲೋ?

ಶೀಗಿ :—ರಾಮರಾಯರು ನಿನ್ನ ಹಾದೀsನs ನೋಡತಾರ ಹೋಗೋ.

(ಗೌಡರ ಕಡೆಗೆ ನೋಡುತ್ತ ಹುಸಿನಗೆ ನಗುವನು)

ಸಂ. ಗೌ :—ಏನ್ರಿ ಶೀಗಿಹಳ್ಳೀ, ಇನ್ನೂ ಈ ನಾಟಕಾ ಎಲ್ಲೀತನಕs ಸಾಗಿಸ ಬೇಕಂತೀರಿ! ಹೀಂಗ ಸಡಲುಬಿಟ್ಟರ, ಇವತ್ತ ಉಂಗರ ಮಾರಲಿಕ್ಕೆ ತಯಾರಾಗೇದ ಈ ಹುಚ್ಚ ನಾಳೆ ಮನೀ ತೊಳಕೊಂಡಾನು. This is too much ರೆಪಾ ಮಿಸ್ಟರ ಶೀಗಿಹಳ್ಳಿ! I think, we should better put a full-stop before things get out of control. ನಮ್ಮ ದೇಸಾಯರ ಸಂಗತೇನು! "ದುಡ್ಡು ಕೊಟ್ಟು ಹಚ್ಚಬೇಕು ಎರಡು ದುಡ್ಡು ಕೊಟ್ಟು ಬಿಡಿಸ ಬೇಕು" ಈ ಪೈಕಿ ಅವರು. ನಾವು ದಣಿದೇವು. ಆದರ ಅವರ ಹುಚ್ಚು ತಣಿಯೋ ಹಾಂಗ ಕಾಣೋದಿಲ್ಲ.

ಶೀಗಿ :—ಬೆಳಕು ಹರೀಲಿಕ್ಕೆ ಇನ್ನೇನೂ ಬಹಳ ಹೊತ್ತು ಇಲ್ಲ. ನಾಳೆ ಹೇಗಾದರೂ ನಮ್ಮಲ್ಲೆ ಬಂದs ಬರ್ತಾನಲ್ಲಾ, ಆವಾಗ ಆಪನವರ ಮಾರೀ ಮುಂದ ನಿಲುವುಗನ್ನಡೀ ಹಿಡಿಧಾಂಗ ಆಗೇ ಆಗ್ತದ.

ಸಂ. ಗೌ :—(ಬೆನ್ನು ಚಪ್ಪರಿಸುತ್ತ) ಏನ್ನಿ ಶೀಗಿಹಳ್ಳಿ! ನಮ್ಮ ದೇಸಾಯರ ನಾಳಿನ ಅವಸ್ಥೆಯ ಚಿತ್ರ ನನ್ನ ಕಣ್ಣು ಮುಂದ ಕಟ್ಟಿಧಾಂಗ ಆಗೇದ. ಛೀ, ನಿನನಿನ I pity his condition. ಎಂತಹ ಯುಪರೇಷಾ ಇವ. ಆದರೊಳಗ ನಿನ್ನಂಥ ಕಾರಸಾನೀ ಗಂಟು

ಬಿದ್ದ ಮೇಲೆ ತೀರಿಹೋತು. ಆದರೂ ನಾಳೆ ತನ್ನ ಹುಚ್ಚು ಬೈಲಿಗೆ ಬಿದ್ದರ He may get a shock—ಅಂತ ತುಸು ಹೆದರಿಕೆ ಬರ್ತದ.

ಶೀಗಿ :—ಬಿಡರೀ ಗೌಡ್ರ ನಮ್ಮ ದೇಸಾಯಿ ಅಂದರ Shock proof, ಇಲ್ದಿದ್ದರ ಅವನ ಹುಚ್ಚು ಇಷ್ಟು ಡಿಗ್ರೀಗೆ ಏರೀತರೆ? ಈ ದಡ್ಡಗ ಇಂಥಾವು ಎಷ್ಟು ದಡ್ಡ ಬಿದ್ದಾವೊ ಏನೋ! ಇಲ್ಲದಿದ್ರ ನಾ ಇಂಥಾ ದ್ದಕ್ಕ ಕೈ ಹಾಕೇನ್ರೆ? ಖರೇ ಪ್ರೀತಿ ಸಂಗತೀ ನಗೆಯಾಡುವದೂ ಜೇಂಕೀ ಸಂಗತೀ ಆಡುವದೂ ಒಂದ, ಆದರ, ಇದೊಂದು ನಮ್ಮ ದೇಸಾಯೀ ಹುಚ್ಚು. ಇರಲಿ. ನಾ ಈಗ ಹೋಗತೀನಿ. ನೀವು ಮಾತ್ರ ದೇಸಾಯರಿಗೆ ನನ್ನ ವತಿಯಿಂದ ಕೇವಲ Cordial Invitation ಕೊಟ್ಟು ನಾಳೆ ತಪ್ಪದೇ ಕರಕೊಂಡು ಬರ್ರಿ. ಅಂ?

(ಹೋಗುವನು)

ಸಂ. ಗೌ :—ಏನು ದೇಸಾಯೋ—ಏನು ಅವನ Love ಓ! ಮಗ ಶೀಗಿ ಹಳ್ಳಿ ಕೈಯಾಗ ಸಿಕ್ಕು ತಿಪ್ಪರಲಾಗಾ ವಗೀತಾನ! ಈ ಶೀಗಿಹಳ್ಳಿ ತಂದು ತಾನು ಗಟ್ಟಿ ಮಾಡಕೊಂಡು ಈ ತಳ ಬುಡ ಇಲ್ಲದ ದೇಸಾಯಿನ್ನ ಉರುಳಾಡಿಸಲಿಕ್ಕೆ ಹತ್ತ್ಯಾನ. ನಾ ಒಬ್ಬ ಬಡ ಗೃಹಸ್ಥ ಇವರಿಬ್ಬರ ನಡುವ ಸಿಕ್ಕು ಗೋತೀ ಹೊಡೀಬೇಕಾಗೇದ. (ದೇಸಾಯಿ ಬರುವು ದನ್ನು ನೋಡುತ್ತ) ಬಂದ; ರೂಪಾಯಿ ಸಿಕ್ಕ್ಯಾವೋ ಇಲ್ಲೊ?

ದೇ :—ಸಿಗದ ಏನರಿ! ದೇಸಾಯರ ರಾಜ್ಯಾ; ಶೀಗಿಹಳ್ಳಿಯವರ ಮಂತ್ರಿತ್ವ. ಮೂರು ಲೋಕೆಲ್ಲ ಉರಳಾಡ್ಯಾವು. ಆದರ ಶೀಗಿಹಳ್ಳಿಯವರು ಕಾಣೋದಿಲ್ಲಲ್ಲಾ! ಎಲ್ಲಿಗೆ ಹೋದರು?

ಸಂ. ಗೌ :—ನಿಮಗ ನಿಮ್ಮ ಗಡಿಬಿಡಿ. ಅವರದು ಅವರಿಗೆ ಗಡಿಬಿಡೀ ರೆಪಾ. ನಾ ಒಬ್ಬ ಉದ್ಯೋಗ ಇಲ್ಲದವ ನಿಮ್ಮ ಕೈಯಾಗ ಸಿಕ್ಕೀನಿ.

ದೇ :—ಹಾಂಗ ತಿಳಕೋಬ್ಯಾಡ್ರಪಾ. ನಮ್ಮ ರಾಜ್ಯಕ್ಕ ನೀವ ಸೇನಾಪತಿ. ಆದರ ಮತ್ತ ಶೀಗಿಹಳ್ಳಿಯವರದೇನು ಗಡಿಬಿಡಿ ಅಂತೀರಿ?

ಸಂ. ಗೌ :—ಈ ಗಡಿಬಿಡೀ ಅರ್ಥ ಮದುವೆ ಮಾಡಿಕೊಂಡು ಮಕ್ಕಳು ಹುಟ್ಟಿದ ನನಗಿಂತ ನಿಮಗ ಹೆಚ್ಚು ತಿಳಿಬೇಕ್ರೆಪಾ. ಹರೇದ ಹುಡು ಗರ ಗಡಿಬಿಡೀ ಇರೋದೇನು ಮತ್ತಿನ್ನ!

ದೇ :—ಓಹೋ, ಹಿಂಗೇನು ಮತ್ತs? ನಮಗೇನೂ ಹೇಳೇ ಇಲ್ಲಲ್ಲರಿ! ಯಾರು? ಏನು? ಎಂದs? ಆಂ! ಹೋಳಿಗೀ ಎಂದ ಹಾಕ್ತಾರ ಹಂಗಾರ? ನಮಗ ಸುಳುವs ಹಚ್ಚಿಲ್ಲಲ್ಲ!

ಸಂ. ಗೌ :—ನಮಗರs ವಿಶೇಷೇನು ಗೊತ್ತು? ನಾ, ನಿಮ್ಮ ಹೋಳಿಗಿ ಮೊದಲೋ ಅವರದು ಮೊದಲೋ ಅಂತ ನೋಡಲಿಕ್ಕೆ ಹತ್ತೀನಿ. ಆದರ ಮಾತ್ರ ನಿಮ್ಮನ್ನ ತಮ್ಮ Engagement ceremony ಗೆ ಅಗದೀ Cordial Invitation ಕೊಟ್ಟು ಕರಕೊಂಡು ಬಾs! ಅಂತ ಹೇಳಿ ಹೋಗ್ಯಾರ. ಬರಲಿಕ್ಕೇಬೇಕು ಮತ್ತs.

ದೇ :—Oh! By all means. ಹಂ, ಹಂ, ಶೀಗಿಹಳ್ಳಿಯವರಿಗೇಕೆ ಹಣದ ಅಡಚಣೀ ಅಂತಿದ್ದೆ. ಈಗ ತಿಳೀತು ಬಿಡರಿ. We are sailing in the same boat, ಇವಷ್ಟು ರೂಪಾಯಿ ಅವರಿಗೆ ಮುಟ್ಟಸರಿ. (ರೂಪಾಯಿ ಕೊಡುವನು.) ನಾಳಿಗೆ ಎಷ್ಟೊತ್ತಿಗೆ ಹೋಗೋದೂ ಆತು. ನೀವು ಹೋಗುವಾಗ ನನ್ನೂ ಕರಕೊಂಡು ಹೋಗರೀ ತೀರಿತು, (ವಿಚಾರಿಸುತ್ತ ನಿಲ್ಲುವನು.)

ಸಂ. ಗೌ :—ಒಳ್ಳೇದರೆಪಾ, ನಾ ಬರ್ತೀನಿ; Good Evening. ಯಾಕ್ರಿ (ಹೋಗಹೋಗುತ್ತ) ಮತ್ತೇನು ವಿಚಾರ ನಡಿಸೀರಿ?

ದೇ :—ಏನಿಲ್ಲ! ಈ ಮಗಾ ಶೀಗಿಹಳ್ಳೀ ನನಗಿಂತ ಒಂದು ಹೆಜ್ಜೀ ಮುಂದs ಇಟ್ಟಾನಲ್ಲಾ! ಅಂತಿದ್ದೆ. Well, well, we must rejoice at it. Good Evening ರೀ ಗೌಡರs ನಾಳೆ ಮತ್ತ ಬೆಟ್ಟಾಯಿಗ್ತದಲ್ಲಾ. (ಅಚೆ ಈಚೆಗೆ ಇಬ್ಬರೂ ಹೋಗುವರು.)

(ತೆರೆಯೇಳುವದು.)

೪ನೇ ನೋಟ

(ಚಾರುಗಾತ್ರಿಯ ಮನೆಯ ಮುಂಭಾಗದ ಹೂದೋಟ; ಮಿಸ್ಟರ್ ಶೀಗಿಹಳ್ಳಿ ಹಾಗೂ ಮಿಸ್ ಚಾರುಗಾತ್ರಿ ಇಬ್ಬರೂ ಸ್ವಲ್ಪಮಟ್ಟಿಗೆ ಮದುವಣಿಗರಂತೇ ಸಜ್ಜಿತರಾಗಿ ಹಾರಗಳನ್ನು ಧರಿಸಿ, ಬರುವ ಅತಿಥಿಗಳನ್ನು ಎದುರುಗೊಳ್ಳಲು ನಿಂತಿದ್ದಾರೆ, ಒಬ್ಬಿಬ್ಬರು ಮಿತ್ರರು ಬರುವರು.)

೧ನೇ ಮಿತ್ರ :—Hallo Mr. ಶೀಗಿಹಳ್ಳಿ; Congratulations (ಕೈಕುಲುಕುತ್ತ) Wish you good luck Miss. Charugatri. (ಕೈಕುಲುಕಿ) ಬಹಳ ದಿನದಿಂದ ಇವೊತ್ತಿನ ಉತ್ಸವಕ್ಕಾಗಿ ನಿಮ್ಮನೀ ಕಟ್ಟೇ ಏರೋ ದಾರೀ ನೊಡ್ತಿದ್ವಿ. ಇವತ್ತ ಬಂತಾ ಯೋಗ! ಇವೊತ್ತ; ನಿಮ್ಮ ಎಂಗೇಜಮೆಂಟಿನ ಪಾರ್ಟಿಯಂತೂ ಆತು; ಇನ್ನ ಲಗೂ ಹೋಳ್ಗಿ ಅಷ್ಟ ಹಾಕಿಬಿಡ್ರಿ ಮತ್ತಿ.

೨ನೇ ಮಿತ್ರ :—ನಮಸ್ಕಾರ ಮಿಸ್ಟರ್ ಶೀಗಿಹಳ್ಳಿ; ಇದೇನು ಹೊಸಾ ಸುದ್ದಿ ಎಬ್ಬಿಸಿದಿರಲ್ಲಾ. (ಕೈಕುಲುಕಿ) What a pleasant surprise Miss. Charugatri! (ಕೈ ಕುಲುಕುತ್ತ—ಒಳಗೆ ನೋಡಿ) ಏನ್ಗ್ರ್ಯಾಂಡ Function ಮಾಡ್ಸಿರೆಲ್ಲಾ! Garden Party ಅಂದ್ರ ಹಿಂಗಿರಬೇಕು. ಚಾರುಗಾತ್ರಿ ನಿಮ್ಮ Father ಎಲ್ಲಿದ್ದಾರಿ?

ಶೀಗಿಹಳ್ಳಿ, ಚಾರುಗಾತ್ರಿ :—ಒಳಗಿದ್ದಾರ, ನಡೀರಿ, ನಡೀರಿ; ಒಳಗ ನಡೀರಿ. ಎಲ್ಲಾ ಮುಂದಿ ಬಂದದ, ನಿಮ್ಮ ಹಾದೀನ ನೋಡ್ತಿದ್ವಿ.

(ಅವರು ಒಳಗೆ ಹೋಗುವರು)

ಚಾರು :—ಯಾಕೊ, ನಿಮ್ಮ ಪರಮ ಮಿತ್ರ ಸಂಗನಗೌಡ್ರು ಇನ್ನೂ ಬರಲಿಲ್ಲಾ!

ಶೀಗಿ :—ಬರ್ತಾರ, ಬರ್ತಾರ ಈಗ. ಅವರಕಿಂತ ಪರಮ ಮಿತ್ರರಾದ ಮತ್ತೊಬ್ಬರು ಬರುವವರಿದ್ದಾರ. (ನಗುವನು.)

ಚಾರು :—You seem to be exceptionally mischievous to-day. What must be the matter? ನನಗೇನ್ತಿಳೀವಲ್ದಲ್ಲಾ!

ಶೀಗಿ:—Right ಚಾರುಗಾತ್ರಿ. I have a novel surprise for you.

ಚಾರು:—Is that so? All our friends think our engagement is a pleasant surprise to them; you have yet another surprise for me too! ನಿಮ್ಮ ಕಂತ್ರಾಟಕ್ಕ ಏನು ಕೊನೆ ಇದ್ದ ಹಾಗೆ ಕಾಣೋದಿಲ್ಲ. ಅಲ್ಲಿ ನೋಡ್ರಿ ನಿಮ್ಮ ಗೌಡರು ಬಂದರು.

ಶೀಗಿ:—ಅವರ ಜೊತೀಲಿ ನಾ ಹೇಳಿದ Surprise ನ ಮೂರ್ತಿನೂ ಬಂತs ಬಂತಲ್ಲ!

ಚಾರು:—ಅಂದ್ರs

ಶೀಗಿ:—ಅಂದರದs ಅರ್ಥ. ತುಸು ನಿಂತರs ತಿಳಿದs ತಿಳಿತದ.

ಮಿಸ್ ರಿಬೇಕಾ:—(ಒಳಗಿನಿಂದ ಪ್ರವೇಶಿಸಿ) ಗೂಡು ಸೇರೋ ಹಕ್ಕಿಗಳೇ ನಡೀರಿ; ಗಿಡುಗನ ದಾರೀ ಕಾಯೋದ್ಯಾಕs, ಚಾರುಗಾತ್ರೀ, ನಡೀ ಯವ್ವಾ ಒಳಗ, ಮೊದಲಗಿತ್ತೀ! ನಿಮ್ಮ Engagementಗೆ ಬಂದ ಮಂದೀನೆಲ್ಲಾ Engage ಮಾಡಬೇಕ್ಯಾರು? ಎಲ್ಲಾ ಭಾರಾ ನನ್ನ ಮ್ಯಾಲೇ ಏನು?

ಚಾರು:—ನಿನ್ನ ಮೊದಲಗಿತ್ತೀತನs ಮುಂದ ಬಿತ್ತಂತ ಹೊಟ್ಟೀ ಕಿಚ್ಚು ಹೌದs ನಿನಗ. ನೀನೂ ನಿನ್ನ ಮಿಸ್ಟರೂ ಬಂದ ಜನರನ್ನು ಸ್ವಲ್ಪ Engage ಮಾಡಿದ್ರ, ಸ್ವಲ್ಪ ದಿವಸದಾಗs ನಾವಿಬ್ಬರೂ ನಿಮ್ಮುಪಕಾರ ತೀರಸ್ತೀವಿ. ನೀಯೇನು ಇನ್ನ ಭಾಳ ದಿನ ದಾರೀ ಕಾಯಬೇಕಾಗಿಲ್ಲ. ಸ್ವಲ್ಪ ತಾಳು ತಂಗೀ; (ಶೀಗಿಹಳ್ಳಿಗೆ) ಈಗ ಬರ್ತೇನಿ ಸ್ವಲ್ಪ arrangement ನೋಡಿ; ರಿಬೆಕ್ಕಾ, ನೀನೂ ಇಲ್ಲೇ ನಿಂತಿರು, ಈಗ್ಬಂದೆ; (ಒಳಗೆ ಹೋಗುವಳು; ಇತ್ತ ಸಂಗನ ಗೌಡರೂ ದೇಸಾಯರೂ ಬರುವರು.)

ಸಂ. ಗೌ:—ಶರಣ್ರೀ ಶೀಗಿಹಳ್ಳಿ, Congratulations; ಮುಂದೆಲ್ಲ ಬಂತೇನು? Good Evening Miss Rebecca (ಸಂಗನ ಗೌಡರೂ ರಿಬೆಕ್ಕಾನೂ ಮಾತಿನಲ್ಲಿ ತೊಡಗುವರು.)

ದೇ :—Congratulations Mr. Shigihalli, ಒಂದು long-awaited problemಉ ಇವೊತ್ತು solve ಮಾಡಿದ್ರಿಪಾ. What a mysterious man ರೆಪಾ ನೀವು !

ಶೀಗಿ :—ನಮ್ಮ ಈ Mysterious problem solve ಮಾಡೋದ್ರಾಗ ನೀವೂ ಪಾಲುಗಾರರಿದ್ದೀರಂತ ನಾವು ನಿಮ್ಮ ಹಾದೀನsa ನೋಡ್ತಿದ್ವಿ.

ದೇ :—ಅದರೊಳ್ಗೇನು ಅನುಮಾನ್ರೀ; ಪೂರಾ ಪಾಲುಗಾರರಂತs ತಿಳೀರಿ. ಮೊದ್ಲs ನನಗ ತಿಳಿದಿದ್ದರ ಇನ್ನೂ ಬೇಕಾದ ಕೆಲಸಾ ಮಾಡ್ತಿದ್ದೆ. ನಾ ಕಳಿಸಿದ ರೂಪಾಯಿ ಮುಟ್ಟದ್ವೋ ಇಲ್ಲೋ. (ಶೀಗೀಹಳ್ಳಿಯನ್ನು ಬದಿಗೆಳೆದು) ಅಲ್ಲಾ, ಆ ಪತ್ರ, ಮತ್ತ ಆಕೀಗೆ ಕಳ್ಸೋ ರೂಪಾಯ್ದ ವ್ಯವಸ್ಥಾನೂ ಮಾಡಿದ್ರಿಲ್ಲೋ ?

ಶೀಗಿ :—ಅದರದೆಲ್ಲ ಯಥಾಪ್ರಕಾರ ವ್ಯವಸ್ಥಾ ಆಗೇ ಆಗೇದನ್ರಿ.

ದೇ :—ಸರಿ, ಹಂಗಾದರ; ಆದರ—ಆದರ—(ಕೈತಿಕ್ಕುತ್ತ ಅರೆಮರೆಯಾದ ರಿಬೆಕ್ಕಾನ ಕಡೆ ನೋಡುತ್ತ) Let us have the pleasure of ....of....of.... ಅ.... ಅ.... (ಎನ್ನುತ್ತ ಸಂಗನಗೌಡ ಹಾಗೂ ರಿಬೆಕ್ಕಾ ಮಾತನಾಡುತ್ತ ನಿಂತ ಕಡೆ ಮುಂದರಿಯುವನು.)

ಶೀಗಿ :—(ಒಳಗೊಳಗೇ ನಗುತ್ತ) ಸಂಗನಗೌಡ್ರ, ನಮ್ಮ ದೇಸಾಯ್ರಿಗೆ ಅಷ್ಟು Introduce ಮಾಡಿಕೊಡ್ರೆಲ್ಲಾ. (ರಿಬೆಕ್ಕಾಗೆ ಸನ್ನೆ ಮಾಡುವನು.)

ರಿಬೆ : —(ಸನ್ನೆ ತಿಳಿದು) ಆಗಲಿ, ಕರೀತೀನಿ; (ಎಂದು ಚಾರುಗಾತ್ರಿಯನ್ನು ಕರೆಯ ಹೋಗುವಳು.)

ಸಂ. ಗೌ :—(ದೇಶಾವರೀ ನಗೆಯಿಂದ) ಹಾ! ಹಾ! With great pleasure; ಬರ್ರಿ ದೇಸಾಯ್ರs; (ಇಷ್ಟರಲ್ಲಿ ಚಾರುಗಾತ್ರಿ ಬರಲು, ಆವಳಿಗೆ) ಮಿಸ್ ಚಾರುಗಾತ್ರಿ, ಇವರು ನಮ್ಮs....ಅಲ್ಲಾ, ನಿಮ್ಮ ಶೀಗಿಹಳ್ಳಿಯವರ ಪರಮ ಮಿತ್ರರಾದ ಮಿಸ್ಟರ್ ದೇಸಾಯಿ, ಅಂದ್ರ ಇನ್ಮ್ಯಾಲ ನಿಮ್ಮ ಪರಮ ಮಿತ್ರರೂ ಹೌದು. (ಚಾರುಗಾತ್ರಿಯು ದೇಸಾಯಿಯೊಡನೆ ಕೈಕುಲುಕುವದಕ್ಕಾಗಿ ಮುಂದುವರಿಯುವಳು. ಆತ ದಿಙ್ಮೂಢನಾಗಿ ನಿಲ್ಲುವನು. ಚಾರುಗಾತ್ರಿಯೂ ತಡವರಿಸಲು ಶೀಗಿಹಳ್ಳಿ ಮುಂದುವರಿದು ಬರುವನು.)

ಶೀಗಿ :—ಚಾರುಗಾತ್ರೀ, This is my best friend, I suppose you know him. ಇವರೂ ನೀವೂ ಒಂದs ಕ್ಲಾಸಿನಾಗs ಇದ್ದಿರೆಲ್ಲಾ.

ಚಾರು :—(ಧೇನಿಸಿದಂತೆ ಮಾಡಿ) ಹಾ. ಆವರೇ ಏನಿವರೂ? Right ho! yes, yes! I do remember to have seen him very often. Very glad to meet you Mr. Desai. (ತಾನೇ ಆತನ ಕೈ ಹಿಡಿದು ಕೈ ಕುಲುಕುವಳು.) ಬರ್ರಿ, ಮಿಸ್ಟರ್ ದೇಸಾಯಿ, ನಡೀರಿ, ಒಳಗ್ಹೋಗೋಣ. All the guests have come and they are waiting.

ಶೀಗಿ :—ನಡೀರಿ ದೇಸಾಯ್ರು, Let us all enjoy the fun. (ಚಾರುಗಾತ್ರಿಯ ಒಡನೆ ಕೈ ಹಿಡಿದು ಒಳಗೆ ಹೋಗುತ್ತ ಅವಳ ಕಿವಿಯಲ್ಲಿ ಏನೋ ಹೇಳಲು, ಅವಳು ಒಮ್ಮೆ ಕಳ್ಳಗಣ್ಣಿನಿಂದ ದೇಸಾಯಿಯನ್ನು ನೋಡಿ, ಉಕ್ಕಿಬರುವ ನಗೆಯನ್ನು ಬಾಯಿ ಮುಚ್ಚಿ ತಡೆದುಕೊಳ್ಳುತ್ತ ಒಳಸಾಗುವಳು.)

ಸಂ. ಗೌ :—ನಡೀರೆಪಾ, ದೇಸಾಯ್ರು; ಬಾಯಿ ಅಷ್ಟು ಸೀ ಮಾಡಿಕೊಳ್ಳೋಣ. ಇಷ್ಟು ದಿನಾ ದಾರೀ ಕಾದು ಇವತ್ತ ಈ ಸುಪ್ರಸಂಗ ಬಂದೈತಿ ನಡ್ರಿ. ಮತ್ತ ಯಾಕ ಅನುಮಾನಾ? ಆಂ!

ದೇ :—(ಉದ್ರೇಕದಿಂದ) ಏನ್ರಿ ಗೌಡ್ರ. ನನ್ನೆದೆಯೆಲ್ಲಾ ವಿಷಾ ಮಾಡಿ, ಮ್ಯಾಲ ಬಾಯಿ ಸವೀ ಮಾಡಿಕೊಳ್ಳೋದs? ಮುನ್ನೋಡಿ ಹೋಗ್ರೀ ಅಂದೆ. (ಇಬ್ಬರೂ ಎಳೆದಾಡುವರು...ಗೌಡರಿಂದ ಕೊಸರಿಕೊಂಡು)— ಇದೇನು ಹಕ್ಕಿ ಹಾರಿತಲ್ಲಾ ಅಂತೀನಿ. ನಾ, ಈಕೀ ಮ್ಯಾಲ್ ನಂಬಿ ಜೀವ ಹಿಡಕೊಂಡು ಕೂತ್ರ, I remember to have seen him ಅಂತಾಳಲ್ಲಾ, ಈಕಿ? ಆಂ, ಆಂ; ಆಂ! ಗೌಡ್ರs, ಈ ಶೀಗಿಹಳ್ಳೀ ಕಾರಭಾರಾ ನನಗ ತಿಳಿದಿದ್ದಿಲ್ಲ ಬಿಡ್ರಿ. ಇಂಬಾs ಹೀಂಗ ನನ್ನ betray ಮಾಡಬಹುದು ಅಂತ ಅನ್ನಿಸಿದ್ದಿಲ್ಲ ಬಿಡಿರಿ. Treachery----cold blooded treachery----!

ಸಂ. ಗೌ :—ಅಲ್ರೀ ದೇಸಾಯ್ರು, ಇಷ್ಟು ಸಿಟ್ಟಿಗೆದ್ದು ಏನು ಉಪಯೋಗ? ಸಮಾಧಾನದಿಂದ ವಿಚಾರ ಮಾಡ್ರಿ ಅಂದರ ಎಲ್ಲಾ ತಾನs ಹೋಗ್ತದ.

ದೇ :—ಹೊಳೀಲಿಕ್ಕೆ ಉಳಿದದೇನು? ಎಲ್ಲಾ ತೊಳದs ಹೊಗೇದಲ್ಲಾ. (ತನ್ನಷ್ಟಕ್ಕೆ) ಹಾಂಗಾದರ ಇಷ್ಟ ದಿವ್ಸ ಬಂದ ಪತ್ರಾ, ನನಗೆ ಆಕಿ ಕೊಟ್ಟ ವಚನಾ ಎಲ್ಲಾ ಹಳ್ಳಾ ಹಿಡಿಧಾಂಗೇನು? (ಕಿಸೆಯಿಂದ ಪತ್ರಗಳನ್ನು ತೆಗೆಯುತ್ತ) ಇಕಾ ಸೂಡಗಟ್ಲೆ ಅವs ಆಕೀ ಪತ್ರ. ಇದೆಲ್ಲಾ ಏನು ಮೋಸ ಏನ್ ಹಾಂಗಾದ್ರ. (ಹುಚ್ಚು ಹುಚ್ಚಾಗಿ ಬೆಪ್ಪು ಬೆಪ್ಪಾಗಿ ಹೊರ ಹೊರಡುವನು. ಸಂಗನಗೌಡರು ಅವನನ್ನು ಹಿಂಬಾಲಿಸುವರು.) ಆಂ—ಆಂ—ನಮ್ಮ ಪತ್ರಾ—ನಮ್ಮ ವಚನಾ—ಅಂ-ತೀ-ನಿ. (ಒಳ್ಳೇ ರೊಚ್ಚಿನಿಂದ) ನಮ್ಮ ರೂಪಾಯ್ರೀ, ಅಂತೀನಿ, Love ಹೋಗ್ಲಿ. Promises ಹೋಗಲಿ. ನಮ್ಮ ರೂಪಾಯ್ರೀ?? ಒಂದs—ಎರಡs –ಇದ್ದದ್ದನ್ನೆಲ್ಲ ಹಾಳುಮಾಡಿಕೊಂಡೆ ಈಕೀ ಕಾಲಾಗ. (ವಿಚಾರಾಂತ್ಯದ ತ್ವೇಷದಿಂದ) ಆಗಲಿ, ಆಗಲಿ! ಇವಳಿವಳs; ನನಗ ಇಷ್ಟ ವಚನಾ ಕೊಟ್ಟು ಕೊನೀಗೆ ಆ ಲುಚ್ಚಾ ಶೀಗಿಹಳ್ಳಿಯ ಬೆನ್ಹತ್ತಿ ಹೊಂಟಳಲ್ಲಾ! ಆಗಲಿ ಇವಳವಳs—ಕೋರ್ಟಿನಾಗ ದಾವೇ ಮಾಡ್ತೀನಿ. ಈ ಪತ್ರಾ ಎಲ್ಲಾ ಹಾಜರ ಮಾಡ್ತೀನಿ. ಬಿಡ್ತೀನೇನು ನಾನು?

ಸಂ. ಗೌ :—ಹುಂಗಾರ ದೇಸಾಯ್ರ, ನನ್ನ ಹತೀಲಿಷ್ಟದಾವ ಕಾಗದ ಪತ್ರ. ಇವನ್ನು ಹಿಡಿರಿ; ಅವೂ ನಿಮ್ಮ ಕೋರ್ಟಿನ ಕೆಲಸಕ್ಕ ಉಪಯೋಗ ಆದಾವು. (ಕೊಡುವನು) ನಾ, ಬರ್ತೀನಿ ಹಾಗಾದರ, ನಮಸ್ಕಾರ.

(ಹೋಗುವನು.)

ದೇ :—(ತೆಗೆದುಕೊಂಡು ಒಂದೊಂದೇ ನೋಡಿ) ಎಲೇ ಇದರs-- ಇದೇನೂ ಅಂದೆ. ಇವೆಲ್ಲಾ ನಾನು ಆಕೀಗೆ ಬರೆದ ಪತ್ರಾ; ಆಂ—ಆಂ—ಎಲ್ಲಾ ಪತ್ರೆಲ್ಲಾ ಇಲ್ಲೇ ಅವs ಅಲ್ಲಾ! ಅಂದ್ರ, ಇವು ಚಾರುಗಾತ್ರಿಗೆ ಮುಟ್ಟೇ ಇಲ್ಲೇನು, ಹಾಂಗಾರ?-- ಅಂದ್ರ ಈ reply ಎಲ್ಲಾ ಸುಳ್ಳs ಏನು ಹಾಂಗಾರ? (ಗಂಟು ಬಿಚ್ಚುತ್ತ) ಎಲಾ ಇದರs-- ಇದರಪ್ಪನ ಮುಂಜಾಳ ಹೋಗಾ. (ಹರ್ಷವನ್ನು ಸೂಚಿಸುತ್ತ) ನಾ ಇಲ್ಲೀತನಕ ಆಕಿಗೆ ಕಳಿಸಿದ ರೂಪಾಯಿ, ನಿನ್ನೇ ಆ ಸರಾಫನ ಹತ್ತಿರ ಒತ್ತೀ ಇಟ್ಟ ಉಂಗುರ—ಎಲ್ಲಾ ಇಲ್ಲೇ ಅವs ಅಲ್ಲಾ. ಇವೆಲ್ಲಾ ಇಲ್ಲೆ ಹ್ಯಾಂಗ ಬಂದ್ವಪಣಾ, ಅಂತೀನಿ! ಆಂ— ಆಂ—ಆಂ (ಆಶ್ಚರ್ಯ ಸೂಚಿಸುವನು) ಅಂತೂ ತಿಳಿಧಾಂಗಾತು. ಇಷ್ಟು ದಿವ್ಸಾ ನಮ್ಮ Temporary

Lady-love ನಮ್ಮ ಪರಮ ಮಿತ್ರ ಶೀಗಿಹಳ್ಳಿನೇ ಆಗಿದ್ರು ಅಂಥಾಂ ಗಾತು. (ದೀರ್ಘ ಉಸುರ್ಗರೆಯುತ್ತ) ಹೋಗ್ಲಿ, ಲವ್ಹ ಹೋಗ್ಲಿ, Promises ಹೋಗ್ಲಿ ನಮ್ಮ ರೂಪಾಯಿ ತಿರುಗಿ ಬಂದ್ವು. ಅಷ್ಟs ಸಾಕು. ಅದರಿಂದ ನಾ ಬದುಕ್ಕೊಂಡೆ; ಮತ್ತ ನಾಕು ಜನರು ಬದುಕಿದರು. ಇಷ್ಟು ಹಣದ್ದಶಿಂದ ಕಾಲೇಜು ಫೀ, ಡಾಕ್ಟರ ಚಾರ್ಜು, ಹೊಟೆಲ್ಲಿನ ಊಟದ ಖರ್ಚು ಎಲ್ಲಾಕೂ ೬ ತಿಂಗಳ ತ್ಯಾ ಆನಿಸಿದ್ದೆ. ಆ Ideal Hair Cutting Saloon ದವರೂ Popular Washing ಕಂಪನಿಯವರು ಇಪತ್ತಿಪ್ಪತ್ತು ರೂಪಾಯಿ ಬಾಕೀ ಬೆಳೆದು ಬಾಯಿ ಬಿಡ್ಲಿಕ್ಕೆ ಹತ್ತಿದ್ರು; ಅವರೂ ಪಾಪ ಬಡವರು ಬದುಕಿದ್ರು ಅನ್ನಬೇಕು. ಏ ಶೀಗಿಹಳ್ಳೀ, ನಿನ್ನುಪಕಾರ ಬಹಾ ಳಾತ್ಮಹಾರಾಯಾ! ನಿನ್ನ ಶೀಗೀ ಗುಣದಿಂದ ನಮ್ಮ ತಲೀ ಜಿಡ್ಡು ಬಿಡಿಸಿದ್ರೂ, ಹಣ "ಪರತ್" ಮಾಡಿ ಪುಣ್ಯಾ ಕಟ್ಟಿಕೊಂಡೀ. ವ್ಯಾಲ, ಅಸಲಿನ ಕೂಡ ಬಂದ ಬಡ್ಡೀ ಹಾಂಗ, ತಾನಾಗಿ ದೊರೆತ ಆ ಕೋಮಲ ಕರಕಮಲಗಳ ಕಮನೀಯವಾದ Shakehandoo ಸಾಕುಬಿಡು; ಶೀಗಿಹಳ್ಳೀ, ಇಕಾ ನಿನ್ನ ಹೆಸರ್ಲೆ ಒಂದು ದೀರ್ಘ ನಮಸ್ಕಾರಾ ಒಗೀತೀನಿ.

(ಶೀಗಿಹಳ್ಳಿ ಹೋದ ನಿಟ್ಟಿಗೆ ತಿರುಗಿ ಕೈ ಜೋಡಿಸಿ ನಿಂತು, ನಂತರ ದೀರ್ಘವಾದ ಸಾಷ್ಟಾಂಗ ನಮಸ್ಕಾರ ಮಾಡುವನು.)

ಮೆಲ್ಲಗೆ ತೆರೆ ಬೀಳುವದು.

(ಮುಗಿಯಿತು)

೨

ಹಾಳ್ ಗಂಡು

(ಒಂದು ವಿಡಂಬನ)

ಪಾತ್ರಗಳು

ತಮ್ಮಣ್ಣ :: ಹಳ್ಳಿಯ ಕುಲಕರ್ಣಿ

ತಾಯಿ :: ಅವನ ತಾಯಿ

ಪಾತ್ರ ಪರಿಚಯ

ಈ ವಿಡಂಬನೆಯಲ್ಲಿ ಒಂದು ರೀತಿಯಿಂದ ನೋಡಿದರೆ ಒಂದೇ ಪಾತ್ರ ಎನ್ನಬಹುದು. ಇದರ ಹೆಚ್ಚುಭಾಗ ಆತ್ಮಗತದಂತೆ ಇಲ್ಲವೆ 'ಮೊನೊಲೋಗಿ'ನಂತೆ ಇದೆ. ತಮ್ಮಣ್ಣ ಒಬ್ಬ ವಿಶಿಷ್ಟ ಜಾತಿಯ ವ್ಯಕ್ತಿ. ಗುಣಕರ್ಮವೆರಡರಲ್ಲೂ ಆತ ಶುದ್ಧ ಶಾನುಭೋಗ. ತನ್ನ "ಕರಿಯರ"ನ್ನು ಮೂಲಿಗುಂಪಾಗಿಸಿದ ಆತನಿಗೆ ತನ್ನ ಮಗನ ಮುಂದೆ ಮೂಲೆಗುಂಪಾಗಬಹುದಾದ ಕರಿಯರಿನ ಕನಸು ಮುಂಗಡವಾಗಿ ಆತನ ಮನದಲ್ಲಿ ಹಳವಂಡವಾಗಿದೆ. ಒಟ್ಟಾರೆ, ಆತ ತನ್ನ ಕತ್ತೆ ಜೀವನದ ಹೊರತು ಇನ್ನ್ಯಾತರಲ್ಲೂ ಒಳಿತನ್ನು ಕಾಣುವ ಸ್ವಭಾವದವನಲ್ಲ. ಹದಗೆಟ್ಟು ಹಳಸುತ್ತಿರುವ ಹಳ್ಳಿಯ ಬ್ರಾಹ್ಮಣಗೃಹಸ್ಥಿಕೆಯ ಒಂದು ನಮೂನೆಯೂ ಹೌದು ಆತ.

೧

(ತಮ್ಮಣ್ಣ ಹೊರಗಿನಿಂದ ಮನೆಗೆ ಬರುವ ಹೊತ್ತಿಗೆ ಪತ್ರ ಬಂದಿತ್ತು. ಒಡೆದು ನೋಡಿದ. ಕಣ್ಣು ಹಿರಿದು ಹಿರಿದು ನೀಡಿ ನೀಡಿ ನೋಡಿದ. ನೋಡುತ್ತಲು "ಅಯ್ಯೋ-ಅಯ್ಯೋ-ಗಂಡು-" ಎಂದು ಚಿಟ್ಟನೆ ಚೀರಿ ನೆಲಕ್ಕೇ ಬಿದ್ದ-"ಏನಾಯಿತೋ ಘಾತ" ಎಂದು ಒಳಗಿಂದ ಓಡೇ ಬಂದಳು ತಾಯಿ. "ಯಾಕೋ ತಮ್ಮಣ್ಣ ಏನೋ ಅದು-ಏನಾತೋ-ಏನೋ ಅದು?" "ಅವ್ವಾ-ಪತ್ರಾ!"-ಎಂದು ಅವನೂ ಕೊನೆಗೆ ಚೀರಿಬಿಟ್ಟನು. ತುಸು ತಡೆದು "ಏನೋ ತಮ್ಮಾ, ಏಳು ಮ್ಯಾಲಕ, ಯಾರದೋ ಪತ್ರಾ? ಏನೋ ಸುದ್ದಿ-" ಎಂದು ಗೋಳಿಡುತ್ತ ತಾಯಿ ಎಂದಳು.)

ತಮ್ಮಣ್ಣ :—ಅವ್ವಾ-ಅಯ್ಯೋ-ಘಾತವಾಯಿತು, ಮನೀಯೆಲ್ಲಾ ತೊಳದ್ಹೋತು. ಇನ್ಹ್ಯಾಂಗಮಾಡ್ಲೀ-ಈ-ನಾ ಹ್ಯಾಂಗ ಮಾಡ್ಲೀ.

ತಾಯಿ :—(ದೈನಾಸದಿಂದ) ಏನಾತೋ ತಮ್ಮಾ-ನನಗಷ್ಟ ಹೇಳೋ-ಏನದು ಸುದ್ದೀ?

ತಮ್ಮ :—ಹೇಳಬೇಕೇನೂ-ಬಿಡಬೇಕೇನೂ? ಮುಂದ್ಯಾಗ ಮಾರೀತೋರಸ್ಹಾಂಗಾತು-ನೋಡಿಲ್ಲೆ-ಇಕಾ-ಕಾಣಸ್‌ವಲ್ದೇ-?

ತಾಯಿ :—ನನಗೇಸ್ತ್ರೀತದೋ-ಹೇಳಬಾರದ ಅರಿಷ್ಟಾ-ಬರೇ ಯಾಕ ಹೊಡಕೋತೀದಿ.

ತಮ್ಮ :—ಅಯ್ಯೋ ಹ್ಯಾಂಗರ ಹೇಳ್ಲೀ-ಅವ್ವಾ-(ಎದೆ ಬಡಿದುಕೊಳ್ಳುತ್ತ) ಆಕೀ-ಆಕೀ-ಇದ್ದಾಳಲ್ಲಾ ಮನಿಮುರಿಕೀ--ಗಂಡ ಹಡದ್ಲಂತವ್ವಾ ಗಂಡೂ-ಅಯ್ಯೋ-ಪ್ರಥಮಗ್ರಾಸೇ ಮಕ್ಷಿಕಾಪಾತಾತು-ಅಯ್ಯಪ್ಪಾ-ಅಯ್ಯಯ್ಯೋ-ಹ್ಯಾಂಗ್ಮಾಡ್ಲೀ.

ತಾಯಿ :—(ದೊಡ್ಡದನಿಯಿಂದಳುತ್ತ)-ಅವ್ವಾ ನಮ್ಮವ್ವಾ-! ಹೌದೇನೊ ತಮ್ಮಾ, ಕೂಸು ಸತ್ತೇ-ಅಯ್ಯೋ-ಮುತ್ತಿನಂಥಾ ಚೊಚ್ಚಲಗಂಡಸ ಮಗನ್ರೇ-ನಮ್ಮವ್ವಾ.

ತಮ್ಮ :—ಎಲ್ಲೀದೂ-ಸಾಯ್ಲಿಲ್ಲವ್ವಾ ಸಾಯ್ಲಿಲ್ಲಾ-ಅದ್ಯಾಕ ಸತ್ತೀತು. ನನ್ನ ಗ್ರಹದ ಮ್ಯಾಲೇ ಹುಟ್ಟೇದ. ಸತ್ತಿದ್ರ, ನಾಯೆಲ್ಲೆ ಇಷ್ಟ ಎದಿಬಾಯ್ಬಿಡ್ತಿದ್ದೆ—ಅಯ್ಯೋ—ಅವ್ವಾ- (ತಾಯಿಗೆ ತೆಕ್ಕೆಬೀಳುವನು.)

ತಾಯಿ :—(ಆತನನ್ನು ಎಬ್ಬಿಸಿ-ತನ್ನ ಕಣ್ಣೀರು ಒರಸಿಕೊಂಡು ಸಿಟ್ಟಿಸುತ್ತ) ಹಾಂಗಾರ ಯಾಕೋ—ಇಷ್ಟ ರಂಭಾಟಾ—ಮನೀ ಹಾರಿಬಿಳೂ ಹಾಂಗಽ—ಖೊಡೀ— ಏಳ್‌ನ್ಯಾಲ್ಕ. ಮುತ್ತಿನಾಂಗ— ಚೊಚ್ಚಲ ಗಂಡಸ್‌ಮಗನ್ನ ಹಡದಾಳಂತ ನನ್ನೊಸೀ,—ಹೂಂ ಏಳು—ಅಲ್ಲಿಕ್ಕೇ ನಾತೋ ಧಾಡೀ ನಿನಗಽ, ಏಳು— ಹೂಂ— ಹೋಗು— ಫೇಡೆ ತೊಗೊಂಬಾ- ಇಕಾ- ಮುಡುಪು ತೆಗೆದಿಟ್ಟೇನಿ—ಸತ್ಯನಾರಾಯ್ಣ ಮಾಡ್ಲೊಣಂತ.

ತಮ್ಮ :—ಅಯ್ಯೋ--ನನಗೊಂದ್ಹತ್ತಿದ್ರೀ—ನಿನಗೇನ್ ಹತ್ತೇದೇ—ೕ ದುರಗೀ-; ತಾಯಂತೇ—! ತಾಯೇ ನೀನು—! ಮಾರಿ—! ಮಾರೀ-!! ನನ್ಮನೀ ಹಾಳ್ಮಾಡೂಬೇಕೂಂತ ಹರಕೀಹೊತ್ತಿದ್ದ್ಯಾ—ಗಂಡ್ಹುಟ್ಟಿ—? ಅಂ— ನನಗೇ ಹೊಟ್ಟ್ಯಾಗ್ಬೆಂಕಿಬಿದ್ದೇದೇ—. ನಿನಗ ಮಾತ್ರ ಹಾಲು ಕುಡ ದ್ಹಾಂಗ ಆತಲ್ಲ—ೕ— ಅಂ!

ತಾಯಿ :—(ಏನೂ ತಿಳಿಯದ ದಿಙ್ಮೂಢಳಾಗಿ—ಕುಗ್ಗುದನಿಯಿಂದ) ಹಾಂಗ್ಯಾ ಕಂತಿದ್ಯೋ ತಮ್ಮಾ—? ಗಂಡ್ಹುಟ್ಟಿದ್ರ ಶುಭಾ ಅಲ್ಲೇನೋ ಮನ್ತ ನಕ್ಕೀ—! ಎಲ್ಲಾರೂ ಗಂಡೂ ಗಂಡೂ ಅಂತ ಗಾಗರಿತಾರ—ನೀಯಾಕ— ಮತ್ತ— — —

ತಮ್ಮ :—ಅಯ್ಯೋ ಅವ್ವಾ—ಆ ದಿನಾ ಹೋದ್ವು, ಈಗಿವು ಹೊಸಾ ಕಾಲಾ— ಮನ್ವಂತರಾ ತಿರಿಗೇದವ್ವಾ— ನೀಯಿನ್ನೂ ಹಳಬರಾಂಗ ಮಾತಾಡ್ತೀ— ಈಗ ಇದು ಇಪ್ಪತ್ನೇ ಶತಮಾನವ್ವಾ—ೕ ನಮ್ಮಿಂದುಸ್ಥಾನ್ದಾಗೇ! ನಿಮಗೇನ್ತಿಳಿದೀತು—ಹಳೇ ಜನರಿಗೇ—; ನನಗ ಜೀವೆಲ್ಲಾ ತೆಳಗೇ ನ್ಯಾಲೇ ಆಗಲಿಖತ್ತೇದ— ಆಕಿ ಮನೀಗೊಂದೀ ಬರ್ಲಿ--ಕೂಸಿನ್ನೆ ತ್ತೊಯ್ದು ಭಾವ್ಯಾಗ ಒಗದಬರ್ತೇನಿ.

ತಾಯಿ :—ಅಯ್ಯ ಅರಿಷ್ಠಮುಂಡೇದೇ-- ಶುಭಾನುಡಿಬಾರ್ದೇ ಮುಂಜಾ ನೆದ್ದು--; ಏನೊ-- ಇದು ಹಾಳ್ರಗಳೀ--

ತಮ್ಮ :—ಅವ್ವಾ ನಿನಗೇನ್ಗೊತ್ತು ಆದರ್ಸುಖಾ-- ನನಗ್ಗೊತ್ತದೇ ಇಲ್ಕೇಳು; ಹಡೀಲಿ-- ಎಲ್ಲಾ--ಹೆಂಗ್ಸೂರೂ ಹಡಿಯೋದೇ--. ಆದ್ರೇ ಈಕಿಗೆ ಹೆಣ್ಣು ಹಡೀಲಿಕ್ಕೆ ಏನ್ಬ್ಯಾನ್ಯಾಗಿತ್ತೋ-----? ನಾಕ್ಮತ್ತಿನಂಥಾ

ಹೆಣ್ಮಕ್ಕಳ್ನ ಮುಂದಿಟ್ಕೊಂಡ್ಕೂತ್ರ ಎಷ್ಟಾನಂದಾ ಈಗಿನ್ನಿದ್ವಸದಾಗ--! ಇರ್ಲಿ, ನಡೀ ಒಳಗ-- ಹೋಗೋಣು. ಅಡಿಗೀ ಮಾಡ ನಡೀ--ಎಂಥಾ ದುಃಖ ಬಂದ್ರೂ ಖೋಡಿ ಹೊಟ್ಟೆಯೊಂದು ಅದೇ ಅಲ್ಲಾ--ಬಕ್ಕರ್ಸಲಿಕ್ಕ ನ್ವಾ ಬೇಕೇ (ತಾಯಿ ಒಳಗೆ ಹೋಗುವಳು)—ಕೂತಕೋ ಅವ್ವಾ ಅಲ್ಲೇ ಕೂಡು. ಎಲ್ಲಾ ಹೇಳ್ತೇನಿ-- ನಿನ್ಮುಂದಲ್ಲದೇ-- ಮತ್ಯಾರ ಮುಂದ ತೋಡಿಕೊಳ್ಲಿ--ನನ್ನ ಸಂಕಟಾನೇ--? ಇದು ನೋಡು-- ಅವ್ವಾ-- ಈಗೇ ಗಂಡನಕಾ ಹುಟ್ಟತೇ--ೇ--? ಆ--ನಾವೇನ್ ಶ್ರೀಮಂತ್ರೇ ಗಂಡು ಹಡೀ ಲಿಕ್ಕ--? ಹೊಟ್ಟ್ಯಗೇ ಬಟ್ಟಗೇ ಚಾಟಮಾಡಬೇಕಾದ್ರೇ ಕಣ್ಣೀರ ಕಪಾ ಳಕ್ಕ ಬರತಾವ. ಅಂಥಾದ್ರಾಗ ಮತ್ತ ಗಂಡಹಡಕೋತ ಕೂತ್ರ ಬಾಳ್ವೆ ಹ್ಯಾಂಗ ಸಾಗೀತು--? ಮನ್ತನ ಹ್ಯಾಂಗ ನಿಂತೀತು--?? ನಾಳೇ ಹುಡುಗ ದೊಡ್ಡವಾದ್ನಂದ್ರ, ಮೊದ್ಲ ಬಂತೇ ಜಾವಳಾ--ಆಮ್ಯಾಲ್ಛಂ ಡಿಕಿ ಅಂಬೂದ್ರಾಗೇ ಮುಂಜೀನ ಬರ್ತದ; ಇದಕ್ಕೆಲ್ಲಾ ಅಂದ್ರ ಎಷ್ಟು ದುಡ್ಡು ಬೇಕೂಂತಿದಿ? ಏನಿಲ್ಲಂದ್ರೂ ನಾಕೈದು ನೂರ್ರುಪಾಯೆರೇ ಬ್ಯಾಡೇ!--ಕೆಟ್ಟ ಬ್ರಾಹ್ಮಣಜನ್ಮ--ಅರಿಷ್ಠ ಸುಟ್ಟಬರ್ಲಿ ಒಯ್ದೊಂದೂ-- ಇವನೆಲ್ಲಾ ಬಿಡೂಹಾಂಗಬ್ಯಾರೇ ಇಲ್ಲಾ--. ನಾ ಬಿಟ್ಟೇನೆಲ್ಲಾ— ಖರೇ--ಆದರೀ ಭಾಗಾದೇರೊಂದಿದ್ದಾರಲ್ಲಾ-- ಮೂಲಾಗೀ! ಮ್ಯಾಲೆ ಅದೊಂದು ಥೊಡ್ಡ ಬಾವುಗಾ ಕೂತದ, ಯಾವಾಗ ಯಾರಿಗೆ ಬಹಿ ಷ್ಕಾರಾ ಹಾಕೇನೋ ಅಂತ. ಹಿಂದಾಗಡೆ ಜಾತೀ ಉಳ್ಸಿಗೋ ಬೇಕಾದ್ರೇ, ಅದರ ಹೆಣಕ್ಕೆಲ್ಲಿ ಹಣಾ ಬಡೀಲಿ? ಅದನ್ನೆಲ್ಲಾ ತಪ್ಸಿಸಿ ಕೋಬೇಕಂತ--ಮುಂಜೀಮೂರ್ತಾ ಮಾಡೇನೇ--ಈತ್ಲಾಗ ಈ ಆಚಾರ್ರು, ನಾಯಿ ಕರಳು ಹರದಾಂಗ ದುಡ್ಡು ಹಿರೀತಾರ--. ಆತು, ಇದೂ ಎಲ್ಲಾ ಆತೂ ಅನ್ನು--; ಆ ಮ್ಯಾಲೆ ಗಂಡುಹುಡುಗಾ ಅಂದ್ಮಾಲೆ ಸಾಲಿ ಗನಕಾ ಕಳ್ಸಬೇಕೇ,--ಈ ಊರಾಗ ಖೊಡೀ--ಸರಕಾರೀ ಸಾಲಿ ಬ್ಯಾರೇ-- ಇಲ್ಲಾ--. ಆ ಮುಂಡೇದ್ದು ಮಾಸ್ತರ್ಗ ತಿಂಗಳಾ ಎರಡಾಣೆ ಫೀ ಒಂದು ಬಡೀಬೇಕು--.-ಅದೂ ಆಗ್ಲೀ—ಅದಷ್ಟು ಭಾರಾ ಯಾವದಾರ ರೈತ ರ್ಮ್ಯಾಲೆ ಹಾಕ್ಲಿಕ್ಕೆ ಬಂದೀತೂಅನ್ನು. ಆದರ ಮುಂದ ಪಾಟೀ ಪೇನ್ಸಿಲೂ ಪುಸ್ತಕಾ—ಬಂದೇ ಅವ್ವಾ? ಏನುತ್ತೇಳ್ಲೀ—! ನನ್ನಂಥಾ ನಾನು ತಿಂಗಳಾ ಎರಡು ಪಾಟೀ ಒಡೀತಿದ್ದೆ—ಪುಸ್ತಕಾಂಬೂದು ನಾಕ

ದಿನ್ನೇನು ನನ್ನ ಕೈಯ್ಯಾಗಿರ್ತಿದ್ದಿಲ್ಲ—ಆಗ ಅಪ್ಪ ಹ್ಯಾಂಗ ನಮಗೆಲ್ಲಾ ಈಡು ಮಾಡ್ತಿದ್ನೋ ಅಂತನಸ್ತದ—ಆದರೂ ಹಿರೇರ ಕಾಲಾ—ಅವರು ಹ್ಯಾಂಗೋ ಮಾಡಿದ್ರೂ ಅನ್ನು—ಇಷ್ಟಾದ್ರೂ ಎರಡೆರಡು ವರ್ಷ ಕಲ್ತರೂ ಕನ್ನಡ ಆರನೇ ಯತ್ತಾಯೇನು ದಾಟೋದಾಗಲಿಲ್ಲ-- ಏನೋ ಒಂದು ಮುಲ್ಕೀ ಪರೀಕ್ಷಾ ಆದರೂ ಮಾಡಿಕೋಬೇಕಂತ್ತಿತ್ತು ಮನಸಿನಾಗೇ—ಆದ್ರ ಅಷ್ಟೆಲ್ಲಾ ಪುಸ್ತಕಕ್ಕೇ ದುಡ್ಡೆಲ್ಲಿ ?—ಅದರೊಳಗ ಹುಣ್ಣಿನ್ಮ್ಯಾಲೆ ಬರೀ ಕೊಟ್ಟಾಂಗ ಅಪ್ಪ ಬ್ಯಾರೇ ಹೋಗಿ ಬಿಟ್ಟಾ--!! ಆ ಮ್ಯಾಲನಕಾ ಸಂಸಾರದ ಭಾರಾನ ಕೊರಳಿಗೆ ಬಿತ್ತು. ಇಕಾ ನನ್ನಂಥಾವ್ಗ ಇಷ್ಟು ತೋಬೋ ತೋಬೋ ಆತೂ—ಇನ್ನ ಆ ಸಣ್ಣ ಕೂಸು ಹ್ಯಾಂಗ ಮಾಡೀತು!—ಮ್ಯಾಲೆ ನಾ, ಇಷ್ಟಕ್ಕೆಲ್ಲಾ ದುಡ್ಡೆಲ್ಲಿಂದ ತರ್ಲೀ--? ಹೆಣ್ಣುಟ್ಟಿದ್ರ ಇಷ್ಟೆಲ್ಲಾ ಎಲ್ಲಿದ ತ್ರಾಸೂ—? ಒಂದು ಜಾವಳ ?--ಚಂಡಿಕೇ ?? -- ಮುಂಜೀ ???—ಮ್ಯಾಲ ಸಾಲೀ ಕಲ್ಸೊ ಗೊಂದಲ ಇಲ್ಲಾ. ಪಾಟೀ ಪುಸ್ತಕದ ಖರ್ಚು ಉಳೀತು--. ಇಷ್ಟಾಗೀ ಮನೀ ಒಳಗ ಬೇಕಾದ ಕೆಲಸಕ್ಕನುಕೂಲ—ದುಡೀಲಿಕ್ಕೆ ಒಂದಾಳು ಆದ್ಹಂಗ ಆಗ್ತಿತ್ತು. ಗಂಡ್ಸು ಹಾಂಗ ದುಡೀಲಿಕ್ಕೆ ಬರ್ತದೇ ಸುಟ್ಟಬರ್ಲೀ ? -- ಸಾಲೀ ಮೂಲೀ ಅನಕಾ ಬಿಟ್ಟದ್ದಲ್ಲೀ -- ಅಯ್ಯೋ ಏನ್ಸಾಲಿ--ೕ, — ಆ ಮಾಸ್ತರೂ ಯಮುದೇವ್ರಾಂಗ — ದಿನ ಬೆಳಗಾದರ ಜಜ್ಜೀ, ಜಡದೂ ನುಗ್ಗುನುಗ್ಗು ಮಾಡತಾರ! ಮ್ಯಾಲೆ ಅಳ್ಳೀ ಗಂಟು ಕಟ್ಟಿದ್ಹಾಂಗ -- ತಲ್ಯಾಗ ತುರಿಕ್ಕೊಬೇಕು ಅವರು ಹೇಳಿದ್ದೂ ಬಿಟ್ಟದ್ದೂ ಎಲ್ಲಾ—. ಸಂಜೇ ಮುಂಜಾನೇ ಎಷ್ಟು ರೂ ಹಾಕಿದ್ರೂ ನನಗನಕಾ ಒಂದ ಕವಿತಾಯೇನ್ಸಾರ ಮಾಡಲಿಕ್ಕೆ ಆಗತಿದ್ದಿಲ್ಲಾ; ಅದರ ಕಾಲಾಗ -- ಇತ್ಲಾಗ ಅಪ್ಪನ ಹೊಡತಾ, ಅತ್ಲಾಗ ಮಾಸ್ತರ ಜಡತಾ--! ಅಂತೂ ನಾನೂ ಭಾಳ ಶ್ರಂಬಟ್ಟೆ. ಜೀವಾ ಅಂಬೋದು ಹಣ್ಣು ಹಾಗಲ್ಕಾಯಿ ಆಗಿಹೋತು -- — — — ಥೂ ಥೂ ಥೂ -- ಎಷ್ಟು ಹೊಗಿ ಮಾಡ್ತೇ ಅವ್ವಾ -- ಊದಬಾರ್ಡ ಒಲೀನ-- ಛೀ, ಛೀ, ಕಣ್ಣಾಗ ಮೂಗಿನಾಗ ಬಾಯಾಗೆಲ್ಲ ತುಂಬಿಬಿಟ್ಟಿತು ಖೋಡಿ ಹೊಗೀ -- ನಿಮಗನಕಾ ಮುದಕ್ರಾದ್ರೂ ಒಂದು ಅಡಗೀ ಮಾಡ್ಲಿಕ್ಕೆ ಬರೂದುಲ್ಲ -- ಏನ್ಸುಡ್ಬೇಕು ನಿಮ್ಮ ಹೆಣ್ಣ ಜನ್ಮಾನೇ--

ಊದವ್ವಾ -- ಈಗರೇ ಊದು -- ಎಂಥಾ ಭಲೋ ಜಾಲೀ ಕಟಿಗಿ ತಂದ್ಹಾಕ್ಸೇನಿ ಕುರುಬರ ಬಸ್ಯಾನ ಕಡಿಂದ -- ಬರೋ ರುಪಾಯ್ಬಿಟ್ಟೆ--; ಹೂಂ ಊದು--! ಹೌದೇ--ಈಗ್ನೋಡು ಹ್ಯಾಂಗ ಹೇಳಿದಾಂಗ ಉರೀ ತಾವ (ತುಸು ತಡೆದು) -- ಆತೇ -- ಇಷ್ಟಾಗಿ -- ಹ್ಯಾಂಗಾರ ನಾಕೆತ್ತಾ ಕನಡು ಆದೀತು ಅನ್ನು--ಆವ್ಯಾಲೆ ಇಂಗ್ಲೀಷು ಸಾಲಿ – , ಕಳ್ಸಬೇ ಕಲ್ಲಾ ಧಾರವಾಡಕ್ಕ. ಅದನ್ನೆಲ್ಲಾ ಬಿಟ್ಟು ಭ್ರಾಂಬರ ಹೊಟ್ಟೇಲಿ ಹುಟ್ಟಿ, ನಟ್ಟು ಕಡೀಲಿಕ್ಕೆ ಹೋಗೂದದನೇ? ದನಾ ಕಾಯ್ಲಿಕ್ಕೆ ಹೋಗೂದದನೇ? ಹೊಟ್ಟೇದಸಿಂದ ಏನಾರ ಮಾಡಿ ನಾಕು ಇಂಗ್ಲೀಷು ಅಕ್ಷರ ಹೊಟ್ಟ್ಯಾಗ ಹಾಕ್ಕೋಬೇಕಲ್ಲ. ಇಲ್ದಿದ್ರ ಏನದ ಗತೀ; ಈಗಿನ್ ದಿವ್ಸದಾಗ ಕನಡು ಯಾರ್ಕೇಳ್ತಾರ? ಈಗ ನೋಡು ನನ್ದೇ ಅವಸ್ಥಿ ಏನಾಗೇದ—ಇರಲಿ. ದೈವಕ್ಕ ಪುಣ್ಯಾದೂರು, ಧಾರವಾಡಾ ಮಾಧೂಕರಿ ಬೇಡಿದ್ರರೇ ನಾಕ್ಕುತ್ತು ಕೂಳು ಹುಟ್ಟೇತು--ಮನ್ನೆ ಮನ್ನೆ ಏನೋ ಬಡಹುಡುಗರಿಗೆ ಇರಲಿಕ್ಕೆಂತ ವಿದ್ಯಾರ್ಥಿನಿಲಯ ಅಂತೇನೋ ಒಂದ್ಮಾಡ್ಯಾರಂತ--ಅಲ್ಲೆ ಹುಡುಗನ್ನಿಡ್ಲಿಕ್ಕೆ ಬಂದೀತು. ಗಂಡ್ಹುಡ್ಗಾ--ಸಾಲೀ--ಇಂಗ್ಲೀಷ್ ಸಾಲಿ ಕಲ್ಯಾವಾ! ಅಂದ್ಮ್ಯಾಲೆ-- ಕೋಟ್ಬೇಕು, ಶರ್ಟ ಬೇಕು, ಧೋತ್ರಾ ಬೇಕು ಕಾಲಾಗ ಬೇಕು--ತಲಿ ಮ್ಯಾಲ ಬೇಕು--ಇಷ್ಟಾದ್ರೂ ಮ್ಯಾಲೇ--ಆ ಬಕಾಸುರನ ಸಾಳಿ--ಫೀ ಅನಕಾ ತಪ್ಪಿಲ್ಲ! ಅದಕೂ ನಾ ಹೆದರೂದುಲ್ಲಾ ಅನ್ನು--; ಅವ್ವಾ-- ನಾನೂ ನಿನ್ನ ಕೈಯಾಗ ತಯಾರಾಗೇನಿ--ಅದಕ್ಯಾಕ ಅನಮಾನಾ-- ಹಪ್ತೇವಸೂಲ್ಮಾಡೂವಾಗ ಅಷ್ಟೆಲ್ಲಾ ಹ್ಯಾಂಗಾರ ಹಿರದೇನಂತೇ— ಅಂತೂ ಹುಡುಗಾ ಮ್ಯಾಟ್ರಿಕ್ ಹ್ಯಾಂಗಾರ ಆಗ್ತಾನನ್ನು--! ಆದ್ರ ಈಗಿನ್ದಿವ್ಸದಾಗೇ ಮ್ಯಾಟ್ರಿಕ್ ಆದ್ರರೇ ಏನದ ಅಂತೀ?--ನನ್ಯಾಲಕ್ಕ ನಾ ಮ್ಯಾಟ್ರಿಕ್ಕ ಆಗಿದ್ರ ಏನ್ಹೇಳ್ಲೀ--ನೊಷೇ ಬಿಡ್ತಿದ್ದೆ--ಒಂದು ಕೈ !! ಬೇಕಾದ್ಹಾಂಗ ಮಾನ್ಲೇತೀ ಮಾಡ್ತಿದ್ದೆ--ತಿರುಗಿ ಕೇಳಿದ್ರ—ಹುಜೂರ ಡೆಪ್ಟೀ ಹೊಡದ್ರೂ ಹೊಡಿಶಿದ್ದೆ ಅನ್ನು. ಮೂರ್ನಾಕ್ನೂರು ರೂಪಾಯಿ ಪೇನ್ಶನ್ನು ಬರ್ತಿತ್ತು--ಧಾರವಾಡ್ದಾಗ ಮಾಳಮಡ್ಡೀ--ಅದ್ಯಾಕೇ ಸೊ ಸಾಟೀ ಮಡ್ಡೀ ಮ್ಯಾಲೇ ಬಂಗ್ಲೇ ಕಟ್ಟಿಸ್ತಿದ್ದೆ--ಇಲ್ಲೀ ಏನ್ಮಾಡುದೂ-- ಆ ದಿನ ಹೋದುವು— (ತುಸು ತಡೆದು) ಅಂದ್ಮಾಲೆ--ಕಾಲೇಜಕ್ಕನ್ನಾ

ಕಳಸ್ ಬೇಕೇ—ಪುಣ್ಯಕ್ಕ ಧಾರವಾಡ್ದಾಗೇ ಕಾಲೇಜು ಆಗೇದ—ಅಂದ್ಮ್ಯಾಲೆ ಹುಡುಗ್ಗ ಕಾಲೇಜೀ ಕಲಸ್ದಿದ್ರ ಹ್ಯಾಂಗಾದೀತು—ಏನಾರ ಮಾಡೀ ನಾಕ್ಮಂದೀ ಕೈಕಾಲು ಹಿಡಕೊಂಡಾದ್ರೂ ಹುಡುಗನ್ನ ಕಾಲೇಜಕ್ಕ ಕಳಸಬೇಕು. ಅರಿಷ್ಟ ಧಾರವಾಡ ಕಾಲೇಜ್ದಾಗೇ ನೂರಾರು ಸ್ಕಾಲರ್ಸಿಪ್ಪು ಅವೇ ಅಂತೇ—ಕುರುಬ್ರು, ಬ್ಯಾಡರು, ಕೊರವ್ರ ಹುಡುಗರೂ ಸುದ್ಧಾ ಸ್ಕಾಲರ್ಸಿಪ್ಪು ತಗೊಂಡು ಕಲೀತಾವಂತ; ಸುಡಗಾಡ ಬ್ರಾಂಹ್ಪರಿಗೆ ಒಂದೊಂದೂ ಇಲ್ಲಂತ್ನೋಡು. ಆದ್ರೇನು? ನಾನೂ ಬಿಟ್ಟೆಪ್ಪನ ಮಗಾ ಅಲ್ಲ-ಸುಕುನೂರ್ತಿ ಬೇಡಿದ್ರೂ ಅಡ್ಡೀ ಇಲ್ಲಾ—ದೇಶಾವರಾ ತಿರುಗಿದ್ರೂ ಅಡ್ಡೀ ಇಲ್ಲ—ಮಗ್ಗ ಕಾಲೇಜೀ ಕಲ್ಸೇಕಲಿಸ್ತೀನಿ. ಆದ್ರ ಕಾಲೇಜೀ ಹುಡುಗರ ಖರ್ಚೇನು-! ಏನಿಲ್ಲಿದ್ರೂ ನಡೀಯೂ ಹಾಂಗಿಲ್ಲ–. ಎಂಟು ದಿವಸಕ್ಕ ಬಿಟ್ರೂ--ಹದಿನೈದು ದಿವಸಕ್ಕೊಮ್ಮೆಯಾದರೂ ಹಜಾಮತಿ ಆಗಬಾರದೇ-- ನೀನರೇ ಹೇಳು. ಈ ಊರಾಗೇನೂ-- ಹಳ್ಳೀ ಊರು-- ನಾವೊಬ್ಬಾವಾ--ನೀವೊಬ್ಬಾಕೀ—ಹ್ಯಾಂಗಾರ ಆದೀತು--ಶಾರ್ದ್ದಾಗ ಸರ್ತಿಗೆ ಎರಡಾಣೆ—ಅಜ್ಜ ನೂತದ್ದೆಲ್ಲಾ ಮಮ್ಮಗನ ಉಡ್ದಾರಕ್ಕಂಬೂ ಹಾಂಗ–ಏನ್ಮಾಡಿದ್ರೂ ಇದ್ಯೇ ಆಗ್ತದ. ಹೆಣ್ಣುಹುಡುಗಿ ಹುಟ್ಟಿದ್ರ ಇದೆಲ್ಲಾ ಎಲ್ಲಿತ್ತು ಗೋಳು. ಒಂದು ಇಂಗ್ಲೀಷು ಅಂದೀತೇ, ಒಂದು ಕಾಲೇಜೀ ಅಂದೀತೇ? ಹೆಚ್ಚಾದ್ರ ಹೆಣ್ಣುಹುಡುಗರಿಗೆ ಮದವೀದೊಂದು ನಿಗ್ಗರಾನ್ನು. ಆದ್ರ ನನಗೇನದರ ಹೆದ್ರಿಕಿಲ್ಲ ಬಿಡು. ಹದ್ನಾಕು ವರ್ಷದತನಕಾ ಅಂತೂ ನಿಶ್ಚಿಂತೇ ಈಗಿನ ದಿವಸದಾಗ? ನಮ್ಹುಡಿಗಿ ಅಷ್ಟು ಧೊಡ್ಡದಾಗೂದ್ರಾಗೇ ಹದ್ನಾಕುವರ್ಷದ ಕಾಯ್ದೇ ಇಪ್ಪತ್ತು ವರ್ಷ ಯಾಕಾಗ್ಬಾರದು! ಇಷ್ಟ್ಯಾ ವಿಚಾರಿ-ಮದ್ವೀ ಮಾಡಬೇಕಂದ್ರೇನು? ಅದೂ ಫಾಯಿದೇನೇ--ಯಾವದಾರ ಒಂದು ಛಲೋ ಮನತನಸ್ತ ಹಿರೇ ಅನುಭವಿಕ ವರಾ ನೋಡಿ ಕೊಟ್ಟರೇ ದುಡ್ಡು ಕೊಟ್ಟು ಹುಡುಗಿನ್ನ ತೊಗಾಂಡಾರು--ಗಂಡ ಸತ್ರ ಹುಡುಗಿ ಮನೀಗೆ ಬರ್ತಾಳೇ; ಸಂಗ್ತೀಲೆ ಆಸ್ತೀ ತರತಾಳೇ.-ತಪ್ಪೇನು? ಅಷ್ಟೊತ್ತಿಗೆ, ರಂಡಿಮದ್ವೀ ಕಾಯ್ದೇನೂ ಆದೀತು--ಯಾರು ಬಲ್ಲರು? ಅಥ್ವಾ ಇದೂ ಬ್ಯಾಡಾ-- ಛಲೋ ವರಕ್ಕ ಹುಡಿಗಿನ್ನ ಕೊಡಬೇಕೂ ಅಂದ್ರೂ, ಸಾಲೀ ಕಾಲೇಜಕ್ಕೆ ಬಡಿಯೂ ದುಡ್ಡೇ ವರದಕ್ಷಿಣೀ ಕೊಟ್ರು ಬೇಕಾ

ದಂಥಾ ವರಾ ಸಿಕ್ಕೀತು—ನಾನೂ ದುಡ್ಡು ಹ್ಯಾಂಗಾರ ತಂದೇನೂ—ಆದಕೇನು ಇನ್ನೂ ಅನಕಾ ಹಿಂಜರ್ದಿಲ್ಲಾ. ಆದ್ರ ಗಂಡು ಹುಟ್ಟೆತೆಂದ್ರ ಹಾಂಗೆಲ್ಲಿದೇ ?--ಕಾಲೇಜಕ್ಕೇ ವರದಕ್ಷಿಣೀ ಕೊಟ್ಟು ಹುಡುಗ್ಗ ಕಲಿಸಿಲಿಕ್ಕೆ ಬೇಕು !--ಅದೂ ಆತೂ--ಹೆಣ್ಣಿಂದಸಿಂದ ಮಾಡೂ ಖರ್ಚು ಗಂಡಿಂದಸಿಂದೂ ಮಾಡೇವು--ಆದ್ರ ಅರೇ ಎಲ್ಲಿ ತಪ್ಪೇದ ಗೋಳೂ--ಹೆಣ್ಣೇನೂ--ಅಟ್ಟೆ ಬಿಟ್ಟರ ಹೋಗ್ತಾವ ಗಂಡನ್ಮನಿಗೇ--ಒಮ್ಮೆ ಮದ್ವೀ ಮಾಡಿಬಿಟ್ರ ಪರ್ಲ್ಲ ಹರ್ಕೋತು. ಆದ್ರ ಗಂಡಿಂದು ಹಾಂಗೆಲ್ಲಿದ--? ಹಣಾ ಹುಣಚೀಪಕ್ಕಾ ಮಾಡಿದ್ರೂ ತೀರೂ ಹಾಂಗಿಲ್ಲ--ಹ್ಯಾಂಗಾರ ಆಗಿ ಕಾಲೇಜೊಂದು ಮುಗೀತು--ಬೀಯೇನೂ ಫಾಸಾತೂ ಅನ್ನು—ಅವ್ವಾ ಅಲ್ನೋಡು ಸಾರುಕ್ಕತದ ನೋಡೇ ಸಾರೂ--ಎಲ್ಲಾ ಒಲೀ ತುಂಭ್ಯೋತು--ಥೂ ! ಊದಗೊಳವಿ ಅರೇ ಹಾಕಿಡೂ--ನಾವೇ--ಅಡ್ಗೀ ಮಾಡೂ ಹೊತ್ಬಂತ್ನೋಡಿದು--ಛೀ--(ಮತ್ತೆ ತುಸು ತಡೆದು) —— —ಬೀಯೇ ಫಾಸಾತೂ—ಮುಂದೇ--ಮುಂದೇನ್ಮಂದ--ನೋಕ್ರಿ ಅಯ್ಯೋ-ನೋಕ್ರಿ--ಅಲ್ಲಿದ ನೋಡವ್ವಾ--ದೆವ್ವಾ--! ನೋಕ್ರೀ--? ಎಲ್ಲಿದ ನೋಕ್ರಿ--ಯಾರು ಕೊಡ್ಬೇಕು ನೋಕ್ರಿ--ಈಗನ್ದಿವ್ಸದಾಗ ಬೀಯೇ ಫಾಸಾದವ್ರು ಹಿಂಡುಗಟ್ಟೆಗೊಂಡು ಓಣ್ಯೋಣಿ ತಿರಗ್ತಾರೇ--ನೋಕ್ರಿ ಯಾರ್ಕೊಡ್ಬೇಕು ಇವರಿಗೆ! ನನ್ನಂಥಾ ನಾನು ಯೋಳ್ಕರೀ ನೀರ್ಕುಡಧೋದೆ. ಎಷ್ಟ್ರಂದಿಗೆ ಹೇಳಿಕೊಂಡೆ--ಎಷ್ಟಮಂದ್ಗ ಬೇಡಿಕೊಂಡೆ, ಬ್ರಾಹ್ಮಣಾಗಿ ಎಂಥೆಂಥವರ ಕೈಕಾಲು ಕಟ್ಟೆಕೊಂಡೆ--!! ಎಷ್ಟು ಕೈಬೆಚ್ಚಗ ಮಾಡಬೇಕು. ಅಯ್ಯೋ--ಅಷ್ಟು ಮಾಡಿದ್ರ--ಕಡೀಕೆ--ಈ ತಲಾಟೀ ಕುಲಕರ್ಣಿಕಿ ಸಿಗಬೇಕಾದ್ರ--ಕುರೀ ಕ್ವಾಣ ಬಿದ್ಧೋದ್ವು--ನಮ್ಮ ಹಿರೇರ ಪುಣ್ಯಾ ಎಲ್ಲಾ ಖರ್ಚಾತೂ ಅನ್ನೂ. ನಾ ಅಂತ--ಅಷ್ಟರೇ--ಮಾಡಿಕೊಂಡೆ—ಹಾಂಗೂ ಹೀಂಗೂ ಇಲ್ಲೀತನಕಾ ಈ ಮನೀಗೆ ಬಂದ್ವಿ--; ಆದ್ರ ಈಗೇನು ಬೀಯೇ ಬಿಟ್ಟು ಅವರಪ್ಪನ್ನ ಫಾಸಾದ್ರೂ--ಬಂದ್ಕೂವ ತ್ರೂಪಾಯೀ ? ಹೂಂ—ಹೂಂ—ಕೇಳಬಾರದು ! ಅಯ್ಯೋ ನನ್ಮಗ್ಗ ನೋಕ್ರಿ--ನೋಕ್ರಿ ಹ್ಯಾಂಗ ಸಿಕ್ಕೀತು—(ಎದೆಬಡಕೊಳ್ಳುತ್ತ)--ನೋಕ್ರಿ ಅಯ್ಯೋ ಹಿರೇದೆವ್ವಾ--ದೊಡ್ಡ ಭೂತಾ--ಬ್ರಹ್ಮರಾಕ್ಷಸಾ--ನರಪಿಶಾಚೀ--ನೋಕ್ರಿ...ನೋಕ್ರಿ. ಹ್ಯಾಂಗ ಸಿಕ್ಕೀತು. ನನ್ನ ಮಗ್ಗೀ--!! ಇನ್ನ

ಮತ್ತೊಂದು ಮಹಾಯುದ್ಧ ಸುರುವಾದ್ರ ನನ್ಮಗ್ಗ ನೋಕ್ರೀ ಆದೀತು!! ಆದರಾವ್ಯಾಲೇನು? ಹಾಯ್! ನನ್ಮಗಾ—-- ಜೀಯೇ ಪಾಸಾದಾ--ಬಿಯೇ!! ಒಂದು ಎಂಥಾದಾದರೊಂದು ನೋಕ್ರಿ--ಹೊಟ್ಟೀ ಪೂರ್ತೆ--; !! ಅದು ಹ್ಯಾಂಗಾದೀತು—ೀ--ಹ್ಯಾಂಗಾದೀತೂ? ಅವ್ವಾ--ಅಯ್ಯೋ--ಅವ್ವಾ--ಹಸಿವೀ--ಎಲೀ ಹಾಕು; ಅಡಿಗಾತಿಲ್ಲೋ?--ಸ್ನಾನಾ? ದೇವರ್ಪೂಜೀ? ಹೂಂ ಇನ್ನೆಲ್ಲಿ ಸ್ನಾನಾ ದೇವರ್ಪೂಜೀ--!! ಮೈಮ್ಯಾಲೆ ಆಕಾಶಾ ಕಡಕೊಂಡು ಬಿದ್ದೇದ! ಎಲೀ ಹಾಕ್ಮದ್ಲ ಅಯ್ಯೋ--ೀ--ನಾ ಬ್ರಾಹ್ಮಣ ಆಗಿದ್ರೂ ನನ್ಮಗಾ ಆರೇ ಬ್ರಾಹ್ಮಣ ಆಗಿರದಿದ್ರ--ಎಲ್ಲ್ಯಾರ ಒಂದು ನೋಕ್ರೀ ಹತ್ತಿತ್ತೂ; ಇದೇನ್ಮಾಡಿಟ್ಟೀ ದೇವ್ರೇ! ಅಯ್ಯೋ ಈ ಬ್ರಾಹ್ಮಣ ಜನ್ಮಾ ಯಾಕ ಹುಟ್ಟಿಸಿದಿ--ಮ್ಯಾಲೆ ಅವರ್ಗೆ ಗಂಡಸ್ಮಕ್ಕಳು ಯಾಕ್ಹುಟ್ಟಬೇಕೂ— —ಒಂದು ನೋಕ್ರಿ ಇಲ್ಲಾ ಅಯ್ಯೋ--ಪಾಪೀ ದೇವರ--ಇನ್ಮಾಲೇ ಗಂಡಸರನ್ನ ಹುಟ್ಟಿಸ್ಬ್ಯಾಡಪ್ಪಾ--ಗಂಡ್ಸರಿಗೆ ದುಡ್ಡು ಹಾಳು ಮಾಡೋದೇ ಹೆಂಗ್ಸರಿಗೆ ಕಲ್ಸಿದ್ರ ಬೇಕಾದಂಥಾ ನೋಕ್ರಿ--ಲೇಡೀ--ಮಡ್ಡಮ್ಮ--ಬೇಖಾದ್ದ ಜಾಗಾ ಸಿಗ್ತಾವ--ಇನ್ಮಾಲೇನೂ--ಬರ ಬರ್ತ--ಹೆಂಗ್ಸರ್ದ್ದ ಮೂಗ ಮ್ಯಾಲೆ ಆಗ್ತದ-ಗಂಡ್ಸರ್ನ್ಯಾರು ಕೇಳ್ಬೇಕು? ಜೀವಾ ಹೋಗ್ತದಂತಂದ್ರ--ಗುಟುಕು ನೀರು ಬಿಡುದಲ್ಲಾ. ನೋಕ್ರೀ ಎಲ್ಲೀ ನೋಕ್ರಿ!!! ಎಂಥಾ ಅನ್ಯಾಯ--ಅಬ್ರಹ್ಮಣ್ಯ--ಧರ್ಮಗ್ಲಾನಿ!!! ಅಯ್ಯೋ ಪಾಪಿ--ಯಮರಾಯಾ--ಒಮ್ಮಿಗ್ಲೇ--ಜಗತ್ನಾಗಿನ ಗಂಡು ಹುಡುಗರ್ನೆಲ್ಲಾನೂ----ಕುತ್ಗೀ ಹಿಚ್ಗಿ ಹಾಕಿ ಬಿಡಪ್ಪಾ----ಹಾಕಿಬಿಡು—ಇನ್ನೇನುಗತಿ--!— —ಅಯ್ಯೋ--ಅವ್ವಾ--ಅನ್ನಾ ಹಾಕೇ--ೀ--ೀ— —ಅನ್ನಾ ಹಾಕೂೀೀೀ; ಹೊಟ್ಯಾಗ ಸಂಕಟಾಗ್ತೇ ದ— —!!!

(ತೆರೆ)

೨

ಮನೆಹೊಕ್ಕ ಮಾರವಾಡಿ!

(ಒಂದು ವಿಡಂಬನ)

ಪಾತ್ರಗಳು

ಪುರುಷೋತ್ತಮಾಚಾರು	::	ಶೂರ್ಪಾಲೀ ಆಚಾರಿ;
ಪಾಟೀಲ ಶಾಮಣ್ಣ	::	ಹ್ಯಾಸ್ಕೂಲಿನ ಮಾಸ್ತರು;
ಗೋವಿಂದರಾಯರು	::	ಡಿಪೂಟಿ; ಪೆನ್ಶನರ್.

ಪಾತ್ರ ಪರಿಚಯ

ಪುರುಷೋತ್ತಮಾಚಾರ್ಯರು ಪರಪುಷ್ಟ ಜಾತಿಯ ಆಚಾರ್ಯರಲ್ಲಿ ಸರ್ವೋತ್ತಮರು. ಆದರೆ ತಾವು ಪರಪುಷ್ಟರೆಂದು ಸ್ವತಃ ತಿಳಿದುಕೊಂಡವರೂ ಅಲ್ಲ; ತೋರಿಸಿಕೊಳ್ಳುವವರೂ ಅಲ್ಲ. ಅಂಥ ಚಾತುರ್ಯ ಅವರಲ್ಲಿದೆ. ಅಲ್ಲದೆ ಸರ್ವಸಾಮಾನ್ಯರನ್ನು ಒಲಿಸಿಕೊಳ್ಳುವ, "ಭೋಳೀ" ಜನರನ್ನು ಬಗಲಿಗೆ ಹಾಕುವ ಚಾತುರ್ಯವೂ ಅವರಲ್ಲಿದೆ. "ಬಿದ್ದರೆ ಒಂದು ಹಣ್ಣು, ಹೋದರೆ ಒಂದ್ಹಳ್ಳು" ಎಂಬ ತತ್ವವಾದವೂ "ಗೆದ್ದರೆ ಆಡಲಿಕ್ಕೆ ಬಂದಿದ್ವಿ, ಸೋತರೆ ನೋಡಲಿಕ್ಕೆ ಬಂದಿದ್ವಿ" ಎಂಬ ವ್ಯವಹಾರವಾದವೂ ಅವರಲ್ಲಿದ್ದರೂ, ಗೆಲುವನ್ನು ಕುತ್ತಿಗೆ ಹಿಚುಕಿಯಾದರೂ ಹಿಡಿದುಕೊಂಡು ಬರುವ ಹಂಚಿಕೆ ಅವರಲ್ಲಿ ಬೇಕಾದಷ್ಟು ಇದೆ. ಅಲ್ಲದೆ ಸಾಧಿಸಿದಾಗ ಎಂಥ ಕೆಲಸಕ್ಕೂ ಹೇಸದ ಹೊಯ್ಮಾಲಿತನದ ಅಂಶಗಳೂ ಅವರಲ್ಲಿ ಇಲ್ಲದಿಲ್ಲ. ಆದರೆ ಎಂಥ ಹೇಡಿತನವನ್ನೂ ಅಡಗಿಸಬಲ್ಲ ಶಕ್ತಿವಂತರೂ ಅವರು ಹೌದು. ಆಚಾರ್ಯರ ಕುಲದಲ್ಲಿ ಹುಟ್ಟಿದ್ದರಿಂದ ಜನ್ಮತಃ ದೊರೆತ ಧರ್ಮ ಕರ್ಮಗಳ ಅವರ ಶಾಲು ಜೋಡಿಗಳ ಪದರುಗಳಲ್ಲಿ ನಾರದೆ ಅಡಗುವ ಮಾತುಗಳೆಷ್ಟೊ. ಇಂತವರ ಸೂತ್ರಧಾರತ್ವದ ಜಾಳಿಗೆಯಲ್ಲಿ ಸಿಕ್ಕ ಬಡಪ್ರಾಣಿ ನಮ್ಮ ಶ್ಯಾಮಣ್ಣ. ಬೀಯೇಬೀಟಿ ಆದರೂ ಅನುಭವ-ವ್ಯವಹಾರಗಳ ಮುಖವನ್ನೂ ಕಾಣದ ಆತ, ಹಳೆಯದನ್ನು ಬಿಡಲಾರದ ಹೊಸದನ್ನು ಹಿಡಿಯಲಾರದ ತ್ರಿಶಂಕು ತರುಣರ ಗುಂಪಿನವ. ಮುದುಕರಾದ ಗೋವಿಂದರಾಯರೂ ತ್ರಿಶಂಕು ಸ್ಥಾನದವರೇ ಆದರೂ ಶ್ಯಾಮಣ್ಣನಿಗಿದ್ದ ಅಲ್ಪಸ್ವಲ್ಪ ವ್ಯಕ್ತಿತ್ವವೂ ಅವರಲ್ಲಿಲ್ಲ. ಪೇನಶನದಾರರಾದ ಅವರ ವೃತ್ತಿ-ಸ್ವಭಾವಗಳೂ ಎಂಟಾಣೆ ತೂಕದವೇ. ಇಂಥವರಲ್ಲಿ ತಂತ್ರೋತ್ತಮರಾದ ಪುರುಷೋತ್ತಮಾಚಾರ್ಯರು ಹೇಗೆ ಪ್ರಸ್ಥ ಬೆಳೆಸುವರೆಂಬುದೇ ಈ ವಿಡಂಬನೆಯ ತಿರುಳು. ಆಚಾರ್ಯರ ಕೈಯಲ್ಲಿ ಧರ್ಮವೆಂಬುವದು ಹದನಾಗಿ ಮಸೆದ ಕತ್ತಿ. ಶ್ಯಾಮಣ್ಣ ಗೋವಿಂದರಾಯರಲ್ಲಿ ಆ ಧರ್ಮ ಬಾಗಿದ ತಲೆ.

೧ನೇ ನೋಟ

(ಧಾರವಾಡದ ಮಂಗಳವಾರ ಪೇಟೆಯ ಜವಳಿ ಓಣಿಯಲ್ಲಿ ಪುರುಷೋತ್ತಮಾಚಾರ್ಯರು ಹಸಿದು ಕಂಗಾಲಾಗಿ ಬೆವರು ಸುರಿಸುತ್ತ ಬರುತ್ತಾರೆ. ಒಂದು ಕಮಟು ಧೋತರ, ಒಂದು ಮಾಸಿದ ಪೈರಣ, ಅದರ ಮೇಲೆ ಒಂದು ಕಂದು ಬಣ್ಣದ ಉದ್ದ ಕೋಟು. ಬಿರಡಿಗಳು ಕೂಡದೆ ತೆರೆದ ಎದೆಗೆ ಅಡ್ಡವಾಗಿ ಜನಿವಾರ ಮುರಿಗೆಮುರಿಗೆಯಾಗಿ ಇಳಿಬಿದ್ದಿದೆ. ಬಗಲಲ್ಲಿ ರುಮಾಲ ಅಮುಚಿಕೊಂಡು ಒಳ್ಳೇ ವಿಚಾರಮಗ್ನರಾಗಿ ಬರುತ್ತಾರೆ.)

ಪುರುಷೋತ್ತಮಾಚಾರು :—ಈ ಧಾರವಾಡದಂಥಾ ದರಿದ್ರ ಊರು ಭೂಮೀಮ್ಯಾಲ ಎಲ್ಲೆಲ್ಲೂ ಇರಲಿಕ್ಕಿಲ್ಲ ನೋಡು. ಮಹಾ ಅರಿಷ್ಟ ಊರ್‍ರಿ; ಸುಡುಗಾಡಮುಂಡೇದ್ದು. ಹೀಂಗಿದ್ದು ನಮ್ಮಂಥಾ ಬ್ರಾಹ್ಮಣರಿಗೆ ಈ ಊರು ಬಿಟ್ರ ಗತೀ ಇಲ್ಲಾ. ನಮ್ಮದೂ ಹಳ್ಳೀ ಊರು; ಧೊಡ್ಡ ಪ್ರಪಂಚಾ; ಮತ್ತ ಮನಿಯೊಳಗ ಯಾರು ದಿಕ್ಕಿಲ್ಲಾ. ಅಂದಮ್ಯಾಲ, ಸುಮ್ಮನ ಮನೀ ಹಿಡಕೊಂಡ್ರ್ಯಾತ್ರ ಅಶನಕ್ಕೊಂದು ಮಾರ್ಗ ಹ್ಯಾಂಗ ಆದೀತು? ಅಂತ ಬಾಲ ಸುಟ್ಟ ಬೆಕ್ಕಿನ್ಹ್ಯಾಂಗ ಈ ಧಾರವಾಡಕ್ಕ ಬಂದೀಯಾ,— ಈ ಊರಾಗ ಒಂದು ನೀರಿಗೆ ಕೂಡಾ ಗತಿ ಇಲ್ಲಾ. ಇನ್ನಿಲ್ಲೆ ಕೂಳು ಹ್ಯಾಂಗ ಸಿಗಬೇಕು? ಕೆಟ್ಟ್ಯೋರು, ಯಾವ ಮಹಾರಾಯಾ ಕಟ್ಟಿಸಿದನೋ! ಇಲ್ಲೀ ಗುಡ್ಡಾ ಮಡ್ಡಿ ಏರಬೇಕಾದ್ರ ಕೈಕಾಲು ಮಾತಾಡ್ಲಿಕ್ಕೆ ಹತ್ತ್ಯಾವ, (ಹಣೆ – ಕೊರಳಿನ ಬೆವರನ್ನು ರುಮಾಲದಿಂದ ಒರೆಸಿಕೊಂಡು) ದಣದ್ದಣದೂ ಎಲ್ಲಾದರೂ ಒಂದ್ ಗುಟುಕು ನೀರು ಕೇಳಿದ್ರ, ಕಣ್ಣೀರ್‍ಸುರುಸೋವರೇ ಎಲ್ಲಾರು! ಹಳ್ಳೀ ಊರು ಸಾವಿರ್‍ಪಾಲಿಗೆ ಬೇಕು. ಏನಽ ಅಂದ್ರೂ, ಹಳ್ಳೀ ಮಂದೀನ ಸಂಭಾವಿತರು. ಹಳ್ಳೀಯೊಳಗ ಲುಚ್ಚೇರು ಕುತಿಗ್ಗ್ಯೊಯ್ಕರೂ ಇರೋ ದುಲ್ಲಾಂತ ನಾಯೇನು ಹಳ್ಳೀಯವರ್‍ನ ಮೇಲುಗಟ್ಟಿಕೊಳ್ಳ್ಯೊದುಲ್ಲ. ಆದ್ರ ಹಳ್ಳೀ ಮಂದಿ ಎಂಥಾ ನೀಚತನಾ ಮಾಡಿದ್ರೂ, ಸಾಚೇ ಮಂದಿ. ಇಂಥವರ್‍ನ ಕೆಡಸಬೇಕು, ಇಂಥವರ್‍ನ ಕೊಲ್ಲಬೇಕೂಂದ್ರ ಹೇಳಿಕೇಳಿ ಮಾಡಾವ್ರು ಹಳ್ಳೀಮಕ್ಕಳು. ಆದ್ರ ಜೀವ ಹೋದರೂ ಈ ಪಟ್ಟಣ

ದವರ್ಹ್ಯಾಂಗ ಇಲ್ಲದ ಸೋಗಲಾಡಿತನಾ ಮಾಡವ್ರಲ್ಲಾ. ಹಳ್ಳೀ ಜನಾ, ಹೊಡದ್ರ ಒಂದು ಹೊಡತಾ ಎರಡು ತುಂಡು. ಆದ್ರೀ ಪಟ್ಟಣದ ಸೂಳೀ ಮಕ್ಕಳು ಸಣ್ಣಾಗಿ ಕೂದಲ್ಲೆ ಕುತ್ತಿಗಿ ಕೊಯ್ಯ್ಯಾವ್ರು. ಎಷ್ಟs ಅಂದ್ರೂ ಹಳ್ಳೀಮಕ್ಕಳು ಹುಂಬರು; ಪಟ್ಟಣದವರು ಸುಧಾರಿಸಿದವರು. ಅಂದಮ್ಯಾಲ ನೀಚತನದಾಗೂ, ಸುಧಾರಿಸಿದ ನೀಚತನಾsಃ ಮಾಡವ್ರು ಅವರು. ಈಗs ಇದs ಊರಾಗ ನೋಡ್ರಿ. ಊರಿಗೆಲ್ಲಾ ಸುಖಾ ಆಗ್ಲಿ ಅಂತ ಸರಕಾರದವ್ರು ಮುನ್ಸೀಪಾಲ್ಟಿ ಮಾಡಿರತಾರ. ಆದ್ರ ಊರ ಹೆಂಗಸರೆಲ್ಲ ನೀರು ಹೊತ್ತು ಕಣ್ಣೀರು ಕಪಾಳಕ್ಕ ಹರಿಸ ತಿರೋವಾಗ ಈ ಮುನ್ಸೀಪಾಲ್ಟೀ ಮಕ್ಕಳು ಮಾತ್ರ ಮೂಗಿನ್ಕಿಂತ ಮೂಗ್ತಿ ಭಾರಾಂತ ಒಂದೊಂದು ಅರಮನಿ ಕಟ್ಸಿ ಊರಿನ ಶೋಭಾ ಹೆಚ್ಚಿಸಿದ್ವಿ ಅಂತ ತಮ್ಮ ಬೆನ್ನು ತಾವs ಭಪ್ಪರಿಸಿಕೊಳ್ಳತಾರ. ಊರವ್ರು ಮಾತ್ರ ಆ ಕಪಾಳಕ್ಕ ಬಂದ ಕಣ್ಣೀರ್ಬ್ಯಾಡಕೋತ ಕಾಲಾ ಕಳೀಬೇಕು. ಹೀಂಗ ಇರ್ತಾವ ಈ ಶಾರದೂರುದ್ರ. ಶಗಣೀಮನೀಗೆ ಸುಣ್ಣಾ ಬಳದು, ಬಣ್ಣದ ಮಾತಾಡಿ ಕಣ್ಕ್ಯಾಣಿಸಲಿಕ್ಕೆ ಅತಿ ಹಿರಿದು ಶಾರದ ಮಂದಿ ಅಂದ್ರ. ತುಂಟ ಕುದುರಿಗೆ ಗಂಟಲಗಾಮುಂಬೋ ಹಾಂಗ ನಾನೂ ಈ ಊರಿಗೆ ಬಂದೇನಿ. ಆದ್ರ ಈ ಖೋಡಿ ಊರಾಗ ಒಂದು ತುತ್ತು ಕೂಳು ಸಿಗೋದು ಕಠಿಣಾ! ಅದರೊಳಗ ನಮ್ಮ ಆಚಾರ ಕುಲದಾಗ ಕೂಳು ಬೀಳದೆ, ಬುದ್ಧೀನ ಹರಿಯೂದಿಲ್ಲ. ಏನs ಅನ್ನು, ನಮ್ಮ ಶೂರ್ಪಾಲಿ ಸಾವಿರ ಪಾಲಿಗೆ ಬೇಕು. ಅಲ್ಲೆ ಮುಖ್ಯ ನೀರಿಗೆ ಸಾವಿಲ್ಲಾ. ಕೃಷ್ಣಾನದಿ ಪ್ರತ್ಯಕ್ಷ ಭಾಗೀರಥಿ ಹರಥಾಂಗ ಹರದ ಬಿಟ್ಟ್ಯಾಳs! ಆ ನೀರಿನ ಸೌಖ್ಯದ ಮುಂದ ಎಲ್ಲಾ ಸೌಖ್ಯನೂ ಸುಳ್ಳು! ಮುಂಜಾನೆದ್ದು ನದಿಗೆ ಹೋದ ಬ್ರಾಹ್ಮಣವೃಂದ, ಶೌಚ ಮುಖಮಾರ್ಜನ ಪ್ರಾತಃಕೃತ್ಯ ಸ್ನಾನ ಆಹ್ನೇಕ ತೀರಿಸಿಗೊಂಡು ಬಿಸಲೇರೂ ಹೊತ್ತಿಗೆ ಮನೀಗೆ ಬಂದು ಪೂಜೀ ಶಾಸ್ತ್ರಾಮಾಡಿ, ಭಕ್ಕರೀ, ಬೆಣ್ಣಿ, ಮತ್ತs ಬೆಣ್ಣೀಪಿಂಡದ ಬದ್ನೀಕಾಯಿ ಪಲ್ಯ, ಒಂದು ಸರ್ವೋತ್ಕೃಷ್ಟ ಹುಳಿ ಮತ್ತ ಕೆನಿಮೊಸರು ಇಷ್ಟ ಗಡದ್ದಾಗಿ ಹೊಡದು ಗುಡೀಕಟ್ಟೀಮ್ಯಾಲ ಹೊತ್ತು ತಂಪೂತನಕಾ ಕಾಲ ಚಾಚಿಕೊಂಡು ಬಿದ್ದರs....s........ ಏನ್ಹೇಳಲಿ!— ಒಬ್ಬೊಬ್ಬ ಗಂಡು ಜಾಲೀ ತುಂಡಿನ್ಹಾಗ ಆಗ್ತಾರ.

ಹಬ್ಬ ಹುಣ್ಣಿವೀ ಹೂರಣಷ್ಟು ವ್ಯಾಲಿಂದ ವ್ಯಾಲ ಗಚ್ಚಾಗಿ ಬಿದ್ದಽ ಬೀಳ್ತಿರತಽದ. ಆ ಕೃಷ್ಣಾದ್ನೀರು, ಆ ಹವಾ, ಆ ಊಟ, ಆ ನಿದ್ದಿ — ಆಹಾಹಾ; ಏನ್ಕೇಳ್ತೀರಿ; ಒಬ್ಬೊಬ್ಬ ಗಂಡ್ಸಿಗೆ ಖಾಸಾ ಮಕ್ಕಳಽ ಹನ್ನೆರಡೇನು! ಹದಿನಾಲ್ಕೇನು!! ಹದಿನೆಂಟೇನು!!! ನಮ್ಮ ಭ್ರಾಂಬರಿಗೆ ಭ್ರಮ್ಮದೇವರ ಸೃಷ್ಟೀ ಮುಂದ್ವಾಸಗಸೋದಽ ಒಂದು ಕರ್ತವ್ಯ ಕರ್ಮಾ! ಒಂದರ ವ್ಯಾಲೊಂದು ಉಂಡೀ ನುಂಗಿದ ಹಾಂಗ ಹೆಂಡರ ಹಿಂಡು! ನಮ್ಮೂರ ಕಡೆ ಎರಡನೇ ಮೂರನೇ ಸಂಬಂಧಿಲ್ಲದ ಗಂಡ್ಸರಽ ಸಿಗೂದ್ಕಡಿಮಿ. ಅಂತಽ ಶಾಸ್ತ್ರದಾಗ ಕಾಮಾ–ಮೋಕ್ಷಾ ಎರಡೂ ಜೋಡಿಸಿಟ್ಟಾರ. ಈಗ ನಂದಽ ತಗೊಂಡ್ರ!,—— ಇನ್ನೂ ಮೂವತ್ತಾರು ತುಂಬಿಲ್ಲಾ ಹೋದ ವರ್ಷ ಎಂಟನೇ ಹುಡುಗ ಎಂಟರಾಗಽ ಹುಟ್ಟಿ ಹೆಂಡ್ತಿನ್ನೂ ಹೊತುಕೊಂಡು ಹೋತು. ಇನ್ನ ಉಳಿದ ಏಳು ಬ್ರಹ್ಮರಾಕ್ಷಸಗಳ ವ್ಯವಸ್ಥಾ ಹ್ಯಾಂಗ ಮಾಡಬೇಕಣಾ ಅಂತ ಈಗ ಈ ಧಾರವಾಡಕ್ಕ ಬಂದಿರೋದು. ಆದ್ರ ಈ ಊರಾಗ ಎಲ್ಲಾ ಮುಂಡೇ ಮಕ್ಕಳೂ ತಮ್ಮಷ್ಟಕ್ಕ ತಾವು. ಮತ್ತೊಬ್ಬರ್ನ ಹಚ್ಚಿಕೊಂಡಾರು ಅಂಬೂ ಮಾತಽ ಸುಳ್ಳು. ಈಗೇನೆಲ್ಲಾರೂ ಹೊಸಾ ಪದ್ಧತಿ ಕಲ್ತ ಬಿಟ್ಟಾರ. ಗಂಡಾ–ಹೆಂಡ್ತಿ, ಒಂದಽ ಅರ್ಧಾನ ಮಕ್ಕಳೂ—ಒಂದ್ಸಣ್ಣ ಮನೀ! ಮೂರನೇದವರು ಬಂದ್ರ ಆ ಮಾಟನ್ನ ಮನೀ, ಮಾಟನ್ನ ಒಲೀ ಆ ಮಾಟನ್ನ ತಪ್ಪೇಲಿ ನೋಡಿದ್ರ ಊಟಕ್ಕ ಹಿಂದಿರುಗಿ ಊರಿಗೇ ಹೋಗಿರಬೇಕು. ಅಂತೂ ಮಹಾ ಅಷ್ಟದರಿದ್ರ ದೇಶರೀ ಈ ಧಾರವಾಡ್ನೀಮಿ. ಮೈಸೂರ ಕಡೆ ಊರಿಗೊಂದೊಂದು ಅನ್ನಛತ್ರ ಇರ್ತಾವಂತ. ಮಹಾರಾಜಾ ಕರುಣಾಳು ನೋಡ್ರೀ; ಭ್ರಾಂಬರಿಗೆ ಭೋಜನಕ್ಕ ಬಹಾಳ ಸೌಖ್ಯ. ಧರ್ಮದ್ದೇಶಾ ಅಂದ್ರ ಮೈಸೂರಽ. ಆದ್ರೂ ಇದಽ ಧಾರವಾಡ್ದಾಗಽ ನನ್ನ ಬ್ಯಾಳೀ ಬೇಯಿಸಿಕೊಂಡ್ರಽ ನಾ ಶೂರ್ಪಾಲಿಯಾಗ ಹುಟ್ಟಿದ್ದಕ್ಕೂ ಸಾರ್ಥಕ. ಇದಕ್ಕೇನಣಾ ಹಂಚಿಕಿ! (ತೆರೆಯ ಕಡೆಗೆ ನೋಡಿ) —ಹಾಂ——ಆಹಾಂ— (ಕೇಕರಿಸಿ) ಇತ್ಲಾಗ ಪ್ಯಾಟೀಕಡಿಂದ ಒಂದು ಅಸಾಮಿ ಸಾಮಾನ ಹೊತ್ಕೊಂಡು ಲೆಕ್ಕಾ ಪಕ್ಕಾ ಭಾಳ ಮಾಡಿಕೋತಽ ಬರತದ; ಸ್ವಲ್ಪ ಲಕ್ಷಣಾ ಪರೀಕ್ಷಿಸಿ ನೋಡೋಣ.

(ಇದೇ ಹೊತ್ತಿಗೆ ಸುಮಾರು ಇಪ್ಪತ್ತೆಂಟು ವಯಸ್ಸಿನ ಪಾಟೀಲ ಶ್ಯಾಮಣ್ಣ ಬರುವನು. ಮೈಯಲ್ಲಿ ಒಂದು ಶೆಕ್ಸಪಿಯರ ಕಾಲರಿನ ಶರ್ಟು; ಅದಕ್ಕೆ ರೊಲ್ಡ ಗೋಲ್ಡಿನ ಗುಂಡಿಗಳು; ಮೇಲೊಂದು ಉಣ್ಣೆಯ ಗಿಡ್ಡ ಕೋಟು; ಅದಕ್ಕೊಂದು ಫೌಂಟನ್ನಪೆನ್ನು; ಕಣ್ಣಿಗೆ ಸೆಲೋಲಾಯ್ಡ ಕಟ್ಟಿನ ಕನ್ನಡಕ; ತಲೆಗೆ ಕ್ರಾಪ್ಪು; ಮೇಲೊಂದು ಗಂದರ್ವ ಕ್ಯಾಪು: ಕ್ಯಾಲಿಕೋ ಮಿಲ್ಲಿನ ತೆಳುವಾದ ಧೋತರ ಸಡಿಲಾಗಿ ಗಂಡುಗಚ್ಚೆ ಹಾಕಿ ಉಟ್ಟಿದ್ದಾನೆ; ಕಾಲಲ್ಲಿ ಧಾರವಾಡ ನಮೂನೆಯ ಕಾಲ್ಮರಿಗಳು; ಎಡಗೈಯ್ಯಲ್ಲಿ ಉಂಗುರ, ರಿಷ್ಟವಾಚೂ; ಬಲಬಗಲಲ್ಲಿ, ಸಕ್ಕರೆ, ಬೆಲ್ಲ, ಕೊಬ್ಬರಿ ಮುಂತಾದವುಗಳ ಗಂಟನ್ನೂ ಅವುಚಿಕೊಂಡಿದ್ದಾನೆ; ಹಾಗೇ ಪಲ್ಯಕಾಯಿಗಳನ್ನು ತನ್ನ ಕರವಸ್ತ್ರದಲ್ಲಿ ಕಟ್ಟಿಕೊಂಡು ಹಿಡಕೊಂಡಿದ್ದಾನೆ; ಎಡದ ಅಂಗೈಯಲ್ಲಿದ್ದ ಚಿಲ್ಲರೆ ರೊಕ್ಕ ಎಣಿಸುತ್ತಿದ್ದಾನೆ.)

ಶ್ಯಾಮಣ್ಣ :—ಎರಡು ಸೇರು........ ಬದ್ನೀಕಾಯೀ........ ಒಂದಾಣೇ.... ಮತ್ತಃ........ ಎರಡ್ಸೇರು ಬಟಾಟೀ........ ಆರು ದುಡ್ಡೂ........ ಹೌದಲ್ಲೋ ಮತ್ತ?....; ಮೂರು ದುಡ್ಡಿಗೆ ಸೇರು........... ಅಂದ್ರ ಬರಾಬ್ಬರಿ.... ಆರು ದುಡ್ಡೂ........ ಸರಿ........ ಒಂದು........ ಆರು ದುಡ್ಡೂ........ ಮತ್ತ ಬದ್ನೀಕಾಯಿಗೆಷ್ಟೂ.... ಎರಡ್ಸೇರಿಗೆ........ ನಾಕ್ದುಡ್ದೂ. ಅಂತೂ ನಾಕ್ದುಡ್ಡೂ ಒಂದಾರುದುಡ್ಡೂ............ ಎಷ್ಟು........ಹತ್ತು ದುಡ್ಡೂ ಹೌದು....ಮತ್ತೇನು?.... ಮೂಲಂಗೀ! ಮೂಲಂಗಿ ಎಷ್ಟರ್ದೂ?........ ಊಂ.... ಊಂ ಮೂರ್ದುಡ್ದು....!.... ಮೂರ್ದುಡ್ಡು........ಆಗ್ಳೆ....ಎಷ್ಟು ಆಗಿತ್ತೂ?....ಊಂ.... ಹತ್ತು.... ಒಂದ, ಮೂರು.... ಹದ್ಮೂರು ದುಡ್ಡು; ಆ ಮ್ಯಾಲ........ ಮೆಂಥೆದ ಸೂಡು!....ಆಂ.... ಮೇಂಥೇದ ಸೂಡಿಗೆ........ಎಷ್ಟ ಕೊಟ್ನಿ ಪಾ....?? ಮರ್ತಹೋತಲ್ಲಾ........ ಎಷ್ಟೂ?.... ಹೂಂ..... ಎರಡು ದುಡ್ಡು..! ಹೂಂ ಹೌದು.... ಬರಾಬ್ಬರಿ!.... ಹಾಂಗಾದ್ರ ಒಟ್ಟು ಎಷ್ಟಾತಪಾ! ಅಂತೂ.... ಹಾಂಗಾದ್ರ........ ಬರಾಬ್ಬರೀ...... ಎಷ್ಟಾತೂ??.......... ಮೇಂಥೇದ ಪಲ್ಯಾ.... ಎರಡ ದುಡ್ಡು;........ ಮೂಲಂಗಿ!....ಎಷ್ಟು?.. ಮೂರ್ದುಡ್ಡು!........... ಮತ್ತೇನು?........... ಖೋಡಿ ಇತ್ಲಾಗಿಂದ ಎಣ್ಸಾದ್ರಾಗೇ ಅತ್ಲಾಗಿಂದ ಮರೀತೇದ; ಅತ್ಲಾಗಿಂದ ಎಣ್ಸಾದ್ರಾಗೇ ಇತ್ಲಾಗಿಂದ ಮರೀತೇದ; ಬಲು ಕಷ್ಟಪಾ ಈ ಸಂಸಾರಾ—; ಥೂ—ಥೂ; ಒಂದ್ಬಿಟ್ಟು ಎರಡು ಬೀಯೇ ಪಾಸಾಗ್ಬಹುದು; ಮೂರು ಬಿಟ್ಟು

ನಾಕು ಬೀಟೀ ಫಾಸಾಗ್ಬಹುದು. ಆದ್ರೀ ಸಂತೀ ಪ್ಯಾಟೀ ಮಾತ್ರ ಮಾಡ್ಲಾಸಲ್ಲಾ. ಬಲೇ ತಲೀ ತಿಂಬೂ ಲೆಖ್ಖರೀ —ಸುಡಗಾಡ ಸುಂಗ್ಲಿ. ಆಗ್ಲೀ— ಬೀಯೆಬೀಟಿ ಆದ್ರೂ ಈ ಪ್ಯಾಟೀ ಬಿಟ್ಟೀ ಮಾಡೋ ಹಣೇ ಬರಹ ನಮ್ಮ ಪಾಲಿಗೆ.......(ತಲೆ ಕೆರಕೊಳ್ಳುತ್ತ) ಹೂಂ-— ಅಂತೂ ಲೆಕ್ಖ ಎಷ್ಟಾತಪಾ....ಮಾರಾಯಾ? ಮೂಲಂಗಿ ಒಂದ್ಮೂರು ದುಡ್ಡು! ಮೆಂಥೇ ಎರಡ್ಡುಡ್ಡು—ಆಂ--ಮೆಂಥೇ--? ಆಂ--ಏನಪಾ ಮತ್ತ ಮನ್ಯಾಗ ಮೆಂಥೇ ಹೇಳಿದ್ದ್ರೀ----ಮೆಂಥೆದ ಪಲ್ಲ್ಯ ಹೇಳಿದ್ರೀ--? ಆಂ-- ಇದೇನು ಘೋಟಾಳಿ! ನೋಡಬೇಕಾತಲ್ಲಾ! (ತಾನು ಬರಕೊಂಡ ಚೀಟಿಯನ್ನು ಓದಿಕೊಂಡು) ಪಾರಾದೆ ಮಾರಾಯಾ--ಪುಣ್ಯಾಕ್ಕ ಮೆಂಥೇದ ಪಲ್ಲ್ಯ ತಗೊಂಬಾ ಅಂತ ಹೇಳ್ಯಾರೀ--ಇಲ್ಲಿದ್ದ್ರ, ಏನ್ ಕೇಳ್ತೀ --ಬಲು ಕೆಟ್ಟ ಕೆಲ್ಸ್ರ---ಈ ಮನೀ ಕೆಲ್ಸಾ ಅಂಬೋದು. ಹತ್ತ ಟ್ಯೂಶನ್ ಮಾಡಬಹುದು---ಆದ್ರ ಈ ಮನೀ ಕೆಲ್ಸಾ ಮಾಡಾವ್ನ ಬಾಯಾಗ ಮಣ್ಣು ಹಾಕಬೇಕು---. ಹೋಗ್ಲಿ--ಲೆಖ್ಖ ಎಷ್ಟಾತು? ಮೂಲಂಗಿ-,-ಮೂರ್ದುಡ್ಡೂ, ಮೆಂಥೇದ ಪಲ್ಲ್ಯ---ಎರಡ ದುಡ್ಡು, ಬಟಾಟಿ---ಆರ್ದುಡ್ಡು; ಬದ್ನೀಕಾಯಿ ಒಂದಾಣೆ; ಎಷ್ಟಾತೂ ಒಂದ ಮೂರು, ಒಂದೆರಡು; ಒಂದ ಆರು, ಒಂದ ನಾಕು--ಅಂತೂ ಎಷ್ಟ್ಟ ಹದ್ನೈದ್ದುಡ್ಡು---ಹೌದಲ್ಲಪಾ?-- (ಮತ್ತೊಮ್ಮೆ ಲೆಕ್ಕಮಾಡಿ) ಹೌದು ಬರಾಬ್ಬರಿ, ಹದ್ನೈದ್ದುಡ್ಡು; ನಾನು ಆ ಬಾಗವಾನ್ರಾಕೀಗೇ--ಎಷ್ಟ್ಟ? ಒಂದ್ರೂಪಾಯ್ಕೊಟ್ಟಿದ್ದೀ.... .... ಆದರೊಳಗ ಹದ್ನೈದ್ದುಡ್ಡು ಮುರಕೊಂಡು ಆಕೀ ನನಗೇ ಎಷ್ಟ ರೊಕ್ಕಾ ಕೊಡಬೇಕಾತೂ?.... ಅಂದ್ರ-- (ಕೈಯ್ಯ ರೊಕ್ಕ ಎಣಿಸಿ) ....ಈಗ ಹನ್ನೇರಡಾಣೇ ಒಂದು ದುಡ್ಡು ಕೊಟ್ಟ್ಯಾಳೀ?---- ಅಧ್ಯಾಂಗ್ಸಾ--?--- ಒಂದ್ರೂಪಾಯ್ದಾಗ--- ಹದ್ನೈದ್ದುಡ್ಡು ಹೋದ್ರ---ಎಷ್ಟುಳೀತು? ಒಂದ್ರೂಪಾಯ್ದಾಗ--- ಹದ್ನೈದುಡ್ಡು ಹೋದ್ರs--!--ಅಂದ್ರ---ಒಂದ್ರೂಪಾಯ್ಕ ಅರವತ್ನಾಕ್ದುಡ್ಡು--ಅದರಾಗ ಹದ್ನೈದುಡ್ಡ ಹೋದ್ರೀ— --ಅರವತ್ನಾಕ್ರಾಗೇ-- ಹದ್ನೈದು ಹೋದ್ರೀ--- (ಧೇನಿಸುತ್ತ) ನಾಕರಾಗ--ಐದು ಹೋದ್ರ-- ಎಷ್ಟ್ಟ?---ಅಲ್ಲ--ಹದ್ನಾಕರಾಗ ಐದು ಹೋದ್ರ--ಎಷ್ಟ್ಟ-ಯೇಳೀಳೀ--! ಕೈಲಾಗ ಒಂದೂ--ಆರ್ರಾಗ ಒಂದು ಹೋದ್ರ--ಐದು ಅಂತೂ ಎಷ್ಟ್ಟ,-

ಐವತ್ತೊಂಭತ್ತೇಳ್ದುಡ್ಡು--ಅಂದ್ರ--ನಾಕರ್ಲೇ—ನಾಕಾ ಒಂದ್ಲೇ ನಾಕೂ--ಐದ್ರಾಗ ನಾಕ ಹೋದ್ರ---ಒಂದು; ಮ್ಯಾಲಿಯೇಳು---ಎರಡರ್ಲೆ----ಹತ್ತೊಂಭತ್ತುದುಲ್ಲಾ--ಅಂತ---ನಾಕಾ ಒಂದ್ಲೇ ನಾಕು--ಬಾಕೀ--ಮೂರ್ದುಡ್ಡು--ಅಂತೂ ಹನ್ನೊಂದಾಣೇ ಮೂರ್ದುಡ್ಡು--ಒಂದು ರೂಪಾಯ್ದಾಗ-ಹದ್ನೈದ್ದುಡು ಹೋದ್ರ--ಹನ್ನೊಂದಾಣೆ ಮೂರು ದುಡ್ಡು--ಆ ಬಾಗವಾನ್ರಾಕೀ ಕೊಟ್ಟ್ಯಾಳಿಷ್ಟೂ--?-- ಹನ್ನೆರಡಾಣೇ---ಒಂದ್ದುಡ್ಡು---ಎಲಾ--ಇದರೇ--ಆ ಮುಂಡೇಮಗಳು ಬಾಗಾವಾನ್ರಾಕೀ--ಎರಡು ದುಡ್ಡು ಹೆಚ್ಚು ಕೊಟ್ಟ್ಯಾಳ ಎಂಥಾ--ಹುಂಬರಿವರೂ!--ಸಾಲೀ ಕಲ್ತಿರೂ ಹಾಂಗಿಲ್ಲಾ!--ಥೂ--ನಮ್ಮ ದೇಶ ಹೀಂಗಾದ್ರ ಹ್ಯಾಂಗ ಮುಂದ್ಕ ಬರ್ಬೇಕೂ---?---ಇಂಗ್ಲಾಂಡ---ಜರ್ಮನಿ, ಅಮೇರಿಕಾದೊಳಗ-ಪಲ್ಯಾಳ್ಯ ಮಾರವ್ರು ಸೈತ--ಮಾಟ್ರಿಕ್ ಪಾಸಾಗಿರ್ತಾರಂತೇ--ನಮ್ಮದು ಅರಿಷ್ಠ ದೇಶಾ!---ಅಗ್ಲೀ--ಪಾಪ--ಆಕಿ--ತಪ್ಪಿಕೊಟ್ಟ್ಯಾಕ್ಷಣಕ್ಕ--ನಾವೂ ಲುಚ್ಚೇಗಿರೀ ಮಾಡೂದದನೇ?---ನನ್ನ ಸದಸದ್ವಿವೇಕ ಬುದ್ಧಿ--ಇಂಥಾ ಕೆಲಸಕ್ಕ ಹ್ಯಾಂಗ ಒಪ್ಪೀತೂ?-ಆಗಲಿ, ಈ ಎರಡು ದುಡ್ಡು ಆಕೀಗೆ ಮುಟ್ಟಸಲಿಕ್ಕೆ ಬೇಕು. (ತಿರುಗಿ) ಎಬೇ--ಮುದ್ಕೀ--ಇತ್ತೊಗೊಳ್ಳಬೇ— (ಎನ್ನುತ್ತ ಆಚೆಗೆ ಹೋಗುವನು; ಆತನನ್ನೇ ನಿರೀಕ್ಷಿಸುತ್ತಿದ್ದ ಆಚಾರ್ಯರು ಆತ ಹೋದ ಕಡೆ ನೋಡುತ್ತ ಆತ ನಿಂತಲ್ಲಿಗೆ ಬರುವರು.)

ಆಚಾರು :—ಈ ಅಸಾಮೀ ಲಕ್ಷಣಾ ನೋಡಿದ್ರ, ಇಲ್ಲಿ ನಮ್ಮ ಮಾತ್ರಿ ನಾಟೇತೂ ಅಂತ ಕಾಣಸ್ತದ. ಏನೋ ಆ ಪಲ್ಯಾದ ಮುದಕೀ ಸಂಗ್ತೀಲೆ ಬಹಾಳ ಹಾಕ್ಯಾಡ್ಲಿಕ್ಕೆ ಹತ್ತ್ಯಾರಲ್ಲಾ! ಬರ್ಲಿ, ಇತ್ತಲಾಗ; ಸಮಾಚಾರಾ ತಗೊಂಬೋಣಂತ. ಸ್ವಲ್ಪ ಕಾಲೇಜೀ ಪಾಲೇಜೀ ಕಲ್ತ್ಯಾಂಗ ಕಾಣಸ್ತದ. ಆದ್ರ ಮಾರೀಮ್ಯಾಲ ಮಾತ್ರ ಗಟ್ರೀ ಕಾದ ಕಳೇ ಸುರೀತದ. ನೋಡೋಣ ಹಳ್ಳ ಒಗದು. ಬರೇ ಹೀಂಗ ತುಂಬಿದ ಪ್ಯಾಟ್ಯಾಗ ನಿಂತ್ರ ಹೊಟ್ಟೆ ತುಂಬೀತದ. ಯಾಕಂದ್ರ, ಈ ಊರಾಗೇನು ಗುರುತಿಲ್ಲ ಗುರಾಚಾರ ಇಲ್ಲಾ. ಇನ್ನ ಖಾನಾವಳೀ ಬೇಕಾದಷ್ಟಿದ್ರೂ, ನಾ ಉತ್ತರಾದಿಮಠದ ಬ್ರಾಹ್ಮಣ ಖಾನಾವಳಿಗೆ ಹ್ಯಾಂಗ ಹೋಗಬೇಕು? ಇನ್ನ ಈ ಊರಾಗ ಗುರುತಿನವರದ ಇಲ್ಲಾಂತ ಭಡಕ್ಕನದ ಒಂದ ಐದೇ ಮಿನಿಟಿನಾಗ ಯಾವ್ದಾದ್ರೂ ಒಂದ

ಖಾನಾವಳೀ ಹೊಕ್ಕ ಬರಬೇಕಂದ್ರ, ಸುಡುಗಾಡೀ ದುಡ್ಡೊಂದು ಖರ್ಚು ಮಾಡ್ಬೇಕು. ಇನ್ನ ಹೊಟ್ಟೀದಸಿಂದ ಹಣಾ ಹಾಳು ಮಾಡೋದs ಆದ್ರ ಬ್ರಾಹ್ಮಣರ ಹೊಟ್ಟೀಲೆ ಯಾಕಣಾ ಹುಟ್ಟ ಬೇಕು! ಏನಾದ್ರೂ ಹಿಕ್ಮತ್ತುಮಾಡಿ ಹಿಡಿ ಹಿಟ್ಟು ಹುಟ್ಟಿಸಿದರs ಸರಿ. ಇದಕ್ಕೇನಾದ್ರೂ ಮಾಡ್ಬೇಕೂ. ಈ ಮರಿಮೀನಾ ನಮ್ಮ ಜಾಳಗ್ಯಾಗ ಸಿಕ್ಸಿಕೊಂಡ ಹೊರ್ತು ಗತಿಯಿಲ್ಲ. ಹಾಂ--! ಇತ್ಲಾಗs ಹೊರಳಿತು ಅಸಾಮಿ ಮತ್ತ. ಇವೊತ್ತಿನ ಬೇಜಮಿ ಇವೊತ್ತ ಮಾಡಿ ಕೊಳ್ಳದಿದ್ದರೆ, ನಾಳೆ ನಾಡದು ಎರಡೇಕಾದಶಿ. ಅಂದಮ್ಯಾಲ ಇವೊತ್ತಿನ ದಶಮೀ ದುಗುಣೀ ದಶಮೀ!— ಅಂ ಬಂದಾ! (ಎಂದು ಮತ್ತೆ ಸುತ್ತಾಡುತ್ತಿರಲು, ಶ್ಯಾಮಣ್ಣನು ಪ್ರವೇಶಿಸುವನು.)

ಶ್ಯಾಮಣ್ಣ:—ಎಲಾ--ಇದರ! ಹ್ಛ!! ಹ್ಛ!!!—ನಾನೇ ತಪ್ಪಿದ್ದೆ. ಆ ಬಾಗವಾನರ ಮುದ್ಕಿ ಒಳೇ ತಪ್ಸೀತು?--ಆತು---ಹಾಗಾದ್ರ ರೂಪಾ ಯ್ದಾಗ ಹದ್ನೈದ್ದುಡ್ಡು ಹೋದ್ರ ಹನ್ನೆರಡಣೇದುಡ್ಡು ಉಳಿತಾವ?-- ಆಗ್ಲಿ--ಎರಡು ದುಡ್ಡು ಹೋಗ್ತಿದ್ದವು; ಅಷ್ಟೇ ಫಾಯ್ದೀ--ಅಂದಾ--! ಇನ್ನ ೯--ಟಾಂಗಾ--೯--೯--?? (ಅತ್ತನೋಡಿ)--ಏ ಟಾಂಗಾ---ಇಲ್ಲಿ ಬಾ--- ಬಾರೋ--ಮಾಳ್ಮಡ್ಡಿಗೆ ಹೋಗಬೇಕು—ಏನ್ ತಗೊತೀ—?--

ಆಚಾರು: — (ಅಷ್ಟರಲ್ಲಿ ಹತ್ತರ ಬಂದು, ಒಳ್ಳೇ ಸಲಿಗೆಯ ಧ್ವನಿಯಿಂದ) ಯಾಕಪಾ ರಾಮಣ್ಣಾ ಏನೋ ಭಾಳ ವಿಚಾರಾ ನಡ್ಸೀದಿ!—

ಶ್ಯಾಮಣ್ಣ:—(ತುಸು ಬೆಚ್ಚಿಬಿದ್ದು-ಮತ್ತೆ ಸಾವರಿಸಿಕೊಂಡು)— ಯಾರು! ಅಂ--ಯಾರ್ನ--ಮಾತಾಡ್ಸಿದಿರಿ?--ನನ್ನೇ??--ನನ್ನ ಹೆಸ್ರು ಶ್ಯಾಮೂ.

ಆಚಾರು:—ಅದೇನು ನನಗೊತ್ತಿಲ್ಲೇನೋ--ಶ್ಯಾಮಣ್ಣಾ!--ಶ್ಯಾಮಣ್ಣಾ-- ಅಂತಿದ್ದೆ--ನಾಲ್ಗಿ--ತಪ್ಪಿ--ರಾಮಣ್ಣಾ ಅಂತ ಬಂತು ಬಾಯ್ಲೇ--ಇರ್ಲೀ-- ಏನೋ ಸ್ವಲ್ಪ ಗೊಂದಲಾದ್ದಾಗ ಬಿದ್ಹಾಂಗ ಕಾಣಸ್ತೇದ? ಯಾಕೋ ಸಾಮಾನ ಸಟ್ಟು ಭಾಳ ಹೊತ್ತೀದೆಲ್ಲಾ!

ಶ್ಯಾಮಣ್ಣ: —ಏನಿಲ್ಲಾ—ಸ್ವಲ್ಪ--ಇವತ್ತ--ಮನ್ಯಾಗ ಶ್ರಾದ್ಧಾ--ಅದಕ್ಕ-- ಏನೇಽ ಪ್ಯಾಟೀ ಮಾಡೋಣಾ ಅಂತ ಬಂದಿದ್ದೆ--ಮುಂದ ಎರ್ಡs ದಿವ್ಸದಾಗ ತುಳಸೀ ಮದವೀ ಬ್ಯಾರೇ!

ಆಚಾರು :—ಆಗ್ಲಿ ಸಂತೋಷ ಮಹಾರಾಯಾ--ಮನ್ಯಾಗೆಲ್ಲಾ--ನೆಟ್ಟಗೇ--? ಕೂಸು--ಕುನ್ನಿ--?

ಶ್ಯಾಮಣ್ಣ:—ಎಲ್ಲಾ ನೆಟ್ಟಗೇ ಅನ್ರಿ---ಆದ್ರ; ಕೂಸಿಲ್ಲಾ---ಕುನ್ನಿಲ್ಲಾ ಇನ್ನೂ ಈಗೆಲ್ಲಿ—?

ಆಚಾರು :—ಹೌದು ಬಿಡೂ---ಇನ್ನೂ ಮನ್ನೆ ಮನ್ನೆ ಮದ್ವೀ ಮಾಡಿಕೊಂಡೀದೀ ?

ಶ್ಯಾಮಣ್ಣ :—ಅದ್ಯಾಕ ನಾಕ ವರ್ಷಾತಲ್ಲಾ ಮದ್ವಿ ಆಗೀ-- ನಮ್ಮ ಹಿರೇರು ಸತ್ತ ವರ್ಷಾನೇ—

ಆಚಾರು:—ನನಗೊತ್ತಿಲ್ಲೇನು ?----ಬಿಡು. ನಿಮ್ಮ ತಂದೀಯವರಿಗೂ ನನಗೂ ಕೇವಲ ಸ್ನೇಹಾ. ಕೂಡೇ ಆಡಿದ್ವಿ---ನಾ ಬಿಸ್‌ಯತ್ತಾದಾಗಿದ್ದಾಗ ಅವರು ಏಳನೇ ಯತ್ತಾದಾಗಿದ್ರೂ; ಆದ್ರ ಒಂದs ಓಣಿ; ಕೂಡಿ ಸಾಲಿಗೆ ಹೋಗ್ತಿದ್ವಿ--ನಿನ್ನ ಮದಿವೀ ಪತ್ರಾ ನನಗ ಬಂದಿತ್ತು. ನಾನೂ ಹೊರಟಿದ್ದೆ. ಆದ್ರ, ಆವತ್ತ ಮನ್ಯಾಗ ರಿದ್ಧಿ ಬಂತೂ. ಅಂತೂ ನಿಮ್ಮ ತಂದೀ ಸ್ವಭಾವ ಛಲೋದು--ಮಾತ್ರ--

ಶ್ಯಾಮಣ್ಣ :—ಏನೋರೆಪಾ--! ನಮಗನಕಾ--ಅದೇನೋ--

ಆಚಾರು :—ಅದು ಖರೇ; ಒಂದ ಸ್ವಲ್ಪ ಹಳೇ ತರಹಾದ ಮಂದೀ---ಆದ್ರೂ ಏನ್ ಅಡ್ಡಿಯಿಲ್ಲ---ವೆಂಕಟರ--ರ--ಅಲ್ಲ--ಅಲ್ಲ--ಅದೇನು---ನಿಮ್ಮ ತಂದೀಯವ್ರ--ಹೆಸರು--ಖೋಡಿ--ಬಾಯಾಗೇ--ಅದ--ಅಂ--ಅಂ--ಅ--.

ಶ್ಯಾಮಣ್ಣ :—ನಮ್ಮ ತಂದೀ ಹೆಸ್ರು ರಾಮರಾ....-------

ಆಚಾರು :—ಹೌಧೌದು--ರಾಮರಾಯ್ರು; ಬಾಯಾಗೇ ಇತ್ನೋಡು. ಆಗಳೇ ನಾ ನಿನಗ ಶ್ಯಾಮಣ್ಣ ಅಂಬೋದು ಬಿಟ್ಟು ರಾಮಣ್ಣಾ ಅಂದೆನಲ್ಲಾ. ಅದs ನೋಡು ನಿಮ್ಮ ತಂದೀಯವರನ್ನ ಕರದ ರೂಢಿ. ರಾಮರಾಯ್ರು ನಾ--ಅಂದ್ರ ಜೀವಾ ಕಳಕೋತಿದ್ರು. ನಾ ನಿಮ್ಮನೀಗೆ ಮ್ಯಾಲಿಂದ ಮ್ಯಾಲೆ ಬರತಿದ್ದೆ. ನೀನು ಆಗ ಸಣ್ಣ ಹುಡುಗಾ—, ನಾವೆಲ್ಲಾ ನಿನ್ನ ಎತ್ತಿ ಆಡ್ಸೇವೆನಪಾ !—

ಶ್ಯಾಮಣ್ಣ:—ಇದ್ದೀತು! ತಂದೀಯವರ್ದೂ ನಿಮ್ದೂ ಸ್ನೇಹಾ ಅಂದ ಮ್ಯಾಲ--ಇದ್ದೀತು.

ಆಚಾರು :—ಮತ್ತ--ನಿಮ್ಮ ಅಪ್ಪಾ ಅವ್ವಾ ....

ಶ್ಯಾಮಣ್ಣ :—ಅವ್ವನಕಾ ಶಾರಿ ಹುಟ್ಟಿದ ವರ್ಷಾನೇ—

ಆಚಾರು :—ಛೇ. ಛೇ. ಛೇ. ಅದೊಂದ ಮಾತ್ರ ದೇವರು ಭಾಳ ಕೆಡಕು ಮಾಡಿದಾ. ಶಾರಕ್ಕ ಭಾಳ ಛಲೋ ಹುಡಿಗೀ--ಆಗಿನ್ನ ಸಣ್ಣ ಕೂಸಿತ್ತೂ--ಈಗೆಲ್ಲಿ--ಇದ್ದಾಳ ಶಾರಕ್ಕ--ನೆಟ್ಟಗಿದ್ದಾಳೇ--ಭಾಳ ಛಲೋ ಹುಡಿಗಿ ಮಾತ್ರ—

ಶ್ಯಾಮಣ್ಣ :—ಏನ್ ಛಲೋ ಬಿಡ್ರಿ. ಮೂರು ವರ್ಷಾತು, ಮದಿ ಹುಡುಕ್ತೇವಿ. ಯಾರು ಘಾಸೀ ಮಾಡವಲ್ಲರು!

ಆಚಾರು :—ಅದೇನು ಶಾಮಣ್ಣಾ. ರೂಪಾ ಯಾರ ಕೈಯಾಗಿದ್ದ! ಈಗ ಹದಿನೈದು--ಹದಿನಾರು ವರ್ಷದ ಮಾತು, ನಾನೋಡಿ. ಇಷ್ಟ ದಿವ್ಸ ನಿಮ್ಮೆಲ್ಲಾರ್ನೂ ನೋಡಿಕೊಂಡ ಬರಬೇಕು ಅಂತ ಭಾಳ ಪ್ರಯತ್ನಾ ಮಾಡ್ತಿದ್ದೆ; ಆಗಿರಲಿಲ್ಲಾ. ರಾಮರಾಯ್ರು ಹೋದಮ್ಯಾಲೆ ನನಗೂ ಇತ್ತ್ಲಾಗ ಬರೋದು ಅಂದ್ರ ಕೆಟ್ಟನಸ್ತಿತ್ತು. ಆದ್ರೂ ಏನೋ ಈಗ ಮನ್ನಿನಾಗ ಬಂದು ನಿಮ್ಮೆಲ್ಲಾರ್ನೂ ನೋಡಿಕೊಂಡ ಬರೋದಂತೇ ಗೊತ್ಮಾಡಿಕೊಂಡು ಹೊರಟೆ. ಆದ್ರ ಭಾಳ ದಿವ್ಸಾತೂ----ನಿನ್ನ ಗುರುತು--ನನಗಿಲ್ಲಾ--ನನ್ನ ಗುರುತು ನಿನಗಿಲ್ಲಾ--ಹ್ಯಾಂಗ್ಮಾಡೋದೂ--ಅಂತ ಲೆಕ್ಖಾ ಹಾಕ್ತಿದ್ದೆ. ಅಷ್ಟ್ರಾಗೇ ನೀ ಇಲ್ಲೆ ನಿಂತಿದ್ದಿ. ನೋಡ್ದೆ. ಒಮ್ಮೆಗೀಲೆ ಥಟಕ್ಕಂತ ಗುರುತಾ ಸಿಕ್ಕಿತು, ಮಾರೀ ಹೋಲ್ಕಿ ಮ್ಯಾಲಿಂದೇ. ಆತು ಮಾರಾಯಾ ಛಲೋ ಆತು! ಮುಖ್ಯಾ, ಭೆಟ್ಟಿ ಆತೂ. ನೀನೂ ನನ್ನ ಗುರ್ತಾ ಹಿಡಿದೀ—ಸಂತೋಷಾ— (ಶ್ಯಾಮರಾಮನು ಕಕ್ಕಾವಿಕ್ಕಿಯಾಗುವನು) ಪುರುಷೋತ್ತಮಾಚಾರ್ರ ಗುರ್ತಾ ಯಾರು ಬೇಕಾದವ್ರು ಸಟ್ನ ಹಿಡೀಬಹುದು ಅಂತ ಮಂದೆಲ್ಲಾ ನನಗ ಅಂತಾರ----ಅಂದ್ಮ್ಯಾಲೆ ನಿನಗ ನನ್ನ ಗುರ್ತ ಸಿಕ್ಕದ್ದೇನು ಥೊಡ್ಡ ಮಾತು!!—

ಶ್ಯಾಮಣ್ಣ :—ನಾಯೇನು ಇದಕೂ ಮದ್ಲ ನಿಂಮ ಹೆಸರೇ ಕೇಳಿದ್ದಿಲ್ಲಾ—ಅಷ್ಟ ಹಗಲಿಲ್ಲಾ ಯಾರೋ ರಘೂತ್ತಮಾ—

ಆಚಾರು :—ಹೌದು—ನಾನೇ ರಘೂತ್ತಮಾಚಾರ ಅಂದ್ರ. ರಘೂತ್ತಮು ಅಂತ ನನಗ ತೊಟ್ಟಲ್ದಾಗ ಇಟ್ಟ ಹೆಸರು. ಪುರುಷೋತ್ತಮಾ ಜನರೆಲ್ಲಾ ಕರಿಯೋ ಹೆಸರು. ನಮ್ಮದೂ ನಿಮ್ಮ ತಂದೀದೂ ಕೇವಲ ಲಂಗೋಟಿ ಗೆಳ್ತನಾ—ಅದಕ್ಕ ಅವರು ನನಗ ರಘೂತ್ತಮಾ ಅಂತೇ ಕರೀತಿದ್ರು.

ಶ್ಯಾಮಣ್ಣ :—ಇದ್ದೀತಿದ್ದೀತು.

ಆಚಾರು :—ಅಲ್ಲಪಾ, ಶಾಮಣ್ಣಾ, ಶಾರಕ್ಕನ ಮದಿವಿ ತಡಕೊಂಡ ಸಿಂತೇದ ಅಂತೀದಿ?—ನನಗ ತಿಳಸಬಾರ್ದೇನಪಾ--ನಾ---ಬೇಖಾದಂಥಾ ವರಾ ಹುಡಿಕಿ ಕೊಡ್ತಿದ್ದೆ. ಈಗಾದ್ರೂ ಏನಾತೂ–ನಾಯೆಲ್ಲಾ ಮಾಡ್ತೇನಿ–ನೀ ಅದರ ಚಿಂತೀಬಿಡು. ವರಕ್ಕೇನ ಬ್ಯಾನ್ಯೋ!

ಶ್ಯಾಮಣ್ಣ :—ಅದೊಂದಾದ್ರ ನಾ ಬೀಯಿಬೀಟಿ ಆದ್ದೂ ಸಾರ್ಥಕಾತೂ ಅಂತೀನಿ ಆಚಾರs. ನೀವೊಬ್ಬರು ದೇವರು ಬಂಥಾಂಗs ಬಂದಿರಿ. ಈಗ ನೋಡ್ರಿ, ಹದಿನಾಲ್ಕು ವರ್ಷಾತು ನಾವು ಧಾರವಾಡಾ ಸೇರಿ. ಏನೋ ತಂದೀಯವರ ಪುಣ್ಯಾದಿಂದ ಕಾಲೇಜೂ ಮುಗೀತು, ನೌಕರೀನೂ ಹತ್ತೇದ. ಇದs ಊರಾಗ ವಿಕ್ಟೋರಿಯಾ ಹ್ಯಾಸ್ಕೂಲಿನೊಳಗ ಸಂಸ್ಕೃತ–ಇತಿಹಾಸದ ಮಾಸ್ತರ ಇದ್ದೇನಿ.

ಅಚಾರು :—ಸಂಸ್ಕೃತ ಕಲಿಸ್ತೀಯಾ! ಎಂಥಾ ಪುಣ್ಯದ ಕೆಲಸಪಾ! ನಮ್ಮದೂ ಭಾಷ್ಯಾಗೀಷ್ಯಾ ಎಲ್ಲಾ ಆಗೇದೇನಪಾ! ಅದ್ಯಾವ ಸಾಲೀ? ವಿಕ್ಟೋರಿಯಾ ಹೈಸ್ಕೂಲs? ಹೌದು ಕೇಳೀನಿ; ನಮ್ಮ ಅಥಣೀ ಮಾಸ್ತರೊಬ್ಬರಿದ್ರು; ಅವರು ಹೇಳ್ತಿದ್ರು. 'ಗೋತ್ರಿಲ್ಲದವರಿಗೆ ಕಾಶ್ಯಪ ಗೋತ್ರ ಅಂಬೂ ಹಾಂಗ ಮಾಸ್ತರಾಗಬೇಕಂಬೊವ್ರಿಗೆ ವಿಕ್ಟೋರಿಯಾ ಹ್ಯಾಸ್ಕೂಲೂಂತ'; ಅದೇ ಕಾಣಸ್ತsದ. ಭಾಳ ಸಂತೋಷಾ, ಭಾಳ ಸಂತೋಷ. ಮುಖ್ಯ, ನೀ ಹಾದಿಗೆ ಹತ್ತಿದಿ; ಸಾಕು.

ಶ್ಯಾಮಣ್ಣ :—ಆದ್ರ, ಆಚಾರs, ನಾ ಹಾದಿಗೆ ಹತ್ತೂದ್ರಾಗs ಈ ಸಂಸಾರ ನನ್ನ ಬೆನ್ನs ಹತ್ತೇದ. ಅದಿರಲಿ; ನೀವು ಊರಿಗೆ ಹೋಗೂದರಾಗs, ಒಮ್ಮೆ ಮನೀಕಡೆ ಬಂದ ಹೋಗ್ರಿ: ಆಂ!

ಆಚಾರು :—ಒಮ್ಮೆ ಅಂದರ್ಹ್ಯಾಂಗ ಶ್ಯಾಮಣ್ಣ? ಶಾರಕ್ಕನ ಮದ್ವಿ ಮಾತಂತೀದಿ; ಅದರ ಜವಾಬುದಾರಿ ನಮ್ಮ ನೆತ್ತಿಮ್ಯಾಲೆ ಬಿದ್ಹಾಂಗಾತು. ಅದಕ್ಕೇನಾದ್ರೂ ಮಾಡಬೇಕಲ್ಲಾ ಉಪಾಯ. ನನಗೂ ಭಾಳ ಕೆಲಸಿತ್ತು ಊರಾಗ; ಇವೊತ್ತ ಎರಡರ ಮೇಲಿಗೆ ಊರಿಗೆ ಹೋಗೋಣಾಂತಿದ್ದೆ. ಆದ್ರ ಶಾರಕ್ಕನ ಮದ್ವಿಯಂಥಾ ಮಹತ್ವದ ಮಾತು! ನಾಲ್ಕು ದಿನಾ ನಿಂತು ಏನಾದ್ರೂ ವ್ಯವಸ್ಥಾ ಮಾಡೇ ಹೋಗ್ತೀನಿ.

ಶ್ಯಾಮಣ್ಣ :—ಹಾಂಗಾದ್ರೇನ್ರೀ ಭುಗಾರಾತು. ಎರಡು ತಿಂಗಳಾ ಮುದಿ ಹಣಮಪ್ಪಗ ನಡಕೋತಿದ್ದೆ. ನೀವು ಬಂದದ್ದು ಆ ಪ್ರಾಣದೇವರ ಪ್ರಸಾದನs! ನಡ್ರೀ ಮನೀಗೆ ಹೋಗೋಣ; (ಆಚೆಗೆ ತಿರುಗಿ) ಏ ಟಾಂಗಾ; ಏ ಟಾಂಗಾವಾಲಾ; (ಟಾಂಗಾದ ಘಂಟೆಯ ಶಬ್ದ)

ಆಚಾರು :—ಶ್ಯಾಮಣ್ಣಾ ನಾಯಿಲ್ಲೇನು! ನನ್ನ ಕೈಯಾಗಷ್ಟು ಸಾಮಾನು ಕೊಡಲ್ಲಾ. ಆ ಟಾಂಗಾಕ್ಕ ಯಾಕ ಮತ್ತ ನಾಕು ಆಣೆ ಬಡೀತೀ? ಅದs ನಾಕಾಣೇದ ನಾಸೀಪುಡಿ ತಗೊಂಬಾ ತೀರ್ತು, ನಡಿ ನಡಿ. ಹೊತ್ತು ಹತ್ತಕ್ಕ ಬಂತು. ಶ್ರಾದ್ಧದ ಕೆಲಸಾಂತೀದಿ; ಮುಂದಿನ ವ್ಯವಸ್ಥಾ ಮಾಡಲಿಕ್ಕೆ ಬ್ಯಾಡs? ಆ ಕೂಟಿನ ಅಂಗಡಿಯೊಳಗಷ್ಟು ನಾಸೀಪುಡಿ, ಒಂದಿಷ್ಟು ಜರದಾ ತಗೊಂಡುಬಿಡು ತೀರ್ತು. ನಡಿ. ನಡಿ.

(ಇಬ್ಬರೂ ಹೋಗುವರು, ತೆರೆ ಏಳುವದು)

೩ನೇ ನೋಟ

(ಮುಂದೆ ಹಳು ದಿನಗಳ ನಂತರ ಮಧ್ಯಾಹ್ನದ ಹೊತ್ತಿನಲ್ಲಿ ಶ್ಯಾಮಣ್ಣನ ಪಡಸಾಲೆಯಲ್ಲಿ ಶುಭ್ರವಾದ ಧೋತರವನ್ನುಟ್ಟುಕೊಂಡು ಪುರುಷೋತ್ತಮಾಚಾರ್ಯರು ಸಮೀಚೀನ ಭೋಜನ ಹೊಡೆದು ತೇಗು ತೋರುವ ತಮ್ಮ ದೊಡ್ಡ ಹೊಟ್ಟೆಯ ಮೇಲೆ ಕೈಯ್ಯಾಡಿಸುತ್ತ ತಾಂಬೂಲದ ತಬಕದೆದುರು ದಿಂಬಿಗಾತು ಕುಳಿತು ಬಾಯಿ ಸೆಲಕಾಡಿಸುತ್ತ ಎಲೆ ಒರೆಸಿ ದೇಟು ತೆಗೆದು ಸುಣ್ಣ ತೀಡುತ್ತ ಕುಳಿತಿರುವರು. ಬದಿಯಲ್ಲಿ ಒದ್ದೆ ಪಂಚೆಯ ಮುದ್ದೆಯಿದೆ. ಮೋರೆಯ ಮೇಲೆ ಸಂತುಷ್ಟಿಯ ಚಿನ್ಹಗಳು ಚಿಮ್ಮಿ ಬರುತ್ತಿವೆ. ನಡುನಡುವೆ ತೃಪ್ತಿಯ ತೇಗುಗಳು ತಿರುತಿರುವಿ ಬೀಳುತ್ತಿವೆ.)

ಆಚಾರು :—ಇತ್ತಿತ್ತಲಾಗ ಜಾತೀಝಗಳ ಭಾಳ ನಡದಾವ. ಎಲ್ಲಾ ಜಾತೀ ಜನರು ತಾವೂ ಮ್ಯಾಲ ಅಂತ ಹೂಲೀ ಎಬ್ಬಿಸ್ಯಾರ. ಆದ್ರ ನಿಜವಾಗಿ ನೋಡಿದ್ರ ದೇವರ ದಯಾ ಬ್ರಾಂಬರಮ್ಯಾಲೇ ಅದೂ ಅಂಬೋದೇನ್ಸುಳ್ಳಲ್ಲ. ಆದರಾಗಂತು ನಾವು ಶೂರ್ಪಾಲೀ ಆಚಾರಂದ್ರರ ಶ್ರೀಮನ್ನಾರಾಯಣನ ಚೊಚ್ಚಲ ಮಕ್ಕಳೂ! ಹೇಳಿಕೇಳೀ ಬ್ರಾಂಬರು ದೇವರ ಬಾಯಾಗಿಂದ ಹುಟ್ಟಿದವ್ರು. ಅಂದಮ್ಯಾಲೆ ನಮ್ಮ ಬಾಯಿ ಚೊತಿ ಆ ಪರಮಾತ್ಮಗ ಇಲ್ಲದಿದ್ದರೂ ಹ್ಯಾಂಗ! ಆಹಾ, ಕರುಣಾನಿಧೇ, ಭಕ್ತಪರಿಪಾಲಕಾ ಏನ್ನಿನ್ನ ಕೃಪಾ ಮಹಾರಾಯಾ! ಎಂಟ ದಿವಸದ ಹಿಂದ ಇದೂ ಧಾರವಾಡದ ಪ್ಯಾಟ್ಯಾಗ ದಿಕ್ಕಿಲ್ಲದ ನಿಂತು ಒಂತುತ್ತು ಕೂಳು ಹ್ಯಾಂಗ ಹುಟ್ಟೀತೂ ಅಂತಿದ್ದೆ. ಭಗವಂತನ ದಯಾ ಆತು ಅಂತ ಅವತ್ತ ಶ್ರಾದ್ಧದ ಸಮೀಚೀನ ಭೋಜನ ಸಿಕ್ಕೀತು ಈ ಸದ್ಬ್ರಾಹ್ಮಣಗ: ಆ ಶ್ರಾದ್ಧದ ಉಂಡಿ ಕರಗಿದ್ವೋ ಇಲ್ಲೋ ಅಂಬೂದರಾಗ ಮುಂದ ಮೂರ ನಾಕು ದಿವಸಕ್ಕ ತುಳಸೀಮದ್ವಿ ಬಂತು. ನಮ್ಮ ಶ್ಯಾಮಣ್ಣನ್ನ ಮಾತಿಗೆ ಹುರಿದುಂಬಿ ತುಳಸೀ ಮದ್ವೀ ಒಳ್ಳೇ ಥಾಟಿನಿಂದ ಹೊಡ್ಸಿಬಿಟ್ಟೆ. ಅದೂ ಹೊತ್ತು ಸಾಧಿಸಿ ಶಾರಕ್ಕನ ಮದ್ವೀ ಜೆಸರ್ಲೀ ಹುಣ್ಣಿವಿ ದಿವ್ಸಾ ಒಂದು ಸತ್ಯನಾರಾಯಣ ಆಗಲೀ ಅಂದೆ; ಇಕಾ ಇವೊತ್ತ ನಮ್ಮ ಹೊಟ್ಯಾಗ ಸತ್ಯನಾರಾಯಣ ಶ್ಯಾವಿಗೀ ಖೀರಾವ. ಅಂತೂ ಈ ಮಾಸೀ ಒಂದು ನಮ್ಮ ಹತೋಟಿಯೊಳಗ ಬಂಧಾಂಗಾತು. ಶೂರ

ಪಾಲೀ ಅಂದ್ರ ಶೂರರ ಪಾಳ್ಯ ಅಂಬೋದು ಸುಳ್ಳಲ್ಲ. ನಮ್ಮಂಥ್ರ ಆಚಾರು ಎಲ್ಲ್ಯಾರ ಹೋದ್ರ ಸೋತು ಬಂದಾರೇನು ಮಕ್ಕಳು! ನಳದಾಗ ನೀರಿಲ್ಲದ ಈ ಧಾರವಾಡದಾಗ ನಾನು ಕೂಳಿನ ನಳಾ ಹರಿಸಿ ಬಿಟ್ಟೇನಿ ಅಂದ್ರ ಸಾಮಾನ್ಯ ಮಾತs! ಈ ಊರಾಗ ನೀರಿಲ್ಲದನೂ ನಮ್ಮ ಬ್ಯಾಳಿ ಬೇಯಿತಿದ್ರ ಆದ್ಯಾಕ ಬಿಡಬೇಕಣಾ! ನೋಡೋಣ-- ನೋಡೋಣ! ಹುಂಚಿಕೆಗೆ ಹರಿಯುದ ಹಾದಿ ಯಾವದೂ!----ಅಂ---- (ಒಳಗಡೆಗೆ ನೋಡುತ್ತ) ಯಾಕೋ ಶ್ಯಾಮಣ್ಣ ಇನ್ನಷ್ಟು ಎಲೀ ತರ್ತೀನಂತ ಹೋದಾನ ಬರ್ಲೀ ಇಲ್ಲಿನ್ನೂ! (ಕೂಗುತ್ತ) ಶ್ಯಾಮಣ್ಣಾ!

ಶ್ಯಾಮಣ್ಣ :—(ಕೈಯಲ್ಲಿ ಎಲೆಗಳನ್ನೂ ಒಂದು ಕಾಗದ ಪುಡಿಕೆಯನ್ನೂ ತೆಗೆದುಕೊಂಡು ಬರುತ್ತಾನೆ. ಆತ ತೊಟ್ಟದ್ದು ಲಂಡ ತೋಳಿನ ಶರ್ಟು; ಉಟ್ಟ ದೋತರದ ಚುಂಗನ್ನು ಹೆಗಲ ಮೇಲೆ ಹಾಕಿದ್ದಾನೆ.) ಬಂದೆ ಆಚಾರs; ಇಕಾ ನಿಮ್ಮ ದಸಿಂದ ಜರದಾಪುಡಿ ತರಿಸಲಿಕ್ಕೆ ಕಳಿಸಿದ್ದೆ. ಇನ್ನಷ್ಟು ಎಲೀ ತಗೊಳ್ರಿಲಾ. (ಕೈಲಿದ್ದ ಸಾಮಾನು ಇಡುತ್ತ ಕುಳಿತುಕೊಳ್ಳುವನು. ಇಷ್ಟೊತ್ತಿಗೆ ಕೈತೆರವು ಮಾಡಿಕೊಂಡಿದ್ದ ಆಚಾರ್ಯರು ತಂಬಾಕು ಬಾಯಿಗೆ ಹಾಕಿಕೊಂಡು, ಇನ್ನೆರಡು ಎಲೆ ತೀಡುವ ತಯಾರಿಯಲ್ಲಿರುವರು.)

ಆಚಾರು :—ಶ್ಯಾಮಣ್ಣಾ, ಸತ್ಯನಾರಾಯಣಂತೂ ರಂಗ ಮಾಡಿಸಿಬಿಟ್ಟಿ! ದೇವರು ಬ್ರಾಂಭರಲ್ಲಿ ವಿಶ್ವಾಸಿಲ್ಲದ ಈಗಿನ್ದಿನ್ಸದಾಗ, ನೀ ಮಾತ್ರ ಭಾಳ ಅಪರೂಪದಾವಾ! ದಕ್ಷಿಣಿ ತಂದೀದಿಲ್ಲೊ: ಇಟ್ಟುಬಿಡ್ ತಟ್ಟಿಯೊಳಗ. (ಆತ ತಟ್ಟೆಯಲ್ಲಿಟ್ಟ ದಕ್ಷಿಣೆಯ ಹಣವನ್ನು ಆಚಾರು ತಟ್ಟನೆ ಟೊಂಕಕ್ಕೆ ಸೇರಿಸುವರು.)

ಶ್ಯಾಮಣ್ಣ :—ನನಗೂ ಏನ್ ಆಚಾರ್ರೇ, ಎಲ್ಲಾ ಅಷ್ಟಕ್ಕಷ್ಟs! ಏನೋ ನೀವಂದ್ರೀ, ಮತ್ತ ಹೆಂಡ್ತಿನೂ ವೈದಿಕರಾಕೀನs---ಆಕೀನೂ ಅಂದ್ಲು, ಹೂಂ ಅಂದೆ. (ಶ್ಯಾಮಣ್ಣ ನೆಟ್ಟಗೆ ಕುಳಿತು ಎಲೆಅಡಿಕೆ ಹಾಕಿಕೊಳ್ಳುವನು)

ಆಚಾರು :—ಅದ್ಯಾಕ ಶ್ಯಾಮಣ್ಣಾ ನಿನ್ನ ಗುಣಾನs ಧೊಡ್ಡದು. ನೀ ಸಣ್ಣಾವ ಇದ್ದಾಗಿನಿಂದ ನಾ ನೋಡೇನಿ! ಧರ್ಮಾಕರ್ಮಾ ಇದ್ರsನs ಮುಂದ ಸದ್ಗತಿ ಅದs. ನಿನ್ನಂಥಾವ ಇರದಿದ್ರ ಇಂದಿಗೆಂಟು ದಿವಸದ ಹಿಂದ ನಿಮ್ಮ ತಂದೀಯವರ ಶ್ರಾದ್ಧ ಆಗೋದs ಕಠೀಣಿತ್ತು. ನೀ ಅಂತ ಎದಿಗೊಟ್ಟು, ನಿಂತೀ ಅನ್ನು.

ಶ್ಯಾಮಣ್ಣ :—ಏನು ಬಿಟ್ಟರೂ ವರ್ಷಕ್ಕೊಮ್ಮೆ ಬರೋ ಹಿರೇರ ಶ್ರಾದ್ಧಾ ಬಿಡೋದು ಕಠಿಣಾ ಅನ್ನಿ. ಏನೋ ರೂಢೀ ಮಾತು. ಮುಖ್ಯಾ ನೀವಿದ್ದಿರಿ ಅಂತ ಛಲೋ ಆತು. ಆ ಸೂಳೀಮಗ ನಾರಾಯಣಾಚಾರಿ ಮುಂಗಡ ಮೂರು ರೂಪಾಯಿ ದಕ್ಷಿಣೆ ಇಸುಗೊಂಡು ಆಯತಾ ಹೊತ್ತಿಗೆ ತಪ್ಪಿಸಿದಾ. ನೀವಿಲ್ಲದಿದ್ದರ ಶ್ರಾದ್ಧಕ್ಕ ಬ್ರಾಹ್ಮಣ ಇಲ್ಲಧಾಂಗ ಆಗ್ತಿತ್ತು. ಈ ಆಚಾರ ಕುಲಾ ಅಂದರ ನೀಚರ—....

ಆಚಾರು :—ಏ, ಏ...ಏ, ಸಿಟ್ಟ್ಯಾಕ ಇಷ್ಟರ ದಶಿಂದ ಶ್ಯಾಮಣ್ಣಾ ! ಎಲ್ಲಾರೂ ನಿಮ್ಮ ಧಾರವಾಡದ ಆಚಾರ್ಯಂಗಳ ಇರತಾರೇನು? ನಮ್ಮ ಶೂರ್ಪಾಲೀ ಕಡೇ ಮಂದಿ ಭಾಳ ಶುದ್ಧ ಮಂದಿ. ಧರ್ಮಕರ್ಮಾ ನೇಮನಿತ್ಯಾ ಅಂದರ ಭಾಳ ಶ್ರದ್ಧಾ ಅವರಿಗೆ. ಅಂತಃ ನೋಡು, ಅವೊತ್ತ ನೀ ಮನ್ಯಾಗ ಶ್ರಾದ್ಧ ಅಂದ ಕೂಡಲೇ ನನ್ನ ಕಾಲು ನಿಂತವಃ.

ಶ್ಯಾಮಣ್ಣ :—ಹೌದ ಆಚಾರಃ; ನೀವು ಬಂದಿರಿ ಅಂತ ಶ್ರಾದ್ಧದ ಕೆಲಸ ಪಾರಾಯಿತು. ಅವೊತ್ತು ನಮಗ ಮನೀಗೆ ಬರಲಿಕ್ಕೇ ತಡಾ ಆಗಿತ್ತು. ಹೊಟ್ಟ್ಯಾಗ ಕರುಳು ಕಾ ಕಾ ಅಂತಿದ್ವು. ನೀವೇನು, ಚಟಕಿಮ್ಯಾಲ ಅರ್ಧಾತಾಸಿನ್ಯಾಗ ಎಲ್ಲಾ ಶ್ರಾದ್ಧಾ ಮುಗಿಸಿಬಿಟ್ರೀ, ಆ ರಂಡೇಗಂಡ ನಾರಾಯಣಾಚಾರೀ ಬರದೇ ಇದ್ದದ್ದಃ ಛಲೋ ಆತು. ಇಲ್ಲದಿದ್ದರ ಅವತ್ತ ೨ ಘಂಟೆ ಹೊಡಸತಿದ್ದ. ನಿಮ್ಮ ಕೈಮಾತ್ರ ಭಾಳ ಒತ್ತರ ನೋಡ್ರಿ. ಅಂತಃ ನಿಮಗ ಐದು ರೂಪಾಯಿ ದಕ್ಷಿಣೆ ಕೊಟ್ಟದ್ದೂ ಸಾರ್ಥಕಾತು !

ಆಚಾರು :—ಹಿರೇರ ಕೆಲಸಪಾ; ಹಿರೇರ ಕೆಲಸಾ! ಅವರೇನು ಸಾಮಾನ್ಯರಃ! ಏನೋ ಅಡಚಣಿ ವ್ಯಾಳ್ಯಾ ಅಂತ ಐದಃ ರೂಪಾಯ ಮ್ಯಾಲೆ ಸಾಗಿಸಿದ್ವಿ ಅನ್ನು. ನಿನಗೂ ನೋಡು ರಗಡ ಖರ್ಚು ಆದ್ಯ. ಶ್ರಾದ್ಧಾತು, ತುಳಸೀ ಮದಿವ್ಯಾತು; ಇವೊತ್ತ ಸತ್ಯನಾರಾಯಣಾತು. ಮುಂದಿನ ವಾರ, ಅದೇನೋ ಹರಿಕಿ, ಎಲ್ಲಮ್ಮನ ಗುಡ್ಡಕ್ಕ ಹೋಗಿ ಬರೋಣಾಂತ ಅಂತೀದಿ. ಮತ್ತ ನಿನ್ನ ಜುಲುಮಿಗೆ ನಾನೂ ಊರಿಗೆ ಹೋಗೋದುಬಿಟ್ಟ ಕೂತೇನಿ.

ಶ್ಯಾಮಣ್ಣ :—ಹ್ಯಾಂಗಾರ ಎಲ್ಲಮ್ಮನ ಗುಡ್ಡಕ್ಕ ಈಗs ಹೋಗಬೇಕೂಂತೀ ರೇನು? ಈ ಮನ್ಯಾಗಿನ ಹೆಂಗಸರಿಗೆ ಖರ್ಚುವೆಚ್ಚದ ಚಿಂತಿಯೇನು? ಏನೋ ಹಳೇ ಹರಿಕಿ ಅಂತ ಹರಿಕಿ. ಅದಕ್ಕ ನೀವೇನು ಹೇಳಿಬಿಟ್ಟರೋ, ಗಂಟs ಬಿದ್ದಾಳ ಈಕಿ. ತಾ ಇನ್ನು ಸಣ್ಣ ಹುಡುಗಿ ಇದ್ದಾಳ. ಈಗs ಯಾಕ ಬೇಕು ಯಾತ್ರಿ ತೀರ್ಥ! ಮುದುಕರಾದ್ಮ್ಯಾಲೆ ಅದsು ಆದs; ಹರಿಕಿ ಅಂದರೇನು ಮುದ್ದತ್ತೀ ದಾವೇನs!

ಆಚಾರು :—ಹಾಂಗ ಅಂದ್ರ ಹ್ಯಾಂಗ ಶ್ಯಾಮಣ್ಣಾ ದೇವರೂ ದಿಂಡರೂ ಅಂದ್ರ ಆ ಕೆಲಸಾ ಮೊದ್ಲ ಮಾಡಬೇಕು. ಅದರೊಳಗ ಮತ್ತ್ಯ ದೇವರs! ಎಲ್ಲಮ್ಮಾ, ಸಾಕ್ಷಾತ್ ಜಗದಂಬಾ! ಮತ್ತ ಈ ಹೆಂಗಸರ ಬಾಯಾ ಗಿಂದ ಬಂದ ಮಾತು ತಗದು ಹಾಕಲಿಕ್ಕೆ ಬರೋದುಲ್ಲ. ಮನೀ ಹೆಂಗಸರಂದರ ಅವರು ಸಾಕ್ಷಾತ್ ಜಗದುಂಬಾ ಸ್ವರೂಪ ಇದ್ಧಾಂಗನs. ಏನೋ ಯಮುನಕ್ಕ ಅಂದಳು--ತಾ ಹೇಳಿದರ ನೀ ಕೇಳಲಿಕ್ಕಿಲ್ಲಾ--ಅಂತ; "ನೀವೇ ಹೇಳ್ರಿ ಆಚಾರ; ಮತ್ತ ನೀವೂ ಹೊಂಟರ ಅವರೂ ಹೊರಡ ತಾರ" ಅಂತ. ಅದಕ್ಕ ನಾನೂ ತಯಾರಾಗೇನಿ: ಮತ್ತs, ತೀರ್ಥಾ ಯಾತ್ರಿ ಅಂದ್ರ ಸಂಗ್ತೀಲೆ ಬ್ರಾಂಬರು ಬೇಕs ಆಗ್ತಾರs. ನೋಡಿದಿಲ್ಲೊ ಮೊನ್ನೆ ಶ್ರಾದ್ಧದ ದಿವಸಾ,---ಈ ಧಾರವಾಡದಾಚಾರು ಎಂಥಾ ಲುಚ್ಚೇರು ಇದ್ದಾರಂತ. ಈಗ ಅನಾಯಸ ನಾ ಹ್ಯಾಂಗೂ ಇದ್ದೇನಿ. ಹೋಗಿ ಬರೋಣ! ಹಾ! ಜಗದಂಬಾ!! ಮಹಾ ಮಾಯಾ! (ಎಂದು ಭಕ್ತಿಪರವಶತೆಯನ್ನು ನಟಿಸುವನು)

ಶ್ಯಾಮಣ್ಣ :—ಆದರ ಈಗ ಈ ಶ್ಯಾರೀ ಮದ್ವೀ ಚಿಂತಿ ಒಂದು ಎದೀಮ್ಯಾಲ ಕೂತsದ ಆಚಾರ.

ಆಚಾರು :—ಮತ್ತ ಇವೊತ್ತ ಸತ್ಯನಾರಾಯಣಾ ಮುಂಗಡ ಮಾಡಿದ್ದು ಅದಕ್ಕs ಅಲ್ಲ! ನಿಮ್ಮ ತಂದೀಯವರು ಶಾರಕ್ಕನ ಹೆಸರ್ಲೆ ಒಂದು ಹೊಲಾ ಅಂತೂ ಇಟ್ಟಾರಲ್ಲಾ! ಮೊನ್ನೆ ಆ ಹೊಲದ್ವ ರೂಪಾಯಿ ಬಂದ್ವು ಅಂತಿದ್ದಿಲ್ಲ ನೀನು!! ನಾವೇನು ಈಗ ಮತ್ತ್ಯಾತಕ್ಕಾದರೂ ಖರ್ಚ ಮಾಡ್ತೇವೇ! ಖರ್ಚಿನ್ಯಾಗ ಖರ್ಚು. ಮತ್ತ ಈ ಹರಿಕಿ ಯೊಂದು ಮುಟ್ಟಿಸಿದರ ಎಲ್ಲಮ್ಮನ ಕರುಣಾದಿಂದ ಲಗೂನs ಶಾರಕ್ಕ

ಗೊಬ್ಬ ಛಲೋ ಗಂಡ ಯಾಕ ಸಿಗಬಾರದು! ಅದರದೇನ್ಚಿಂತಿ ಮಾಡ ಬ್ಯಾಡ ಶ್ಯಾಮಣಾ. ಲಗೂ ವಾರೊಪತ್ತಿನ್ಯಾಗ ಹೋಗಿ ಬರೋಣ. ಮುಂದ ನನಗೂ ಊರಿಗೆ ಹೋಗೋದು ಅದs! ನಮ್ಮ ಹೊಲದ ಲಾವಣೀನು ಈ ವರ್ಷ ತಡದು ನಿಂತsದ. ಎರಡ ಸಾವಿರ ರೂಪಾಯದ ವಸೂಲಿ ಏನಪಾ! ಇಷ್ಟಾಗಿ ನಾ ಮೊನ್ನೆ ಶಾರಕ್ಕನ ನಕ್ಷತ್ರಾ ನೋಡಿ ಹೇಳ್ಲಿಲ್ಲ. ಆಕೀಗೆ ಈಗ ಶನಿ ಮಹಾರ್ದಶಾ ತಪ್ಪಿ, ಗುರುಬಲಾ ಬಂದದ ಅಂತ. ಸಾಳಿಸ ಬನದ ಹುಣ್ಣಿವಿಗೆ ಶುಕ್ರನ ದೃಷ್ಟಿನೂ ತಿರಗತದ. ಗುರುಶುಕ್ರರ ಜೋಡಿ ಕೂಡಿದರ ಲಗ್ನ ಆಗಲಿಕ್ಕೇಬೇಕು. ನೀ ಯಾಕ ಚಿಂತೀ ಮಾಡ್ತಿ.

ಶ್ಯಾಮಣ್ಣ :—ಆಗಲ್ರಿಪಾ ಹಂಗಾರ ಮುಹೂರ್ತಾ ನೋಡ್ರಿ ಒಂದು ಛಲೋದು! ಎಲ್ಲಮ್ಮನ ಗುಡ್ಡಾ ಕಂಡs ಬರೋಣ. ಅಂದಾಂಗs ನೀವೂ ಇದ್ದೀರಿ ಅನಾಯಸಾ! ನಮಗsರ ಹೀಂಗs ಅಂತ ಹೇಳ ಪರ್ಯಾರಿದ್ದಾರ! ನಾವೇನು, ಸಾಲೀ ಹುಡುಗರಿಗೆ ಕೀಟ್ಸ, ಶೇಕಸ್ಪಿಯರ್, ಬ್ರೌನಿಂಗ, ಶಾಕುಂತಲಾ, ಉತ್ತರ ರಾಮಚರಿತ್ರ ಹೇಳಂದ್ರ ಒಂದ ಬಿಟ್ಟ ನಾಲ್ಕು ತಾಸು ಹೇಳೇವು. ಇಂಥಾ ಪುನೆತನದ ಕೆಲ್ಸಾ ಅಂದರ ನಮಗ ಏನೂ ಸೂಚಿಸೋದೇ ಇಲ್ಲ ನೋಡ್ರಿ. ಇಂಥಾದೇನಾದ್ರೂ ಇದ್ರ ನಮ್ಮ ಈ ಮನೀ ಯಜಮಾನ್ರಿದ್ದಾರಲ್ಲಾ ಪೇನಶನರ ಗೋವಿಂದರಾಯರು ಅವರ್ನ ಅಷ್ಟು ಕೇಳ್ತೀನಿ.

ಆಚಾರು :—ಗೋವಿಂದರಾಯರು ಭಾಳ ಯೋಗ್ಯ ಮನುಷ್ಯರು ಕಾಣಸ್ತಾರs! ಡಿಪ್ಯೂಟಿ ಇದ್ರಂತ, ಹೌದs. ಕೈತುಂಬ ಪೇನಶನ್ನೂ ಬರ್ತಿದ್ದೀತು. ನೀ ಸಾಲಿಗ್ಹೋದಾಗ ನನಗೇನ್ಕೆಲಸಾ! ಈ ನಾಲ್ಕು ದಿನಾ ಪ್ಯಾಲೆ ಅಟ್ಟದ ಮ್ಯಾಲೆ ಹೋಗಿ ಅವರ ಸಂಗ್ತೀಲೆ ಹರಟೀ ಹೊಡಿಯುವಾಗ ಅತ್ತಲಾಗಿನ್ವಿತ್ತಲಾಗಿನ್ನು ನಾಕು ಮಾತ ಹೇಳ್ತಿದ್ರು. ಅಲ್ಲಿ ನೋಡು, ಗೋವಿಂದರಾಯರು ಇಲ್ಲೇ ಬಂದರು. ಇನ್ನೇನು ನಾಸೀಪುಡಿಗೆ ಜೋಡಾತು. ನೀಯೇನು ಸಂಭಾವಿತ ಸಾಲೀಮಾಸ್ತರಾ; ಒಂತಂಬಾ ಕಿಲ್ಲಾ ಒಂದ್ಯಾಸೀಪುಡಿಯಿಲ್ಲಾ. ಬೀಯೇ ಬಿಟಿ ಆದೀ; ಒಂದ್ಸಿಗರೇಟು

ಸಹಿತ ಇಲ್ಲಪಾ! ನಿನಗ ಡಿಗ್ರಿ ಆದ್ರೂ ಹ್ಯಾಂಗ ಕೊಟ್ಟರೂ ಅಂತೀನಿ! (ಅಷ್ಟರಲ್ಲಿ ಪೇನಶನರ್ ಗೋವಿಂದರಾಯರು ಬರುವರು) ಬರ್‍ರಿ ಗೋವಿಂದ ರಾಯರs! ಬರ್‍ರಿ; ಹೀಂಗ ಮ್ಯಾಲ ಬರ್‍ರಿ.

ಶ್ಯಾಮಣ್ಣ :—(ಗೋವಿಂದರಾಯರು ಕೂಡುವಲ್ಲೇ ಒಂದು ತಕ್ಕೆ ಎತ್ತಿ ಇಡುತ್ತ) ಮ್ಯಾಲ ಕೂಡ್ರಿ, ಗೋವಿಂದರಾಯರs ಮ್ಯಾಲ ಕೂಡ್ರಿ.

ಗೋವಿಂದರಾಯರು :—(ಕೂಡುತ್ತ) ನಾವೇನು ಶ್ಯಾಮಣ್ಣಾ ಪೇನಶಸ್ ದಾರರು. ಇನ್ನೆಲ್ಲಿ ಕೂತರೇನು! ಮ್ಯಾಲೂ ಅಷ್ಟs, ಕೆಳಗೂ ಅಷ್ಟs! ಅಲ್ಲಾ; ಗಂಡಿದ್ದರ ಮುತ್ತೈದಿಗೆ ಹಣೀ ಛಂದಾ, ನೋಕರೀ ಇದ್ದರ ಅಮಲದಾರರಿಗೆ ಮಣೀ ಛಂದಾ! ಹೌದಲ್ರೀ ಆಚಾರs!

ಆಚಾರು :—ಛೇ. ಛೇ. ಛೇ. ಛೇ. ಡಿಪೂಟಿ ಕೆಲಸಂದ್ರೇನು ಸಾಮಾನ್ಯನs! ಏನಾದ್ರೇನು ಯೋಗ್ಯತಾಕ್ಕ ಕಿಮ್ಮತ್ತಿಲ್ಲೇನು. ಎಲೀ ಅಡಕೀ ಹಾಕ್ಕೊಳ್ರಿ. ಆದರೇನು ನಿಮ್ಮ ಹಲ್ಲಿಗೂ ಪೇನಶನ್ನ ಆಗೇದ. ಇತ್ತೊಗೊಳ್ರಿ ನಾ ಅಡಕಿ ಸಣ್ಣಾಗಿ ಕತ್ತರಿಸಿ ಕೊಡತೇನಿ. (ಶ್ಯಾಮಣ್ಣ ಎಲೆ ತಯಾರು ಮಾಡಲು, ಆಚಾರು ಅಡಕೆ ಕತ್ತರಿಸುವರು.)

ಗೋವಿಂದ :—(ಅವರು ಕೊಟ್ಟ ಎಲೆ ಅಡಕೆ ಆಗಿಯುತ್ತ) ನಾ ಡಿಪ್ಯೂಟಿ ಇದ್ದಾಗೇನ್ರಿ, ಕಲ್ಲಡಕಿ ಕಡಾ ಕಡಾ ಕಡೀತಿದ್ದೆ.

ಆಚಾರು :—ಆಗಿನ ಬಲಾ ಏನು? ಆಗಿನ ಅಮಲೇನು! ಇರ್‍ಲಿ ಮತ್ತೇನು ರಾಯರs, ಮಾರ್ಗಶಿರ್ಷ ದಶಮೀ ನಿಮ್ಮ ತಾಯಿಯವರ ಶ್ರಾದ್ಧಾ ಅಂತ್ರಿದೆಲ್ಲಾ! ಬ್ರಾಹ್ಮಣರ ವ್ಯವಸ್ಥಾ ಆಗೇದಿಲ್ಲೋ! ಮತ್ತs ಧೊಡ್ಡ ಪಂಕ್ತಿಭೋಜನಾನs ಆಗಲೀ! ನಾನೂ ಇದ್ದೇ ಇರತೇನಿ! ನಾಸೀಪುಡೀ ತಗೀರೆಲ್ಲಾ ಒಂದಿಷ್ಟು!

ಗೋವಿಂದ :—ಆಚಾರ, ನಿಮಗೊತ್ತಿಲ್ಲಾ; ನಾ ಡಿಪ್ಯೂಟಿ ಇದ್ದಾಗ ಇಪ್ಪತ್ಮಂದಿ ಬ್ರಾಹ್ಮಣರಿಲ್ಲದ ನಮ್ಮನೀ ಶ್ರಾದ್ಧ ಯಾವೂ ಆಗ್ಲಿಲ್ಲ. ಹೋದ ವರ್ಷಾನs ಸ್ವಲ್ಪ ತ್ರಾಸಾತು. ಈಗೇನೂ! ಪೆನಶನ್ನಾತು; ಹಾಂಗೂ ಹಿಂಗೂ ಬಗೀಹರಿಸಿದರಾತು. ಹಿಡ್ರಿ, ನಸ್ಯಾನs (ಡಬ್ಬಿ ತೆಗೆದು ಕೊಡಲು ಇಬ್ಬರೂ ನಶ್ಯ ಏರಿಸುವರು.)

ಆಚಾರು :—ಹಾಂಗ ಹ್ಯಾಂಗ ಆದೀತು ರಾಯರs; ಹಿರೇರ ಶ್ರಾದ್ಧಕ್ಕೂ ಏನ್ ಪೇನಶನ್ ಕೊಡ್ಲಿಕ್ಕೆ ಬಂದೀತೇನು! ಮಾಡೂದು ಮಾಡಿ ಆರ್ಭಾಟ ಮಾಡೂಣಂತ. ನಾ ಇರತೀನಲ್ಲಾ ಆದಕ್ಯಾಕ ಅನಮಾನಾ!- ಆದರs ಹೋದ ವರ್ಷಾ ಶ್ರಾಸಾಶೂ ಅಂದ್ರೆಲ್ಲಾ ಆದೇನೂ!

ಶ್ಯಾಮಣ್ಣ :—ಅದೆಲ್ಲಾ ಸೂಳೇ ಮಕ್ಕಳು ಈ ಊರ ಆಚಾರ ಗತ್ತು ಬಿಡ್ರಿ. ಇವರ ಹಿರೇ ಮಗಳು ಗಂಡ ಸತ್ತು ಮನ್ಯಾಗ ಇದ್ದಿದ್ದs ಗೋವಿಂದ ರಾಯರ ತಪ್ಪು. ಹುಟ್ಟಿಸಿದರು ಹರ್ಲೀ. ಮಠದಿಂದ ವರದೀ ಬಂದಿತ್ತು. ಅಂತ ಹೋದ ವರ್ಷದ ಶ್ರಾದ್ಧ ಹಂಗ್ಹಾಗ ಆದವು ರಾಯರ ಮನ್ಯಾಗ!

ಗೋವಿಂದ :—ಮೊನ್ನೆ ಚಾತುರ್ಮಾಸಿಗೆ ಇಲ್ಲೇ ಕೂತಿದ್ರಲ್ಲಾ ಸ್ವಾಮಿಗಳು; ಆಗ ಒಂದ್ಸಾವಿರ್ರೂಪಾಯಿ ಮುಂದಿಟ್ಟು ಅಡ್ಡಬಿದ್ದೆ. ಅಂತ ಮುದ್ರಾ ಧಾರಣಾಯಿತು. ಆ ಹಿರೇ ಮಗಳ ಮದ್ವಿ ಮಾಡಿದಾಗ ಒಂದ್ಸಾವಿರ ವರದಕ್ಷಿಣಿ ಕೊಟ್ಟಿದ್ದೆ. ಈಗ ಗಂಡ್ಸತ್ತದ್ದಕ್ಕ ಗುರುದಕ್ಷಿಣಿ ಮತ್ತೊಂದ್ಸಾವಿರಾ ಕೊಟ್ಟೆ. ಆ ಮ್ಯಾಲೆ ಈ ಊರ ಆಚಾರ್ಗೆಲ್ಲಾ ಸ್ವತಃ ಸ್ವಾಮಿಗೋಳs ಅಭಿಷೇಕಮಾಡಿ ಕುಲಕೋಟಿ ಉದ್ಧಾರಾ ಮಾಡಿದ್ರು. ಆಗಿಂತ್ಲೂ ಟ್ಟು ಮತ್ತ ಈ ಆಚಾರು ನಮ್ಮಲ್ಲಿಗೆ ಬರಲಿಕ್ಕೆ ಹತ್ಯಾರ. ಇಷ್ಟs, ಎರಡು ಕೊಡುವಲ್ಲಿ ನಾಕು ದಕ್ಷಿಣೆ ಕೊಡಬೇಕಾಗ್ತsದ.

ಆಚಾರು :—ಅಂತೂ ಆ ಲುಚ್ಚೇರ ಬಾಯಿ ಬಂದ್ಮಾಡಿದ್ರಿಲ್ಲೋ! ಸಾಕ್ಷಾತ್ ಸ್ವಾಮಿಗೋಳ ಕೃಪಾ ಆದ್ಮ್ಯಾಲೆ ಇವರೇನ್ಮಾಡ್ಯಾರು!

ಶ್ಯಾಮಣ್ಣ :—ಹಣದ ಚೀಲ ಅಂದ್ರ ಎಲ್ಲಾ ಸ್ವಾಮಿಗೋಳಿಗೆ ಕೀಲಿಕೈ; ಮುದ್ರಾಧಾರಣಾ ಆಚಾರ ಬಾಯಿಗೆ ಬೀಗದ ಕೈ.

ಆಚಾರು :—ಅದೆಲ್ಲಾ ವ್ಯವಹಾರ ಶ್ಯಾಮಣ್ಣ; ವ್ಯವಹಾರ ಬಿಟ್ಟು ಸಂಸಾರದs ಏನು! ಶಾಸ್ತ್ರದಾಗ ಹೇಳಿಲ್ಲs ಧರ್ಮಾ ಅರ್ಥ ಕಾಮಾ ಮೋಕ್ಷಾ, ಅಂತ. ನೋಡು ಧರ್ಮದ ಜೋಡಿಗೇ ಅರ್ಥಾ ಅಂತಿಟ್ಟಾರ! ಅದೆಲ್ಲಾ ಭಗವಂತನ ಮಹಿಮೆಶಾ ಶಾಮಣ್ಣಾ.

ಗೋವಿಂದ :—ನಾ ಡಿಪೂಟಿ ಇದ್ದಾಗ ನೋಡ್ರಿ ಆಚಾರ, ಎಲ್ಲಾರನೂ ಆಳ್ಳು ಹುರಿಧಾಂಗ ಹುರಿತಿದ್ದೆ. ಆ ಕಾಲಕ್ಕ ಎಂಥೆಂಥಾ ಮಾತಣದಕ್ಕಿ

ಹೋದವನು. ಈಗ ಈ ಸೊಟ್ಟ ಸೊಟ್ಟ ಮಾತಿನವಸಿಂದ ಉಳುಕಬೇಕಾ ಗೇದ. ಅದೇನೋ ಅಂತಾರಲ್ಲಾ ಗೂಳಿಬಿದ್ದರ ಆಳಿಗೊಂದು ಕಲ್ಲಂತ.

ಆಚಾರು :—ರಾಯರ, ಹಾಂಗಾದ್ರ ನೀವೀ ಸಾರೆ ನಿಮ್ಮ ತಾಯೀ ಶ್ರಾದ್ಧಾ ಒಂದು ಜಬರದಸ್ತು ಮಾಡಿಬಿಡ್ರಿ. ಈ ಊರ ಆಚಾರ್ರೆಲ್ಲ ಜಿಗಿದಾಡಿರ ಬೇಕ್ನೋಡ್ರಿ ದಕ್ಷಿಣಿ ಝಣಾ ಝಣಾ ಸಪ್ಪಳಕ್ಕ.

ಶ್ಯಾಮಣ್ಣ :—ಮೂರು ವರ್ಷದ ಹಿಂದ ರಾಯರ ಕಿರೇ ಮಗಳು ಸರೋಜಿ ನೀದು ಮದ್ವಿ ಆತು. ಏನು ಸಂಭ್ರಮದಿಂದ ಆತಂದ್ರಿ.

ಗೋವಿಂದ :—ಆ ವರ್ಷಾನs ನಾ ಡಿಪ್ಯುಟಿ ಚಾರ್ಜ ತಗೊಂಡಿದ್ದೆ. ಕಡೀದು ಒಂದs ಹುಡಿಗೀ; ಛಲೋ ಮನಿ ಸಿಕ್ಕಿತು ಜಿಟಗೇರಿ ದೇಶ್ಪಾಂಡೇರದು. ಅಂದ್ಮ್ಯಾಲೇನು ಕೇಳೂದು? ಮೂರೂವರಿ ಸಾವಿರ ರೋಖ ವರದಕ್ಷಿ ಣೀನs ಕೊಟ್ಟೆ. ವರೋಪಚಾರಾ ಆಹೇರು ಅಂದ್ರ ಐದ ಸಾವಿರಕ್ಕs ಬಂತು. ಸ್ವತಾಃ ಡಿಪಿಟೀ; ಕಲೇಕ್ಟರನ ಆಹೇರ ಸಹಿತ ಬಂದಿತ್ತು. ನಮ್ಹುಡಿಗಿ ಹೆಸರು ಇಂಗ್ಲಿಷಿನಾಗ ಬರಿಸಿ ಬೆಳ್ಳಿ ಕಪ್ಪು ಕಳಿಸಿದ್ದರು.

ಶ್ಯಾಮಣ್ಣ :—ನಮ್ಮ ಶಾರೀ ಗೋವಿಂದರಾಯರ ಸರೋಜಿನಿ ಒಂದs ವಾರಿಗಿ ಯವರು ಆಚಾರs. ಡಿಪುಟಿ ಸಾಹೆಬರು ಕೈಯಾಗ ತ್ರಾಣಿದ್ದವರು; ಬರಾಬ್ಬರಿ ಹೊತ್ತಿಗೆ ಮದ್ವಿ ಮಾಡಿದ್ರು ಮಗಳದು. ನಮ್ಮ ಶಾರೀ ಕೂತಾಳ್ನೋಡ್ರಿ ಬೆಳೆದು.

ಆಚಾರು :—ಅದೇನ್ ಶ್ಯಾಮಣ್ಣ, ಯಾರ ಕೈಯಾಗಿನ ಮಾತುs! ಬ್ರಹ್ಮ ದೇವರಿಗೆ ಅದರದೆಲ್ಲಾ ಚಿಂತಿ ಇಲ್ಲಂತೀಯೇನು! ಎಲ್ಲಾದರೂ ಆತ ವ್ಯವಸ್ಥಾ ಮಾಡಿರತಾನs.

ಗೋವಿಂದ :—ನಾ ಡಿಪುಟಿ ಇದ್ದಾಗ್ನೋಡ್ರಿ ಆಚಾರ; ಕೈಯಾಗ ಬೇಕಾ ಧಾಂಗ ತ್ರಾಣಿತ್ತು. ನಾಕ ಮಂದಿಯೊಳಗ ಅಮಲಿತ್ತು. ಆಗೆಷ್ಟು ಹೇಳಿದೆ ಶ್ಯಾಮಣ್ಣಾಗ ಸರೋಜಿನಿ ಸಂಗ್ತೀಲೇ ಶಾರಕ್ಕನದೂ ಮದವೀ ಆಗ್ಲೀ ಅಂತ. ಕನ್ನಡ ನಾಕು ಯತ್ತಾ ಆದ್ರ ಸಾಲ್ದೇನು! ಇಂಗ್ಲೀಷ ಕಲೀಲಿ ಅಂದ ಶ್ಯಾಮಣ್ಣ. ಈಗ ನೋಡ್ರಿ ಹುಡಿಗಿ ಥೊಡ್ಡಾಕಿ ಆದಳು; ತಾನs ನಾಚಿಗೊಂಡು ಸಾಲೀಬಿಟ್ಟು ಮನ್ಯಾಗ ಕೂತಾಳ. ಈಗ ಸಿಂತಕಾಲ ಮ್ಯಾಲಿ ವರಾ ಸಿಗು ಅಂದ್ರ ಹ್ಯಾಂಗ ಸಿಕ್ಯಾನು!

ಬೆಳೆದ ಹುಡಿಗಿ, ಇಲ್ಲದ ಅಪಕೀರ್ತಿಗೆ ಮೂಲಾ! ನೋಡ್ರೀ, ನಾ ಎಷ್ಟಂದರೂ ಡಿಪ್ಯುಟೀ ಇದ್ದೇ; ಸ್ವಾಮಿಗೋಳ ತನಕ ಹೋದ್ರೂ ದಕ್ಕಿಸಿಗೊಂಡೆ ಅನ್ನಿ. ಪಾಪ ಶ್ಯಾಮಣ್ಣಗ ಅಷ್ಟೆಲ್ಲಾ ತ್ರಾಣ ಹ್ಯಾಂಗ್ಬಂದೀತು?

ಆಚಾರು :—ಬರಾಬ್ಬರೀ ಹೇಳಿದ್ರಿ ರಾಯರs. ಇವು ಮೊದಲಿನಂಥಾ ದಿವ್ಸಾ ಕಾಲಾ ಅಲ್ಲಾ! ಅದರೊಳಗ ಈ ಊರ ಆಚಾರು ಅಂದ್ರ ಎಂಥವರೂ ಅಂತ ನಿಮಗ ಅನುಭವಕ್ಕs ಬಂದsದ. ವ್ಯಾಲ ಉತ್ತರಾದಿ ಮಠದ ಉರುಳುಗಲ್ಲು ಎತ್ತಲಾಗ ತಿರುಗೀತು ಅಂತ ಹೇಳ್ಲಿಕ್ಕೆ ಬರೂದುಲ್ಲಾ.

ಗೋವಿಂದ :—ಅದಕ್ಕsರೀ ಆಚಾರs. ಹ್ಯಾಂಗೂ ನೀವೂ ಇದ್ದೀರಿ. ಆ ಹುಡಿಗೀ ಸೇರೀ ಅಷ್ಟು ಬಿಡಸೋ ಖಟಪಿಟಿ ಮಾಡಿ ಪುಣ್ಯಾ ಕಟ್ಟಿ ಕೊಳ್ಳಿರಿ. ನಾ ಡಿಪುಟೀ ಇದ್ದಿದ್ದರ ಶ್ಯಾಮಣ್ಣಗ ಇಷ್ಟು ತ್ರಾಸಾ ಗ್ತಿದ್ದಿಲ್ಲಾ!

ಆಚಾರು :—ನಾನೂ ಅದs ಖಟಪಿಟಿಯೊಳಗಿದ್ದೇನಿ ರಾಯರs. ನಾ ಪ್ರಯತ್ನಾ ಮಾಡಿದರ ಯಾವದಕ್ಕೂ ತಡಾಯಿಲ್ಲಾ, ಅನ್ನಿ. ಇನ್ನೇನು, ರೂಪದ ಬಲಾನೂ ಹೇಳಿಕೊಳ್ಳೊ ಹಾಂಗಿಲ್ಲ; ವರದಕ್ಷಿಣೇ ಬಲಾನೂ ಅಷ್ಟಕಷ್ಟ. ವ್ಯಾಲೆ ಜೇಷ್ಠಾ ನಕ್ಷತ್ರ. ಇಷ್ಟೆಲ್ಲಾದರ ನಡುವ ಹೊಂದಸೋದು ಕಠಿಣ. ಇನ್ನೇನು ಹಿರೇರು ಹುಡುಗೀ ಹೆಸರ್ಲೆ ಒಂದು ಹೊಲಾ ಮಾಡಿಟ್ಟಾರs. ಅದs ಕುರುಡು ಗಂಣಾಗ ಮೆಳ್ಳಗಂಣು.

ಶ್ಯಾಮಣ್ಣ :—ಅದ್ಯಾಕ ಆಚಾರs! ನನ್ನ ಶಕ್ತಿ ಇದ್ದಷ್ಟು ಸ್ವಲ್ಪ ವರ ದಕ್ಷಿಣೇನೂ ಕೊಟ್ಟೇನಂತ.

ಗೋವಿಂದ :—ನಾ ಡಿಪ್ಯೂಟಿ ಆದ ವರ್ಷಾನs ಶ್ಯಾಮಣ್ಣನ ಹೊಲದ ತಂಟೆಯೆಲ್ಲಾ ನಾನs ಅವನ್ಹಾಂಗ ಮಾಡಿಸಿಕೊಟ್ಟೆ; ಅಂತ ಈ ಮೂರು ನಾಲ್ಕು ವರ್ಷ ಹುಡಿಗೀ ಹೆಸರ್ಲೆ ನಾಕು ದುಡ್ಡು ಇಟ್ಟೀರಪಾ ಅಂತ ಹೇಳಕೋತ ಬಂದೀನಿ!

ಆಚಾರು :—ಶ್ಯಾಮಣ್ಣೋನರೀ ಹಿಡಿತದ ಹುಡುಗಾ! ಅದೆಲ್ಲಾ ಹ್ಯಾಂಗಾ ದರೂ ಆದೀತು. ಆದ್ರ ಈ ಹುಡಿಗ್ಗೆ ಹೊಂದೋ ವರಾ ಹುಡುಕಿ

ತೆಗೆಯೋದು ಕಠಿಣ. ಈಗ ನನ್ನ ಗೊತ್ತಿನಲ್ಲೇ ಎಂಟ್ಹತ್ತು ವರಾ ಅವ. ಆವರ ಗುಣಾ ಒಂದೆಲ್ಲಾ ಕೂಡಬೇಕಲ್ಲಾ! ಪಂಚಾಂಗೆಲ್ಲಿ ಅದ ಶ್ಯಾಮಣ್ಣಾ ನೋಡೋಣ ತಗೋ!

ಶ್ಯಾಮಣ್ಣ :— ನಮ್ಮನ್ಯಾಗೆಲ್ಲಿ ಅದ ಪಂಚಾಂಗ! ಗೋವಿಂದರಾಯರ ಮನ್ಯಾಗಿಂದs ಅವತ್ತ ತಂದಿದ್ದೆ. ಈಗ ತರತೀನಿ ಹೋಗಿ. (ಹೊರಡಲು ಏಳುವನು.)

ಗೋವಿಂದ :— (ಅರ್ಧ ಏಳುತ್ತ) ನಮ್ಮನೀಗೆ ಹೋಗೋಣ ನಡ್ರಿ ಆಚಾರ‍್ರ, ಪಂಚಾಂಗಾನೂ ಸಿಗ್ತದ; ಚಹಾನೂ ಸಿಗ್ತದ. ಡಿಪುಟಿ ಅವರ ಮನಿ ಚಹಾ ಅಪ್ರತಿಮಾ ಅಂತಿದ್ರೆಲ್ಲಾ ನಮ್ಮ ಮನೀ ಅವರ ಮುಂದ! ನಡ್ರಿ ಮತ್ತs!

ಆಚಾರು :— ಓ ಹೋ ಹೋ! ಅಪ್ರತಿಮಾ ಅಂದರೇನು ಕೇಳೂದು ಅದsನs! ನಡೀರಿ. ಅಲ್ಲೇ ಕೂತs ಅಷ್ಟ ಪಂಚಾಂಗದ ಲೆಕ್ಕಾನೂ ಹಾಕಿದ್ರಾತು; (ಇಬ್ಬರು ಏಳಲು) ಅಲ್ಲೋ ಶ್ಯಾಮಣ್ಣಾ ಶಾರಕ್ಕಗ ಇಮ್ಮನೆ ವರಾ ಆದ್ರ ನಡಿದೀತೋ ಇಲ್ಲೋ? ಹುಡುಗಿ ಬೆಳದs ನಿಂತಾಳಂದವ್ಯಾಲ ಏನಡ್ಡೀ?

ಶ್ಯಾಮಣ್ಣ :— ಇಮ್ಮನೆ ವರಾನs--(ಅನುಮಾನಿಸಿ)--ಆದ್ರ---ಅಲ್ಲಾ---ಏನಂದ್ರ; ಇಲ್ಲ ಆಚಾರ, ಒಟ್ಟ ಒಮ್ಮೆ ಮದಿವಿ ಹ್ಯಾಂಗಾದರೂ ಆದ್ರ ಸಾಕಾಗೇದ. ಆದ್ರೂ ಛಲೋ ಮನೀ ಇರಬೇಕು, ಆತು. ಶಕ್ಯ ಆದಷ್ಟು ಒಮ್ಮನೇ ವರಾ ಆದ್ರ ಛಲೋ.

ಆಚಾರು :— ಆತು ನಡಿ; ಪಂಚಾಂಗ ಹೇಳಿಧಾಂಗ ಮಾಡೋಣ!

ಗೋವಿಂದ :— ಸೈ ಸೈ.-----ನಡೀರಿ. (ಎಲ್ಲರೂ ಹೊರಡುವರು)

(ತೆರೆ ಇಳಿಯುವದು)

೩ನೇ ನೋಟ

(ಮುಂದೆ ಹದಿನೈದು ದಿನಗಳ ನಂತರ, ಲಕ್ಷ್ಮೀನಾರಾಯಣ ದೇವರ ಗುಡಿಯ ಬೀದಿಯಲ್ಲಿ, ಗುಡಿಯಿಂದ ಹೊರಬಿದ್ದ ಪುರುಷೋತ್ತಮಾಚಾರ್ಯರು, ಅಂಚಿನ ಧೋತರ ಉಟ್ಟು, ಹೊತ್ತ ಜರದ ಶಲ್ಲೆಯಲ್ಲಿ, ಅಕ್ಕಿ, ತೆಂಗಿನಕಾಯಿ, ಹಣ್ಣುಗಳನ್ನು ಕಟ್ಟಿಕೊಂಡು ಒಳ್ಳೇ ಆಢ್ಯತೆಯಿಂದ ಹೊರಟಿರುವರು. ಬಲದಂಗೈಯಲ್ಲಿಯ ಚಿಲ್ಲರೆ ರೊಕ್ಕಗಳನ್ನು ಎಣಿಸುತ್ತಿರುವರು)

ಆಚಾರು :— ಎರಡೂ, ಒಂದೆಂಟ ಆಣೆ, ನಾಕು, ನಾಕು, ಮೂರು; ಒಂದ ಹನ್ನೆರಡಾಣೆ, ಒಂದೆಂಟಾಣೆ, ಇನ್ನೊಂದೆಂಟಾಣೆ, ಮೂರು ಪಾವಲಿ. ಒಂದ ರೂಪಾಯಿ ಅಂತೂ ಆರೂವರೀ ರೂಪಾಯಿ; ಏನ ಹರಕತ್ತಿಲ್ಲಣಾ; (ರೊಕ್ಕ ಟೊಂಕಕ್ಕೆ ಸೇರಿಸುತ್ತ) ದಶಮಸ್ಕಂಧ ಇವೊತ್ತ ಮುಗೀತೂ; ಆರೂವರೀ ರೋಖ, ಎರಡು ಪಡಿ ಅಕ್ಕಿ, ಎಂಟು ತೆಂಗಿನ ಕಾಯಿ ಮ್ಯಾಲೆ ಅಡಕೀ ಉತ್ತತ್ತೀ ಹಣ್ಣುಹಂಪಲಾ ಅಂದರ ನಾವು ಪುರಾಣದ ಧಂದೇದೊಳಗ ಪೂರಾ ನುರತವರು ಅಂತ ಸರ್ಟಿಫಿಕೇಟು ಕೊಟ್ಟ ಹಂಗ ಸೈ. ಮ್ಯಾಲ ಪುರಾಣಿಕ ಪುರುಷೋತ್ತಮಾಚಾರೂ ಅಂತ ಬಿರುದು ಬ್ಯಾರೇ ಬಂತು. ಏನ್ಮಡಿವ್ಯಾತು? ನಮ್ಮ ಬೀಗಾ ಶ್ಯಾಮಣ್ಣ ಬೀಯೇಬೀಟಿ ಆಗಿ ಇಷ್ಟು ಕೂಡಾ ಗಳಿಸೂದುಲ್ಲಾ. ಅಂತೂ ನೋಡ್ರಿ ಧಾರವಾಡಾಂದ್ರ ಪುಣ್ಯಾದೂರು ಅಂಬೂದೇನ್ಸುಳ್ಳಲ್ಲಾ. ಅಂತೇ ನಮ್ಮ ಬೆಳಗಾವೀ ವಿಜಾಪೂರ ಜಿಲ್ಲಾದ ಮಂದಿ ಅಷ್ಟೇ ಯಾಕ ಉಡುಪೀ ಮಂಗಳೂರಿನ ಮಂದೀ ಸೈತು ಈ ಊರಾಗ ಹೊಟ್ಟೀ ಹೊರೀಲಿಕ್ಕೆ ಬಂದು ತುಂಬ್ಯಾರ! ನಮ್ಮ ಆಚಾರ ಜನರಿಗಂತೂ ಧಾರವಾಡೊಂದು ಅಗ್ರಹಾರನ! ಇಂಥಾ ಮಹಾರಾಯಾನಂಥಾ ಊರಿನಾಗ ನನ್ನಂಥ ಸದ್ಬ್ರಾಹ್ಮಣಗ ಇಷ್ಟು ಮಾನಮರ್ಯಾದಿ ಆಗೋದೇನು ಹೆಚ್ಚಲ್ಲ. ಇಲ್ಲೀ ಅಮ್ಮಗೋಳು ಅಂತೂ ಭಾಳ ಭಕ್ತಿವಂತರು! ಮುಖ್ಯ ಈ ಊರಿನ ಧರ್ಮದೂರು! ಮಧ್ವಸಿದ್ಧಾಂತ ಸಭಾಯೇನು? ಸಂಸ್ಕೃತ ಪಾಠಶಾಲಾ ಏನು? ಗುಡಿಗುಂಡಾರಂತೂ ಹೇಳಲಾಸಲ್ಲ. ಮುದಿ ಹಣಮಪ್ಪ, ರಾಯರ ಹಣಮಪ್ಪ, ನುರಡೀ

ಹಣಮಪ್ಪ, ಕೆರೀ ಹಣಮಪ್ಪ, ಸಪ್ತಾಪುರ ಹಣಮಪ್ಪ, ನುಗ್ಗೀಕೆರೀ ಹಣಮಪ್ಪ-------ಆ ಹಾ ಹಾ! ಸಾಕ್ಷಾತ್ ಪ್ರಾಣದೇವರ ಸನ್ನಿಧಾನಾ ಕೇಳಬೂದೇನು. ಮ್ಯಾಲ ವಿಠ್ಠಲ ದೇವರು, ವೆಂಕಟೇಶ ದೇವರು, ನರಸಿಂಹ ದೇವರು, ಒಂದೂ ಎರಡs ಎಲ್ಲಾರೂ ಇದ್ದಾರs. ಮತ್ತ ಈಗ ಹೊಸದಾಗಿ ಲಕ್ಷ್ಮೀನಾರಾಯಣ ದೇವರ ಗುಡಿನೂ ಒಂದ ಕಟ್ಟಿ ಸ್ಯಾರ! ಅಂತs ನಮ್ಮ ಪುರಾಣದ ದುಧೇಕ್ಕ ಹಾದಿ ಆತು. ಈಗ ನಾ ಹೊತ್ತಿರೂದೆಲ್ಲಾ ಆ ಲಕ್ಷ್ಮೀ ಸ್ವರೂಪನs! ಮತ್ತ ಮನ್ಯಾಗ ಒಬ್ಬ ಲಕ್ಷ್ಮೀದೇವಿ ಬಂದಮ್ಯಾಲ, ಆ ಲಕ್ಷ್ಮೀ ಕೃಪಾ ಇಲ್ಲದಿದ್ದರ ಹ್ಯಾಂಗ! ಹೊಸಾ ಸಂಸಾರಾ ಹೂಡೂದು ಅಂದ್ರೇನು ಸಣ ಮಾತs! ಧಾರವಾಡದಂಥ ಮಹಾರಾಯ ಊರು, ಪೆನಶನ್ನದಾರರ ಪೀಠಸ್ಥಾನಾ! ಅಂತs ನನಗೆಲ್ಲಾ ಅನುಕೂಲಾತು! ಮ್ಯಾಲ ಪಲ್ಯಾ ಕಾಯಿ ಕಾಳುಕಡಿ ಎಲ್ಲಾಕೂ ಸುಖದೂರು; ಇನ್ನೇನು ನೀರಿನ್ದs ಒಂದು ತ್ರಾಸು ನಿಜಾ! ಆದರ ಅದೂ ಒಂದು ರೀತಿಯಿಂದ ಛಲೋನs! ಮನೀ ಹೆಣ್ಮಕ್ಕಳು ಸ್ವಲ್ಪ ಹಳೇರೂಢೀ ಸಂಪ್ರದಾಯಾ ಕಾಯ್ಕೊಂಡ ಹಾಂಗಾತು! ಒಂದ ನಾಲ್ಕು ಕೊಡಾ ನೀರು ಹೊತ್ತರ ವೈಗೂ ಹಿತಾ! ಮತ್ತ ನಮ್ಮ ಶೂರ್ಪಾಲಿಯೊಳಗರ ಏನು, ಸೂಳೇ ಮಗನ್ದು! ನದೀ ಊರಾದ್ರೂ ನೀರು ಹೊರೂ ಹಣೇ ಬರಾಹೇನು ತಪ್ಪಿದ್ದಲ್ಲ. ಅಂಥಾ ಊರಿಗೆ ಧಾರವಾಡದಾಗ ನೀರು ಹೊತ್ತ ತಯಾರಾದ ಹೆಣ್ಣs ಯೋಗ್ಯಾ! ಆದ್ರೇನು? ನಾ ಆ ಸುಡುಗಾಡ ಶೂರ್ಪಾಲಿಗೆ ಹೋಗೋದಾದ್ರು ಯಾತಕ್ಕಿನ್ನ! ಹುಡುಗ ರನ್ನಂತೂ ಅವರ ಮಾವನ ಮನೀ ಅಜ್ಜನ ಮನೀ ಅಂತ ಕಳಿಸಿ ಬಿಟ್ಟೇನಿ. ಈಗಿಲ್ಲೆ ಹೊಸಾ ಸುದ್ದಿ ಮಾಡಿಕೊಂಡೇನಿ! ಎರಡನೇ ಸಂಬಂಧ; ಪಾಡುಗಾಯಿಯಂಥಾ ಹೆಂಡತಿ; ಮ್ಯಾಲೆ, ಇಕಾ ಇಂಥಾ ಗಳಿಕಿ. ಅಂದಮ್ಯಾಲೆ ಏನು ಹರಕತ್ತ ಅದ? ಇರಲಿಕ್ಕೆ ಶ್ಯಾಮಣ್ಣನ ಮನೀ ಅಂತೂ ಅದsನs ಅದ! ಪೆನಶನದಾರ ಗೋವಿಂದರಾಯರ ಪುಣ್ಯಾದಿಂದ ಮತ್ತ ಹತ್ತಿಪ್ಪತ್ತು ಪೆನಶನದಾರರ ಗುರ್ತಾಗಿ, ಕಾಲಾ ಸುಕ್ರಮೇಣ ನಮ್ಮ ಪುರಾಣ ನೆಟ್ಟಗ ನಡದ್ರ, ಇಲ್ಲೇ ಒಂದು ಬಂಗ್ಲೆ ಕಟ್ಟಿಸಿದರಾತು. ನಡಿಯುನ್ಹಾ---ಆಚಾರೀ— ನಿನ್ನೂ ದೈವ ತಗದsದ--

ಮತ್ತ ಹುಚಿಕೇನು ಅಂಥಿಂಥಾವs!-------(ಎದುರಿಗೆ ನೋಡಿ) ಎಲಾ ಗೋವಿಂದರಾಯರ ಹೆಸರು ಬಾಯಾಗ ಬರೂದ್ರಾಗs, ಚಿನಿವಾರಗಟ್ಟೀ ಕಡಿಂದ ಬರ್ಲಿಕ್ಕೆ ಹತ್ತ್ಯಾರಲ್ಲಾ! ಚಿನಿವಾರ ಗಟ್ಟಿಗೆ ಬಂದಿದ್ರೂ ಅಂದ ಮ್ಯಾಲೆ ಏನೊ ಶುಭಲಕ್ಷಣ ಅದs! ಮೂಳಮುಡ್ಡಿಗೇ ಹೊರಟಾರ ಕಾಣಸ್ತsದ. ಸಾವೂ ಅವರ ಜೋಡೀ ಹಿಡಿಯೂಣು, ಅಂದರ ಟಾಂಗಾಗಿಂಗಾ ಮಾಡಿದ್ರ, ಈ ಒಜ್ಜಾ ಹೊತಕೊಂಡ ನನಗೂ ಅನು ಕೂಲಾಗ್ತದs!---ಓಹೋ ಹೋ---(ಗೋವಿಂದರಾಯರು ಕೋಲೂರುತ್ತ ಬರುವರು) ನಮಸ್ಕಾರಾ ರಾಯರs; ಮತ್ತೇನು ಚಿನಿವಾರ ಗಟ್ಟಿಗೆ ಬಂದಿದ್ರೀ; ಮನಿಗೇ ಹೊಂಟೀರಿ ಹೌದಲ್ಲೊ! ನಡ್ರೀ ಇಬ್ಬರೂ ಕೂಡೇ ಹೋಗೋಣ.

ಗೋವಿಂದ:—ಮತ್ತೇನು ಆಚಾರs, ಪುರಾಣಾ ತೀರಿಸಿಕೊಂಡು ಬಂದಿರಿ ಅಂತ ಕಾಣಸ್ತsದ. ಗಂಟು ಥೊಡ್ಡ ದs ಹೊತ್ತೀರಲ್ಲಾ.

ಆಚಾರು:—ಹೌದು ರಾಯರs; ಎಲ್ಲಾ ನಿಮ್ಮ ಕೃಪಾನs. ಹೊಸ ಸಂಸಾರಾ ಹೂಡೇದ ಅಂದಮ್ಯಾಲೆ ಬೇಕಲ್ಲಾ.

ಗೋವಿಂದ:—ಆಚಾರs ನೀವೂ ಒಳ್ಳೇ ಕೈನುರಿತವರs ಇದ್ದೀರಿ! ಎಂಟ ದಿವ್ಸ ಆಗಿಲ್ಲ, ಇಷ್ಟು ಗಂಟಿಂದ್ರೇನೂ ಕಡಿಮಿಯೆ? ಈ ಊರಾಗ ನಿಮ್ಹಂಗ ಪ್ರಸ್ಥಾ ಬೆಳಿಸಿಕೊಂಡ ಆಚಾರು ಕಡಿಮಿ. ಅದರೊಳಗ ಈ ಊರದೊಂದು ಗುಣಾ ನೋಡ್ರಿ, ಇದ್ದೂರ ಜನರಿಗಿಂತಾ ಹೊರ ಗಿಂದ ಬಂದ ಜನಕ್ಕs ನ ಮಾನ ಹೆಚ್ಚು.

ಆಚಾರು:—ಬರೇ ಹಾಂಗ ಅಂದ್ರ ಹ್ಯಾಂಗಾದೀತು, ರಾಯರs. ಆಚಾರ ಜನರಿಗೆ ಮುಖ್ಯ 'ವಾಣಿ' ಇರಬೇಕು "ವಾಣಿ"; ಬಾಯ್ಕಸುನs ಕಸುವು ಭ್ರಾಂಬರಿಗೆ. ಇಲ್ಲದಿದ್ದರ ಒಂದ್ಹಿಡೀ ಭ್ರಾಂಬರು ಈ ಅಭ್ರಾ ಹ್ಮಣಮಯಾ ಆದ ಜಗತ್ನ್ಯಾಗ ಹ್ಯಾಂಗ ಬದುಕತಿದ್ದರು ಹೇಳ್ರಿ!

ಗೋವಿಂದ:—ಸರಿ ಸರಿ ಬಿಡ್ರಿ. ನೀವೂ ಎಲ್ಲಾ ಬಾಯ್ಮಾತಿನ ಮ್ಯಾಲೆ ನಡಿಸೀರಿ ಅಂಬೂದು ನಮಗ ತಿಳದsದ. ಹೋದ ತಿಂಗಳಾ ತುಳಸೀ ಮದ್ವಿ ಆದ ಕೂಡಲೇ ಹೊಲದ ವಸೂಲಿ ತಡದ ನಿಂತದ, ಊರಿಗೆ ಹೋಗಬೇಕು ಅಂತಿದ್ರಿ. ಈಗ ಆ ವಸೂಲಿಯೆಲ್ಲಾ ಈ ಊರಾಗ ನಡದ ಹಾಂಗ ಕಾಣಸ್ತsದ, ಅಲ್ಲಾ.

ಆಚಾರು :—ಹೌದು ಹೋಗಬೇಕಾಗಿತ್ತನ್ರಿ. ಆದರ ಅಷ್ಟರಾಗ ಶ್ಯಾಮಣ್ಣ ಎಲ್ಲಮ್ಮನ ಗುಡ್ಡದ ಮಾತು ತಗದ.

ಗೋವಿಂದ :—ಆದರ ಎಲ್ಲಮ್ಮನ ಯಾತ್ರೀಕಿಂತ ಮೊದ್ಲ *ನುಗ್ಗೀಕೇರಿ ಯಾತ್ರೀನ ಹೊಡಿಸಿಬಿಟ್ಟರೆಲ್ಲಾ.

ಆಚಾರು :—ಹೌದ್ನೋಡ್ರಿ ರಾಯರಽ, ನಿಮ್ಮಂಥವರ ಕೃಪಾ ಇದ್ದಮ್ಯಾಲ ಭಗವಂತ ಯಾತಕ್ಕೂ ಕಡಿಮಿ ಮಾಡ್ತಾನೆಲ್ಲ! ಎಲ್ಲಮ್ಮನ ಗುಡ್ಡಕ್ಕ ಹೋಗೋದಾದ್ರ ದಂಪತ್ತು ಹೊಗೋವಽ ನಮ್ಮ ಮನೀ ನಡತಿ. ಮತ್ತ ಶ್ಯಾಮಣ್ಣನೂ ಬೆಳೆದ ತಂಗಿನ್ನ ಮನ್ಯಾಗ ಇಟ್ಕೊಂಡು ಗೋಳಾಡ್ತಿದ್ದ. ಅದಕ್ಕ ಆತನ ಚಿಂತೀ ತಪ್ಪಿಸಿಧಾಂಗ ಆತು; ಒಂದು ಕನ್ಯಾಸೆರೀ ಬಿಡ್ಸಿದ ಪುಣ್ಯಾ ಕಟ್ಟಿಕೊಂಡ್ಹಾಂಗ ಆತು----ಅಂತ ನೀವೆಲ್ಲ ಜುಲುಮಿ ಮಾಡಿದ್ರಿಂತ ಒಪ್ಪಿಗೊಂಡೆ.

ಗೋವಿಂದ :—ಆದ್ರ ನನ್ನ ಮನಸಿನ್ಯಾಗ ಶಾರಕ್ಕನ್ನ ಒಮ್ಮನೇ ವರಕ್ಕಽ ಕೊಡಬೇಕಂತಿತ್ತು.

ಆಚಾರು :—ಅದೇನ್ರಾಯರ, ಈಗಿನ ಬಿಯೇ ಎಮ್ಮೇ ಆಗಿ ನೌಕ್ರೀ ಸಿಗದೇ ಕೂತ ಒಮ್ಮನೇ ವರಾ ಕೆಲವು ನನಕಿಂತಾನೂ ವಯಸ್ಸು ಆದದ್ವಽ ಇರತಾವಽ. ಅದಕ್ಕಿಂತಾ ಚಿಕ್ಕ ವಯಸ್ಸೂ, ಮ್ಯಾಲ ಅನುಭವಸ್ತ ನಾನು; ಮತ್ತ ಅದು ಬೆಳೆದ ಹುಡ್ಗಿ. ಅನಾಯಾಸ ಎಲ್ಲಾ ಯೋಗಾಯೋಗ ಕೂಡಿತು. ಎಂಟ್ಹತ್ತು ದಿನಾ ನಾ ಅದಽ ಮನ್ಯಾಗಽ ಇದ್ದಿದ್ದರಿಂದ ನನಗ ಹುಡಿಗೀನೂ ಮನಸ್ಸಿಗೆ ಬಂದಿತ್ತೊ; ನಾನೂ ಆಕೀ ಮನಸ್ಸಿಗೆ ಬಂದಿದ್ದೆ. ಬ್ರಹ್ಮವಿವಾಹಕ್ಕ ಇದಕ್ಕೂ ಹೆಚ್ಚೇನು ಬೇಕು ಹೇಳ್ರಿ. (ಗಂಭೀರ ಭಾವದಿಂದ) ಇದಲ್ಲದ ಶ್ಯಾಮಣ್ಣನ ಭಾರ ಒಂದು ಇಳೀತು. ಮ್ಯಾಲಾಗಿ ಎಲ್ಲಾ ಭಗವಂತನ ಚಿತ್ತಾ!

ಗೋವಿಂದ :—ಅದು ಸರಿ ಬಿಡ್ರಿ; ಹುಡಿಗೇರು ಯಾರ್‍ಯಾರಿಗೆ ನೂತು ಹುಟ್ಟಿರ್‍ತಾರಂತ ಹೇಳ್ಲಿಕ್ಕೆ ಬರ್‍ತಽದೇನು! ಆತಿನ್ನ, ಲಕ್ಷ್ಮೀನಾರಾಯಣ

---

* ನುಗ್ಗಿಕೇರಿ ಧಾರವಾಡದಿಂದ ನಾಲ್ಕೈದು ಮೈಲು ದೂರದಲ್ಲಿದ್ದ ಹನುಮಂತನ ದೇವಸ್ಥಾನ. ಯಾವದೇ ಕಾರಣದಿಂದ ಗಡಿಬಿಡಿಯಲ್ಲಿ ಮದುವೆಗಳನ್ನು ಸಂಕ್ಷಿಪ್ತವಾಗಿ ಮುಗಿಸುವದಿದ್ದಲ್ಲಿ ಜನ ನುಗ್ಗಿಕೇರಿಯ ಆಶ್ರಯ ತಕ್ಕೊಳ್ಳುವದುಂಟು.

ದೇವರ ಗುಡೀ ಅಂತೂ ಹಿಡಿದ್ರಿ ಪುರಾಣಕ್ಕ. ಮಾಳಮಡ್ಡಿ ದೂರಾ ಗ್ತದ ನಿಮಗ, ಇಲ್ಲೇ ಮಂಗಳವಾರ ಪ್ಯಾಟ್ಯಾಗ ಮನೀ ಮಾಡ್ರೆಲ್ಲಾ! ನಿಮ್ಮ್ಯಾತ್ಸನ್ನನೂ ಛಲೋ ಅದಲ್ಲಾ!

ಆಚಾರು :— ನಾನೂ ಅದs ಅಂತಿದ್ದೆ. ಆದ್ರ ಶಾಮಣ್ಣಾ ಒಂದು ಬಿಡಬೇಕಲ್ಲಾ. ಆತ ನೌಕರೀಯಾವಾ! ಆತನ್ಯಾನ್ಯಾಗೂ ಹೊರಗ ಹೋಗೀ ಬಂದು ಮಾಡಾವ್ರು ಯಾರಿಲ್ಲಾ. ಇಷ್ಟ್ಯಾಗಿ ಶಾಮಣ್ಣನ ಹೆಂಡ್ತೀದು ಭಾಳ ಮರ್ಜೀ ಅದು ಸಪಾಟ್ಯಾಲಿ. ಅಲ್ಲದ ಈಕೀ ಹೆಸರಿನ ಇದ್ದ ಹೊಲದ ವ್ಯವಸ್ಥಾನೂ ಮಾಡಬೇಕಾಗೇದ. ಶ್ಯಾಮಣ್ಣನ ಹೊಲದ ಚೂರುಚಾರು ವಸೂಲೀನೂ ಮಾಡಬೇಕು. ಪಾಪ ಆತಗ ನೋಡ್ರಿ ವ್ಯವಹಾರಾಂದ್ರ ಏನೂ ತಿಳೀಯೂದುಲ್ಲ; ಸಾದಾ ಹುಡುಗಾ, ಕಾಲೇಜ ಪರೀಕ್ಷಾ ಒಂದು ಆಗ್ಯಾನ ಅಷ್ಟs. ಇನ್ನ ಮಾಳಮಡ್ಡಿಗೆ ಈ ಲಕ್ಷ್ಮೀನಾರಾಯಣ ಗುಡಿಗೆ ಧೂರ ಆಗ್ತದ; ಸರಿ. ಆದ್ರ ನಾವೇನು ಶೂರ್ಪಾಲಿ ಆಚಾರು; ಕಬ್ಬಿಣದ ಕಂಭದಂಥಾ ಜನಾ. ಇಂಥಾ ನಡಿಗ್ಗೆ ಹೆದರವ್ರಲ್ಲಾ. ಒಂದು ನಾಲ್ಕು ತುತ್ತು ಊಟ ಹೆಚ್ಚು ಹೊಗಲಿಕ್ಕೆ ಅನುಕೂಲ. ಇನ್ನ ಇಷ್ಟು ಮೀರಿ ನಿಮ್ಮಂಥ ಡಿಪುಟಿ ಪೆನಶನ್ದಾರು ಇರುವಾಗ, ಇರುಇರ್ತ, ಮಾಳಮಡ್ಯಾಗs ಆ ಊಳಿವಿ ಬಸಪ್ಪನ ಗುಡಿ ಎದುರಿಗೇ ಒಂದು ಭವ್ಯ ಗೋಪಾಲಕೃಷ್ಣನ ಗುಡಿ ಕಟ್ಟಬೇಕು ಅಂತೂ ಒಂದ್ಸಂಕಲ್ಪ ಅದs. ಅದೆಲ್ಲಾ ನಿಮ್ಮಂಥವರ ಕೃಪಾದ ಮಾತs ಅನ್ನಿರಿ.

ಗೋವಿಂದ :— ನಾ ಡಿಪುಟಿ ಇದ್ದಾಗ ಆಗಿದ್ರ ಬೇಖಾದ್ದs ಮಾಡ್ತಿದ್ದೆ. ಈಗೇನು ಪೆನಶನ್ನು.

ಆಚಾರು :— ನೋಕ್ರಿಗೆ ಪೆನಶನ್ಯಾದ್ರ ಧರ್ಮಕ್ಕ ಪೆನಶನ್ನ ಕೊಡಲಿಕ್ಕೆ ಬರೂದುಲ್ಲ ರಾಯರs. ಪೆನ್ಶನ್ನದಾರಂದ್ರ ಅವರು ಸಾಕ್ಷಾತ್ ವಾನಪ್ರಸ್ಥಾಶ್ರಮಿಗಳು ಇದ್ದಾಂಗ. ಅದನ್ನಿಳಕೊಂಡೇ ಧಾರವಾಡದ ಪೆನಶನ್ದಾರೆಲ್ಲಾ ಊರ ಹೊರಗ ಮಡ್ಡೀ ಮ್ಯಾಲ ಮನೀ ಕಟ್ಟಿಕೊಂಡು ಇರ್ತಾರ. ಮತ್ತ ಮಾಳಮಡ್ಡೀಯಂಥಾ ಬ್ರಾಹ್ಮಣವಸ್ತೀ ಇದ್ದಾ ಜಾಗದೊಳಗ ಒಂದು ಗೋಪಾಲಕೃಷ್ಣನ ಗುಡೀ ಬೇಕs

ಬೇಕು. ನಿಮ್ಮಂಥವರು ಮುಂದ ಬಂದರ, ಮತ್ತ ನಾಲ್ಕು ದೊಡ್ಡ ಪೇನಶನ್ದಾರಕಡಿಂದ ಪಟ್ಟೀ ಎತ್ತಲಿಕ್ಕೆ ಬರ್ತಏದ. ಎಲ್ಲಾ ನಿಮ್ಮ ಮ್ಯಾಲೇ ಭಾರಾ ಹಾಕಲಿಕ್ಕೆ ಹ್ಯಾಂಗ ಬಂದೀತು ಹೇಳ್ರಿ. ನೀವೀಗ ನಮ್ಮ ಭಾಗವತದ ಮಂಗಳಾ ಅಷ್ಟ ಮಾಡಿಸಿಬಿಡ್ರಿ ಸಾಕು.

ಗೋವಿಂದ :—ಆ ಮಾತು ಇರಲಿ, ಆಚಾರ್ಯ! ಮತ್ತ ನೀವೆಲ್ಲಾ ಎಲ್ಲಮ್ಮನ ಗುಡ್ಡಕ್ಕ ಹೋಗೋದು ಏನಾತು?

ಆಚಾರು :—ಅದೇನ್ರಾಯರ ಅನುಕೂಲೀ ಪ್ರಕಾರ ಹೋಗಲಿಕ್ಕೆ ಬರ್ತಏದ. ಮುಖ್ಯ ನಿಮ್ಮ ತಾಯಿಯವರ ಶ್ರಾದ್ಧಾ ಆಗೂ ಹಾದೀನೇ ನೋಡ್ಲಿಕ್ಕೆ ಹತ್ತೀನಿ. ನೀವು ಏನೋ ಸಾಮಾನ ಖರೀದಿ ಮಾಡಿಧಾಂಗ ಕಾಣಸ್ತಏ ದಲ್ಲಾ. ಬೆಳ್ಳೀ ಸಾಮಾನೇನು!

ಗೋವಿಂದ :—ಹೌದು, ಒಂದು ಬೆಳ್ಳೀ ತಾಟು, ಬಟ್ಲ, ಒಂದು ಗಿಂಡಿ ಇಷ್ಟು ತಗೊಂಡೆ; ಭಾಳ ದುಬಾರಿ ಬಿತ್ತು ನೋಡ್ರಿ. ಆದ್ರ ಮೊಮ್ಮಗನ ಅನ್ನ ಮುಹೂರ್ತಾ ಒಂದು ಮಾಡೋದು ಅಂತಾರ ಮನಿಯೊಳಗ!

ಆಚಾರು :—ಭಾಳ ಸಂತೋಷ, ಭಾಳ ಸಂತೋಷ; ರಾಧಾಬಾಯ್ರು ಬಹಾಳ ತಿಳುವಳಿಕಿ ಇದ್ದವರು. ಶ್ರಾದ್ಧದ ನಂತರ ದ್ವಾದಶೀ ಮೂಹೂರ್ತ ಬಹಾಳ ಶ್ರೇಷ್ಠ ಆದಏ. ಅವೊತ್ತ ಅನ್ನ ಮುಹೂರ್ತಾನು ಹೊಡಿಸಿಬಿಡ್ರಿ. ಅಂದ್ರ ಮುಂದ ಜಾವಳಕ್ಕ ಎಲ್ಲಾರೂ ಎಲ್ಲಮ್ಮನ ಗುಡ್ಡಕ್ಕಏ ಹೋಗೋಣಂತ. ನಾನು ರಾಧಾಬಾಯರಿಗೆ ಎಲ್ಲಾ ತಿಳಿಸಿ ಹೇಳೇನಿ. ಅವರೂ ಹೂಂ ಅಂದಾರ. ಮತ್ತ ನಾ ಅಂತೂ ನಿಮಗ ಮನೀ ಬ್ರಾಹ್ಮಣ ಇದ್ಧಾಂಗಏ ಇದ್ದೇನಿ. ಮತ್ತ ಶ್ಯಾಮಣ್ಣನ್ನೂ ಎಬ್ಬಿಸತೇನಿ; ಅಂದರ ನನ್ನ ಖರ್ಚೇನು ಜಾಸ್ತಿ ನಿಮ್ಮ ಮ್ಯಾಲೆ ಬೀಳೋ ಕಾರಣಿಲ್ಲ. ಆತು ನಡೀರಿನ್ನ, ನ್ಯಾಳ್ಯಾ ಆತು ಮನೀಗೆ ಹೋಗೋಣ; ಆದ್ರ ಪಾಪ! ನಿಮ್ಮ ಕೈಯಾಗ ಸಾಮಾನ ಭಾಳ ಅವಏ. ಮುದುಕ ಮನುಷೇರು ನೀವು. ಒಂದು ಟಾಂಗಾ ಕರೀತೇನಿ. ಅಂದ್ರ ಇಬ್ರೂ ಕೂಡೇ ಹೋಗೋಣಂತ. (ಆಚೆಗೆ ನೋಡಿ) ಟಾಂಗಾ, ಏ ಟಾಂಗಾ, (ಟಾಂಗಾದ ಗಂಟೆಯ ಸಪ್ಪಳ) ಏನಪಾ, ಸಾಬಾ ಮಾಳಮಡ್ಡಿಗೇನ್ಹೊಂಟಿಗೋಶೀ;?

ಗೋವಿಂದ :—(ಆಚಾರ್ಯರ ಬೆನ್ನು ತಟ್ಟಿ) ಆಚಾರಽ, ನಮ್ಮ ಶ್ಯಾಮಣ್ಣನೂ ಪ್ಯಾಟ್ಯಾಗ ಬಂದಿದ್ದ ಕಾಣಸ್ತಽದ ಅಲ್ಲಿ ನೋಡ್ರಿ (ಅಚೆಗೆ ತೋರಿಸಿ) ಭಾಳ ಹೊತ್ತುಕೊಂಡ ಬರ್ತಾನ.

ಆಚಾರು :—ಅಲ್ಲ ರಾಯರ, ಈ ಊರ ಟಾಂಗಾದಾಗ ಮೂರು ಮಂದಿನ್ನ ಕೂಡ್ಸೋದಿಲ್ಲ.

ಗೋವಿಂದ: —ಅದಕ್ಕಽ, ಮೂರು ಮಂದೀನೂ ಸಾವಕಾಶ ನಡಕೋತ ಹೋಗೋಣಂತ. ಇಳಿಹೊತ್ತದ.

ಆಚಾರು :—ಆ ಶಾಮಣ್ಣೇನು ಬರ್ರಿ ಇಪ್ಪತ್ತೆಂಟು ಕೆಲಸದಾವಾ. ನೀವು ಮುದುಕರು. ಕೈತುಂಬಾ ಸಾಮಾನ ಬ್ಯಾರೇ ಅವಽ. ಕತ್ತಲೆ ಆದ್ರ ನಿಮಗ ತ್ರಾಸಾದೀತು. ಬರ್ರಿ, ಬರ್ರಿ. ಏ ಸಾಬಾ, ಈ ಗಂಟು ತಗೋ. ಹತ್ರಿ ರಾಯರ ಹತ್ರಿ. ಸಂಭಾಳಿಸಿ ಹತ್ರಿ. ನಾ ನಿಮ್ಮನ್ನ ಹಿಡದು ಹತ್ತಿಸ್ತೇನ್ನಿಂದರ್ರಿ. ಏ ಸಾಬಾ, ಏನಂತೀ? ಆರಾಣೇನಽ. ಆಗಲಿ ನಡಿ. ಕಂಪೌಂಡದ ಒಳಗೊಯ್ದು ಬಾಗಿಲಿಗೆ ಬಿಟ್ರ, ಇನ್ನೊಂದಾಣೆ ಹೆಚ್ಚಿಗೆ ಕೊಡಸ್ತೇನಿ. -----ನಡ್ರಿ ರಾಯರ----- (ಗೋವಿಂದರಾಯರ ರಟ್ಟೆ ಹಿಡಿದು ಮುಂದೆ ಸಾಗಿಸಿ) ಏ ಸಾಬಾ, ಡಿಪ್ಪುಟಿ ಸಾಹೇಬರ ಮನಿಗೆ ಹೋಗೋದು ಅಂ; ಡಿಪ್ಪುಟಿ ಸಾಹೇಬರ ಮನಿಗೆ. (ಟಾಂಗಾ ಹತ್ತುವವರಂತೆ ನಟಿಸುತ್ತ ಆಚಾರು ಹೋಗುವರು. ಅತ್ತ ಟಾಂಗಾ ಹೋದಂತೆ ಗಂಟೆಯು ಸಪ್ಪಳಾಗುತ್ತಿರಲು ತೆರೆ ಇಳಿಯುವದು.)

ಮುಗಿಯಿತು

೪

ರಾಯರ ಮದುವೆ

(ಒಂದು ಪ್ರಹಸನ)

ಪಾತ್ರಗಳು

ರಾಯರು	::	ಒಬ್ಬ ಸುಖಿ ಪುರುಷ
ರಾಮಾಚಾರಿ	::	ಈತನ ಹಿತ ಶತ್ರು
ಸುಬ್ಬಣಾಭಟ್ಟ	::	ಇವರಿಬ್ಬರ ಮಿತ್ರ
ಗುಂಡೇರಾಯ	::	ರಾಯರ ಬೀಗನಾದವ
ಶೇಷಾಚಾರಿ	::	ಗುಂಡೇರಾಯನ ಪುರೋಹಿತ

ಅಲ್ಲದೆ ಬಂಡೆಪ್ಪ, ಮುದ್ಧೂ ಮೊದಲಾದ ಗಂಜೀಫೀ ಕಂಪೂದ ಗೆಳೆಯರೂ, ಇಬ್ಬರು ಸಿಪಾಯಿಗಳೂ ಇತ್ಯಾದಿ.

ಪಾತ್ರ ಪರಿಚಯ

ಈ ಪ್ರಹಸನದಲ್ಲಿ ಇಬ್ಬರು ಆಚಾರಿಗಳ ಕೈಯಲ್ಲಿ ಇಬ್ಬರು ರಾಯರು ಸಿಕ್ಕಿದ್ದಾರೆ; ಇವೆರಡೂ ತಂಡಗಳ ನಡುವೆ ಗಂಡಾಗುಂಡಿ ಮಾಡುವ ಒಬ್ಬ ಭಟ್ಟನಿದ್ದಾನೆ. ಇವರೆಲ್ಲರೂ ಸೇರಿ ತಮ್ಮ ಕೈಗಂಟಿಕತನದಿಂದ ಪ್ರಹಸನದ ವಸ್ತುವನ್ನು ಊಟಮಾಡುತ್ತ ಹೋಗುತ್ತಾರೆ. ಇವರಲ್ಲಿ ನಾಯಕಸ್ಥಾನದಲ್ಲಿದ್ದವ ರಾಮಾಚಾರಿಯೇ. ಬ್ರಾಹ್ಮಣ್ಯದ ಹಾಗು ಒಟ್ಟಾರೆ ಧಾರ್ಮಿಕತೆಯ ಕೀಳ್ದೆಸೆಯ ಪ್ರತ್ಯಕ್ಷ ಪ್ರತೀಕದಂತಿದ್ದವನೀತ. ಬ್ರಾಹ್ಮಣರ ಉಳಿದೆಲ್ಲ ಸದ್ಗುಣಗಳನ್ನೂ ಕಳೆದುಕೊಂಡ ಈತ ಅವರ ಚಾಣಾಕ್ಷತನವನ್ನು ಮಾತ್ರ ಎಳ್ಳಷ್ಟೂ ಕಳೆದುಕೊಂಡಿಲ್ಲ; ಅದನ್ನು ತನಗೆ ಬೇಕಾದಲ್ಲಿ ಗುಲಾಮಗಿರಿಗೆ ಹಚ್ಚುತ್ತಾನೆ. ಧಾರ್ಮಿಕತೆ ಈತನ ಕೈಯ ಧನುಷ್ಯವಾದರೆ 'ಈಶ್ವರೀ ಸಂಕೇತ, ಬ್ರಹ್ಮ ಸಂಕಲ್ಪದ' ತತ್ತ್ವಗಳೂ ಪುರಾಣ–ಶಾಸ್ತ್ರಾದಿಗಳೂ ಈತನ ಬ್ರಹ್ಮಾಸ್ತ್ರಗಳು; ಅವನ್ನು ಬೇಕಾದ ಗುಬ್ಬಿಯ ಮೇಲೆ ಬಿಡಲು ಈತ ಹೆದರುವವನಲ್ಲ. ಪೂಜಾರಿಕೆ, ಜ್ಯೋತಿಷ್ಯ, ವೈದಿಕಿಗಳು ಈತನ ಬತ್ತಳಿಕೆಗಳು. ಉಂಡಾಡಿಗ ಉಪದ್ವಾಪಿ ಸುಬ್ಬಣಭಟ್ಟನಂತವರು ಮಸೆಗಲ್ಲುಗಳು. ಹೀಗೆ ಆಧುನಿಕ ಬ್ರಾಹ್ಮಣ ಶಿಖಾಮಣಿ ರಾಮಾಚಾರಿ ಶಾಪ–ಚಾಪ ಸವ್ಯಸಾಚಿ. ರಾಯರೂ, ಗುಂಡೇರಾಯರೂ ಐಷಾರಾಮಿಗೆ ಇಲ್ಲವೇ ದುಡ್ಡಿಗೆ ಹೆರವರನ್ನೂ ತಮ್ಮನ್ನೂ ಕೂಡಿಯೇ ಬಲಿಕೊಡಬಲ್ಲ ವ್ಯಕ್ತಿತ್ವಹೀನರ ಒಂದೊಂದು ಮಾದರಿಗಳು. ಗ್ರಹಸ್ಥರಿಗೆ ಹತ್ತುವ ಜಿಗಳಿಯಂತಹ ಶೇಷಾಚಾರಿ ರಾಮಾಚಾರಿಯ ಪಡಿನೆಳಲು. ಅಂತೆ ಅಷ್ಟರ ಮಟ್ಟಿಗೆ ಆತನ ವ್ಯಾಪವೂ ಕಡಮೆ.

೧ನೇ ನೋಟ : ರಾಯರು

(ಶ್ರೀಮಂತರೊಬ್ಬರೆ, ತಮ್ಮ ಮನೆಯ ಪಡಸಾಲೆಯಲ್ಲಿ ಶತಪದ ಮಾಡುತ್ತ ಲಿದ್ದಾರೆ; ಚುಂಗಚ್ಚಿ ಹಾಕಿ ದೋತರ ಉಟ್ಟಿದ್ದಾರೆ. ಮೈಯಲ್ಲಿ ಒಂದು ಶರ್ಟು; ಎದೆಗೆ ಎರಡೇ ಗುಂಡಿಗಳು. ಕೈಗುಂಡಿಗಳು ಇಲ್ಲವೇ ಇಲ್ಲ. ಬಕ್ಕನೆತ್ತಿ. ಸಂಣಾಗಿ ಚಂಡಿಕೆಯ ಎಸಳುಗಳು ಹಾರಾಡುತ್ತಿವೆ. ಗೋಡೆಯ ಗೂಟಕ್ಕೆ ಅವರ ಹಳೀ ಜರದ ರುಮಾಲವೊಂದು ತೂಗಹಾಕಿದ ಪಾರ್ಶಿ ಕರೇಕೋಟಿನ ಮೇಲೆ ಕುಳಿತು ಕೊಂಡಿದೆ. ಒಂದು ಮೂಲೆಯಲ್ಲಿ ಸುರಳಿ ಸುತ್ತಿಟ್ಟ ಈಚಲ ಚಾಪೆ. ಅದರ ಬದಿಯಲ್ಲಿ ರಾಯರ ತೇಪೆ ಹಚ್ಚಿದ ಬೆತ್ತದ ಹಿಡಿಕೆಯ ಹಳೆ ಕೊಡೆಯೊಂದು. ಬಾಗಿಲ ಬಳಿಯಲ್ಲಿ ವಿಜಾಪುರದ ಮುಚ್ಚೆಯ ಜೋಡುಗಳು. ಗೂಡಿನಲ್ಲಿ ಹಿತ್ತಾಳಿಯ ಎಲೆಯಡಿಕೆಯ ಡಬ್ಬಿ. ಅದರ ಬಳಿಯಲ್ಲಿ ಒಂದು ಅಡಕೊತ್ತು. ಅದರ ಮೇಲೆ ಎಲೆಯ ಸುರಳಿ. ರಾಯರ ಕೈಯಲ್ಲಿ ಒಂದು ಎಲೆಪಟ್ಟಿ. ಅದನ್ನು ದವಡೆಯಲ್ಲಿ ಸೇರಿಸಿಕೊಂಡು ಮೇಲೆ ಜರದಾ ಹಾಕಿಕೊಳ್ಳುತ್ತ............................)

ಅದೆಲ್ಲಾ ಖರೇಪಾ. ಆದರೇ ನನಗ ಈ ದಿವಸದಾಗ ಹೆಂಣು ಕೊಡುವ ಮಗಾ ಯಾವ! ಆ ದೇಸಾಯರ ಭೀಮ್ಯಾನ ಹೆಂಡತಿ ಸತ್ತು ಇನ್ನೂ ಎಂಟು ದಿನ ಆಗಿಲ್ಲ. ಆಗಳೆ ನಿಶ್ಚಯ ಹಾಕಿದರಂತ. ನನ್ನ ಹೆಂಡತಿ ಸತ್ತು ಎರಡು ವರ್ಷ ಆಯಿತು–; ಇನ್ನೂ ಒಬ್ಬ ಸೂಳೀ ಮಗಾ ಏನು ಹೆಂಣು ಕೊಡತೇನಿ ಅಂತ ಬರವಲ್ಲಾ. ಈಗಿನ ದಿವಸದಾಗ 'ಕಾಸಿಗೊಂದು ಹೆಣ್ಣಂತ; ಕೊಸರಿಗೆರಡು ಹೆಣ್ಣಂತ' ಮಾತಿನ ಮುಂದ ಆಡತಾರ. ಆದರ ಎಲ್ಲಿವ ಹೆಂಣು. ಇಷ್ಟು ದಿವಸ ಹೆಂಣು ಹೆಂಣು ಅಂತ ಬಡಕೊಂಡು ಎದಿಯೆಲ್ಲ ಹುಂಣು ಹುಂಣಾಗಿ ಹೋತು. ಒಂದು ಹೆಂಣೇನು ಹತ್ತರ ಹಾಯಲೊಲ್ಲವು. ಆಗಲ್ರೆಪಾ. ಒಂದು ಬಡ ಮರ ಹುಡಿಗಿ; ಒಂದು ದಿಕ್ಕಿಲ್ಲದ ಹುಡುಗಿ; ಒಂದು ಅನಾಥ ಹುಡಿಗಿ; ಯಾವದೂ ಕೇಳಬೇಡಾ. ನಾನೂ ಈಗೆಲ್ಲಾ ಬಿಟ್ಟುಬಿಟ್ಟೇನಿ ಏನ್ರೆಪಾ! ಎಂಥಾದರ ಆಗಲೀ. ಕಡೀಕೆ ಒಂದು ಕುಂಟೀ; ಒಂದು ಕುರಡೀ ಆದರೂ ಸಹಿತ ಏನೋ ಒಂದು ಥೊಡ್ಡ ಮನಸ್ಸುಮಾಡಿ ಮದಿವಿ ಮಾಡಿ ಕೊಂಡೇನು ಅಂತೀನಿ. ಹಾಂಗಾದರ ಆ ಹುಡಿಗೀ ಉದ್ಧಾರಮಾಡಿದ ಹಾಂಗಾಯಿತು; ನಮಗೊಂದು ಹೆಂಡತಿ ಆದ ಹಾಂಗಾಯಿತು; ಅಂತಂತೀನಿ. ಕಡೀಕೆ ಮತ್ತೇನು, ಎಂಥಾದಾದರೂ ಒಂದು ಹೆಂಣು

ಅಂಬೂದು ಸಿಕ್ಕರ ಸಾಕಪಾ; ಅಂತೂ ನಮ್ಮ ಪಾಲಿಗೇ ಇಷ್ಟ ತುಟ್ಟಿ ಯಾದವೇ ಹೆಂಣು! ಈಗಿನ ದಿವಸದಾಗ ಎಲ್ಲಾ ಮಕ್ಕಳು ದುಡ್ಡ ನೋಡತಾರ— ದುಡ್ಡು. ಅಂತೂ ಇಲ್ಲಿಗೆ ಬಂದೇದ ಸ್ಥಿತಿ. ಏನೀ ಹೆಂಗಸರು ಇನ್ನಮ್ಯಾಲಿ ಗಂಡಸರಿಗೆ ಚಾಕ್ರೀ ಮಾಡತಾರೋ? ಏನು, ದುಡ್ಡಿಗೆ ಮಾಡತಾರೋ-ತಿಳಿಯೂದುಲ್ಲ. (ತಂಬಾಕು ಹಾಕಿಕೊಳ್ಳುತ್ತ) ನಾನೇ ಧಡ್ಡತನ ಮಾಡಿದೆ ಅನ್ನು. ಕೈಯ್ಯಾಗ ಇದ್ದದ್ದೆಲ್ಲಾ ಕಳ ಕೊಂಡು ಹುಚ್ಚಮಂಗ ಆಗಿ ಕೂತೇನಿ. ಅಂದಮ್ಯಾಲಿ ಮಂದಿ ಹೆಂಣು ಕೊಡು ಅಂದರೇ ಯಾಕ ಕೊಟ್ಟಾರು! ಅದೇ ನೋಡು. ನನ್ನ ಕೈಯಾಗೇ ನಾಕು ದುಡ್ಡು ಆಡತಿರಲಿ; ನಾ ಮುಂದ ನೀ ಮುಂದ ಅಂತ ಮುಗಿಬೀಳುತಿದ್ದವು ಹೆಂಣು. ಮೊದಲಿನ ಹಾಂಗ ದುಡ್ಡಿದ್ದಿದ್ದರ, ಹೆಂಣಿನ ಮಾಲೀ ಮಾಡಿ ಹಾಕ್ಕೋತಿದ್ದೆ. ಅಥವಾ ಹಾಂಗ ರೊಕ್ಕಾನೇ ಇದ್ದರ ಹೆಂಡರಾದರೂ ಯಾಕ ಬೇಕಾಗಿತ್ತು! ಆ ಸಿಂಗಿ ನನ್ನ ಬಿಟ್ಟು ಮತ್ತೊಬ್ಬನ ಬೆನ್ನು ಹತ್ತಿ ಯಾಕ ಹೋಗತಿದ್ದಳು!! ಸಿಂಗಿ ಬ್ಯಾಸರ ಬಂದಾಗ ಅಷ್ಟು ಮಜ್ಯಾಕ ಹುಬ್ಬಳ್ಳಿ ಧಾರವಾಡ ಕಡೆ ಒಂದು ಫೇರಿ ಹೊಡದು ಬಂದರ ಬೇಕಾದ್ಹಾಂಗ ಚೈನೀನ ಚೈನಿ. ಈಗೇನು? ಕೈಯಾಗ ಶುಂಠಿ; ಅಂತ ಎಲ್ಲಾ ಪಂಚೇತಿ. ಇದಕ ಏನಾರೇ ಒಂದು ಯುಕ್ತಿ ತಗೀಬೇಕು. ಎರಡು ವರ್ಷಾತೂ ನಾನೂ ಹಂಚಿಕಿ ಹಾಕೇ ಹಾಕ್ತೇನಿ; ಹಾಕೇ ಹಾಕ್ತೇನಿ. ಬಗೀನ ಹರೀವಲ್ಲದು! ಈಗಿನ ದಿವಸ ದಾಗ ಬರೇ ಸಾದಾ-ಭೋಳೇತನ ಮಾಡಿದ್ರ ಆಟ ಸಾಗೀತ? ಈ ಸರಳತನಯೇನು ಕೆಲಸಕ್ಕ ಬಾರದ್ದು. ಇದಕ ಏನಾದರೂ ಒಂದು ಸೋಗು ತಗೀಬೇಕು. ಇಲ್ಲದಿದ್ದರ ನಡಿಯೂ ಹಾಂಗಿಲ್ಲ. ಈಗ ನೀ ಒಂದು ಸೋಗು ಮಾಡಿ ನೋಡು; ದುಡ್ಡು ಹರಿದು ಬೀಳತದ; ಹಾಂಗ ಬೇಡಲಿಕ್ಕೆ ಹೋಗು; ಯಾವ ಯಾವನೂ ಪವ್ವಿಟಿ ಮುಷ್ಟಿ ಕೊಡೂದುಲ್ಲಾ. ಸೋಗು ಹಾಕಬೇಕು ಸೋಗು. ಜಗತ್ತು ಮೋಸಾ ಮಾಡಿಸಿಕೊಂಡೇನೂ ಅಂತೇದ. ಈಗ ನೋಡು, ಹೀಂಗೇ ಒಂದು ಛಲೋ ಕೆಲಸಾ ಮಾಡತೇನಪಾ ಸಹಾಯ ಮಾಡಿರಿ ಅಂದರ ಹೋಗು ಹೋಗೊ ನಮ್ಮ ರೊಕ್ಕಯೇನು ಹಾದೀ ಮ್ಯಾಲ ಬಿದ್ದಿಲ್ಲಾ ಅಂತಾರ. ಆದರ, ಒಂದ ನಾಟಕಾ ಒಂದ ಸಿನೀಮಾ ಅಂತ ಮಾಡಿರಿ, ಮೇಲ

ಬಿಟ್ಟು ಬಂದು, ಒಂದಕ್ಕೆರಡು ರೊಕ್ಕಾ ಕೊಟ್ಟು, ಸೋಗಿನ ಸುಳ್ಳು ಮಾತು ಕೇಳಕೋತ ಬಾಯಿ ತಕ್ಕೊಂಡ ಕೂಡತಾರ. ಈ ಸೃಷ್ಟಿ ಅಂದರೇ ಹಿಂಗದ! ಎಲ್ಲಾ ನಾಟಕ!! ಸೋಗು!!! ನಾನೂ ಅದಕ ಅಂತ ಹೇಳಿ, ಅದೇನೋ ಅಂತಾರಲ್ಲ ಅದೂ—ರಿಫಾರ್ಮರ—ಅಂತ, ಆ ಸೋಗು ತಗೀಬೇಕು ಅಂತ ಮಾಡಿದ್ದೆ. ನಾನೂ ಒಬ್ಬ ರಿಫಾರ್ಮರ ಆಗಿ ಬಿಟ್ಟರ, ಯಾವದಾರೆ ಒಂದು ಗಂಡಸತ್ತ ಹೆಣ್ಣು ಸಿಗತಿತ್ತೋ ಏನೋ! ಆದನ್ನಾದ್ರೂ ಏನು ಹೇಳಲಿ. ನಮ್ಮ ಬ್ರಾಹ್ಮಣರ ಜಾತಿ ಮಹಾ ಅರಿಷ್ಟ. ಗಂಡ ಸಾಯೂ ಪುರಸೊತ್ತಿಗಿಲ್ಲದ, ತಲೀ ಬೋಳಿಸಿಕೊಂಡೇ ಕೂಡತಾವ ಎಲ್ಲಾ ಹೆಣ್ಣು. ಅದರೊಳಗ ಎಂಥೆಂಥಾ ಬೀಯೇ ಎಲೆಬ್ಲಿ ರಿಫಾರ್ಮರ ಸಹಿತ, ಹೆಣ್ಣು ಸಿಗದ ಕಡೀಕ ಎಂಥಾ ವರೇ ಒಂದು ಗಂಟು ಹಾಕಿಕೊಂಡು ಕೂತದ್ದು ನಾನೇ ನೋಡೀನಿ. ಅಂದ ಮ್ಯಾಲೆ ಆ ಸೋಗೂ ಏನು ಕಡಿಪೂರೋಸುವ ಹಾಂಗ ಕಾಣಸೋದುಲ್ಲಾ. ಹಾಂಗಾದರ ಇನ್ನೇನಣಾ ಯುಕ್ತಿ ಹುಡಕಬೇಕೂ! (ಮತ್ತೊಮ್ಮೆ ತಂಬಾಕ ಬಾಯಲ್ಲಿ ಹಾಕಿಕೊಂಡು ಸುರಿಸುತ್ತ ಅತ್ತಿತ್ತ ಸುತ್ತುವನು) ಇದಕೆಲ್ಲಾ ನಮ್ಮ ರಾಮಾಚಾರಿಯಾದರ ಸರಿ; ಆ ಒಕ್ಕಣ್ಣಾ ಶುಕ್ರಾಚಾರೀ ಹತ್ತರ ಒಂದೊಂದು ಘನಘನ ಯುಕ್ತಿ ಇರತಾವ. ದಿನಾ ಇಷ್ಟೊತ್ತಿಗೆ ಬರಾವಾ; ಇವತ್ತ ಯಾಕ ಬರವಲ್ಲನೋ ಅಂತೀನಿ. (ಮತ್ತೆ ಸುತ್ತಾಡುವನು) ಹಾ! ಅಕಾ. ಅಂತೂ ಹೊತ್ತಿಗೆ ಬಂದೇಬಿಟ್ಟಿತಲ್ಲಾ ಆಸಾಮಿ.

(ರಾಮಾಚಾರಿ, ತೆಳ್ಳಗೆ ಎತ್ತರವಾದವನು. ಸುಮಾರು ೫೦ ವರುಷ. ಗಡ್ಡ ಮೀಸೆ ಬೆಳ್ಳಗಾಗುತ್ತಲಿದೆ. ನಿಡಿದಾದ ಮೂಗು; ಆಳವಾದ ಕಣ್ಣುಗಳಲ್ಲೊಂದು ಕುರುಡು; ಅದಕ್ಕೆ ಕಾಚಿನ ಕಣ್ಣು ಕೂಡಿಸಿದ್ದಾನೆ. ಹಣೆ ಅಗಲವಾಗಿ ಗೆರೆಗಳಿಂದ ತುಂಬಿದೆ. ಮೈಯಲ್ಲಿಒಂದು ಬಂಡಿ. ಉಟ್ಟದ್ದು ಲಂಡ ಗೀರಂಚಿನ ಸೊಲ್ಲಾಪುರದ ದೋತರ. ಮೈಮೇಲೆ ಜೋಡಿಸಿನ ಹೊದ್ದುಕೊಳ್ಳುವ ದೋತರ. ತಲೆ ಬರಿದು. ಶಾಪಾಗಿ ಬೋಳಿಸಿದೆ. ದಪ್ಪವಾದ ಚಂಡಿಕೆ ಅಸ್ತವ್ಯಸ್ತವಾಗಿದೆ.)

ರಾಮಾಚಾರಿ :—(ಪ್ರವೇಶಿಸುತ್ತಲೇ) ನಮಸ್ಕಾರಸಾ, ಶ್ರೀಮಂತಾ

ರಾಯರು :—ಓಹೋ, ನಮೋನ್ನಮಃ. ಬಾರಸಾ ಶುಕ್ರಾಚಾರಿ; ಯಾಕ ತಡಾ ಮಾಡಿದೀ ಇವತ್ತ ?

ರಾಮಾಚಾರಿ :—ಇವತ್ತೀನು——ಸಂತಿ; ಗಂಜೀಫೀ ಆಡೂ ಹಾಂಗಿಲ್ಲಾ ಬಿಜಕ್ ಆಡೂ ಹಾಂಗಿಲ್ಲಾ.

ರಾಯರು :—ಆದರೇನಾಯಿತು; ಕಡೀಕೆ ಎಲಿ ಅಡಿಕಿ ಹಾಕ್ಕೊಂಡು ಹರಟೀ ಹೊಡಿಯೋದಪಾ! ಹೂಂ, ಕೂಡಲಾ. ತಗೋ. (ಎಲೆಯುಡಿಕೆ ಡಬ್ಬಿ ಎದುರಿಗೆ ಇಟ್ಟುಕೊಂಡು ಇಬ್ಬರೂ ಕೂಡುವರು. ರಾಯರು ಗೋಡೆಗೆ ಆತುಕೊಂಡು ಕುಳಿತು, ಎಡಗೈಯಿಂದ ತಂಬಾಕು ಸಜ್ಜುಗೊಳಿಸ ಹತ್ತುವರು. ಆಚಾರಿ, ಎಲೆಯುಡಿಕೆ ತಂಬಾಕು ಬಾಯಿಗ ಹಾಕಿಕೊಂಡು ಅಗಿಯುತ್ತ, ಮೊಳಕಾಲಿಗೂ ಬೆನ್ನಿಗೂ ಹೊರುವ ದೋತರ ಸುತ್ತಿಕೊಂಡು ಮೊಳಕೈ ಮಡಿಚಿಕೊಂಡು ಕೂಡುವನು.)

ಆಚಾರಿ :—ಮತ್ತೇನ ಶ್ರೀಮಂತಾ; ಈ ಸರೆ ಜಾತ್ರೀ ರಂಗ ಹೊಡಸಿ ಬಿಡೋಣಪಾ ಮತ್ತೀ; ದೇವರ ಕೆಲಸಾ. ನಾಕು ವರ್ಷ ಆತು. ಜಾತ್ರಿ ಹ್ಯಾಂಗ್ಯಾಂಗ ಆಗಲಿಕ್ಕೆ ಹತ್ತೇದ. ಈ ಸರೆ ಮಾತ್ರ ಬಿಡೂಹಾಂಗಿಲ್ಲಾ.

ರಾಯರು :—ಇರಲಿ ಬಿಡಲೇ ಆಚಾರಿ. ಜಾತ್ರೀ ಅಂತೀ; ದೇವರ ಅಂತ. ದೇವರ ಹೆಸರ್ಲೆ ಭಲೊ ಬಕ್ಕರಸಲಿಕ್ಕೆ ಹತ್ತೀದಿ. ಸಾಕ ಬಿಡಲಾ; ಇನ್ನೂ ಎಷ್ಟರ ದುಡ್ಡು ಮಾಡಬೇಕು ಅಂತೀದಿ.

ಆಚಾರಿ :—ಹೌದಪಾ! ಅಲ್ಲಾ, ಶ್ರೀಮಂತಾ, ಈಗ ದೇವರ ಹೆಸರು ಹೇಳತೀನಂತ ಎರಡ ಸಂಸಾರಾ ನಡ್ಸತೀನಪಾ. ಇಲ್ಲದಿದ್ದರ ಯಾ ಮುಂಗ್ಯಾನಮುಗಾಯೇನು ಒಂದು ಒಡಕ ಕವಡಿ ಕೊಡೂದುಲ್ಲ ಕವಡೀ. ಹಾಂಗ ಇಲ್ಲದಿದ್ದರ ಹಿರೇಮಗನ ಮದವಿ ಹ್ಯಾಂಗ ಆಗತ್ತಿತ್ತು; ಎರಡು ಹೆಣ್ಣುಮಕ್ಕಳ ಮದಿವಿ ಹ್ಯಾಂಗ ಆಗತಿತ್ತು ?

ರಾಯರು :—ಅಂತೂ ಭಲೋ ಕಾಯಕಾ ನಡ್ಸೀ ನೋಡಪಾ ನೀ ಮಾತ್ರ ಆಚಾರಿ; ಆ ಎಲ್ಲೀ ಕೊಳ್ಳ್ಯಾಗ ಒಂದು ಟೀಕೀನೂ ಮಾಡ್ಸಿ ಹಾಕೀ ಅಲ್ಲಾ. ಅದೇನು ಯಾರಾದರೂ ದೇವರಿಗೆ ಮುಡುಪು ಕೊಟ್ಟದ್ದೇನು?

ಆಚಾರಿ :—ಅಲ್ಲದ ಮತ್ತೇ; ಆ ದೇಶಪಾಂಡೆ ರಾಮರಾಯರ ಹೆಂಡತಿ ಮಕ್ಕಳ ಬದಕಿದರ ಟೀಕಿ ಮಾಡಿಸಿ ಕೊಡತೀನಿ ಅಂತ ಬೇಡಿಕೊಂಡಿದ್ಲಂತ. ಮನ್ನೆ ಹರಕಿ ಮುಟ್ಟಿಸಿ ಹೋದಳಲ್ಲಾ.

ರಾಯರು :—ಅದಕ್ಕೇ ಬಂದೆ. ಬರಾಬ್ಬರೀ ಆತು ನೋಡು. ನಾನೂ ಹೀಂಗ ಏನಾದರೂ ಇರಬೇಕು ಅಂತ ಎಣಿಕಿ ಹಾಕಿದ್ದೆ. ಅಂತೂ ಏನ ಈಗ ನಿನ್ನ ಕೈಯೇನು ಯಾರು ಹಿಡಿವವರಿಲ್ಲ ಬಿಡಪಾ. ಆ ಎಲ್ಲೀ ಯಾವ ಕರೇ ಏನ ಹೇಳಬೇಕಪಾ.

ಆಚಾರಿ :—ಮತ್ತೇನಪಾ ಶ್ರೀಮಂತಾ; ಹೀಂಗೇ ಏನಾರೇ ಯುಕ್ತಿ ಮಾಡ ಬೇಕಲ್ಲಾ; ಇಲ್ಲದಿದ್ದರ ಆ ಎಲ್ಲಿ ಇಲ್ಲ್ಯಾಕ ಇರತಿದ್ದಳು, ನನ್ನ ಹತ್ತೀಲೆ? ಮತ್ತೆಲ್ಲಿಯಾರ ಯಾವನ್ಸ್ನಾರ ಬೆನ್ನ ಹಚ್ಚಿಕೊಂಡು ಹೋಗುತ್ತಿದ್ದಳು. ಈಗ ಹೋಗಿಲ್ಲೇ ನಿನ್ನ ನಿಂಗ; ಅದ್ಯಾಕಪಾ? ನೀಯೇನು ಕೊಡದ್ಹ್ಯಾಂಗಾದೀ!

ರಾಯರು :—ಅದೇ ನೋಡಪಾ ಸಂಕಟ ಬಂದಿರೂದು, ಇತ್ತಲಾಗ ಹೆಂಡ ತೀನು ಸತ್ತು ಹೋತು. ಅತ್ತಲಾಗ ಆ ಸೂಳೀಮಗಳೂ ಕೈಬಿಟ್ಟಳು.

ಆಚಾರಿ :—ಅದಕ್ಯಾಕ ಇಷ್ಟು ಚಿಂತೀ ಮಾಡತೀದಿ. ಮತ್ತ ಯಾವಾ ಕೀನ್ನರೇ ಹೆಪ್ಪೀ ಹಾಕಿದರಾತಪಾ.

ರಾಯರು :—ಅಂಥಾವು ಬಾಳ ದಿನಾ ತಡೀಯುದುಲ್ಲೋ.

ಆಚಾರಿ :—ಭಾಳ ದಿನಾ ತಡೀದಿದ್ದರ ನಿಮ್ಮಪ್ಪನ ಗಂಟ ಏನು ಹೋದ್ದು. ಒಂದು ಹೋದರ ಮತ್ತೊಂದು. ಮ್ಯಾಲಿಂದ ಮ್ಯಾಲ ಬದ್ಲಾಗತಿದ್ದರೇ ಬೇಸಿಪ. (ಮತ್ತೊಮ್ಮೆ ತಂಬಾಕ ಎಡದ ಅಂಗೈಯಲ್ಲಿ ಸಜ್ಜುಗೊಳಿಸುತ್ತ ಏಳುವ ಗಡಿಬಿಡಿ ತೋರಿಸುವನು)

ರಾಯರು :—ಯಾಕಪಾ ಇಷ್ಟ ಅವಸರಾ ಆಚಾರಿ? ಎಲ್ಲೀ ನೆನಪಾದ ಕೂಡಲೇ ಜೀವ ಚುರುಚುರು ಅನ್ನಲಿಕ್ಕೆ ಹತ್ತೇನು? ಕೂಡಲಾ, ಅಷ್ಟು ಇದೇಗ ಚಹಾ ಮಾಡತೇನಿ; ತಗೊಂಡ ಹೋಗು.

ಆಚಾರಿ :—ಹಾಂಗೇನಿಲ್ಲಾ. ಆ ಕುಲಕರ್ಣೀ ತಮ್ಮ್ಯಾಗ್ರೆ ಒಂದು ಗಂಟ ಬಿದ್ದಾನಪಾ. ಅವತ್ತ ನಾ ಗದಿಗ್ಗೆ ಹೋದಾಗ ಆ ಈರ್ಯಾನೂ ಪ್ಯಾಟಿ ಬಸ್ಯಾನೂ ಜಗಳಾಡಿದರಂತಲ್ಲಾ ಆ ಹೊಲೀರ ದುರಗೀ ಕಾಲಾಗ. ಅದರ ದಸಿಂದ ನನಗ ಸಾಕ್ಷಿ ಹೇಳು ಅಂತ ಗಂಟ ಬಿದ್ದಾನಪಾ ಕುಲಕರ್ಣೇ.

ರಾಯರು :—ಹಾಂಗಾರ ಆಚಾರಿಗೆ ಮತ್ತೊಂದು ದಕ್ಷಿಣೀ ಮೂಹೂರ್ತ ಬಂದೇದಲ್ಲಾ, ಅಂತೂ ನೀ ನೋಡಪಾ, ಬಲುಬೆರ್ಕ್ಯಾ ಶುಕ್ರಾಚಾರೀ. ಎಲ್ಲ್ಯಾದರೂ ಏನಾದ್ರೂ ಇಂಥಾವೇ ಹುಡಕಿರತೀ,

ಆಚಾರಿ :—ಮತ್ತದಕೇ ಹೇಳಿದ್ನೆಲ್ಲಪಾ, ಎರಡು ಸಂಸಾರದ ಹೊರಿನ್ನೆ ಮ್ಯಾಲೆ ಅಂತ. ಬರೇ ದೇವರು ಅಂತ ಕೂತರ, ಆ ಕಲ್ಲು ದೇವರೆಷ್ಟು ಕೊಟ್ಟೇತು? ಅತ್ತಲಾಗ ದೇವರ ಹೆಸರ್ಲೆ ಬಂದಷ್ಟು ಜಗ್ಗಬೇಕು. ಇತ್ತಲಾಗ ಬ್ಯಾರೇ ಯುಕ್ತಿನೂ ಹುಡುಕಬೇಕು. ಜಗತ್ತು ನಿಂತದ್ದು ದುಡ್ಡಿನ ಮ್ಯಾಲಪಾ, ಶ್ರೀಮಂತಾ. ಅದಕೇ ನಾ ಒಂದು ಹುಚಿಕೀ ಹುಡಕೇನಿ. ಈ ರೂಪಾಯಿದ ಮ್ಯಾಲ ರಾಜಾನ ಮಾರೀ ಹಾಕಿರ್ತಾರ ನೋಡು! ಇನ್ನಮ್ಯಾಲ ರಾಜಾನ ಮಾರೀ ಹಾಕದ, ಕೂರ್ಮನ ಚಿನ್ಹ ಹಾಕಬೇಕು ನೋಡು. ಯಾಕಂದ್ರೇ, ಈ ಜಗತ್ತೆಲ್ಲ ಕೂರ್ಮನ ಮ್ಯಾಲ ನಿಂತೇದ ಅಂಬೂದುಲ್ಲೇ ಪುರಾಣದಾಗ. ಆದರ, ಖರೇ ಅಂದ್ರ ದುಡ್ಡಿನ ಮಾಲೆ ನಿಂತದ ಜಗತ್ತು.

ರಾಯರು :—ಬಲು ಯುಕ್ತ್ಯೇ ನಿನ್ನವು ಆಚಾರೀ. ಆಗಲಿ ಬಿಡು. ಒಂದಿಷ್ಟು ಚಹಾ ತಗೊಂಡ ಹೋಗೀಯಂತ ನಿಂದ್ರು.

ಆಚಾರಿ :—ಈಗೇನ ಮಾಡ್ತೀ ಬಿಡಪಾ. ಮತ್ತೇನು ನೀನೇ ಮಾಡಬೇಕು ಹೌದಲ್ಲೊ?

ರಾಯರು :—ಮತ್ತ್ಯಾರಪಾ ಮಾಡವ್ರು, ನನ್ನ ಹೊರತು! ಹೆಂಡತೇ? ಮಕ್ಕಳೇ?

ಅಚಾರಿ :—ನಾ ನೋಡಲಾರೆನೋ ಶ್ರೀಮಂತಾ ನಿನ್ನ ಗೋಳಾಟಾ. ಗಂಡಸಾಗಿ ನೀನೇ ಕೈ ಸುಟ್ಟಕೊಂಬುದು ಮಾತ್ರ ನೋಡಲಾರೆ ನೋಡು. ಒಂದ ಮದ್ವಿ ಮಾಡಿಕೊಂಡು ಬಿಡೋ ಹೋಗಲಿ—, ಅಂದರ ಒಲ್ಲೆ ಒಲ್ಲೆ ಅಂತ ಇಲ್ಲದ ಜಂಭಾನೇ ಬಡೀತೀ ಅಪಾ. ಇನ್ನೂ ಎಷ್ಟು ದಿವಸ ನಡ್ಸಬೇಕಂತೀ ಈ ಸೋಗು. ಇಲ್ನೋಡಪಾ ಶ್ರೀಮಂತಾ,—ನಾ ನಿನ್ನ ಮುಂದ ಒಂದ ಖಚಿತ ಮಾತು ಹೇಳತೀನಿ. ಇನ್ನ ಮ್ಯಾಲೆ ನಾವೇನು ಪುರುಷಪಾಕ ತಗೊಂಬವರಲ್ಲಾ. ಚಿಟ್ಟ ಅಂದು ಹೋಗೇದ ತಲಿಯೆಲ್ಲಾ ನಿನ್ನ ಕೈಲೆ ಚಹಾ ಕುಡದು ಕುಡದು. ಇನ್ನ ಮ್ಯಾಲಾದರೂ ನೀ

ಏನಾರ ಮದ್ವೀ ಮಾಡಿಕೊಂಡು ಇರತೀನಂದಿ; ಛಲೋ ಆತು. ಇಲ್ಲದಿದ್ದರ ನಮ್ಮ ಕಂಪೂದ ಮಂದಿಗೆಲ್ಲಾ ಹೇಳಿ ಬಿಡತೇನಿ, ನಿನಗ ಬಹಿಷ್ಕಾರ ಹಾಕೇ ಬಿಡತೇವಿ.

ರಾಯರು :—ಆಗಲೆಪಾ, ಆಚಾರಿ. ನೀ ಇಷ್ಟು ಹೇಳತೀ ಅಂದಮ್ಯಾಲೆ ನಾನೂ ಒಪ್ಪಿಕೋತೇನಿ. ಒಂದು ಹೆಣರ ಗಂಟುಹಾಕಿ ಕೊಡು. ಆಗಿ ಹೋಗ್ಲಿ. ಮತ್ತೇನು, ಈಗಾದ್ರೂ ಖುಷೀನ?

ಆಚಾರಿ :—ಬಾರಪಾ, ಹಾಂಗ ಹಾದಿಗೆ. ನಿನ್ನ ಮನಸಿನಾಗೂ ಎಲ್ಲಾ ಅದೇ ಮದವಿ ಮಾಡಿಕೊಬೇಕು ಅಂತ. ಆದರ ಬರೇ ಢೋಂಗ ಮಾಡತೀದಿ ಆತು. ನಾ ಬಲ್ಲೆ. ನಿಮ್ಮಂಥವರು ಎಲ್ಲಾ ಮದ್ವೀ ಒಲ್ಲೆ ಅಂತ ಅಂದ್ರ ಪ್ರಪಂಚಾ ಮುಂದ ಸಾಗಬೇಕು ಹ್ಯಾಂಗ! ಈ ಬ್ರಹ್ಮಾಂಡಾ ಇವತ್ತೇ ನಿಂತು ಹೋದೀತು !!

ರಾಯರು :—ಅಂತೂ ಮಂದೀ ಮನಸು ಕಂಡ ಹಿಡೀಲಿಕ್ಕ ನೀನೇ ಹಿರದು ನೋಡಪಾ ಶುಕ್ರಾಚಾರಿ. ಆದರ ಒಂದು ಹೆಣ್ಣ ಮಾತ್ರ ನೋಡಬೇಕಲ್ಲಾ.

ಆಚಾರಿ :—(ಎದ್ದು ಹೊರಡುತ್ತ) ಅದರ ಕಾಳಜಿ ಬಿಡೋ ನಿನ್ನ ಮಂಜಾಳ ಹೋಗಲಿ. ಅಷ್ಟ್ಯಾಕ ಎದಿಬಾಯಿ ಬಿಡತೀ; ನಾಯಿದ್ದಮ್ಯಾಲೆ ನಿನಗ್ಯಾಕಣಾ ಚಿಂತಿ ?

ರಾಯರು :—ಹಾಂಗಾದ್ರ ಹೋಗತೀಯಾ ? ಮತ್ತ ನಾಳೆರ ಗಂಜೀಫಿಗೆ ಬರ್ತೀ ಇಲ್ಲೋ. ತಪ್ಪಸಬ್ಯಾಡಪಾ, ನಾರಾಯಾ, ನೀ ಇರದಿದ್ದರ ಆಟಕ್ಕ ರಂಗ ಬರೂದುಲ್ಲ ನೋಡು. ಆದರ ನಮ್ಮಾತು ಮಾತ್ರ ಮರೀಬ್ಯಾಡಾ.

ಆಚಾರಿ :—ಅದರ ಕಾಳಜೀ ಬಿಟ್ಟ ಚಿಂತೀ ಹಿಡೀ ನೀ.

ರಾಯರು :—ಹಾಂಗಲ್ಲಪಾ, ಮಗನೇ. ಆ ಎಲ್ಲೀ ಮನ್ಯಾಗ ಹೋಗಿ ಬಿದ್ದೆಂದರ ಎಲ್ಲಾ ಮರತೇ ಬಿಡತೀಯಪಾ ನೀನು. ಅದಕ ನನಗಿಷ್ಟು ಎದೆಗುದಿ. ಅಂತ್ಲೇಳಿ ಮತ್ತೊಮ್ಮೆ ಎಚ್ಚರಾ ಕೊಟ್ಟಿರತೇನಿ.

ಆಚಾರಿ:—ಎಲಾ ಇವನೇ–ಎಂಥಾ ಮನಸ್ಯಾನೋ ಸೀ! ನಾನೂ, ಆ ಎಲ್ಲೀ ಸಾಲ್ಯಾಗ ದಿನಾ ಕಲೀತಿರೊ ಪಾಠಾನೇ ಅದೂ-ಪ್ರತಿಸಿತ್ಯದ ಮದಿವಿ. ಅಂಥಾದು ನಿನ್ನ ಮಾತು ಮರತೇನೇ? ಅದರೊಳಗ ಸೀ ಅಂದ್ರ ನಮಗ ಗಳಸ್ಯ ಕಂಠಸ್ಯ; ಆಗಲಿ ಬರತೇನಿ ಹಾಂಗಾರ.

(ಹೋಗುವನು)

ರಾಯರು:—ಈ ಲುಚ್ಚ್ಯಾ ಸೂಳೀಮಗನ ಮಾತು ನಂಬಿಕೊಂಡಲ್ಲೀ ಈಗೆಲ್ಲಾ ರಾಮರಕ್ಷಿಯಾಗಿ ಕೂತೇದ ಮನ್ಯಾಗೇ!–ಅಂತೂ ಮಗಾ ನೆಟ್ಟಗ ತಲೀ ಬೋಳಿಸಿದಾ ನಮ್ಮದು. ಇದರಗಷ್ಟ್ಯಾನೇ ಮಾಡಿ ಬಿಟ್ಟ್ಯಾ. (ಅತ್ತಿತ್ತ ತಿರುಗಾಡಿ) ಆದರೂ ಮತ್ತ, ಏನಾರೇ ಹಿಕ್ಮತ್ತು ಮಾಡಿದ್ರೇ, ಅವನೇ ಮಾಡಬೇಕು. ನೋಡೋಣ, ನೋಡೋಣ, ಈ ಸಾರೆ ಏನೇನು ಮಾಡತಾನೋ— !

(ಮತ್ತೆ ಸುತ್ತಾಡುತ್ತಿರುವನು; ತೆರೆ ಬೀಳುವದು)

೨ನೇ ನೋಟ : ರಾಮಾಚಾರಿ

(ಮರುದಿನ ಬೆಳಗು ಮುಂಜಾನೆ. ಒಂದು ಬೀದಿ. ರಾಮಾಚಾರಿ, ಎಡಗೈಯಲ್ಲಿ ತಂಬಿಗೆ ಹಿಡಿದುಕೊಂಡು, ಕಿವಿಗೆ ಜನಿವಾರ ಹಾಕಿಕೊಂಡು ಬರುವನು. ಉಟ್ಟದ್ದು ಲಂಡ ಪಂಚೆ. ಮೈಯೆಲ್ಲ ಬರಿದು. ತಲೆಗೆ ಇನ್ನೊಂದು ಪಂಚೆ ಸುತ್ತಿಯದೆ. ಜನಿವಾರಕ್ಕೊಂದು ಉಂಗುರ ಜೋತಾಡುತ್ತದೆ. ಕಾಲಲ್ಲಿ ಮೆಟ್ಟುಗಳಿವೆ. ಬಲಗೈಯಲ್ಲಿ ಒಂದು ಚಿಕ್ಕ ಗಂಟು. ಅತ್ತಲಿಂದ ಸುಬ್ಬಣ್ಣಭಟ್ಟರು ಬರುತ್ತಾರೆ; ಸಾದಾ ಜೋತರ ಕೋಟು ಅಂಗಿ ಟೊಪ್ಪಿಗೆಯ ಉಡುಪು. ಕೈಯಲ್ಲಿ ಚಂಚಿ. ಈತ ಸ್ವಲ್ಪ ಕುಂಟ; ತುಸು ಉಗ್ರ.)

ರಾಮಾಚಾರಿ :—ಮತ್ತೇನು ಸುಬ್ಬಣ್ಣ ಭಟ್ಟರೇ ಎದ್ದಿರಾ?

ಸುಬ್ಬಣ್ಣ :—ಓಹೋ ರಾಮಾಚಾರೇ—ಎದ್ದಿವಿ; ಎದ್ದಿರಾ? ಮತ್ತೇನು, ಎತ್ಲಾಗ ಹಳ್ಳದ ಕಡೆ ಹೋಗಿದ್ದಿರೇನು?

ರಾಮಾಚಾರಿ :—ಹೂನಪಾ. ಪ್ರಾತಃಕೃತ್ಯಾ ಒಂದು ಬಿಟ್ಟದ್ದಲ್ಲಲ್ಲಾ; ಒಂದು ಹೊಟ್ಟೇದಸಿಂದ ಎಲ್ಲಾ ಪ್ರಪಂಚಾನೇ ಹತ್ತೇದ ಬೆನ್ನು! ಬೈಲುಕಡೆ ಹೋಗೋದು ಹಿಡಕೊಂಡು, ಹೆಂಡರು ಮಕ್ಕಳು ಮನೀ ಮಾರು ಎಲ್ಲಾ ಕನಕದಾಸರು ಹೇಳಿಧಾಂಗ ಒಂದು ಗೇಣು ಹೊಟ್ಟೀದಶೀಂದನೇ ನೋಡಪಾ. ಹೌದಂತಿಯೋ ಅಲ್ಲ ಅಂತಿಯೋ!

ಸುಬ್ಬಣ್ಣ :—ವಾಜಮೀ ಮಾತರೀ ರಾಮಾಚಾರೇ—

ರಾಮಾಚಾರಿ :—ಈ ಖೋಡಿ ಹೊಟ್ಟೇದಸಿಂದ, ಒಂದ ಮಾಡಬೇಕ ಎರಡ ಮಾಡಬೆಕೇ—, ಒಂದು ಪ್ರತಿಸೃಷ್ಟೀನ ಹುಟ್ಟಿಸಬೇಕಾಗ್ತದ ಮನಸ್ಯಾ ಅಂಬಾವ, ಎಷ್ಟ ಖಟಾಟೋಪಾ; ಎಷ್ಟ ಗೋಳಾಟಾ—ಆ.

ಸುಬ್ಬಣ್ಣ :—ರಾಮಾಚಾರೇ — ನಿಮ್ಮಂಥಾ ಅನುಭವಿಕರು, ನಿಮ್ಮಂಥಾ ಜ್ಞಾನಿಗಳು ಕೂತಕೊಂಡು ಹೀಂಗ ಇಷ್ಟು ಗೋಳಾಡತೀರಿ ಅಂದ ನ್ಯಾಲೆ ನಮ್ಮಂಥ ಹುಡುಗರ ಅವಸ್ಥಿಯೇನು? ನಾವು ಹ್ಯಾಂಗಾರ ಬಾಳಿವಿ ಮಾಡ್ತಿದ್ದೇವಾದೀತು!

ರಾಮಾಚಾರಿ :—ಈಗೇ ಕೈಕಾಲು ಬಿಡಬ್ಯಾಡಪಾ ಹುಡುಗಾ. ಇನ್ನೂ ನಿನಗ ತಲೀಗೆ ಬಡೀತೆಂದರೆ ಹೆಚ್ಚು ಬುದ್ಧಿ ಬರತೇದ. ನನಗ ನೋಡು

ಈಗ ಅರ್ಧ ದಿವಸ ಆಗಿ ಹೋದವು. ಹದಿನಾಲ್ಕು ಮಕ್ಕಳಾದವಸಾ ಹೆಣ್ಣು ಗಂಡು ಇದ್ದದ್ದವು ಸತ್ತಿದ್ದವು ಕೂಡಿ. ಈಗ ಮತ್ತ ಹೆಂಡತಿಗೆ ಎಂಟರಾಗ. ಈ ಹೆಂಡತೇರು ಹಿಂಗ ಹಡೀತಾ ಹೋದರ ನಾವರ ಎಷ್ಟು ಅಂತ ಈಡ ಮಾಡಬೇಕಸಾ ಅಂತೀನಿ.

ಸುಬ್ಬಣ್ಣ :—ಅಂತೂ ನೀವು ಎರಡೇಳು ಮಕ್ಕಳ ತಂದಿ ಅನ್ನರಿಲ್ಲಾ. ಇವೆಲ್ಲಾ ಬರೇ ನಿಮ್ಮ ಸ್ವಂತ ಮಕ್ಕಳೂ— —

ರಾಮಾಚಾರಿ :—ಸ್ವಂತ ಮಕ್ಕಳೇಸಾ—ಇನ್ನೇ—ಬಿಟ್ಟೀ ಮಕ್ಕಳ ಲೆಕ್ಕಾ ಎಲ್ಲಿ ಇಟುಕೋತ ಕೂಡಲಿ. ಎಷ್ಟಾದುವೋ ಎಷ್ಟು ಹೋದವೋ. ಇನ್ನೇ–ಬರೇ ನನ್ನ ಸಂಸಾರದ ಗೋಳಂತೀಯಾ? ನಮ್ಮ ಕೆಟ್ಟ ಜೀವಾ, ಮುಂದೀ ದಸಿಂದ ಸಹಿತ ಗೋಳಾಡಬೇಕು. ಈಗ ನಮ್ಮ ಶ್ರೀಮಂತನ್ದು ಮದಿವೀ ಒಂದು ಮಾಡಬೇಕಾಗೇದ.

ಸುಬ್ಬಣ್ಣ :—ಅಂತೂ ಮತ್ತೊಂದು ಪರೋಪಕಾರಕ್ಕ ಕೈ ಹಾಕೀರಲ್ಲಿ ಆಚಾರೇ! ಸಾಕು ಬಿಡ್ರಿಸಾ ಮಹಾರಾಯರ. ಈಗ ಅವನ ಅವಸ್ಥಿ ಇಷ್ಟು ಮಾಡೀರಿ. ಅಷ್ಟೇ ಸಾಕು. ಪಾಪ! ಈಗ ಅವಗ ಹೊಟ್ಟಿ ಬಟ್ಟೀ ಸಾಗಿಸಬೇಕಾದ್ರ ಸಾಕು ಸಾಕಾಗೇದ. ಇನ್ನ ಹೆಂಡ್ತಿನ್ನ ಎಲ್ಲಿ ಗಂಟಹಾಕಿಕೊಂಡಾನು?

ರಾಮಾಚಾರಿ :—ಅದ್ಯಾಕ?—ನಾ ಇಷ್ಟಕ್ಕೇ ಬಿಡತೇನಿ ಏನ್ ಅವನ್ನ?? ಆ ಸೂಳೇಮಗನ್ನ ಏಳು ಕೆರೀ ನೀರು ಕುಡಿಸಿ ಗಲ್ಲಗಲ್ಲ ಬಡಕೊಳ್ಳಿಕ್ಕ ಹಚ್ಚತೇನಿ. ಈ ರಾಮಾಚಾರೀ ತುತ್ತಿಗೆ ಆಶಾ ಮಾಡಿದವರ ಗತಿ ಏನಾಗತದ ಅಂತ ತೋರಿಸೇ ಬಿಡತೇನಿ.

ಸುಬ್ಬಣ್ಣ :—ರಾಮಾಚಾರೇ, ಆ ನಿಂಗೀ ಕಾಲಾಗ ಹೌದಲ್ಲೊ ಇಷ್ಟು ನಿಮ್ಮದೂ ಅವರದ್ದೂ ವರ್ಶ್ಯಾ. ಹೋಗಲಿ ಬಿಡ್ರಿ. ಅವಳೇ ಓಡಿಹೋಗ್ಯಾಳಲ್ಲಾ ಅವನ ಬಿಟ್ಟು.

ರಾಮಾಚಾರಿ :—ಆ ಹಿಕ್ಮತ್ತು ಮಾಡಿದ ಮಗಾ ಅರ ಯಾರವ ಈ ರಾಮಾಚಾರೀ ಹೊರತು. ಈಗ ಆ ನಿಂಗಿ ಯಾರ ಹತ್ತರ ಇದ್ದಾಳಂತ ತಿಳಿದಿ! ಈ ರಾಮಾಚಾರಿ ಅಂದರ ಹ್ಯಾಂಗಹ್ಯಾಂಗ ತಿಳಿದೀರಿ ನೀವೆಲ್ಲಾ.

ಈಗ್ಯಾಕ ಹೇಳ್ಲಿ.—ಮತ್ತ್ಯಾರ ಮುಂದೂ ಸುದ್ದಿ ಒಡೀ ಬ್ಯಾಡಪಾ ಮತ್ತ. ನೀ ನಮ್ಮಾವಾ ಅಂತ ನಿನ್ನ ಮುಂದ ಹೇಳೇನಿ.

ಸುಬ್ಬಣ್ಣ :—(ಕೈ ಕೈ ಚಪ್ಪರಿಸುತ್ತ) ನನ್ನ ವ್ಯಾಲೆ ವಿಶ್ವಾಸ ಅದನೋ ಇಲ್ಲೋ ರಾಮಾಚಾರೀ? —ಅಂದ ವ್ಯಾಲ ತೀರಿತ್ರೆಪಾ. ಹಾಂಗಾರ ಏನು ನಿಂಗಿ ನಿಮಗ ಸಾಮೀಲಾಗ್ಯಾಳೇನ ಮತ್ತ. ಅಂತು ಹಿಡತಾ ಛಲೋ ಹಾಕಿದ್ರೆಪಾ.

ರಾಮಾಚಾರಿ :—ಮತ್ತ ಕೈಯಾರದೊ ಸುಬ್ಯಾ—ನಾ ಏನ ಹೇಳಲಿಪಾ. ಹುಡುಗೀ ಇನ್ನವ್ಯಾಲೆ ಅಸಿಮಿಸಿ ಅಂಬೂ ಹಾಂಗಿಲ್ಲಾ. ಹಾಂಗ ಹಾಕೇನಿ ಒಂಟೀ ಹಿಡತಾ. ಆದರ ಇನ್ನೂ ಆ ಶ್ರೀಮಂತನ್ನೊಂದು ಕೆಬ್ಬೈಕೆಲಬೈ ಅನಸೂತನಕಾ ನನಗೇನು ಸಮಾಧಾನ ಇಲ್ಲ ನೋಡು. ನನ್ನ ತುತ್ತಪಾ ನಿಂಗಿ; ಅದಕ್ಕ ಅವಾ ಕೈ ಹಚ್ಚಿದಾ. ಆಗಲಿ, ಮಾಡತೇನಿ ನಿಂದರು ಅವನ ಪುಟ್ಟಾಪೂರಾ ಫಜೀತಿ. ಆದರ ನೀ ಮಾತ್ರ ಸಾಮೀಲಾಗಿರಬೇಕು ಮತ್ತ. ತಿಳೀತಿಲ್ಲೊ.

ಸುಬ್ಬಣ್ಣ :—ಅದಕ ನನ್ನ ಮಾತು ಖಚೀತ ಅಂತ ಹಿಡೀರಿ, ನೀವು. ಆ ಶ್ರೀಮಂತನಿಂದ ನಮಗ ಏರಗಟ್ಟಿದ್ದರೇ ಏನು, ನೀವು ಇದ್ರ ನಮಗೆಲ್ಲಾ ಇದ್ದಾಂಗ ಅನ್ನಿರಿ. ಹೌದೊ. ಅಲ್ಲೊ?

ರಾಮಾಚಾರಿ :—ಆದರ ಕಾಳಜೀ ಬಿಡಪಾ ಸುಬ್ಯಾ— ಈಗ ಮತ್ತ ನರಗುಂದ ಹಾದೀ ಜಕಾತಿ ಕಟ್ಟೀ ಕೆಲಸ ಒಂದದ; ಹಚ್ಚಿಸಿ ಕೊಡ್ಲೇನು? ಅಥವಾ ಈಗ್ಯಾಕ ಮುಂದ ನೋಡೋಣಂತ. ಅದಕೂ ಬಲಾ ನೌಕರೀ ಸಿಗೂಹಾಂಗ ಮಾಡೇನಂತ.

ಸುಬ್ಬಣ್ಣ :—ರಾಮಾಚಾರ, ನೀವು ನಂಮ ದಸಿಂದ ಏನಾದ್ರೂ ಖಟಿಪಿಟಿ ಮಾಡ್ತಿರಿ ಅಂತ ನಮಗ ಖಾತ್ರಿ ಅದೇನ ಬಿಡಿರಿ.

ರಾಮಾಚಾರಿ :—ಹಾಂಗಾರ ಈಗ ಮಾತ್ರ ನನ್ನ ಕೆಲಸಕ್ಕ ಅನುಕೂಲಾಗು. ಆ ಶ್ರೀಮಂತನ್ನೊಂದು ತೋಬೋ ತೋಬೋ ಅನಿಸಿ ಬಿಡೋಣ.

ಸುಬ್ಬಣ್ಣ :—ಆಚಾರೀ, ನೀವ್ಹೇಳಿಧಾಂಗ ನೋಡ್ರೆಪಾ.

ರಾಮಾಚಾರಿ :—ಹೌದಲ್ಲೊ. ಘಟ್ಟೇ ಹಾಂಗಾರ. ಮತ್ತೀಗ ಎತ್ಲಾಗ ಹೊಂಟೆಪಾ ! ಬಿಸಿಲು ಏರಲಿಕ್ಕೆ ಬಂತು.

ಸುಬ್ಬಣ್ಣ :—ದೇಸಾಯರ ಬಿಟ್ಟ್ರೆಪಾ. ಅವರ ಹುಣಸೀಗಿಡದ ಹೊಲದಾಗ ಹೊಸದಾಗಿ ಒಡ್ಡು ಹಾಕಿಸಲಿಕ್ಕೆ ಹತ್ಯಾರ. ಅಷ್ಟು ದೇಖರೇಖೀ ಮಾಡಬೇಕಾಗೇದ. ದುಡ್ಡುವುಳ್ಳವರ ಮಾತೂ, ಅಷ್ಟು ಮರ್ಜಿ ಹಿಡೀಬೇಕಲ್ಲಾ.

ರಾಮಾಚಾರಿ :—ಆಗಲಿ ಹೋಗು ಹಾಂಗಾರ; ಮತ್ತ ಮಧ್ಯಾನ್ನಕ್ಕ ಬಿಜಿಕ್ಕಿಗೆ ಬರತೀಯಿಲ್ಲೊ್ಯೀ ?

ಸುಬ್ಬಣ್ಣ :—ಬರದೇ ಹ್ಯಾಂಗರೀ. ಏನ ತಪ್ಪಿಸಿದರೂ ಅದನ್ನ ತಪ್ಪಸೂ ಹಾಂಗಿಲ್ಲ.

ರಾಮಾಚಾರಿ :—ಬಾ ಮತ್ತ ಮರೀಬಾಡಾ. ಈಗೇನಪಾ ಅಂತಂದ್ರ, ನಾನು ಆ ಶ್ರೀಮಂತನ್ನ ಮದುವೆಗೆ ಒಪ್ಪಿಸೇನಿ. ಅವನ ಮನಸಿನಾಗೂ ಇತ್ತೂ ಅನ್ನು. ಮಧ್ಯಾನ್ನದಾಗ ನಮ್ಮ ಕಂಪೂ ಕೂಡಿತು ಅಂದ್ರ ನಾ ಮತ್ತ ಆ ಮಾತು ತಗೀತೇನಿ. ನೀನೂ ಅವನ್ನ ಉಬ್ಬಿಸಿ ಬಿಡು. ಏನಾರ ಒಂದ ಭುಲತಾಪಿ ತುಂಬಿ, ಅಂತೂ ಅವನ ಮಡ್ಡೀ ಹೊಲಾ ಅದ ಅಲ್ಲಾ, ಅದನ್ನ ಮಾರಿಸಲಿಕ್ಕೆ ಹಚ್ಚೋಣ. ನಾನೇ ಅದನ್ನ ಮಾರಲಿಕ್ಕೆ ತಗೋಬೇಕು ಅಂತೇನಿ. ಅಂದ್ರ, ಅವನ ಹೊಲದ ತಲೀ ಮಾಲೆ ನನ್ನ ಮಸಾರೀ ತುಂಡು ಏನದೇ ಅಲ್ಲಾ, ಅದನ್ನೇ ಅದನ್ನ ಕೂಡಿಸಿ ಒಂದು ಮಾಡಿ ಬಿಟ್ಟರ, ಏನ ಅಪರೂಪ ಹೊಲಾ ಆಗ್ತದಂದೀ! ಅಂಥಾ ಮಸಾರಿ ಈ ಸೀಮ್ಯಾಗ ಸಿಗಲಿಕ್ಕಿಲ್ಲ. ಅದಕಂತ ಹೇಳಿ, ಈ ಸಾರೆ ಜಾತ್ರೀ ರೌಡು ಸ್ವಲ್ಪ ಹೆಚ್ಚು ಮಾಡಬೇಕಾಗೇದ. ಅಂದ್ರ ಕೈಯಾಗ ಸಾಕಷ್ಟು ದುಡ್ಡೂ ಕೂಡತದ. ಹೀಂಗದ ನೋಡು. ತಿಳೀತೇಪಾ. ನನ್ನ ಮುಸಲತ್ತು. ಅಂತೂ ಅವನ್ನ ಅವನ್ನ ಡಬ್ಬ ಹಾಕೂದಃ. ಏನಂತೀ!

ಸುಬ್ಬಣ್ಣ :—ನಾನು ನಿಮ್ಮ ಮಾತಿಗೆ ಹೊರತಲ್ಲಾ. ಆ ಶ್ರೀಮಂತನ್ನೂ ಬಲಿಯೊಳಗ ಹಿಡಿಯುವಷ್ಟು ಯುಕ್ತಿಶಕ್ತಿ ನಿಮ್ಮಹತ್ತರ ಅವನೇಅವ.

ಅಂದ್ಮ್ಯಾಲೇನು. ಬೇಕಾದಾಗ, ನೀವು ಹೇಳಿದ್ಹಾಂಗ ಮಾಡತೇನಿ. ಮತ್ತೇನು. ಈಗಷ್ಟು ಹೊಲದಕಡೆ ಹೋಗಿಬರ್ತೇನಿ. ಹೊತ್ತಾತು. (ನಮಸ್ಕಾರಮಾಡುವನು.)

ರಾಮಾಚಾರಿ :—ಆತು ಹೋಗಿ ಬಾ. (ನಮಸ್ಕಾರಮಾಡುವನು)

ಸುಬ್ಬಣ್ಣ :—ಕೈಯ್ಯಾಗೇನೋ ಹಿಡಿದೀರಲ್ಲ ಗಂಟು....

ರಾಮಾಚಾರಿ :–ಇದೇಪಾ ಸಂಸಾರಾ ಅಂಬೋದು. ಹಳ್ಳದ್ದಂಡೀ ಪಕ್ಕೀರ್‍ಯಾ ಇದ್ದಾನಲ್ಲಾ, ಈಸಾರೆ ಕಾಯಿಪಲ್ಯಾ ಛಲೋ ಹಾಕ್ಯಾನ. 'ಯಾಕೋ ಸೂಳೀಮಗನೇ, ದೇವರ ಗುಡಿಗಷ್ಟೇನು ಕಾಯಿಪಲ್ಲ ಕೊಡುಹಾಂಗಿಲ್ಲೇನು' ಅಂತ ತುಡುರಿದೆ. 'ಇಕಾ ಯಪ್ಪಾ ನಿಮ್ಮನ್ನ ಬಿಟ್ಟರ ಹ್ಯಾಂಗಾದೀತು' ಅಂತ ಇದಷ್ಟು ಮೆಣಸಿನಕಾಯಿ, ಅಷ್ಟ ಚವಳೀ ಕಾಯಿ, ಒಂದು ಸ್ವಲ್ಪ ಪುಂಡೀಪಲ್ಯಾ, ಒಂದು ನಾಕು ಎಳೆ ಎಳೆ ಸವತೀಕಾಯಿ ಅದೂ ಕೊಟ್ಟಾ. ಹ. ಹ. ಹ.

(ನಗುತ್ತ ಹೋಗುವರು ; ತೆರೆಯೇಳುವದು)

೩ ನೇ ನೋಟ : ರಾಮಾಚಾರಿಯ ರಣರಂಗ

(ಅಂದಿನ ಮೂರೂ ಸಂಜೆ. ಶ್ರೀಮಂತನ ಮನೆ; ಶ್ರೀಮಂತ ರಾಮಾಚಾರಿ, ಸುಬ್ಬಣ್ಣ, ಮದ್ದು, ಅನಂತ, ಬಂಡೆಪ್ಪ ಮೊದಲಾದ ಜನ ಗುಂಪಾಗಿ ಮೂರೆಲೆ ಆಟ ಆಡಲು ಕುಳಿತಿದ್ದಾರೆ. ಆಟವು ಒಳ್ಳೇ ರಂಗಿಗೆ ಬಂದಿದೆ. ಹತ್ತರ ಒಂದೆರಡು ತಕ್ಕೆಗಳು; ಒಂದು ಬದಿಗೆ ಸ್ಟೋ ಕಪ್ಪುಬಸಿ ಮೊದಲಾಗಿ ಚಹದ ಸಾಹಿತ್ಯಗಳು ಗುಂಪಾಗಿ ಬಿದ್ದಿವೆ. ಆಟಗಾರರೆಲ್ಲ ತಮ್ಮ ರುಮಾಲಗಳನ್ನೆಲ್ಲ ತೆಗೆದು ಬದಿಯಲ್ಲಿರಿಸಿ ಕೊಂಡಿದ್ದಾರೆ. ಆಡಆಡುತ್ತ ಆಟಕ್ಕೆ ಒಳ್ಳೆ ರಂಗು ಬರುತ್ತಿದೆ. ರೊಕ್ಕದ ಝಣ ಝಣಾಟವು ಕೇಳಬರುತ್ತಿದೆ. ಹೀಗೆ ಕೆಲವೊಂದುಹೊತ್ತು ಆಟವು ನಡೆದಮೇಲೆ...)

ರಾಯರು :—(ಕೈಯಲ್ಲಿಯ ಕಾರ್ಡುಗಳನ್ನೊಗೆದು) ಸಾಕುಬಿಡ್ರೋ ಇವತ್ತ ಹೊಗಲೀ. ಯಾಕೋ ಭಾಳ ಲಗೂ ಬ್ಯಾಸರ ಬಂತಪಾ ಆಟ.

ರಾಮಾಚಾರಿ :—ಬಂದೀದ್ದೀತು, ನೋಡಪಾ. ಮದ್ವೀ ಅಂತ ಠರಾವು ಆದ ಕೂಡ್ಲೇ ಮನಸೆಲ್ಲ ಮುಂದಿನ ಹೆಂಡತಿ ಮ್ಯಾಲೇ ಕೂತಬಿಟ್ಟಿದ್ದೀತು. ಅಲ್ಲೀ—

ರಾಯರು :—ಏನಪಾ ರಾಮಾಚಾರಿ, ನೀ ಏನ ಬರೇ ಭಾಷ್ಮಳನ ಕಾಣತೀದಿ. ಹಾಲಿಲ್ಲಾ ಬಟ್ಲಿಲ್ಲಾ ಗುಟಕ್ ಅನ್ನು ಅಂತ ಮೂಗಿಗೆ ತುಪ್ಪಾಹಚ್ಚಿ ಕೂಡಿಸಿಬಿಟ್ಟೀ ಆತು. ಏ ಸುಬ್ಬ್ಯಾ—ಚಹಾಮಾಡಪಾ ಹೋಗಲಿ— ಸ್ಟೋ ಹೊತ್ತಸು. ಏ ಮದ್ದ್ಯಾ—(ಆತನಿಗೆ ಸ್ವಲ್ಪ ರೊಕ್ಕ ಕೊಟ್ಟು) ಆ ಗುರವ್ವನ ಅಂಗಡಿಗೆ ಹೋಗಿ ಒಂದು ಪಾವು ಚುರಮುರಿ ತಕ್ಕೊಂಡು ಬಾ. ಸಂಪಾಗಿ ಹಚ್ಚಿಸೋಣ.

ಬಂಡೆಪ್ಪಾ :—ಏನಪ್ಪಾ ಮಗನ, ಶ್ರೀಮಂತಾ, ಅಲ್ಲೊ ಮದಿವಿ ಮಾತ ಆಡತೀರೇನು, ಕಂಗಾಲರಗತಿ ಚರುಮುರಿಯೇನು ತರಸ್ತೀಯೇನು? ಒಂದು ಸಜ್ಜಮೇಜವಾನೀ ಮಾಡಸಬಾರದೇಪಾ.

ರಾಯರು :—ಏನ ಹೇಳಬೇಕಪಾ ಬಂಡೆಪ್ಪಾ. ಒಳಗ ಏನು ಉಳಿದಿಲ್ಲ ನೋಡಪಾ ಅರ್ಥಾ. ನೀವೆಲ್ಲಾ ಏನೋ ಅಂತೀರಿ ಅಂತ ಇನ್ನೂ ಹೆಸರಿಗೆ ಮಾತ್ರ ಶ್ರೀಮಂತ ಆಗಿ ಕೂತೀನಿ. ಅಷ್ಟೇ.

ಅನಂತ :—ಹಿಂಗ ಅಂಬಾವಾ ಮದಿವೀ ಹ್ಯಾಂಗ ಮಾಡಕೋತಿಪಾ ಮಗನೇ. ಹೀಂಗಾದರ ನಿನಗ ಹೆಣ್ಣುಕೊಡೊ ಬೋಳೀಮಗಾ ಅರ ಯಾವ?

ರಾಯರು :—ನಾನೂ ಅದೇ ಅಂತೀನೋ ಮುಂಗ್ಯಾನವುಗನೇ. ಆದರ ಇದಕೆಲ್ಲ ನಮ್ಮ ಶುಕ್ರಾಚಾರಿ ಏನೇನು ಯುಕ್ತಿ ಮಾಡತಾನೋ ನೋಡಬೇಕಪಾ. ಆತನೇ ಅಲ್ಲ ನಮ್ಮ ಕಂಪ್ನೂದ ಕುಲಪುರೋಹಿತಾ-

ರಾಮಾಚಾರಿ :—ಇನ್ನೂ ನಿನಗೆ ನನ್ನ ಮ್ಯಾಲ ವಿಶ್ವಾಸ ಇಲ್ಲೇ ಶ್ರೀಮಂತಾ? ಹಿಂಗಾದರ ನಾ ಏನ ಹೇಳಲೆಪಾ ನಿನಗ ಅಂತೀನಿ. ಹೆಂಣು ತಂದು ಕೊಡೂದು ನನ್ನ ಕೂಡಿತು; ಅದರ ವಿಚಾರಾನೇ ಮಾಡಬ್ಯಾಡ ಬಿಡು ನೀ. ಈಗೇಸ್ರೀ ಹೆಂಣು, ಇಕಾ ಅಂದರ ಎರಡು, ಅಕಾ ಅಂದರ ನಾಕು,

ರಾಯರು :—ಆದರ ರಾಮಾಚಾರೀ, ದುಡ್ಡಿಗೇನ ಮಾಡುಂತೀ?

ಅನಂತ :—
ಬಂಡೆಪ್ಪ :—
ಮದ್ದೂ :—
} ನೀ ಮದುವೆಗಾದರೂ ತಯಾರಾಗಪಾ. ನಮ್ಮಂಥಾ ಮಿತ್ರರಿದ್ದ ಮೇಲೆ ಹ್ಯಾಂಗಾದರೂ ಮಾಡೇವಂತ.

ರಾಮಾಚಾರಿ :—ಶ್ರೀಮಂತಾ ನಾ ಹೇಳಲ್ಯಾ-ನೀನು ಅದರದೂ ಯೋಚನಿ ಬಿಟ್ಟು ಬಿಡು. ನಾ ನಿನಗೆ ಒಂದು ಪೈ ಖರ್ಚಾಗಧಾಂಗ ಮದ್ವಿ ಹೊಡಸತೇನಿ. ಕನ್ಯಾ-ಕಾಯಿ ಮದಿವಿ, ಒಂದು ದಿವಸದಾಗ ಮುಗಿಸಿ ಬಿಡೂಣು. ನಮ್ಮ ಗುಡಿಯೊಳಗೇ ಆಗಿಹೋಗಲಿ, ಚೂರುಚಾರು ಖರ್ಚುಸಹಿತ ನಾನೇ ನೋಡಿಕೋತೇನಿ, ಆತೇಪಾ.

ಸುಬ್ಬಣ್ಣ :—(ಚಹಾಕ್ಕೆ ಎಸರಿಟ್ಟು ಬಂದು) ಇದೇನು ಹೇಳತೀರಿ, ರಾಮಾಚಾರ, ನಿಮ್ಮಂಥವರು ಕೂತುಕೊಂಡು? ಶ್ರೀಮಂತನ ಮದಿವಿ ಅಂದರೇನು? ನಾವೆಲ್ಲಾ ಹತ್ತಮಂದಿ ಮಿತ್ರರು ಇದ್ದೇವೆಂದರೇನು?? ಒಂದು ದಿವ್ಸದಾಗ, ಅದೂ ಗುಡ್ಯಾಗ ಮದಿವೆಂತ! ಹಾಂಗಾದರ ನಾಕಮಂದ್ಯಾಗ ನಮ್ಮ ಕಿಮ್ಮತ್ತು ಕಟ್ಟೀತು!!

ಮದ್ದೂ :—ಸುಬ್ಬ್ಯಾ-ನೀ ಏನ ಹೇಳಿದೆಲ್ಲ ಈ ಮಾತೂ, ಇದು ನೋಡಿದು ರಾಸ್ತ ಮಾತು. ನಂವು ಶ್ರೀಮಂತನ್ನು ದೊಡ್ಡ ಬಳಗಾ. ಭಾಗಾದೇರೊಳಗ ನಾಚಿಗ್ಗೇಡಾದೀತು ಎಲ್ಲಾ್ಯರ!

ಸುಬ್ಬಣ್ಣ :—ರಾಮಾಚಾರೀ ನಮ್ಮ ಶ್ರೀಮಂತಗ ಅಂಥಾ ಇಂಥಾ ಬಿಡಾಡಿ ಬಡವರಹೆಣ್ಣು ಗಂಟಹಾಕಬ್ಯಾಡ್ರೆಪಾ ಮತ್ತss. ಹಾಂಗಿದ್ದರ ಮದ್ವೀನ ಬ್ಯಾಡಾ. ನಾ ಅನಕಾ ಹೇಳ್ತೇನಿ.

ರಾಯರು :—ಹೌದೊ, ಶುಕ್ರಾಚಾರಿ, ಮಾಡೂದು ಮಾಡಿಕೊಂಡ ಮ್ಯಾಲೆ ಒಂದು ಶ್ರೀಮಂತರ ಹುಡಿಗೀನ ಮಾಡಿಕೋಬೇಕಪಾ; ಅಂದರ, ಸಂಗ್ತೀಲೆ ದುಡ್ಡೂ ತಂದಿರಬೇಕು ನೋಡು.

ರಾಮಾಚಾರಿ :—ಅಲ್ಲಪಾ ಮಗನ, ಹಬ್ಬ ಹಸಾ ಹಾಲು ತುಸಾ ಅಂದರ ಹ್ಯಾಂಗ ಆದೀತು ಆ ಮ್ಯಾಲೆ. ಹಾಂಗ ಅಂತಿದ್ದರ ಮಾತ್ರ ದುಡ್ಡ ಬೇಕಪಾ.

ರಾಯರು :—ದುಡ್ಡು ಎಲ್ಲಿದ ತರ್ಲ್ಲೋ? ಅದಕೇ, ಏನಾರ ಒಂದು ಹಂಚಿಕೀ ಹುಡುಕು ಅಂತೀನಿ.

ರಾಮಾಚಾರಿ :—ಒಳ್ಳೇ ಲೆಕ್ಕಪಾ ನಿಂದು. ನಿನಗಾದರೂ ಏನು ಅರೀ ಆಗೇದ. ಆ ಮಡ್ಡೀಹೊಲಾ ಮಾರಿಬಿಡಲಾ.

ಸುಬ್ಬಣ್ಣ :—ಹೌದು ಶ್ರೀಮಂತಾ, ಮಾರಿಬಿಡು, ಹೋಗ್ಲಿ. ಅಂದರೆ ಒಂದ ಮದ್ವಿ ಸಂಪ ಹೊಡಿಸಿಬಿಡೋಣ. ಮಾಡೂದು ಮಾಡಿ ಅನಮಾನ್ಯಾಕ! ನಿನ್ನ ಹೆಸರಿಗೆ ತಕ್ಕಹಾಂಗ ಮದವಿ ಆಗಿಹೋಗ್ಲಿ.

ರಾಯರು :—ಅದನ್ಹ್ಯಾಂಗ ಮಾರೂದಪಾ ಅಂತೀನಿ. ಉಳಿದದ್ದು ಅದೊಂದು. ನಾನೂ ಒಳ್ಳೇ ಜೀನಹಂಕತನಾ ಮಾಡಿ ಇಟ್ಟುಕೊಂಡು ಕೂತೇನಿ. ಅದೂ ಒಂದು ಮಾರಿದರ ಮುಂದ ಗತಿ!

ರಾಮಾಚಾರಿ :— ಥೂ ನಿನ್ನ ಮಂಜಾಳಹೋಗಲಿ. ಹುಟ್ಟಿಸಿದ ದೇವರು ಹುಲ್ಲಮೇಯಿಸತಾನೇನೋ? ಈಗ ಜಗತ್ತಿನಾಗ ಯಾರೇನು ಕೂಳಿಲ್ಲದ ಸಾಯತಾರೀ!! ನಮ್ಮ ಸುಬ್ಬ್ಯಾಂದೇ ನೊಡು ; ನಾಲ್ಕು ವರ್ಷಾತು ಮುಲ್ಕಿಪರಿಕ್ಷಾ ಆಗಿ. ಇನ್ನು ಒಂಮುಹತ್ತು ರೂಪಾಯದ ನೋಕ್ರಿ ಯೇನು ಹತ್ತಿಲ್ಲಪಾ, ಆದರೂ ಸಾಗೇದೋ ಇಲ್ಲೊ ಅವನ ಸಂಸಾರಾ! ಅವನೂ ಈಗ ಮೂರು ಮಕ್ಕಳನ್ನು ಹಡದಾನ. ಮತ್ತಿಗ ಒಂದು ಭಟ್ಟ್ಯಾಗ ತಯಾರಾಗಲಿಕ್ಕೆ ಹತ್ತೇದ. ಯಾಕೋ ಸುಬ್ಬ್ಯಾ, ಹೌದೋ, ಅಲ್ಲೊ ?

ಸುಬ್ಬಣ್ಣ :—ನಾನೂ ಅದೆ ಅಂತೀನಿ. ಇಂಥಾ ಅಳುಬುರುಕತನಾ ನನಗೆ ಸೇರೂದುಲ್ಲ ನೋಡು. ನೀನೂ ಬಲು ಮೀನಾಮೇಷದ ಮನಸ್ಯಾನೋ ಶ್ರೀಮಂತಾ. ನಾ ಆಗಿದ್ದರ ಹೊಡದೇ ಬಿಡತಿದ್ದೆ.

ರಾಮಾಚಾರಿ :—ನಾವಾದರೂ ಏನು ಹೇಳೂದಪಾ ಮತ್ತ ! ನೋಡು. ನಾಳೆ ನಾವೇ ಎಲ್ಲಾರೂ ಕೂತು ಹೊಲಾ ಮಾರಿಸಿದಿವಿ ಅಂದೀ ಮತ್ತ. ಅಂಥಾ ಅಪವಾದ ಸರ್ವಥಾ ಬ್ಯಾಡ ಮಾರಾಯಾ. ಯಾಕಣಾ ಸುಬ್ಬ್ಯಾ. ಹೌದುಂದಿಯೋ ಅಲ್ಲಂದೀಯೊ? ಹೌದ್ರೀ—ಒಂದೇ ಊರವರು--ನೆರೆಹೊರೆಯವರು---ಮಿತ್ರರು---ಹೀಂಗ ಇರುವಾಗ, ಅಪದವಾದಾ ಹೊರಲಾಸಲ್ಲಾ. ಆದರ, ನೋಡಪಾ ಶ್ರೀಮಂತಾ, ಮದವೀ ಬೇಕಂದೀ, ಹೋಗಲಿ ಕೃಷ್ಣಾರ್ಪಣ ಅಂತ ಕಣ್ಣು ಮುಚ್ಚಿಕೊಂಡು ಹೊಲಾ ಮಾರಿಬಿಡು. ಮುಂದ ಮತ್ತೊಬ್ಬ ದೇವರು· ಅಂದರ ನಮಗೂ ಈಗ ಹೆಣ್ಣ ನೋಡಲಿಕ್ಕೆ, ಅತ್ತಲಾಗ ಇತ್ತಲಾಗ ಹೋಗಲಿಕ್ಕೆ, ತಯಾರಿ ಮಾಡಲಿಕ್ಕೆ ಆಗತದ. ಇಲ್ಲೀ, ನಿನ್ನ ಮರ್ಜಿಪಾ.

ಸುಬ್ಬಣ್ಣ :—ಶ್ರೀಮಂತಾ, ಇಲ್ಲಿ ಕೇಳು. ನೀ ಹೊಲಾ ಒಂದೇ ಉಳದದ ಅಂತೀಯಲ್ಲಾ; ಅದಕೇ ನಾನೂ ಅದನ್ನ ಮಾರಿ ಬಿಡು ಅಂಬೋದು. ಅದು ಒಂದರಿಂದ ಬಂದೀತೇನು ? ಹೋದೀತೇನು ? ಮುಖ್ಯಾ, ನಿನಗ ಮದವಿ ಬೇಕೋ ಬ್ಯಾಡೋ ?? ಇಲ್ನೋಡು, ನಾಳೆ ಒಂದು ಶ್ರೀಮಂತರ ಹುಡುಗೀನ್ನ ಮದಿವಿ ಆಗ್ತೀ ಹ್ಯಾಂಗೂ ; ಆ ಮ್ಯಾಲೆ ಮತ್ತಿಂಥಾ ಹೊಲಾ ಹತ್ತು ಕೊಂಡೀಯುಂತೇಳು.

ರಾಯರು :—ಹೌದಪಾ. ಮದ್ವಿ ಬೇಕು· ಅಂತ ಹ್ಯಾಂಗಾರ ಮಾಡಿ ಮಾರಲಿಕ್ಕೆ ಹೋದರ ನಿಂತಕಾಲ ಮ್ಯಾಲ ಅದನ್ನ ತಗೊಂಬುವವ್ರ್ಯಾರು ?

ರಾಮಾಚಾರಿ :—ಯಾರಾರ ತಗೊಂಡೇ ತಗೊಂಡಾರು. ಅಂಥಾ ಹೊತ್ತು ಬಂದರ, ನಮಗೆ ಆಚು ಇದ್ದ ಮ್ಯಾಲ. ಒಂದು ಸ್ವಲ್ಪ ಇಳಿಸಿ ಕೊಟ್ಟ ಬಿಟ್ಟರಾತಪಾ. ಇಷ್ಟ್ಯಾಗಿ ಮೀರಿ ಯಾವನೂ ತಗೊಳ್ಳದಿದ್ದರ, ಎಲ್ಲ್ಯಾರ ಸಾಲಾಮಾಡಿ ನಾನೇ ತಗೋಂಡೇನಂತೆ. ಅದ್ಯಾಕಪಾ ಭಿಡೆ ಮತ್ತ. ನಿನಗೆ ನಿನ್ನ ಹೊತ್ತಿನಾಗ ನೆರವಾಗದಿದ್ದರ ತಗೊಂಡೇನು ಸುಡಬೇಕು ನಮ್ಮ ಜನ್ಮಾ.

ಸುಬ್ಬಣ್ಣ :—ಅಲ್ಲರೀ ರಾಮಾಚಾರೀ ; ಹಾಂಗಾರ, ನೀವೇ ತಗೊಳ್ಳಿಕ್ಕೆ ತಯಾರಿದ್ದರ, ಮತ್ತ ಶ್ರೀಮಂತಾ ಅತ್ತಲಾಗ ಇತ್ತಲಾಗ ಅಲೆದಾಡ ಬೇಕು ಯಾಕೇ ? ಮೊದಲೇ ನೀವು ತಗೊಂಡ ಬಿಡ್ರಿ, ನಿಮಗ ಅಂದ್ರ ಶ್ರೀಮಂತಾ ಮತ್ತೂ ನೂರಾರು ಬಿಟ್ಟು ಕೊಟ್ಟಾನು. ನಮ್ಮ ಆಚಿ ನಾಗ ನಿಮ್ಮ ಹಾಂಗ ನೆರವಿಗೆ ಬರೂ ಮಂದಿ ಕಡಿಮೀರೀ. ದುಡ್ಡು ಹೆಚ್ಚೋ ಮನಸ್ಸು ಹೆಚ್ಚೋ ? ಯಾಕಪಾ ಮುದ್ದು ??

ರಾಮಾಚಾರಿ :—ನೋಡ್ರೆಪಾ. ನೀವೆಲ್ಲಾರು ಹಾಂಗ ಒಪ್ಪಿದರ, ನಾನೇ ಮಾರಲಿಕ್ಕೆ ತಗೊಂಡಬಿಡತೇನಿ. ಕಡೀಕೆ ಸಧ್ಯಕ್ಕ ಗುಡೀ ದುಡ್ಡು ಹಾಕಿಯಾದರೂ ತಗೋತೇನಿ; ನಮ್ಮ ಶ್ರೀಮಂತನ ದಶಿಂದ ಮತ್ತೇನು ಬಂದದ್ದು ಬರಲಿ. ನಾ ಯೇನಪಾ ಮಿತ್ರಾ ಅಂತ ಹೇಳಿ, ಕಡಿಮಿ ಕಿಮ್ಮತ್ತಿಗೆ ಕೊಡು ಅಂತೂ ಕೇಳೂದುಲ್ಲಾ; ನೀವೆಲ್ಲಾರು ನಾಕು ಥೊಡ್ಡ ಜನ ಏನು ಕಿಮ್ಮತ್ತು ಕಟ್ಟೇರಿ ಅಷ್ಟಕ್ಕ ತಗೋತೇನಿ ಹೋಗಲಿ ಆಚಿನಾಗ ಸಿಕ್ಕವರು ಅಂತ ಮತ್ತಷ್ಟು ಒತ್ತೂದು ಅದನೇ ನಮ್ಮ ನಮ್ಮೊಳಗ.

ಸುಬ್ಬಣ್ಣ :— ಮತ್ತೇನಪಾ ಶ್ರೀಮಂತಾ. ಏನಂತೀದಿ. ಆಗಿಹೋಗಲಿ ಮತ್ತ. ನಿನ್ನ ದಸಿಂದ ಅಂತ ರಾಮಾಚಾರು ತಾವೇ ಮುಂದ ಬಂದಾರ ಸ್ವತಃ. ಈಗ ನೀನು ಶಾಣೇತನ ಮಾಡಿ ಹೂ ಅಂದೀ, ನಾವು ಎಲ್ಲಾ ಒಳ್ಳೇ ಹುರುಪಿಲೇ ಕೆಲಸಮಾಡೇವು. ನಾಳೇ ಮದವಿ ಆಗತದ; ಹರೇದ ಹೆಂಡತಿ ಮನಿಗೆ ಬರತಾಳ. ಒಂದು ನಾಕೆಂಟು ಮಕ್ಕಳೂ ಆಗತಾವ. ನಿನಗೇನು ಇನ್ನೂ ಅಷ್ಟು ದಿವಸ ಆಗಿಲ್ಲ. ಹತ್ತು ಇಲ್ಲಾ ಎಂಟಾದರು ಹುಟ್ಟೇ ಹುಟ್ಟತಾವ. ಮತ್ತ ಏನಂತೀ ಹೇಳು. ಸುಳ್ಳೇ ಹೈಗೈ ಬ್ಯಾಡಾ ಸುಮ್ಮನ ದೇವರ ಮ್ಯಾಲ ಭಾರಾಹಾಕಿ ಹೋಡೀ ಛಕಡೀ.

ರಾಯರು :— ಆಗಲೆಪಾ; ಮತ್ತ ನೀವೆಲ್ಲಾ ಹೇಳ್ತೀರಿ. ನಾಳೆ ಖರೀದಿ ಪತ್ರಾ ಮಾಡಿ ಬಿಡೋಣ. ಆತೇ.

ಸುಬ್ಬಣ್ಣ :— ಶುಭಸ್ಯಶೀಘ್ರಂ. ಈಗೇ ನಡೀಯಲಾ. ಸಬ್‌ರಜಿಸ್ಟ್ರಾರ ಕಡೆ ಹೋಗಿಬಿಡೋಣಾ.

ರಾಯರು :—ಈಗೇನು ಮಾಡತೀರಿ. ಕಚೇರಿ ಬಿಡೋಹೊತ್ತಾತು. ಅಷ್ಟು ಚಹಾ ಪಹಾ ತಗೊಳ್ಳಿರಿ.

ರಾಮಾಚಾರಿ:—ಕಚೇರಿ ಬಿಟ್ಟರೇನಾತೂ. ಕಿಸೇದಾಗ ರೊಕ್ಕ ಝಣಝಣ ಅಂತಿದ್ದರ ಸಬ್‌ರಜಿಸ್ಟ್ರರ ಕಛೇರಿ ಇಪತ್ತನಾಕು ತಾಸು ಚಾಲೂನೇ ಇರತದ.

ರಾಯರು :—ಆಗಲಿ. ಚಹಾ ಹ್ಯಾಂಗೂ ತಯಾರ ಆಗೇದ. ಇದಷ್ಟು ತಗೊಂಡು ಸಬರಜಿಸ್ಟರ ಮನೀಕಡೇನೇ ಹೋಗೋಣ.

(ಎಲ್ಲರೂ ಕುಳಿತು ಚಹಾ ಕುಡಿಯುವರು)

ಸುಬ್ಬಣ್ಣ :—ಇವತ್ತ ಮಾತ್ರ ಚಹಾ ರಂಗ್ ಆಗೇದ ನೋಡ್ರೆಪಾ.

ರಾಮಾಚಾರಿ :— ಹೊತ್ತು ಹ್ಯಾಂಗ ಕೂಡಿ ಬಂದೇದ! ಯಾಕಪಾ ಶ್ರೀಮಂತಾ.

ರಾಯರು :—ಆದರ ಚುರಮರಿ ತರಸಲಿಲ್ಲಾ.

ಮದ್ದೂ :—ಆಗಲಿ ಬಿಡು ಇಲ್ಲದಿದ್ದರಿಲ್ಲ. ಇವತ್ತ ಇಷ್ಟೇ ಆತು.

ಅನಂತ: —ನಾಳೆ ಮದಿವ್ಯಾಗ ಅದ ಇಲ್ಲಪಾ ಸಂಪು.

ಸುಬ್ಬಣ್ಣ :—ಮತ್ತೇನು ಶ್ರೀಮಂತಾ ಮದ್ವೀ ಇದೇ ಊರಾಗ ಹೊಡ ಸೂದು ಹೌದಲ್ಲೊ.

ರಾಯರು :—ಇಲ್ಲೇ ಮಾಡಿದರೇ ಭಲೋ ಅಂತೀನಿ.

ರಾಮಾಚಾರಿ :—ಬರಾಬ್ಬರಿ; ಏನೇ ಆದರೂ ಮದವಿ ಮದವೀ ಇದೇ ಊರಾಗೇ ಮಾಡೂದು. ಯಾಕಂತೀಯಾ, ಗೊತ್ತು ಬಲ್ಲ ಊರು, ತುಸಾ ಹೆಚ್ಚು ಕಡಿಮಿ ಆದರ ಮುಚ್ಚಿಕೊಂಡು ಹೋಗಲಿಕ್ಕೆ ಬರತೇದ.

ಸುಬ್ಬಣ್ಣ :—ಅಂತೂ ಮದವಿ ಮಾತ್ರ ದುಂದು ಮಾಡಿ ಬಿಡೋದೇನಪಾ! ಐದು ದಿವಸಾ; ಎರಡು ಭೂಮಾ; ಮೆರವಣಿಗ್ಗೆ ದೇಸಾಯರ ಕಾರು; ಒಂದು ಜೋಡಿ ಕರಡೀ ಮಜಲು, ಒಂದು ಜೋಡಿ ಬ್ಯಾಂಡು; ಯಾಕಣಾ ಮದ್ದೂ, ಏನಂತೀ?

ಮದ್ದೂ :—ಹುಂ ಹೊಡಿಯೂದsa ಮತ್ತೇ.

ಸುಬ್ಬಣ್ಣ :—ಶ್ರೀಮಂತಾ. ದೇವರೂಟದ ದಿವಸ ವಿಶೇಷೇನು ಬ್ಯಾಡಾ; ಒಂದು ಮಸಾಲೀ ಖೀರು, ಒಂದು ಕೇಸರಭಾತು; ಅಷ್ಟೇಸಾಕು. ಯಾಕ್ರೀ.

ಬಂಡೆಪ್ಪ :—ಮಾಮನೀ ಪ್ರಸ್ತ ಒಂದುಳೀತದಲ್ಲಾ.

ಸುಬ್ಬಣ್ಣ :—ಮಾಮನೀಪ್ರಸ್ತಕ್ಕೇನು ಒಂದು ಮೋತೀಚೂರು, ಇಲ್ಲಾ ಮಂಡಗಿ ಮಾಡ್ಸಿ ಬಿಡೋಣಾ. ಮುಂದ ಮೇಜವಾನೀ ದಿವಸಾ ಏನು ಮಾಡ್ಸೂದರೆಪಾ ರಾಮಾಚಾರೀ; ಒಂದು ಜಿಲೇಬಿ ಮಾಡಿಸಿ ಬಿಟ್ಟರ ಸಾಕಲ್ಲೀ ?

ರಾಮಾಚಾರಿ :—ಓಹೋ.

ಸುಬ್ಬಣ್ಣ :—ಇನ್ನ, ಹಪ್ಪಳ ಸಂಡಿಗಿ ಅಂಬೋಡಿ ಬುರಬುರಿ ಕೋಸಂಬರಿ ಚಟ್ಣಿ ವಾಂಗೇಭಾತ ವಾಳಕಾಭಾತ ಮಿರ್ಚೆಭಾತ ಬಟಾಟೇಭಾತ ಎಲ್ಲಾ ಅನುಕೂಲೀ ಪ್ರಕಾರ ದಿನಂಪ್ರತಿ ಇದ್ದೀ ಇರತಾವ. ಯಾಕಪಾ ಬಂಡೆಪ್ಪಾ.

ರಾಮಾಚಾರಿ : —ಆತೊ ಸುಬ್ಬ್ಯಾ.— ಕೋಠೀಖೋಲೀ ವ್ಯವಸ್ಥಾ ನಿನ್ನ ಕಡಿಗೆ. ನೀ ಬೇಖಾದ್ದು ಮಾಡಿಸಿ ಬಿಡು ಹೋಗಲಿ. ಒಮ್ಮೆ ಹಾಂಗ ಮನಸುಮಾಡಿದ್ರ ನಮ್ಮ ಶ್ರೀಮಂತೇನು ಯಾತಕ್ಕೂ ಹಿಂದು ಮುಂದು ನೋಡೂದುಲ್ಲಾ. ಆಗಲಿ ಹಾಂಗಾರ ಏಳಪಾ ಶ್ರೀಮಂತಾ, ಮುಂದ ನೋಂದಣೀ ವ್ಯವಸ್ಥಾ ಅಷ್ಟು ಮಾಡಿಸಿ ಬಿಡೂಣು.

ರಾಯರು :—ಆಗಲಿ ನಡೀರೆಪಾ ಹೋಗೂಣು.

(ಎಲ್ಲರೂ ಹೋಗುವ ತಯಾರಿ ಮಾಡುವರು ; ತೆರೆ ಬೀಳುವದು.)

೪ ನೇ ನೋಟ :

ಕುಂಟಗೆಂಟು ಚೇಷ್ಟೆ ; ಕುರುಡಗೆ ಹದಿನಾರು

(ಮತ್ತೊಂದು ದಿನ. ಗುಡಿಯಂಗಳ. ರಾಮಾಚಾರಿ, ಸುಬ್ಬಣ್ಣರ ಪ್ರವೇಶ.)

ರಾಮಾಚಾರಿ :—ಯತ್ತಲಾಗಿಂದ ಬಂದ್ಯೋ ಸುಬ್ಬ್ಯಾ ?

ಸುಬ್ಬಣ್ಣ :— ಯಾಕೇ? ಮನಿಯಿಂದ !

ರಾಮಾಚಾರಿ :—ಹಾಂಗಲ್ಲೊ ಎಬಡಾ, ಯಾವ ಹಾದೀಲೆ ಬಂದೀ, ಅಂದೆ.

ಸುಬ್ಬಣ್ಣ :—ಯಾಕ? ಪ್ಯಾಟೀ ಹಾದೀಲೇನೇ ಬಂದೆನಲ್ಲಾ!

ರಾಮಾಚಾರಿ :—ಹಾಂಗಾದ್ರ, ಆ ದೇಸಾಯರ ಹೆಂಡತೀನ್ನ ಕಂಡಿದ್ದೀಯಲ್ಲ ಹಾದ್ಯಾಗ? ಇದೇ ಈಗ ಹೋದರು ನೋಡು ಗುಡಿಯಿಂದ—

ಸುಬ್ಬಣ್ಣ :—ಹೌದು ನೋಡಿದೆ. ನಾನು ಆ ಸೇಟಜೀ ಅಂಗಡಿಗೆ ಬರೂದಕ್ಕ ಅವರು ಬಸವಂಣನ ಕೂಟಿನಾಗ ತಮ್ಮ ಓಣೀ ಕಡಿಗೆ ಹೊಳ್ಳಿದರಪಾ. ಯಾಕ?

ರಾಮಾಚಾರಿ :—ಥೂ ನಿನನಿನನಿನ; ಮಹಾ ಅರಿಷ್ಠ ಮುಂಡೇ ಮಗನೋ ನೀನು. ದೇವರು ಕೊಟ್ಟೊ ದುರ್ದೈವಿ ನೋಡು. ಆ ದೇಸಾಯರ ಹೆಂಡತೀ ಸಂಗ್ತೀಲೆ, ಇವತ್ತ ಅದಾವದೋ ಒಂದು ಧಾರವಾಡದ ಹುಡುಗೆಂತ ಬಂದಿತ್ತು. ಅಹಾ ಏನ ಹೇಳಲೆಪಾ. ಬಲು ಅಪರೂಪ ಹುಡುಗಿ ನೋಡಣಾ! ಶಹರದ ಹುಡುಗೀ; ಕೇಳೂದದನೇ—! ನಾಯೇನು ಈ ಶೀಮ್ಯಾಗೇನು ಅಂಥಾ ಅಪರೂಪ ಹುಡಗೀನ್ನ ನೋಡಿದ್ದಿಲ್ಲ ನೋಡು!

ಸುಬ್ಬಣ್ಣ :—ಹೌದೋ! ನಾನು ಧೂರದಿಂದ ನೋಡಿದೆ! ಅದಕೇ ಒಳೀಲಗು ಲಗು ಕಾಲಹಾಕಲಿಕ್ಕೆ ಹತ್ತಿದ್ದೆ. ಆದರೂ ನಾ ಬರೂದ್ರಾಗ ಅವರು ತಮ್ಮ ಓಣಿಗೆ ಹೊಳ್ಳಿದ್ದರಪಾ.

ರಾಮಾಚಾರಿ :—ಹೊಳ್ಳಿದ್ದರೇನಾತೆಪಾ. ನಿನಗೆ ಆ ಓಣ್ಯಾಗ ಹೋಗ ಬಾರದುಂತ ಬಂದೀ ಹುಕುಮಾಗಿತ್ತೇನ್ ಮಗನೇ ?

ಸುಬ್ಬಣ್ಣ :—ಹ್ಯಾಂಗೇಸಿಲ್ಲ. ನಾನೂ ಬೆನ್ನ ಹತ್ತಾವ; ಅಂಬೂದರೊಳಗ ಅತ್ತಲಾಗಿಂದ ಆ ಮಾರವಾಡಿ ಬರತಿದ್ದಾ. ಅಂತ ನಿರ್ವಾಹಯಿಲ್ಲದ ಮತ್ತ, ನೀವ್ಹೇಳಿ ಕಳಿಸಿದ್ದಿರಲ್ಲಾಂತ ಬಂದಬಿಟ್ಟೆ.

ರಾಮಾಚಾರಿ :—ಛೀ ನಿನ. ಮುಂಜಾನೆದ್ದು ಯಾವಾಕೀ ಮಾರೀ ನೋಡಿದ್ದೆಪಾ. ಆ ಬಂಡೆಪ್ಪನ ಮುದಕಿ ಬೆಟ್ಟಿಯಾಗಿದ್ದಳೋ ಏನು? ಏನು ಬರಬೇಕಾದರ ಬೆಕ್ಕುಗಿಕ್ಕು ಅಡ್ಡ ಹಾಯಿತೋ?

ಸುಬ್ಬಣ್ಣ :—ಏನಾಯಿತೋ ಏನೋ ಮಹಾರಾಯಾ? ಆತು; ಮಿಂಚಿ ಹೋದದ್ದಕ್ಕ ಚಿಂತಿಸಿ ಫಲವೇನು.

ರಾಮಾಚಾರಿ :—ಹುಚ್ಚಾ; ಹುಚಿಗಿ ಮಾಡಿದರ ಮಿಂಚಿ ಹೋದದ್ದೂ ಹಿಂಬರಿಕಿ ಲಾಗಾ ಒಗದೀತು. ಆತು, ನಿಂದರು. ಊರಿಗೆ ಬಂದಾಕಿ ನೀರಿಗೆ ಬರೂದುಲ್ಲೀ ಅಂತಾರಲ್ಲಾ.— ಮತ್ತೊಮ್ಮೆ ಗುಡಿಗೆ ಬಂದೇ ಬಂದಾಳು. ನಿಂದರು. ಅದು ಹೋಗಲಿ. ಮತ್ತ ಶ್ರೀಮಂತ ಏನಂತಾನ—ಈಗ— ?

ಸುಬ್ಬಣ್ಣ :—ರಾಮಾಚಾರ, ಹೊಲಾ ಬರಿಸಿಕೊಂಡಿರಿ. ಅರ್ಧಾ ಗಂಟ ಕೊಟ್ಟು ಬಿಟ್ಟಿರಲ್ಲಾ! ನೀವೂ ಹುಚ್ಚತನ ಮಾಡಿದಿರೆಪಾ.

ರಾಮಾಚಾರಿ :—ಅರ್ಧಾ ಗಂಟ ಕೊಟ್ಟರ, ಇನ್ನೂ ಅರ್ಧಾ ಗಂಟು ಹಿಡಿಕೊಂಡೀನಲ್ಲ. ನೋಡೂಣ ಆ ಶ್ರೀಮಂತ ಅದನ್ನ ಹ್ಯಾಂಗಾರ ವಸೂಲ ಮಾಡತಾನ!

ಸುಬ್ಬಣ್ಣ :—ಅದೆಲ್ಲಾ ಆತು. ಹ್ಯಾಂಗಾರ ಅವಗೊಂದು ಮದ್ವಿಶಾಸ್ತ್ರ ಮಾಡಿ ಬಿಡಬೇಕಲ್ಲಾ—

ರಾಮಾಚಾರಿ :— ಹೌದು, ಅದರಾಗಿನ್ನೂ ನಮಗೆ ಫಾಯದೆ ಅದನೀ ಅದೇ — ಇಂದಿಗೆಂಟು ದಿವಸದ ಹಿಂದ ನಾನು ಸಂಚಾರಕ್ಕ ಹೋಗಿದ್ದೆನಲ್ಲ, ಬೆಟಗೇರಿಗೆ; ಆ ಊರ ಪಾಟೀಲರ ಮನಿಗೇ ಹೋಗಿದ್ದೆ. ಮೂರು ರೂಪಾಯಿ, ಅಷ್ಟು ಹೆಸರು, ಒಂದು ಸ್ವಲ್ಪ ಉದ್ದು, ಹುಳ್ಳೀ ಕೊಟ್ಟರು. ಅವರು ಮಾತ್ರ ಭಾರೀ ಶ್ರೀಮಂತರು ನೋಡಪಾ. ಹದಿನಾರೆತ್ತಿನ ಕಮತಾ; ನಾಕು ಆಳೀಯಂಥಾ ಕನ್ಯಾ(ಕೋ)ಣ ಯೇನು!

ಎರಡು ಆಕಳಾ; ಐದು ಎಮ್ಮಿ; ಅರವತ್ತು ಕೂರಿಗಿ ಎರೇ ಭೂಮಿ ಅಂತ.

ಸುಬ್ಬಣ್ಣ :—ಅಂತೂ ಭಾರೀ ಮನೆತನ ಅಪಾ. ಅಂತೇ ನಿಮಗ ಒಳ್ಳೇ ಸನ್ಮಾನ ಮಾಡ್ಯಾರಲ್ಲಾ. ಮತ್ತ ನಿಮ್ಮ ಯೋಗ್ಯತಾನೇ ಅಂಥಾದ್ದು—

ರಾಮಾಚಾರಿ :—ಮತ್ತ? ನಮ್ಮನ್ನ ನೋಡಿ ಮನೀಯವರೆಲ್ಲಾ ಭಾಳ ಸಂತೋಷಬಟ್ಟರು. ನಾವು ನಮ್ಮ ಐಟೇ ಹಾಂಗ ಇಟ್ಟುಕೊಂಡಿರತೇವಿ.

ಸುಬ್ಬಣ್ಣ :—ಎಂಥಾ ಮಾತರೀ.

ರಾಮಾಚಾರಿ :—ಅವರ ಮನ್ಯಾಗ ಒಂದು ಒಳೇ ಛಲೋ ಕನ್ಯಾ ಅದ ನೋಡಪಾ. ಹದ್ನಾಕ ವರ್ಷ– ಏನ ಹೆಚ್ಚೇ ಆಗ್ಯಾವೋ? ಈಗಿನ ದಿವ್ಸದಾಗೇನು ಸುಬ್ಬ್ಯಾ, ಹರಕಿಗೆ ಬಿಟ್ಟ ಕ್ವಾಣಾ ಬೆಳಿಸಿಧಾಂಗ ಬೆಳಿಸೇ ಬೆಳಸ್ತಾರ ಹೆಣ್ಣುಗೋಳ್ನ. ಶ್ರೀಮಂತನ ಗಂಟೇನು ಹೋತು. ಮದಿವ್ಯಾದ ಮರುದಿನ ಮನೀಗೆ ಬಂದರೇ ಛಲೋ ಅಲ್ಲೇ ಹೆಂಡ್ತಿ?

ಸುಬ್ಬಣ್ಣ :—ಹ್ಯಾಂಗೂ ಶ್ರೀಮಂತರ ಹೆಣ್ಣೇ ಹುಡುಕೀರಿ, ಗಂಟ ಹಾಕಿಸಿ ಬಿಡಿರಿ ಹೋಗಲಿ.

ರಾಮಾಚಾರಿ :—ನಾನು ಅದರ ಪೂರ್ವಕಥಾ ಪ್ರಸ್ತಾಪ ಮಾಡೇ ಇಟ್ಟೇನಿ. 'ಏನ್ರೆಪಾ ನಿಂಮ ಗೊತ್ತಲೇ ಏನಾರೂ ವರಾ ಅವಯೇನು' ಅಂತ ಕೇಳಿದ್ರು— ಆ ಹುಡುಗೀ ಅಣ್ಣಂತ. 'ಓಹೋ ಎಷ್ಟು ಬೇಕು ಅಷ್ಟು ಅವ; ಒಂದನಕಾ ಪೈಲಾನಂಬರ ವರಾ ಅದ' ಅಂತ ನಾನೂ ಹೇಳೇಬಿಟ್ಟೆ. ಆ ಹುಡಿಗೀ ಅಣ್ಣನೂ ಹ್ಯಾಂಗಾರ ಆ ಹುಡುಗಿನ್ನಷ್ಟು ಲಗೂ ದಾಟಹಾಕಬೇಕು ಅಂತ ಮಾಡಿಧಾಂಗ ಕಾಣಸ್ತದ. ಇವ್ಮನೇ ವರಾ ಅಂದರೂ ಏನ ಅಡ್ಡಿಯಿಲ್ಲ ಅಂದಾ.

ಸುಬ್ಬಣ್ಣ :— ಯಾಕ ಆ ಹುಡಿಗ್ಗೆ ತಂದಿ ತಾಯಿ ಯಾರೂ ಇಲ್ಲೇನು?

ರಾಮಾಚಾರಿ :—ತಂದಿ ಇಲ್ಲಣಯಿಲ್ಲಾ. ತಾಯಿಯೊಬ್ಬಾಕಿ ಇದ್ದಾಳ ಪಾಪ! ಆ ಮಲಅಣ್ಣ ಒಬ್ಬಾವ; ಒಂದು ತಮ್ಮ ಅದ— ಆ ಹುಡಿಗೀ

ವಾರಿಗೀದು. ಆತು. ತಂದಿಯೇನೊ ಆ ಹುಡಿಗಿ ಹೆಸರ್ಲೆ ಮೂರು ನಾಲ್ಕು ಸಾವಿರ ತಗದಿಟ್ಟಾನಂತ. ಅದಕ ಆ ಹುಡಿಗೀ ಅಣ್ಣಾಗ ತುಸಾ ಹೊಟ್ಟೀಕಿಚ್ಚು ಅಂತ ಕಾಣ್ತದ.

ಸುಬ್ಬಣ್ಣ :—ಆತು; ಅದರ ಫಾಯದೇ ನಾವು ತಗೊಂಡರಾಯಿತು. ಅಂತೂ ಛಲೋ ಕನ್ಯಾನೇ ಆರಿಸೀರಿ. ಶ್ರೀಮಂತನ ದೈವ ತೆರೀತು.

ರಾಮಾಚಾರಿ :—ಶ್ರೀಮಂತನ ದೈವತೆರದರ, ಮತ್ತ ನಾಕ ದಿವಸ ನಮ್ಮ ಬ್ಯಾಳಿ ಬೆಯ್ಯತದೇ–ಅದರಾಗೇನು; ಹ್ಯೊದಲ್ಲೊ ?

ಸುಬ್ಬಣ್ಣ :—ಮತ್ತೇನು ನಡದೇ ಬಿಟ್ಟದಲ್ಲ ಹತ್ತು ವರ್ಷ.

ರಾಮಾಚಾರಿ :—ಅದಕ್ಕ, ನಾಳಿನ ಬಸದ ಹುಣ್ಣಿವಿ ಮುಡಿ, ನನಗ ಮತ್ತೊಮ್ಮೆ ಬಾ ಅಂತ ಹೇಳ್ಯಾರ ಗುಂಡೇರಾಯರು— ಅಂದರ ಆ ಹುಡಿಗಿ ಅಣ್ಣಾ. ಮುಂದ ಪುಷ್ಯ ಮೀರಿಸಿಕೊಂಡು ಮಾಘದಾಗ ವರಾ ಒಮ್ಮೆ ನೋಡಲಿಕ್ಕೆ ಬರತಾರಂತ ಅವರು. ಕನ್ಯಾ ಅನಕಾ ನೋಡಿಧಾಂಗ ಆಗೇದ. ನಾನೇ ನೋಡಿದ ಮ್ಯಾಲ ಉಳಿತೇನು!

ಸುಬ್ಬಣ್ಣ :—ಮುಂದ ಚೈತ್ರ ವೈಶಾಖಧಾಂಗ ಮದಿವಿ ಹೊಡಿಸಿ ಬಿಟ್ಟರಾತು.

ರಾಮಾಚಾರಿ :—ವೈಶಾಖೆಲ್ಲೆ ? ವೈಶಾಖದಾಗ ಅಸ್ತಬೀಳತದ. ಅದಕ ಆದಷ್ಟು ಉಗಾದಿ ಹೊರ ಒಳಗ ಹೊಡಿಸೇಬಿಡೂದು. ಆದರ ಮತ್ತ, — — ಈ ಮಾತೆಲ್ಲ ಗುಟ್ಟಾಗಿ ಇರಬೇಕು. ಅಂ, ಮತ್ತ! ಶ್ರೀಮಂತಗೂ ಹೇಳಿಟ್ಟಿರಬೇಕು. ನಾಳೆ ಹೆಣ್ಣಿನಕಡೀಯವರು ಬಂದಾಗಾಗಲೀ ಮದಿವ್ಯಾಗಾಗಲೀ, ಶ್ರೀಮಂತನ ಖರೇ ಸ್ಥಿತಿಗತಿ ಹೊರಬಿದ್ದಿರ ಬಾರದು. ಅಷ್ಟು ಮಾತ್ರ ಎಚ್ಚರ ಇರಬೇಕು. ಒಮ್ಮೆ ಮದಿವಿ ಆಗಿ ಹೋತು ಅಂದರ ಮುಂದ ಯಾರು ಹಾಳಭಾವಿ ಬಿದ್ದ ಭಾಗ್ಯ ನಮಗೇನು. ಸಾಕ್ಷಾತ್ ಬ್ರಹ್ಮಸಂಕಲ್ಪ; ಯಾರಪ್ಪ ಬಂದರೂ ತಪ್ಪೂ ಹಾಂಗಿಲ್ಲ.

ಸುಬ್ಬಣ್ಣ :—ಹಾಂಗಾದರ ಮದ್ವೀ ಈ ಊರಾಗ ಮಾತ್ರ ಮಾಡ ಬಾರದು!

ರಾಮಾಚಾರಿ :—ಬರಾಬ್ಬರಿ. ಕನ್ಯಾ ಇದ್ದಲ್ಲೇ ಹೋಗಿಬಿಟ್ಟರಾತು. ಈಗೇನು ಶ್ರೀಮಂತ ನಮ್ಮ ಕೈಯಾಗ. ಹೇಳಿಧಾಂಗ ಕೇಳತಾನ. ಈಗ ಮುಖ್ಯ ಅವನ ಹೊಲಾ ನಮ್ಮ ಪದರನಾಗ ಬಿತ್ತು. ಇನ್ನೇನು. ಬೇಕಾದರ ನಾವಷ್ಟು ಅನುಕೂಲ ಆಗೋಣಂತ ಅವಗ ಅನಕಾತಾ. ಯಾಕಂದರ ಆಗಳೇ ಹೇಳಿಧಾಂಗ ಮುಂದ ಫಾಯಿದೇ ನಂಮದೇ.

ಸುಬ್ಬಣ್ಣ :—ಹೌದೇ ಹೌದು. ಮದಿವ್ಯಾಗರ ಏನು! ಶ್ರೀಮಂತಗ ಏನು ಹಿಂದಿಲ್ಲಾ, ಮುಂದಿಲ್ಲಾ! ಓಡ್ಯಾಡವರೂ ಬಿಡವರೂ ನಾವು; ನಮ್ಮ ಹೆಂಗಸರೂ. ಎರಡು ಲಾರೀ ತುಂಬಿ ಹೋಗೂಣಂತ ಬಿಡ್ರಿ, ಅನಮಾನ್ಯಾಕ ದುಂದುಮಾಡಿ ಬಿಡೋದು ನಮ್ಮದೇ ಕೈ; ನಮ್ಮದೇ ಬಾಯಿ.

ರಾಮಾಚಾರಿ :—ಆತು, ನೀನೀ ಶ್ರೀಮಂತನ್ನ ಉಬ್ಬಸತನೇ ಇರು. ನಾನು ಆದಷ್ಟು ಬ್ಯಾಗ ಹೋಗಿ ಹೊಂದಿಸಿಕೊಂಡು ಬರತೇನಿ. ನಾಳೇ ವರಾ ನೊಡಲಿಕ್ಕೆ ಬಂದಾಗ ಅವರ ಕಂಣಾಗ ಮಣ್ಣು ಹಾಕಲಿಕ್ಕೆ ಅಷ್ಟ ಏನಾರೇ ವ್ಯವಸ್ಥಾ ಮಾಡಿದರಾತು.

ಸುಬ್ಬಣ್ಣ :—ಅದಕೇನು ಬಿಡ್ರಿ, ಬೇಕಾದಂಥಾ ಶ್ರೀಮಂತರ ರೀವು ಇಡೋಣಂತ; ಸ್ವಂತ ಶ್ರೀಮಂತನ ಮನೀ ಒಂದು ಸಿಸ್ತವಾರ ಇದ್ದ ಅದನೇ-- ಇನ್ನ ಆ ಇಮಾಮ್ಯಾಗ, ರಮಜಾನಗ ನಾಕ ನಾಕ ಆಣೆ ಒಗದರ, ಡ್ರೆಸ್ಸು ಹಾಕ್ಕೊಂಡ ಬಂದ ಮುಂಜಾನೆ ಹಿಡಿದು ಸಂಜೀತನಕ ಬಾಗಲಾ ಕಾಯ್ತಾರ; ಹೇಳಿದ ಕೆಲ್ಸಾ ಮಾಡತಾರ; ಮತ್ತ ನನ್ನ ಹೆಂಡತಿ, ಬಂಡೆಪ್ಪನ ಹೆಂಡತಿ, ನಿಮ್ಮನೀಯವರು, ಇವರಿಗೆಲ್ಲಾ ಹ್ಯಾಂಗಾರ ಮಾಡಿ, ದೇಸಾಯರ ಮನಿಯಿಂದ ಒಂದು ನಾಕು ಛಲೋ ಛಲೋ ಸೀರಿಪಾರಿ ಕೊಡಿಸಿದರ, ಎಂಥೆಂಥಾ ಶ್ರೀಮಂತರ ಹೆಂಗಸರ್ನ ನಾಚಸೂ ಹಾಂಗ ಕಂಡಾರು. ಇನ್ನ, ನಾಯಕರ ಮನೀದೂ– ಆ ಗಿಳೀ ಚಿತ್ರದ್ದು ಎಲೆಅಡಿಕೀ ತಾಟು, ಶಹಾಪುರದ ಡಬ್ಬಿ— ಅತ್ತರದಾಣಿ ಗುಲಾಬದಾಣೀ —ಬೇಕುಬೇಕಾದ್ದು ತರೋಣು! ದೇಸಾಯ್ರು ಹೋದ ವರ್ಷ ಕೊಂಡಾರಲ್ಲಾ—ಆ—ರತ್ನಗಂಬಳಿ—ಒಂದು ನಾಕು ಕುತ್ನೀ ಲೋಡು ತಂದಿಟ್ಟು ಬಿಟ್ಟರ ನಮ್ಮ ಶ್ರೀಮಂತ ಖರೇ ಶ್ರೀಮಂತನೇ ಆದಾನು.

ಮತ್ತ ಶ್ರೀಮಂತಾ ನೋಡಲಿಕ್ಕೆ ಸ್ವಲ್ಪ ಐಟಿದ್ದಾನ. ಒಂದೆರಡು ಭಲೋ ರೇಶ್ಮಿ ಅಂಗಿ, ಸರ್ಜಿನಕೋಟು, ಜರದ ಜಮುನಾಗಂಗಾ ಶಲ್ಯಿ ಹೊರಿಸಿ ಕೂಡಿಸಿ ಬಿಡೋಣು— ಅಂದ್ರ ಕೇಳರೇನು!! ಇದನ್ನೆಲ್ಲ ನನಗ ಬಿಟ್ಟಬಿಡರಿ; ಮಾಡತೇನಿ, ನೀವು ಹೆಣ್ಣಿನವರ್ನ ಒಪ್ಪಿಸಿ ಕರಕೊಂಡು ಬರ್ರಿ. ಗೋತ್ರ, ರಾಶಿ ನಕ್ಷತ್ರ ಎಲ್ಲಾ ಕೂಡಿಸೇ ಕೂಡಿ ಸತೀರಿ. ನೀವಿದ್ದ ಮಾಲಿ ಕೂಡೂದುಲ್ಲೇ!

ರಾಮಾಚಾರಿ :—ಅದರದೇನೂ ಚಿಂತಿಯಿಲ್ಲ. ಈಗಾಗಲೇ ಎಲ್ಲಾ ಕೂಡೇದ. ಅಂತ ಹಿಡಿಕೋ—ಆತು, ಹಾಂಗಾರ—ಸ್ವಲ್ಪ ಚಂಚೀ ತಗೀಯಲ್ಲಾ.

(ಇಬ್ಬರೂ ಎಲೆಅಡಕೆ ಹಾಕುತ್ತ ಹೋಗುವರು ; ತೆರೆ ಬೀಳುವದು)

೫ನೇ ನೋಟ : ಕೈ ಗೊಂಬೆಗಳು

(ಒಂದು ಬೀದಿ. ಮತ್ತೊಂದುದಿನ. ಸಿಪಾಯರ ಇಮಾಮನೂ ರಮಜಾನನೂ ಒಳ್ಳೇ ಡ್ರೆಸು ಹಾಕಿಕೊಂಡು ಒಬ್ಬರ ಹಿಂದೊಬ್ಬರು ಬರುವರು.)

ರಮಜಾನ :—ಕ್ಯಾಬೇ ಇಮಾಮ್ ಕಹಾ ಚಲ್ಯಾ, ಇತನೀ ಡ್ಯೊಲಕರಕು.

ಇಮಾಮು :—(ಹಿಂದುರಿಗಿ) ತೂ ರಮಜಾನ ಕ್ಯಾಬಾ, ತೂ ಕಹಾ ಚಲ್ಯಾರೇ?

ರಮಜಾನ :—ಮೈ—ವೋ ಶ್ರೀಮಂತಾ ಹೈನಹೀ— ವೋ ಬೊಲ್ಯಾಹೈ– 'ಇವತ್ತ ಮಧ್ಯಾನ ವ್ಯಾಳ್ಯಾಕ ಡ್ರೆಸ್ಸಗಿಸ್ ಐಟಾಗಿ ಹಾಕ್ಕೊಂಡ ತಯಾರಾಗಿ ಬಾ' ಕರಕು ಬೋಲ್ಯಾಹೈ.

ಇಮಾಮು :—ಮುಝೇಭೀ ವೈಸಾಚ ಬೊಲ್ಯಾ. ಮೈಭೀ ವಹಾಚ ಜಾತೂಂ. ಡ್ರೇಸ್ ಠೀಕ ಕರಕೆ ಆಯೇತೋ ಒಂದುರೂಪಾಯಿ ಬಕ್ಷೀಸ ಕೊಡತೀನಿ ಕರುಕು ಬೋಲ್ಯಾಹೈರೇ ಮುಝೇ.

ರಮಜಾನ :—ಮುಝೇಭೀ ಠೀಕ ವೈಸಾಚ ಬೋಲ್ಯಾಹೈ. ಕ್ಯಾಬೇ, ಕಾಮ್ ಕ್ಯಾ ಹೈ ಉಧರ್—ಮೈ ವೋ ಶ್ರೀಮಂತಾಸೇ ಪೂಛಾ, ಫಿರ್ ಅದ ನ್ನೆಲ್ಲಾ ತಗೊಂಡೇನ್ ಮಾಡ್ತಿ ; ನಿನಗ ಭಕ್ಷೀಸ ಒಂದ ಸಿಕ್ಕಿರಾತಿಲ್ಲೋ ಕರಕು ಬೋಲ್ಯಾ— ಮೈ, ಹು ರಾವಸಾಬ ಹಾಂಗೇ ಆಗಲಿ ಕರುಕು ಬೋಲ್ಯಾ.

ಇಮಮಾ :—ಮೈ ಉಸಕಾ ಪತಾ ನಿಕಾಲಾ ಹುಂ. ವೊ ಶ್ರೀಮಂತಾ ಜೋ ಹೈ ದೇಖ, ವೋ ಔರ ಏಕ ಶಾದೀ ಕರನೇವಾಲಾರೇ.

ರಮಜಾನ :—ವೋ ಶ್ರೀಮಂತಾ ದೇಖೋ ಇಮಾಮು ಬಹುತ ಬಡಾ ಹಂಡಬೆರ್ಕಿ ದೇಖೋ. ವೋ ನಿಂಗೀ ಉಸಕಾ ಪಾಸ ಹೊತೀನಹೀ–

ಇಮಾಮು :—ಹೊತೀ ; ಫಿರ್ ಉಸಕೊ ಛೊಡಕೇ ಭಾಗ್ ಗಯೀ ಹೈ– ಔರ, ಏ ಶ್ರೀಮಂತಾ ಏಕ ಬಡಾ ಭಾರೀ ಫರಾಣೇದಾರ ಲಡಕೀಸೇ ಔರ ಭೀ ಏಕ್ ಶಾದೀ ಕರನೇವಾಲಾ— ವೋ ಬೇಟೀಕೀ ಭಾಯೀ ಆಜ ಏ ಶ್ರೀಮಂತಾಸೇ ಬಾತಚೀತ ಕರನೇಕೋ ಆನೇವಾಲೆ.

ರಮಜಾನ್ :—ಉಸೀಕೆ ವಾಸ್ತೆ ಹಮುಕೋ ಬುಲಾಯಾ ನಹೀ, ಇಮಾಮ್? ಹೊಯ್‌ಬೇ ಚಲೋ ಜಾಯೇಂಗೆ. ಹಮ್‌ಕೋ ಕ್ಯಾ–! ಚಾರ್ ಪೈಸಾ ಭಕ್ಷೀಸ್ ಮಿಲೀತೋ ಬಸ್.

ಇಮಾಮ :—ಚಾರ್ ಪೈಸಾ ಕೆಂವ್ ಬೇ; ಶ್ರೀಮಂತಾ ಒಂದು ರೂಪಾಯಿ ಕೊಡತೀನಿ ಬೋಲ್ಯಾ—ಓ ಭಟ್ಟಾ ಹೈ ನಹೀ—ದೀಡ್ ರೂಪಾಯಿ ಕೊಡಸ್ತೇನಿ ಕರಕು ಬೋಲ್ಯಾ— ಚಲೋ ಕೆಂವ್ ಛೊಡೇಂಗೆ!

(ಹೋಗುವರು ; ತೆರೆ ಏಳುವದು)

೬ನೇ ನೋಟ : ಮನೆಮುರುಕರ ಸಂತೆ

(ಅಂದಿನ ಮಧ್ಯಾಹ್ನ. ಶ್ರೀಮಂತರ ಮನೆ; ಪಡಸಾಲೆ, ಒಳ್ಳೇ ಅಚ್ಚುಕಟ್ಟಾಗಿ ಸಜ್ಜುಗೊಳಿಸಿಯದೆ. ಗೋಡೆಗೆ ಹೊಂದಿ ರತ್ನಗಂಬಳಿ, ಕುತ್ನಿಗಾದಿ, ಟಕ್ಕೆ, ದಿಂಬುಗಳು. ಎದುರಿಗೆ ಬೆಳ್ಳಿಯ ಎಲೆ ಅಡಿಕೆ ಡಬ್ಬಿ, ತಾಟು, ಅಣಿಯಾಗಿವೆ. ಬದಿಯಲ್ಲಿ, ಅತ್ತರದಾಣಿ ಗುಲಾಬದಾಣಿ. ಒಂದು ಊದಬತ್ತಿಯಗಿಡ. ಇನ್ನೊಂದು ಬದಿಗೆ ಒಂದೆರಡು ಹೊಸ ಮಾದರಿಯ ಅಂದಚಂದದ ಫರ್ನೀಚರು. ಮತ್ತೊಂದು ಬದಿಗೆ ಒಂದು ಸೇಫು. ಮುಂಬದಿಯ ಮಗ್ಗುಲಿಗೆ ಕಾರಕೂನನ ಪೆಟ್ಟಿಗೆ, ಕ್ಯಾಶ ಬಾಕ್ಸು. ಇಮಾಮು ಮತ್ತು ರಮುಜಾನ ಎಲ್ಲಾ ಹೊಂದಿಸಿಟ್ಟು ಹೊರಡುವರು. ಅಷ್ಟೊತ್ತಿಗೆ ಶ್ರೀಮಂತರು ಅಲ್ಲಿ ಬರುವರು. ಮೈಯಲ್ಲಿ ಒಂದು ಜಾಕೀಟು, ರೇಶ್ಮೀ ಶರ್ಟಿಗೆ ಬಂಗಾರದ ಗುಂಡಿ. ಸರ್ಜಕೋಟು. ತಲೆಗೆ ಜರದಂಚಿನ ರೇಶ್ಮೀ ಕೆಂಪು ರುಮಾಲ. ಉಟ್ಟದ್ದು ನಾಗಪೂರಂಚಿನ ದೋತರ. ಕಾಲಲ್ಲಿ ಹೊಸ ಮುಚ್ಚೆಗಳು. ಕೊರಳಿಸಿಂದ ಹೊರುವ ಶಲ್ಲೆಯನ್ನು ಮುಂಬದಿಗೆ ಎರಡೂ ಮಗ್ಗಲಿಗೆ ನೀರಿಗೆ ಹಾಕಿ ಜೋತು ಬಿಟ್ಟಿದ್ದಾರೆ. ಬಲಗೈಯ ಅನಾಮಿಕೆಯಲ್ಲಿ ಅಷ್ಟಪೈಲಿನ ಜೋಡಿ. ಎಡಗೈಯ ಅನಾಮಿಕೆ ಕನಿಷ್ಠಕೆಗಳಲ್ಲಿ ಹರಳಿನುಂಗುರಗಳು. ಬಲಗೈಯಲ್ಲಿ ಪೋಚಿ. ಜಾಕೀಟಿಗೆ ಗಡಿಯಾರದ ಸರಪಳಿ ಜೋತಾಡುತ್ತಿದೆ. ಕೊರಳಲ್ಲಿ ಒಂದು ಕಾಲರು. ಹಣೆಯಲ್ಲಿ ಕೆಂಪಗೆ ಹೊಳೆಯುವ ಚಿಕ್ಕ ಸಾದು. ಕಿವಿಯಲ್ಲಿ ಹರಳು ಮುತ್ತಿನಬಾವುಲಿ. ಒಳ್ಳೇ ಸಾಫು ಸಾಪಾದ ಮುಖ. ತಿದ್ದಿದ ಮೀಸೆ; ಹೀಗೆ ಸಿಂಗಾರವಾಗಿ, ಕೈಯಲ್ಲೊಂದು ಬೆಳ್ಳೀ ಹಿಡಿಕೆಯ ಕೋಲು ಹಿಡಿದುಕೊಂಡು ಬಂದು, ಅದನ್ನು ಮೂಲೆಯಲ್ಲಿರಿಸಿ, ತನ್ನ ವೇಷಭೂಷಣಗಳನ್ನು ತಿದ್ದಿ ನೋಡಿಕೊಂಡು, ಜೋತು ಬಿದ್ದ ಶಲ್ಲೆಯನ್ನು ತನ್ನೆರಡೂ ಕೈಗಳಿಂದ ಹಿಂಬದಿಗೆ ಹಿಡಿದುಕೊಂಡು ಅತ್ತಿತ್ತ ಕೆಲಹೊತ್ತು ಸುತ್ತುವನು. ಅಷ್ಟರಲ್ಲಿ ಸುಬ್ಬಣ್ಣನೂ ಬಂಡೆಪ್ಪನೂ ಬರುವರು.)

ಸುಬ್ಬಣ್ಣ :—ಓಹೋ, ಶ್ರೀಮಂತಾ; ರಂಗ ಆಗೀ ಬಿಡ ಮಗನೇ! ಯಾಕಣಾ ಬಂಡ್ಯಾ, ಕಾಮಣ್ಣ ಕಂಡ್ಹಾಂಗ ಕಾಣ್ತಾನ ಯಾಕಲೇ.

ಬಂಡೆಪ್ಪ :—ಮತ್ತೇ—; ಹೆಣ್ಣು ಕೊಡಲಿಕ್ಕೆ ಬಂದವರು ನಮ್ಮ ಶ್ರೀಮಂತ್ನ ಡೌಲು ನೋಡಿ ಖ್ಯಾಲ ಆಗಿ ಹೋಗಬೇಕು ಹಾಂಗೇ.

ಸುಬ್ಬಣ್ಣ :—ಅಲ್ಲಪಾ ಶ್ರೀಮಂತಾ, ಉಲಕೋಚಿನನ ಮಗನೇ, ನೀ ಈಗೀ ಇಲ್ಲ್ಯಾಕ ಬಂದೆಪಾ. ಆನಕಾ ಅಟ್ಟದ ಮ್ಯಾಲೆ ಕೂಡು ಹೋಗು.

ಇದೇಗ ರಾಮಾಚಾರು ಹೆಣ್ಣಿನವರ್ನ ಕರಕೊಂಡು ಬರತಾರ. ಆ ವ್ಯಾಲ ನಾವು ಕರೀಲಿಕ್ಕೆ ಬಂದಾಗ ಬರೀಯುಂತ. ಅಷ್ಟು ಹೊತ್ತಿನ ತನಕಾ ನಾವು ಇಲ್ಲೆಲ್ಲಾ ಪೂರ್ವರಂಗ ತಯಾರಮಾಡಿ ಇಟ್ಟಿರತೇವಂತ! ಮತ್ತ ಶ್ರೀಮಂತಾ, ಆಗೂ ನೀ ಉಲಕೋಚಿತನಮಾಡಿ ನಡುವೇ ಬಾಯಿಗೀಯಿ ಹಾಕೀ! ಮಾತಾಡಿಸಿದರೂ ಅಷ್ಟಕ್ಕಷ್ಟೇ. ಒಳೇ ಪೋಚಿಲೆ ಕೂತಿರಬೇಕು ನೋಡು. ಹಾಂಗಾರ ಹೋಗು. ವ್ಯಾಲೆ ಕೂಡು. ನಾಯಕರ ಮನೀ ನಿಲುವುಗನ್ನಡಿ ತಂದಿಟ್ಟೀವಿ, ಡ್ರೆಸ್‌ಪಸ್ ಇನ್ನಷ್ಟು ನೆಟ್ಟಗ ತಿದ್ದಿಕೊಂಡು ತಯಾರಾಗಿರು. (ಶ್ರೀಮಂತ ಮುಗುಳು ನಗೆಯಿಂದ ಹೊರಡುವನು) ಬಂಡ್ಯಾ ನೀ ಅಲ್ಲೆ ಕೂತು ಕೊಂಡಿರು ಅಲ್ಲೆ, ಕಾರಕೂನಾಗಿ. ಆ ಕೋಮಟರ ಮೆಂಕ್ಯಾನ್ನವು ಖಾತೆಕಿರ್ದಿ ತಂದಿಟ್ಟೇನಿ. ಅವನ್ನಷ್ಟು ಅತ್ತಲಾಗಿತ್ತಲಾಗ ತಿರುವಿ ಹಾಕ್ಕೋತ ಕೂಡು. ಏನಾರ ಬರದ್ಹಾಂಗ ಮಾಡತಿರು. ನಾನೂ ಅಷ್ಟ ಐಟಾಗಿ ಬರತೇನಿ. (ಕೂಗುತ್ತ) ಏ ಇಮಾಮ್ಯಾ— ಏ ರಮಜಾನ ಇಲ್ಲೆ ಬರ್ರಿಲೆ ಅಷ್ಟು ಒಳಗೇ (ಅವರು ಬರುವರು) ಸಲಾಂ ಮಾಡ್ರ್ರೀ ಮುಂಗ ನನ್ನ ಮಕ್ಕಳೇ! (ಸಲಾಂ ಮಾಡುವರು) ಹಾಂಗಲ್ಲಾ; ನನಗ ಸಲಾಂ ಮಾಡ್ಲಿಕ್ಕೆ ಹೇಳಲಿಲ್ಲಾ. ನೀವು ಇವತ್ತಿನ ಪೂರ್ತೆ ನಮಗೇ, ಇಲ್ಲಿ ಬಂದವರಿಗೆ ಹೋದವರಿಗೆ ಸಲಾಂ ಮಾಡತಿರಬೇಕು. ಜೀ ಸಾಬ. ಹೂ ರಾವಸಾಹೇಬ ಅಂತಿರಬೇಕು; ತಿಳೀತಿಲ್ಲೊ. ಅಂದರ ರೂಪಾಯಿ ಕೊಡುವಲ್ಲಿ ದೀಡರೂಪಾಯಿ ಕೊಡಸೇನಂತ! ಯಾಕೀ!! ಒಬ್ಬ ಇಲ್ಲೇ ಬಾಗಲ್ದಾಗಿರ್ರಿ, ಇನ್ನೊಬ್ಬ ಹೊರಗ ಅಂಗಳ್ದಾಗಿರ್ರಿ ಯಾಕ: ಏನಂತೀನಿ! (ಸುಬ್ಬಣ್ಣ ಒಳಗೆ ಹೊರಡುವನು)

ಇಬ್ಬರು :—ಜೀ ಸಾಬ; ಹೂ ರಾವಸಾಬ.

ರಮಜಾನ :—ಇಮಾಮ್, ತೂ ಬಾಹಿರ ಜಾರೆ, ರಾವಸಾಬ ಮುಝೆ, 'ಇಲ್ಲಿ ನಿಂದಿರ್ರು' ಕರಕೆ ಬೋಲ್ಯಾ.

ಇಮಾಮ :—ಕಾರೇ ಹರಾಮ್; ರಾವಸಾಬ ಮುಝೆ ಇಲ್ಲಿ ನಿಂದ್ರಿರು ಬೊಲ್ಯಾ; ತೂಚ ಜ್ಯಾರೇ.

ರಮುಜಾನ :—ಕಾಜೀ ಬದ್ಮಾಷ. ಮುಝು ಬೋಲ್ಯಾ ಹೈ ಇಲ್ಲಿ ನಿಂದಿರ್ರಿ ಕರಕೆ; ತೂ ಜಾತಾ ಹೈ ಕಿ ನಹಿ. ತೂ ಬಹುತ್ ಅಡ್ನಾಡೀ ದೇಖರೇ.

ಬಂಡೆಪ್ಪ :—ಯಾಕ್ರೋ ಕತ್ತೀ ಮಕ್ಕಳ್ರ್ಯಾ—ಹೋಗ್ ಒಬ್ಬಾವ ಹೊರಗ.

ರಮುಜಾನ :—ಜಾ, ಜಾರೆ; ಈ ರಾವಸಾಬ ಗಾಲ್ಯಾ ದೇತಾ; ಹೋಗಂತಾರ, ಜಾ ಜಾರೇ ಜಲ್ದೀ (ಇವರೂ ಹೋಗುವನು)

(ಇಬ್ಬರು ಮೂವರು ಹೆಂಗಸರು ಒಳ್ಳೆ ಒನಪಿನಿಂದ ಓಡಾಡುತ್ತ ಅತ್ತರ ದಾಣಿ ಗುಲಾಬದಾಣಿಗಳನ್ನು ಓರಣಿಸಿ ಹೋಗುವರು......ಕೆಲಹೊತ್ತು ಶಾಂತ... ಒಡನೆ, ಸುಬ್ಬಣ್ಣ ಒಳ್ಳೇ ಐಟಾಗಿ ಒಳಗಿನಿಂದ ಬರುವ. ಇತ್ತ ರಾಮಾಚಾರು ಗುಂಡೇ ರಾಯರು, ಶೇಷಾಚಾರು, ಬರುವರು. ರಮ್ಜಾನನ ಸಲಾಂ.)

ರಾಮಾಚಾರಿ :—(ಒಳ್ಳೇ ಆಥ್ಯತೆಯಿಂದ) ಯಾಕೋ ರಮುಜಾನ, ರಾಯರು ಇದ್ದಾರೇನು ಒಳಗ.

ರಮುಜಾನ :—ಕೋನ್, ಶ್ರೀಮಂತ ರಾವಸಾಹೇಬ ಕ್ಯಾ, ರಾವಸಾಬ? ಶ್ರೀಮಂತ ರಾವಸಾಬ ಊಪರ ಹೈ — ಯೇ ಛೋಟಾ ಸುಬ್ಬಣ್ಣ ರಾವಸಾಬ ಯಹೀ ಹೈ—

ರಾಮಾಚಾರಿ :—ಯಾಕಣಾ ಸುಬ್ಬಣ್ಣಾ, ರಾಯರು ಏನು ಮಾಡುತಾರೋ-

ಸುಬ್ಬಣ್ಣ :—ಯಾರು ಶ್ರೀಮಂತರೇ?— ಮ್ಯಾಲ ಮಲಕೊಂಡಾರ ಕಾಣಸ್ತಾದ—

ರಾಮಾಚಾರಿ :—ಹಂ. ಇರಲಿ. ಕರೀಯಲ್ಲಾ—? ಇವರೇ ನಮ್ಮ ಶ್ರೀಮಂತರ ಬೀಗರಾಗವರು— ಗುಂಡೇರಾಯರು— ಕನ್ಯಾದ ಅಣ್ಣ. ಇವರು ಇವರ ಮನೀ ಪುರೋಹಿತರು,— ಶೇಷಾಚಾರು.

ಸುಬ್ಬಣ್ಣ :—ಓಹೋ ನಮೋನ್ನಮಹ, ಬರ್ರಿ, ಹೀಂಗ ಬರ್ರಿ ಮ್ಯಾಲ, ಬರ್ರಿ ಕೂಡಬರ್ರಿ. ಹಾಂಗ ಹ್ಯಾಂಗ ಆದೀತು ಶೇಷಾಚಾರ, ಇತ್ತಲಾಗ ಮ್ಯಾಲ ಬರ್ರಿ. ಇಲ್ಲಿ ಕೂಡ್ರಿ ಇಲ್ಲಿ ಗಾದೀಮ್ಯಾಲೇ. ಹೂಂ ಕೂಡ್ರಿ ನಮಗೇನು ನಡೀತದ. ನೀವು ಅತಿಥಿಗಳು.

(ಎಲ್ಲರೂ ಕೂಡುವರು. ಮತ್ತೆ ತುಸು ಹೊತ್ತು ಶಾಂತ)

ರಾಮಾಚಾರಿ :—ಮತ್ತೇನು ಸುಬ್ಬಣ್ಣ. ಇನ್ಯಾಕ ತಡಾ? ಶ್ರೀಮಂತನ್ನ ಕರೀಯಲಾ; ಮಾತಕಥೀ ಆಗಿಹೋಗಲಿ. ಯಾಕ, ಶ್ರೀಮಂತ ಇನ್ನೂ ತಯಾರಾಗಿಲ್ಲೇನು?

ಸುಬ್ಬಣ್ಣ :—ಏನೆಷ್ಟು ಹೇಳಿದರೂ ಕೇಳಲಿಲ್ಲರೆಪಾ. ಯಾತಕ್ಕ ಒಣಾ ಡೌಲು, ತಯಾರಿ ಅಂತಾನ. ಅದರೊಳಗ ನಿನ್ನೆ ಆ ಲಕ್ಷಾಧೀಶರ ಗುರುರಾಯರು ದುಡ್ಡು ಮುಟ್ಟಿಸಿ, ತಮ್ಮ ವಸ್ತಾ ಬಿಡಿಸಿಕೊಂಡು ಹೋದರು; ಕೊಮಟ್ಗೇರ ಎಂಕಪ್ಪನೂ ಅಸಲೂ ಬಡ್ಡೀ ಮುಟ್ಟಿಸಿ ಲೆಕ್ಕಾ ಚುಕ್ತಾ ಮಾಡಿಕೊಂಡಾ; ಅದೇ ಲೆಕ್ಕಾ ಮಾಡಿಕೋತ ರಾತ್ರಿ ಹನ್ನೆರಡರ ತನಕಾ ಕೂತು ನಿದ್ದಿಗೆಟ್ಟಾರ ಶ್ರೀಮಂತರು. ಮತ್ತ ಇವತ್ತ ಈಳಿಗೇರ ಈರಪ್ಪ ಲೆಕ್ಕಾಚುಕ್ತಾ ಮಾಡಿಕೊಳ್ಳಿಕ್ಕೆ ಬಂದಿದ್ದಾ ಜಹಾಗೀರದಾರ ನಾರಾಯಣರಾಯರು ಮಗಳ ಮದಿವ್ಗೆ, ನಾಕೈದು ಸಾವಿರ ರೂಪಾಯಿ ಸಾಲಾ ಕೇಳಲಿಕ್ಕೆ ಬಂದಿದ್ರು,—ತಮ್ಮ ಅಣ್ಣೀಗೇರಿ ಹೊಲಾ ವತ್ತಿಹಾಕೀ. ಅವರ್ನೆಲ್ಲಾ ಹಾಂಗೇ ಹಿಂದಕ ಕಳಿಸಿ ಬಿಟ್ಟಿವಿ. ಅದೇ ಲೆಕ್ಕದಾಗ ಕೂತಾನ ಬಂಡ್ಯಾ, ಇನ್ನೂ ಮುಗಿದಿಲ್ಲ ನೋಡಿರಿ! ಹೀಂಗ ದೊಡ್ಡಜವಾಬ್‌ದಾರಿ ಮೈಮ್ಯಾಲ; ಅಂತ ಶ್ರೀಮಂತಗ ಪುರಸತ್ತೇ ಇಲ್ಲಾ.

ರಾಮಾಚಾರಿ :—ನಾ ಶ್ರೀಮಂತಗ ಹ್ವಾದ ವರ್ಷಾನೇ ಹೇಳಿದೆ; ನಾಲ್ವತ್ತೂ ಕೂರಿಗಿ ಮನೀ ಕಮತದ್ದೇನೇ ಮಾಡ್ಲೂದೇನ ಕಾರಣಾ; ಹನ್ನೆರಡೆತ್ತಿನ ಕಮತಾ ಯಾಕೇ— ಅಂತ. ಆವಾ ಒಬ್ಬವಾ. ದೇಖ ರೇಖಿ ಸಾಲೂದುಲ್ಲ. ಇನ್ನೇ, ನಿನ್ನ ಪಗಾರಾ ಕೊಟ್ಟಾ ಇಟ್ಟಾನ ಖರೇ, ನೀ ಅರ ಎತ್ತಲಾಗಂತ ಸತ್ತೀ. ಮೇಲಾಗಿ ಅವಾಥವ್ಯ ಬಡ್ಡೀ ವ್ಯವ ಹಾರ; ಇನ್ನೊಂದಿಬ್ಬರ್ನ ಕಾರಕೂನರ್ನರೇ ಇಡು ಅನ್ನು. ಬಂಡ್ಯಾ, ಮದ್ದು, ಇಬ್ಬರೇ ಸಾಕಾದೀತು ಹ್ಯಾಂಗ? — ಯಾಕ ಮದ್ದು ಎಲ್ಲಿ ಹೋಗ್ಯಾನ ಕಾಣ್ಸುದುಲ್ಲ ಇವತ್ತ.

ಸುಬ್ಬಣ್ಣ :—ಮದ್ದುನ್ನ ಹಳ್ಳೀಮ್ಯಾಲ ಕಳಿಸೇದ; ಬಡ್ಡೀ ವಸೂಲಿಗೆ. ಆ ಜೈನರ ಚಂದಪ್ಪನ ಮ್ಯಾಲೆ ದಾವೇನೇ ಮಾಡಬೇಕಾಗತದೋ

ಏನೋ—ಬಡ್ತೀನ ಎಂಟುನೂರು ಆಗಲಿಕ್ಕೆ ಬಂದದ್ರೆಪಾ. ಅದರೊಳಗ ನಮ್ಮ ಶ್ರೀಮಂತರು ಅಂಥಾ ತರಾತುರಿಯವರಲ್ಲಾ.

ರಾಮಾಚಾರಿ :—ಅದು ಮಾತ್ರ ಖರೇ ನೋಡು. ಇಷ್ಟಾದರೂ, ಶ್ರೀಮಂತ ಮಾತ್ರ, ಭಾಳ ಸಾದಾ ಮನಸ್ಯಾ. ಇದ್ದಾವಾ ಅಂತ ಗರ್ವ ಸೊಕ್ಕು ಕಡಿಮಿ. ನಾಕಮಂದಿನ್ನ ಹಚ್ಚಗೊಂಬಾವಾ. (ಗುಂಡೇರಾಯರು, ಶೇಷಾಚಾರೂ ಗುಣಗುಟ್ಟ ಹತ್ತುವರು. ರಾಮಾಚಾರಿ ಅವರ ಕಡೆ ನೋಡಿ.) ಹಾಂಗಾರ, ಶ್ರೀಮಂತನ್ನ ಎಬ್ಬಿಸಿಕೊಂಡು ಬಾ. ಆಗಲಿ. ಹೊತ್ತಾಗೇದ ವಿಶೇಷ ಏನು ತಯಾರಿ ಬ್ಯಾಡಾ. ಅಷ್ಟೇ ಸಾದಾ ದಿನಂಪ್ರತಿ ಡ್ರೆಸ್ಸು ಮಾಡಿಸಿಕೊಂಡು ಬಾ. ಅವಗೂ ವಿಶೇಷ ಬ್ಯಾಡೇ ಬ್ಯಾಡಾ........... ಅಲ್ಲೋ ಸುಬ್ಬಣ್ಣಾ, ಒಳಗ ಏನ್ಸರ ತಯಾರಿ ಮಾಡಿಸೀದಿಲ್ಲೋ?

ಸುಬ್ಬಣ್ಣ :—ಮಾಡಿಸೀನಿ. ಆದರೇನು ಒಬ್ಬ ಅಡಿಗೀಯಾವಾ, ಮಗಳ ಜಡ್ತ ಅಂತ; ಆಯತಾ ಊರಿಗೆ ಹೋದ; ಇನ್ನ ನಾರಾಯಣ ಚಾರಿಗೆ ಸೂತಕಂತ. ಅಂತ ಎಲ್ಲಾ ಹೆಂಗಸರ ಮ್ಯಾಲೇ ಬಿದ್ದೇದ.

ರಾಮಾಚಾರಿ :— ಆತ ಬಿಡು, ಮನಿತುಂಬ ಬೇಕಾದಷ್ಟು ಹೆಂಗಸರಿದ್ದಾರೇ-ಮಾಡ್ಯಾರು! ಏನು ದೊಡ್ಡಮಾತು!! ಆಗಲಿ, ಹೋಗು ರಾಯರ್ನ ಕರಕೊಂಡು ಬಾ.

(ಸುಬ್ಬಣ್ಣ ಹೋಗುವನು. ಗುಂಡೇರಾಯ, ಶೇಷಾಚಾರು ತಮ್ಮತಮ್ಮೊಳಗೆ ಮಾತಾಡುತ್ತಿರಲು, ಶ್ರೀಮಂತನನ್ನು ಕರಕೊಂಡು ಬರುವನು.)

ರಾಮಾಚಾರಿ :— ಬಾರಪಾ. ಶ್ರೀಮಂತಾ— ಹೀಂಗ (ನಮಸ್ಕಾರ ಚಮತ್ಕಾರದೊಂದಿಗೆ ಶ್ರೀಮಂತ ಕುಳಿತುಕೊಳ್ಳುವನು. ಮತ್ತೆ ಎಲ್ಲರಲ್ಲಿ ಗುಜಗುಜು ನಡೆಯುವದು)

ರಾಮಾಚಾರಿ :—ಸುಬ್ಬಣ್ಣಾ (ಸುಬ್ಬಣ್ಣನು ಒಳಗೆ ನೋಡುವನು. ಒಳಗಿನಿಂದ ಭಾರೀ ಭಾರೀ ಸೀರೆಗಳನ್ನುಟ್ಟು, ವಸ್ತ್ರಗಳನ್ನು ತೊಟ್ಟ ಒಂದಿಬ್ಬರು ಹೆಣ್ಣುಮಕ್ಕಳು ಫಲಾಹಾರಗಳನ್ನು ತಂದಿಡುವರು. ಫಲಾಹಾರ ನಡೆಯುವದು.) ಶ್ರೀಮಂತಾ—ನೀ ತಗೋಳಪಾ.

ಶ್ರೀಮಂತ :—ಆಗಲಿ ನಿಮ್ಮದೆಲ್ಲಾ ಆಗಲಿ, ಬಂದವರು, ಅತಿಥಿಗಳು—;

ರಾಮಾಚಾರಿ :—ಯಾಕ ಶೇಷಾಚಾರ, ತಗೊಳ್ರಿಲಾ; ಚಹಾ ತಗೋತೀರಿ ಹೌದಲ್ಲೊ?

ಶೇಷಾಚಾರು :—ಓಹೋ, ಚಹಾ ನಿಷಿದ್ಧ ಅಂಬೂದು ಹೋಗೇ ಬಿಟ್ಟಿದಲ್ಲಾ—ಶಾಸ್ತ್ರದಾಗ........!!

ಸುಬ್ಬಣ್ಣ :—ಶಾಸ್ತ್ರದಾಗs ತಗದ ಬಿಟ್ಟಾರೇನು ?

ರಾಮಾಚಾರಿ :—ಮತ್ತೇನು, ಸುಬ್ಬಣ್ಣಾ; ನೀಯಿನ್ನ ಹಳಬರ್‍ಹಾಂಗ ಮಾತಾಡ್ತೀದಿ. (ಫಲಾಹಾರದ ನಂತರ ತಾಂಬೂಲಸೇವನೆ, ಅತ್ತರದಾಣಿ ಗುಲಾಬದಾಣಿಗಳ ಲೇಪನಸಿಂಚನಗಳು ಮುಗಿದ ಮೇಲೆ...) ಆಗಲಿ, ಮತ್ತ ಶೇಷಾಚಾರೇ ಅಂಬೋಣೇನು ?

ಶೇಷಾಚಾರು :—ಅಂಬೋಣೇನು ! ವರಾ ಅನಕಾ ಮದಲೇ ಮನಸಿಗೆ ಬಂದಾಹ್ಹಾಂಗ ಆಗೇದ–ಯಾಕ್ರೆಪಾ ಗುಂಡುರಾವ್ (ಅವರು ಗೋಣು ಹಾಕುವರು) ಇನ್ನ ಮುಹೂರ್ತ, ಯಾದಿ ಅಷ್ಟು ಗೊತ್ತು ಮಾಡಿದರಾತು.

ರಾಮಾಚಾರಿ :—ಮುಹೂರ್ತೇನು, ಇಂದಿಗೆಂಟುದಿವ್ಸ, ಶನಿವಾರ ದ್ವಾದಶೀ ಮುಹೂರ್ತಾನೇ. ಯಾಕಂದ್ರ ನಮ್ಮ ರಾಯರು, ಮತ್ತ ಮುಂದ ಜರೂರು ಅತ್ತಲಾಗ ಶಹಾಪೂರ ಸಾಂಗಲಿ ಮುಂಬೈ ಕಡೇ ಹೋಗಬೇಕಾಗದ. ಅವರಿಗೆ ನೋಡ್ರಿ ಇಪ್ಪತ್ತೆಂಟು ಕೆಲ್ಸ.

ಗುಂಡೇರಾಯ :—ನಾವರೇ ಎಲ್ಲಿ ಬ್ಯಾಡಾಂತೀವಿ. ನಮಗೂ ಆದಷ್ಟು ಲಗೂ—ಅದಕೂ ಮದ್ಲೇ ಆದ್ರೂ ಬೇಕು. ಹೌದಲ್ರೀ ಶೇಷಾಚಾರ?

ಶೇಷಾಚಾರು :—ಹಾಂಗಾರ ದಶಮೀ ಮುಹೂರ್ತನೂ ಛಲೋನೇ ಆದ; ಅವತ್ತ ಆಗಿ ಹೋಗಲಿ. ಯಾಕ ರಾಮಾಚಾರ, ನಿಮ್ಮದೇನು ಅಡ್ಡೀ ಅದೇನು ?

ರಾಮಾಚಾರಿ :—- ನಾವೆಲ್ಲಾ ಏನು ! ಶ್ರೀಮಂತರು ಹ್ಯಾಂಗ ಹೇಳತಾರ ಹಾಂಗಪಾ. ಅವರು ಮುಖ್ಯ ಯಜಮಾನರು; ನಮ್ಮಂಥಾ ನಾಕು ಕುಟುಂಬಾ ಹಿಡಿಯೂ ಸಾಮರ್ಥ್ಯ ಅವರದು. ಮತ್ತೇನು ರಾಯರು ಏನಂತಾರೇ—-.

ಶ್ರೀಮಂತ :—ನಂದೇನು ಅಡ್ಡೀಯಿಲ್ಲ; ನೀವೆಲ್ಲಾ ಹಿರೇರು ಹೇಳಿಧಾಂಗ.

ರಾಮಾಚಾರಿ }
ಶೇಷಾಚಾರು } ಹಾಂಗಾದ್ರ ದಶಮಿ ಮುಹೂರ್ತಾನೇ ಠರಾಯಿಸಿದಾಂಗ ಆತು.

ಗುಂಡೇರಾಯ :—ಹಾಂಗಾದ್ರ ಶೇಷಾಚಾರ, ಯಾದೀ ಅಷ್ಟ ಸಧ್ಯಕ್ಕ ಗೊತ್ತುಮಾಡಿ ಬಿಡೋಣ; ನಿಶ್ಚಯದ ಕೆಲಸಾ, ಶಾಸ್ತ್ರಕ್ಕ, ಇವರು ಒಂದು ದಿನ ಮದ್ಲೇ ಬಂದ ತೀರಿಸಿಕೊಳ್ಳಿ.

ಶೇಷಾಚಾರು :—ಅಷ್ಟೇ ಸರಿ; ಹುಡುಗೀ ಕೈಯ್ಯಾಗೊಂದು ಖಣಾ ಕೊಟ್ಟು ಉಡೀ ತುಂಬಿ ಬಿಟ್ಟರಾತೂ....ಇನ್ನೇ ವರದಕ್ಷಿಣೇ, ವರೋಪಚಾರದ ಮಾತುಕಥೀಯಂತೂ ತೀರೇ ಹೋಗೇದ. ಅಂದಮ್ಯಾಲೆ ಈಗ ಯಾದಿ ಆಗಿ ಹೋಗ್ಲಿ....

ರಾಮಾಚಾರಿ :—ಆಗ್ಲಿ. ಶೇಷಾಚಾರೇ, ತಗೋಳ್ರಿ; ಬರೀರಿ. (ಶೇಷಾಚಾರು ಬರೆಯ ಹತ್ತುವರು.)....ಶ್ರೀ—ಅನ್ರಿ.... ಲಕ್ಷ್ಮೀವೆಂಕಟೇಶಪ್ರಸನ್ನ.... ಯಾದೀ....ಹೂಂ, ವರನ್ನ ಹೆಸರೂ....ಹೂಂ....ಆತೇ?.... ಕನ್ಯಾದ ಹೆಸರು....ಇವಳನ್ನ ಕೊಡೋದು ಗೊತ್ತುಮಾಡೀ....ಕೊಡತಗೊಂಬೋದರ....ತಪಶೀಲೂ........ವಧುವಿಗೇ..... ಹರಿದ್ರಾಕುಂಕುಮಾ..... ಮಂಗಳಸೂತ್ರಾ....ಸುತ್ತಗಾಲುಂಗರಾಪಿಲ್ಲ್ಯಾ ಭಂಗಾರದ್ದಾಗೀನೀ....

(ಇತ್ಯಾದಿ ಮಾತುಗಳು ನಡೆಯುತ್ತಿರಲು ತೆರೆ ಇಳಿಯುವುದು.)

೭ನೇ ನೋಟ : ಕವಡಗಂಟಕರು

[ಶೇಷಾಚಾರು ಗುಂಡೇರಾಯ]

ಶೇಷಾಚಾರು :—ಗುಂಡೇರಾಯಾ ; ನೀನೂ ಭಾಳ ಸೋತ ಹೋಗೀ ನೋಡಪಾ. ಹಂದರ ಜ್ವರಾ !

ಗುಂಡೇರಾಯ :—ಹೊಗೀ ಮುಂದ ಕೂತಕೂತು ಮದುವಿ ಹ್ಯಾಂಗಾ ದೀತ್ರೋ ಅಂತ ಆಗಿತ್ತು. ಅಂತೂ ಸೀತೀ ಮದಿವಿ ಪಾರಾತೂ; ಸಾಕು.

ಶೇಷಾಚಾರಿ :—ನಮ್ಮ ಬಾಬು ಅಷ್ಟು ಪೂರಾ ಮುಟ್ಟಿಸಿರೆಲ್ಲಾ.

ಗುಂಡೇರಾಯ :—ಏನೋ ಶೇಷಾಚಾರಿ; ನಮ್ಮಪ್ಪ ಆ ಖೋಡಿ ಸೀತಿ ಹೆಸರ್ಲೆ ಐದುಸಾವಿರ ರೂಪಾಯಿ ಇಟ್ಟಿದ್ದಾ. ಅದನ್ನ ಅಷ್ಟೂ ಎತ್ತಿಹಾಕಬೇಕು ಅಂತ ಮಾಡಿದ್ದೆ. ಸಾಧಸಲಿಲ್ಲಾ. ನೀನೂ ರಗಡು ಸಹಾಯಾ ಮಾಡಿದೀ. ಆದರೂ ಪೂರಾ ಸಾಧಿಸಲಿಲ್ಲಾ. ಮೂರು ಸಾವಿರ ರೂಪಾಯಿ ದಕ್ಕಿಸಿಗೋ ಬೇಕಾದ್ರ ಸಾಕ ಸಾಕಾಗಿ ಹೋತು ; ಗೊತ್ತೇ ಅದೇ ಅಲ್ಲಾ.

ಶೇಷಾಚಾರಿ :—ಅಂತೂ ಇದರೊಳಗ ನಿಂನ ಹೆಂಡತಿ ಭಾಗೂಬಾಯೀ. ಮುಸಲತ್ತೂ ಹರೇಮಿತನಾ ಕೂಡದಿದ್ದರ, ಇಷ್ಟರೀ ಎಲ್ಲೆ ನಮ್ಮ ಉಡೀಗೆ ಬೀಳತಿತ್ತು !!!

ಗುಂಡೇರಾಯ :—ಹೌದ್ ನೋಡು, ನನ್ನ ಹೆಂಡತೀನು ಮಹಾ ಹರೇಮಿ; ಗಂಡಸರಕಿಂತ ಸಾಹಸಾ ಆಕೀದು.— ಆತು— ಈಗ ಅನಕ ಅಷ್ಟ ಕೊಟ್ಟೇನೇ ? ಮತ್ತೀಗ ಇದಿಷ್ಟುತಗೋ (ರೂಪಾಯಿ ಕೊಡುವನು); ಮತ್ತ ಹಿಂದಾಗಡೆಯಷ್ಟು ಕೊಟ್ಟೇನಂತ.— ಅಲ್ಲದೇ ಇನ್ನೂ ಈಗ ಕೆಲಸ ಎಲ್ಲಾ ತೀರಿಲ್ಲಾ. ನಮ್ಮಪ್ಪಾ ಆ ಅರಿಷ್ಟ ಸೀತಿ ಹೆಸರ್ಲೆ, ಆ ಸುಣಗೇರಿ ಮೂರು ನಂಬ್ರ ಅವ ಅಲ್ಲಾ— ಆರನೂರು ರೂಪಾಯಿ— ಜಮೀನು;—ಅವನ್ನ ಆ ಸೂಳೇಮಗಳು ಸೀತಿ ಹೆಸರ್ಲೆ, ನಮ್ಮವ್ವನ ಹೆಸರ್ಲೆ ಮಾಡಿಟ್ಟಾನ. ಅದೊಂದು ಕಠೀಣಾ. ಆಕಿ ಎಷ್ಟೆಂದರೂ ನನಗ ಮುಲತಾಯಿ; ನಾಳೆ ನನಗ ಒಂದು ಕೂದಲೇಕೊಡೂದಿಲ್ಲ.

ಆ ಲೌಡೀ ಮಗಳು ಎಲ್ಲಾ ತನ್ನ ಮಕ್ಕಳು—ಆ ಸೀತಿ—ಆ ನಾಸ್ಯಾಗ ಮಾಡಿಡತಾಳ. ವ್ಯಾಲೆ ಆ ನಾನ್ಯಾ ಸಂದರಾಗ ಪಾಲ ಬೇಡಾವನೇ–ಆವಕ ಆ ನಾನ್ಯಾ ವಯಸ್ಸಿಗೆ ಬರೂದರಾಗ ಅವಷ್ಟು ಹೊಲಾ ದಾಟ ಹಾಕಬೇಕಾಗೇದ. ಆ ಸೀತಿಗನಕಾ ಏನುಗೊತ್ತಿಲ್ಲಾ; ಗುರಾಚಾರಿಲ್ಲಾ

ಶೇಷಾಚಾರಿ:—ನಿಮ್ಮವ್ವನ್ನ ಸ್ವಲ್ಪ ಟೊಪಿಗಿ ಹಾಕಬಾರದೇ— ನೀನೂ ಬಲು ಅಳದಕ್ಕೀಯವನೋ,

ಗುಂಡೇರಾಯ:—ಹಾಂಗ ಮಾಡಲಿಕ್ಕೆ ಬರೂದುಲ್ಲೋ ಆಚಾರಿ; ನಾನೂ ಭಾಳ ತಿಪ್ಪರಲಾಗಾ ಹಾಕಿದೆ. ನಮ್ಮವ್ವ ಬಲೇ ಜಿಬಟು; ಪೈಪೈ ಕೊಡೂದುಲ್ಲಾ. ಅದಕ್ಕ ಇದೆಲ್ಲಾ ಮತ್ತ ಆ ಸೀತೀ ಗಂಡಗೂ ಗೊತ್ತಾಗಬಾರದು—ಆ ಶ್ರೀಮಂತಗೇ

ಶೇಷಾಚಾರಿ:—ಏನು ಶ್ರೀಮಂತಪಾ! ಬಲು ಹೆಪ್ಪೀ ಬಿದ್ದೆವಲ್ಲ ನಾವೂ, ಅವನ ಅಂದಿನ ಆಡಂಬರಕ—!! ಆ ಸೂಳೀಮಗ್ಗ ಮಧ್ಯಾನ್ನಕ್ಕ ಗತೀಯಿಲ್ಲಂತ. ಅಂಥಾವಗ ನಮ್ಮ ಸೀತಕ್ಕನ್ನ ಎರಡ ಸಾವಿರಾ ಕೊಟ್ಟುಕೊಟ್ಟೆವಿ. ಹುಚ್ಚರಲ್ಲ ನಾವು

ಗುಂಡೇರಾಯ:—ಆತು ಬಿಡು— ಆ ಸೀತೀ ದೈವಾ! ನಾವೇನುಮಾಡೋದು. ಭೋಗಸೂವಾಕಿ ಆಕಿ! ಆಕೀ ಹಣೇಬರಹದಾಗೇ ಹಾಂಗ ಬರದಿತ್ತು. ಬ್ರಹ್ಮಸಂಕಲ್ಪಾ–– ಅಂದಮ್ಯಾಲ ಅದನ್ನ ತಪ್ಪಿಸಲಿಕ್ಕೆ ನಾವೆಷ್ಟರವರು! ಆ ಸೀತೀ ಬಾಸಿಂಗ ಬಲಾನೇ ಹಾಂಗಿತ್ತೂ !—— ಇಷ್ಟೇ, ಆ ಎರಡು ಸಾವಿರಾ ಕಳಕೊಂಡಿವೀ ನಮ್ಮ ಹಣೇಬರಹಾ !!!

[ಹೋಗುವರು : ತೆರೆಯೇಳುವದು]

೮ನೇ ನೋಟ : ಹರಕೆಯ ಕುರಿ

[ಮದುವೆಯಾದ ಒಂದು ವರ್ಷದ ಮೇಲೆ ಚಾವಡಿಯ ಬಂಕದಲ್ಲಿ ಸುಬ್ಬಣ್ಣ, ಮದ್ಧೂ, ಬಂಡೆಪ್ಪ ಮೊದಲಾದವರು ಹರಟೇ ಹೊಡೆಯುತ್ತ, ಎಲೆ ತಂಬಾಕು ಹಾಕಿಕೊಳ್ಳುತ್ತ ಕುಳಿತಿರುವರು......]

ಸುಬ್ಬಣ್ಣ :— ಅಂತೂ ನೋಡು, ಮದ್ಧೂ, ರಾಮಾಚಾರೀಯಂಥ ಹರಕರು ಭೂಮಿಮ್ಯಾಲೆ ಯಾವ್ಯಾವನೂ ಇರಲಕ್ಕಿಲ್ಲ ನೋಡು!

ಮದ್ಧೂ :— ಅದ್ಯಾಕೋ ಸುಬ್ಬ್ಯಾ; ನೀ ಹೀಂಗ ಅಂತೀದಿ? ನಿನಗೂ ಅವನಿಗೂ ಕೇವಲಾ.

ಸುಬ್ಬಣ್ಣ :— ಎಲ್ಲೀ ಕೇವಲೋ? ಎಲ್ಲಾ ಮಕ್ಕಳೂ ಹಾಂಗ್ಹಾಂಗೇನೋ ಈ ಜಗತ್ನ್ಯಾಗೇ! ನಾವೂ ನೀವು ನೆಂಟರು, ಕುಂಟ್ಲಗೆ ಮಾತ್ರ ಕೈ ಹಾಕ ಬ್ಯಾಡ್ರೀ ಅಂಬಾವ್ರೀ ಭಾಳು.

ಬಂಡೆಪ್ಪ :— ಅಂದಲ್ಲೇ, ತಾವ್ರದ್ದುಡ್ತು ತಾಯೀ ಮಕ್ಕಳ್ನ ಕೆಡಿಸ್ತು ಅಂತಾರ ಮಾತಿನ ಮುಂದ. ಅಂದ್ಮ್ಯಾಲೇ, ನಿಮಗೇ ರಾಮಾಚಾರ್ಗೇರ್ ಘಾರೀಕತ್ತು ಆದದ್ದರೊಳಗ ಹೆಚ್ಚೇನೂ....?

ಸುಬ್ಬಣ್ಣ :— ಘಾರಿಕತ್ತು ಅನಬ್ಯಾಡಪಾ. ಅವನ್ಸಂಗ್ತೀಲೇ ಘಾರೀಕತ್ತು ಮಾಡಿಕೊಂಬೋ ಹಾಂಗಿಲ್ಲಾ. ಏನೇ ಆದ್ರೂ ನಾವು ಅವನ ಮರ್ಜೀ ಹಿಡೀಲಿಕ್ಕೇ ಬೇಕು. ಪೂಜಾರೀ, ಜೊಯ್ಸಾ, ಮ್ಯಾಲ ವೈದ್ಯಕೀ ಅಂತ ಮೂರು ನಾಕು ಸೋಗ ಅವನ್ನವು. ಇಡೀ ಊರಿಗೆ ಊರೇ ಬಗಲಿಗೆ ಹಾಕ್ಯಾನ!

ಮದ್ಧೂ :— ಅದಕೇಪಾ; ಹೊತ್ತ ಬಂದಾಗ ಕತ್ತೀಕಾಲು ಹಿಡೀಬೇಕಂತ.

ಸುಬ್ಬಣ್ಣ :— ಅತು ಬಿಡು ಮಾರಾಯಾ; ಇಷ್ಟುದಿನ ಹಿಡಿದು ಹಿಡಿದು ಬ್ಯಾಸರ ಬಂತು. ನರಗುಂದ ಜಕಾತಿಕಟ್ಟೇಕೆಲ್ಸಾ ಕೊಡಸ್ತೇನಿ ಅಂತ ಮೂಗ್ಗ ತುಪ್ಪಾ ಹಚ್ಚಿ ಕೂಡಿಸಿದಾ ಮೊದ್ಲ. ಅಂತ ಆ ಶ್ರೀಮಂತನ ಮಡ್ಡೀ ಹೊಲಾ ಮಾರಿಸಲಿಕ್ಕೆ ನಾನೂ ಮಾಡಬಾರದ್ದು ಮಾಡಿದೆ. ಮಗಾ ಹೊಲಾ ನೆಗಿವಿ ಹಾಕಿದಾ. ಅತ್ಲಾಗ ನನ್ನ ಕಣ್ಣಿಗೂ ಇಂಗ ಹಚ್ಚಿದಾ.

ಬಂಡೆಪ್ಪ :—ಬಿಡೋ ಮಗನೇ— ಮತ್ತ ಆ ನಿಂಗೀದೂ ಶ್ರೀಮಂತನ್ನೂ ಫಾರಿಕತ್ತು ಮಾಡಸಬೇಕಾದ್ರ ನಿನಗ ಇನ್ನೂರು ರೂಪಾಯಿ ಕೊಟ್ಟಾ ನಂತಲ್ಲಾ ರಾಮಾಚಾರಿ.

ಸುಬ್ಬಣ್ಣ :—ಎಲ್ಲೀದಪಾ ಮಾರಾಯಾ! ಒಮ್ಮೆ ಇಪ್ಪತ್ತು ಕೊಟ್ಟಾ ಒಮ್ಮೆ ಹತ್ತು ಕೊಟ್ಟಾ ಆತು, ಆ ರಾಮಾಚಾರೀ ಮರ್ಜೀ ಕಾಯ್ಕೊಂಬೇಕು ಅಂತ ನಾನೂ ಹಾಂಗ ಹೇಳ್ತಿದ್ದೆ; ಅಷ್ಟೇ. ಈಗ ನೋಡೀಗ ಬಣ್ಣ ಹೊರಬಿತ್ತಲ್ಲಾ.

ಮದ್ದೂ :—ಸುಬ್ಬ್ಯಾ. ನಿನ್ನಂಥಾ ಸೋಗಲಾಡಿನ್ನ ನಾ ಕಾಣಲಿಲ್ಲೋ—ಇಕಾ ಇಲ್ಲೆ ಹೇಳು; ಆ ಶ್ರೀಮಂತನ ಮದಿವ್ಯಾಗ ಎರಡು ಸಾವಿರ ವರದಕ್ಷಿಣೆ ಬಂತಂತಲ್ಲಾ; ಅದರಾಗ ನೀನೂ ರಾಮಾಚಾರೀನೂ ಎಷ್ಟೆಷ್ಟು ಎತ್ತಿಹಾಕಿದ್ರೀ? ಹೇಳು? ಖರೇ ಹೇಳಬೇಕು! ನೋಡು ಮತ್ತ, ಸುಳ್ಳು ಬಿದ್ದೀ ಅಂದ್ರ ನಿನ್ನ ಚರಟಾನೇ ಬೆಳಗೇನು! ದೇವ ರಾಣೀ ಮಾಡಿ ಹೇಳು.

ಬಂಡೆಪ್ಪ :—ನಿಮ್ಮ ಕುಲದೇವರಾಣೀ ಮಾಡಿ ಹೇಳು.

ಸುಬ್ಬಣ್ಣ :—(ತನ್ನೊಳಗೆ) ಒಳೇ ಸಂಕಟ ಬಂತಲ್ಲಾ ;—ಆಗ್ಲಿ ಈ ಮಕ್ಕಳ್ದಾದ್ರೂ ಏನು ಹಂಗ ನನಗ? ಎಷ್ಟು ಅಂದ್ರೂ ರಾಮಾಚಾರಿ ನಾನೂರು ರೂಪಾಯಿ ಕೊಟ್ಟದ್ದು ಸುಳ್ಳಾದೀತೇನು? ಏನೇ ಆಗ್ಲೀ; ನನ್ನ ಕಣ್ಣಿಗೆ ಎಷ್ಟೇ ಇಂಗ ಹಚ್ಚಿದ್ರೂ, ಸಾವಿರ ಪಾಲಿಗೆ ರಾಮಾಚಾರೀನೇ ಬೇಕು. ಇಲ್ದಿದ್ರ ನಮ್ಮಂಥಾ ಕಂಗಾಲರಿಗೆ ಇಷ್ಟಾದ್ರೂ ದುಡ್ಡು ಕೊಡಾವ ಯಾವಾ?—ಆಗ್ಲಿ ಈ ಮಕ್ಕಳಿಗೆ ಅದರ ತಪಸೀಲು ಹೇಳಿ ಉಪಯೋಗೇನು?—(ಅವರಿಗೆ) ಮದ್ದೂ, ಬಂಡೆಪ್ಪಾ, ನಿಮ್ಮ ಮುಂದ ಇವತ್ತ ಜೀವಾ ಹೋಗ್ತದ ಅಂದ್ರ ನಾಯೇನ್ ಸುಳ್ಳು ಹೇಳಾವಲ್ಲಾ. ಇಕಾ, ತಗೋಳ್ರಿ, ದೇವರಾಣಿ, ಕುಲದೇವರಾಣಿ, ನಮ್ಮಪ್ಪನಆಣೆ, ಖರೇ ಅಂದ್ರು ರಾಮಾಚಾರಿ ಆ ವರದಕ್ಷಿಣೆ ಪೈಕೀ ನನಗ ಕೊಟ್ಟದ್ದೂ—ಎಪ್ಪತ್ತೈದೂ, ಒಂದ—ಇಪ್ಪತ್ತೊಮ್ಮರ.ೂ, ಒಂದು ಮೂವತ್ತೈಳು—ಅಂತೂ ನೂರಾ ಮೂವತ್ತೈದು ರೂಪಾಯಿ—ನನಗಕೊಟ್ಟದ್ದು—ಇಷ್ಟೇ.

ತಾನು ಮಾತ್ರ, ಹನ್ನೊಂದು ನೂರು ರೂಪಾಯಿ ಗಪ್ಪೇ ಮಾಡಿದಾ. ಶ್ರೀಮಂತಗ ಸುದ್ಧಾ ಅದರ ಜಾಡ ಹತ್ತಗೊಡಲಿಲ್ಲಾ–

ಬಂಡೆಪ್ಪ :—ಏನೂ? ಸಿನಗ ಬರೇ ನೂರಾ ಮೂವತ್ತೈದುರೂಪಾಯೇ? —ಖರೇನೇ–ನೋಡು ಆಣೀ ಹಾಕಿಕೊಂಡೀ—

ಸುಬ್ಬಣ್ಣ :—ಖರೋಖಟ್ಟ–ಅದರೊಳಗ ಸುಳ್ಳಂಬೋದು ಕೇಳಬ್ಯಾಡಾ—(ತನ್ನೊಳಗೆ) ಆಣೇನು ಬಂದು ನಮಗ ಬಡಕೋತಾವೇನು ಸೂಳೀಮು ಗನ್ನವು?— ನಮ್ಮವ್ವಾ ನಮ್ಮಪ್ಪಾ ಸತ್ತು ಹತ್ತವರ್ಷಾತು.

ಮುದ್ದೂ :—ಅಲ್ಲೋ ಸುಬ್ಬ್ಯಾ–ಮತ್ತೇ, ಆ ರಾಮಾಚಾರೀ ಆ ಶ್ರೀಮಂತನ ವರದಕ್ಷಿಣೀ ಪೈಕಿ ಹನ್ನೊಂದು ನೂರು ರೂಪಾಯಿ ಎತ್ತಿ ಹಾಕಿದಾ ಅಂತೀದೀ— ಅಂದ್ರ್ಯಾ, ಆ ಶ್ರೀಮಂತಾ ಮತ್ತ ಆ ರಾಮಾಚಾರೀ ಬಾಲಾನೇ ಬಡೀಲಿಕ್ಕೆ ಹತ್ಯಾರಲ್ಲಾ. ಅದರ ಗುಟ್ಟೇನಪಾ.

ಸುಬ್ಬಣ್ಣ :—ಗುಟ್ಟೇನು ಗುಟ್ಟು; ತಿಳದೇ ಅದ ಅಲ್ಲಾ—ಮದವಿ ಆಗಿ ಒಂದು ವರ್ಷಾತೂ; ಶ್ರೀಮಂತಗ ಹೆಂಡ್ತೀನ್ನ ಇಟ್ಟಕೊಂಡುಬಾಳ್ವೆ ಮಾಡಬೇಕಂದ್ರ ಮದ್ಯಾನ್ಹಕ್ಕ ಗತಿಯಿಲ್ಲಾ— ಅಂತ ಅದಕ್ಕೆಲ್ಲಾ ರಾಮಾಚಾರೀ ಮರ್ಜೀ ಹಿಡೀತಾನೇ. ರಾಮಾಚಾರಿ ಶ್ರೀಮಂತಗ ಟೋಪಿಗೀ ಹಾಕ್ತಾನೇ--ಇಬ್ಬರೂ ಕೂಡಿ ಮತ್ತೊಬ್ಬರಿಗೆ ಹಾಕ್ತಾರೇ! ಮತ್ತೇನು—?–ಅಕಾ–ರಾಮಾಚಾರೀ ಇತ್ಲಾಗ ಚಾವಡೀ ಕಡೇನೇ ಬರ್‍ತಾನ; ನೋಡ ಅಲ್ಲೆ.–ಎಲ್ಲಾ ಗುಟ್ಟು ಹೊರಗೆಡವೋಣ–ತಡೀ–(ರಾಮಾಚಾರಿ ಬರುವನು) ಒಹೋ–ಹೋ–ಽಽ–ಽ–ಬರಬೇಕು ರಾಮಾಚಾರೀ–ಯಾಕ ಇವತ್ತ ತಡಾ ಮಾಡಿದ್ರಿ ಚಾವಡೀ ಕಡೇ ಬರ್‍ಲಿಕ್ಕೇ–?

ರಾಮಾಚಾರಿ :—ಆ–ಕಲವಳ್ಳೀ ತಿರಕಪ್ಪಾ–ಇದ್ದಾನಲ್ಲಾ–ಅವರ ಅವ್ವನ ಶ್ರಾದ್ಧ ಅಂತ ನಾಳೇ; ಅದಕ್ಕ ತಮ್ಮೂರಿಗೆ ಬರಬೇಕೂ ಅಂತ ಆಮಂತ್ರಣಾ ಹೇಳ್ಲಿಕ್ಕೆ ಬಂದಿದ್ದ.

ಬಂಡೆಪ್ಪಾ :—ಆ ಶ್ಯಾನಭೋಗರ ತಿರಕಪ್ಪನೇ!

ರಾಮಾಚಾರಿ :—ಹೂಂ; ಅವನೇ. ದೀಡ ರೂಪಾಯಿ ಕೊಟ್ಟರ ಬರ್‍ತೇನಿ ಇಲ್ದಿದ್ರ ಇಲ್ಲಾಂದೆ; ಬ್ರಾಂಬ್ರ ಆದ್ರ ಇವರ್ಗೇನು ಹಾದೀಮ್ಯಾಲ ಬಿದ್ದೇವೇನು ನಾವು.

ಮದ್ಧೂ :—ಆವಾಯೇನು ದೀಡ ರೂಪಾಯಿ ಕೊಡ್ತ್ತಾನೇ ಮಹಾ ಜೀನಹಾಂಕಾ!

ರಾಮಾಚಾರಿ :—ಕೊಡದೇ ಪದಾ ಹೇಳ್ಯಾನು! ನಾ ಬಿಡ್ತೇನೇನು. ನಾ ಅಂದ್ರೆನು? ಜೀನರಿಗೆ ಹತ್ತ್ರೋ ಜೀಗಳಿ ನಾನು. ಸುತ್ತ ಎಂಟ ಹರದಾ ರ್‍ಯಾಗ ನಂನ್ನಂಥಾ ಬ್ರಾಂಹ್ಣ ಸಿಕ್ಕ್ಯಾನೇನು ಅವಗ, ಅವರಪ್ಪನ ಶ್ರಾದ್ಧಕ್ಕ?? ಕರೀಲಿಕ್ಕೆ ಛಕಡೀ ಕಳ್ಸಬೇಕು—ಎಂಟಾಣೆ, ಮುಂಗಡಾ ಕೊಡಬೇಕು ಅಂತ್ಹೇಳೀನಿ.

ಬಂಡೆಪ್ಪ :—ಕಾಗವ ಪತ್ರಾ ಮಾಡ್ಸಿಗೋಬೇಕಿಲ್ಲೊ?

ಸುಬ್ಬಣ್ಣ :—ರಾಮಾಚಾರ ಮುಂದ ಓಡೋವ್ರು ಯಾರ್‍ರೀ? ಹಾರೋ ಹಕ್ಕೀ ಪುಚ್ಚಾ ಎಣಿಸ್ಯಾರು? ಆ ಶ್ರೀಮಂತನ ಮದ್ವೀ ಹೊಲಾ ಮಾರುವಾಗ ಎಷ್ಟು ಕಾಗದಪತ್ರ ಇದ್ದೇನು ಮಾಡಿದ್ದು!! ಯಾಕ್ರೀ ರಾಮಾಚಾರೇ?

ರಾಮಾಚಾರಿ :—ಹ್ಹು, ಹ್ಹು, ಹ್ಹು, ಹ್ಹು, ಹ್ಹು,— —ಆ ಶ್ರೀಮಂತ ಯಾವ ಗಿಡದ ತೊಪ್ಸಲೋ ಸುಬ್ಬ್ಯಾ— —ಈಗ್ನೋಡು ಹ್ಯಾಂಗ ಮತ್ತ ನನ್ನ ಕೈಕಾಲು ಕಟ್ಟಗೋಳ್ಳಿಕ್ಕೆ ಹತ್ತ್ಯಾನ—ೀ—ೀ——

ಬಂಡೆಪ್ಪ :—
ಮದ್ಧೂ :— } ಅದ್ಯಾಕ್ರೀ ರಾಮಾಚಾರ, ಅದೇನ್ಕಾರಣಾ? ಅವಾ, ಅಷ್ಟಾಗೀ ನಿಮ್ಮ ಮರ್ಜೀ ಹಿಡಿಯೋದೇನು?

ರಾಮಾಚಾರಿ :—ಹಿಡೀದೇ ಏನ್ ಝುಕ್ಕಸ್ತಾನೇ—? ಅಶನಕ್ಕ ಗತೀ ಒಂದ ಬೇಕಲ್ಲಾ. ತನಗ ತಿನ್ನಲಿಕ್ಕೆ ಗತಿಯಿಲ್ಲದ ಈಗೆಂಟು ತಿಂಗಳಾತೂ; ಹೆಂಡ್ತೀನ್ನ ತವರಮನೀಗೆ ಅಟ್ಟಿ ಬಿಟ್ಟ್ಯಾನೇ—; ಮತ್ತ ಮೊದ್ಲಿನ ಹಾಂಗ ಬಾಯ್ ಬಿಡ್ಲೀಕ್ಕೆ ಹತ್ತ್ಯಾನೇ— —ಅಕಾ—ಅಲ್ನೋಡ್ರೀ— ಶ್ರೀಮಂತಾ—ನಮ್ಮೂರ ಶ್ರೀಮಂತಾ—ನಮ್ಮ ಸೀಮೀ ಶ್ರೀಮಂತಾ ಹ್ಯಾಂಗ ಬರ್ಲಿಕ್ಕೆ ಹತ್ತ್ಯಾನೇ!

(ಇದೇ ಹೊತ್ತಿಗೆ ಶ್ರೀಮಂತನು ಬರುತ್ತಾನೆ. ಮೈಯಲ್ಲಿ ಒಂದು ಶರ್ಟು; ಗುಂಡಿಗಳು ಇದ್ದರೂ ಎಲ್ಲಾ ಹಾಕಿಲ್ಲ; ಕೈಗುಂಡಿಗಳ ಬದಲು ದಾರ ಕಟ್ಟಿದೆ. ಕರೀ ಬಣ್ಣದ ಮದ್ರಾಸ ಚೆಕ್ಕಿನ ಹಳೇಕೋಟು; ಬೆನ್ನಲ್ಲಿ ಹಿಗ್ಗಿಸಿ ಹೊಲಿಸಿದ್ದು; ತೋಳಿನ ಅಂಚಿನಲ್ಲಿ ಕುಸರುಗಳೆದ್ದಿವೆ. ಉಟ್ಟಿದ್ದು ಅಂಚಿಲ್ಲದ ದೋತರ; ಹೊಲಸು ಹೊಲಸಾಗಿದೆ. ತಲೆಯಮೇಲೆ ಹೇಗೋ ಸುತ್ತಿದ ರುಮಾಲು ಅಸ್ತವ್ಯಸ್ತವಾಗಿದೆ;

ಅದರ ಸಂದಿಯೊಳಗಿಂದ ಚಂಡಿಕೆಗಳು ಹೊರಬಿದ್ದಿವೆ. ಕಾಲಲ್ಲಿ ಕಟಬಾಯಿಹರಕ ಹಳೇ ಮಚ್ಚಿಗಳು. ಮೋರೆಯಮೇಲೆ ಕಪ್ಪ ಬಹಳ ಬೆಳೆದು ಬಿಟ್ಟದೆ. ತುಟಿಯ ಮೇಲೆ ಚಪ್ಪರದಂತೆ ಮೀಸೆಗಳು ಮುಸುಕಿಕೊಂಡಿವೆ. ಕೈಯಲ್ಲಿ ಮಾಸಿದ ಚಂಬಿ.)

ಸುಬ್ಬಣ್ಣ (ಮೊದಲಾದವರು) :—ಓಹೋ! ಬಾರಪಾ ಶ್ರೀಮಂತಾ,

ರಾಮಾಚಾರಿ :—ಬಾರಪಾ ಶ್ರೀಮಂತಾ, ಹೀಂಗ ಬಾ ಇತ್ಲಾಗ. ಈಗ ಸಿಂದೇ ಮಾತು ಹೊರಟಿತ್ತು. ನೆನಸೂದ್ರಾಗ ಬಂದೇ ಬಿಟ್ಟಿಲ್ಲಾ! ಪೂರಾ ನೂರುವರ್ಷ ಆಯುಷ್ಯ ನೋಡು ನಿನಗ!

ರಾಯರು :—ಏನು ಮಾಡೋದು ರಾಮಾಚಾರೀ, ನೂರುವರ್ಷದ ಆಯುಷ್ಯ ತಗೊಂಡೂ! ಅದೇನೊ ಅಂತಾರಲ್ಲಾ—ಹಾಂಗ—

ಸುಬ್ಬಣ್ಣ :—ಹಾಂಗ್ಯಾಕರೀ ಶ್ರೀಮಂತರೇ—ಮೊನ್ನೆ ಮದ್ವೀಮಾಡಿಕೊಂಡ್ರಿ ಹೊಸಾ ಹೆಂಡ್ತೀ ಸಂಸಾರ. ಇಷ್ಟಕ್ಕ ನೀವು ಹೀಂಗ ಕೈ ಊರಿದರ ಹ್ಯಾಂಗಾದೀತೂ.

ರಾಯರು :—ಸುಬ್ಬಣ್ಣಾ, ಇನ್ನಾದರೂ ಚ್ಯಾಷ್ಟೀ ಮಾಡೋದು ಬಿಡ್ತೀ ವಲ್ಲ್ಯೋ? ನನಗನಕಾ ಸಾಕಾಗಿ ಹೋಗೇವ. ಈ ಮದ್ವಿ ಯಾ ಮಗ್ಗ ಬೇಕಾಗಿತ್ತು!

ರಾಮಾಚಾರಿ :—(ತನ್ನೊಳಗೆ) ನಿನಗ ಬೇಕಾಗದಿದ್ರೂ ನನಗ ಬೇಕಾಗಿತ್ತು (ಹೊರಗೆ) ಇರ್ಲಿ, ಬಿಡೋ ಸುಬ್ಬ್ಯಾ—ಬಿದ್ದ ಪೆಟ್ಟೊಂದು ನಕ್ಕ ಪೆಟ್ಟೊಂದೂ ಅಂಬೂ ಹಾಂಗ ಮಾಡಬಾರ್ದಪಾ. ನೊಂದ ಬಟ್ಟೀ ನೊಯ್ಯೂದೇನು ಛಲೋ ಅಲ್ಲಾ. ಈಗ ನೋಡು; ಪಾಪ ಶ್ರೀಮಂತಾ ಯೇನು ಮಾಡಬೇಕೂ. ಮದ್ವೀ ಮಾಡಿಕೊಂಡ್ರ ಸಂಸಾರ ಸುಸೂತ್ರ ಆದೀತು ಅಂತ ಮಾಡಿಕೊಂಡಾ. ನಾವೂ ಎಲ್ಲಾರೂ ಅಂತಿದ್ದಿಲ್ಲೇ— — ಇನ್ನೇನಪಾ ನಮ್ಮ ಶ್ರೀಮಂತ ದೈವುಳ್ಳವರ ಮಗಳ್ನ ಮದವಿ ಆದಾ; ಅವನ ಕೈ ಹಿಡಿಯುವವರ್ಯಾರು—ಇನ್ಮ್ಯಾಲೆ ನಮ್ಮನ್ನೆಲ್ಲಾ ಅವಾ ಮಾತಾಡ್ಸಾನ್ಯಾಕೇ— —ಅಂತ. ಆದ್ರ ಮುಂದ ಹೀಂಗ ಆದೀತು ಅಂತ ಯಾರು ಕಂಡಿದ್ರು. ಈಶ್ವರೀ ಸಂಕೇತಾ ಅಂದ್ರ ಮನುಷ್ಯನ ಶಕ್ತಿ ಮೀರಿದ್ದು— —ನಮ್ಮ ನಮ್ಮ ಪ್ರಾರಬ್ಧದ ಮುಂದ ನಮಗೊಡ್ಲಿಕ್ಕೆ ಬಂದೀತೇ?— —ನೋಡು.

ರಾಯರು :—ರಾಮ್ನಾಚಾರೀ, ಅದೆಲ್ಲಾ ಹೋಗ್ಲೆಪಾ. ಈಗ ನನಗೇನು ಮಾಡಂತೀ ಹೇಳು. ನನ್ನ ಮದ್ವೀ ಹೊಲಾ ಮಾರಿಸಿದೀ, ಪೂರಾ ರುಪಾಯಿ ಇನ್ನೂ ಮುಟ್ಟಸಲಿಲ್ಲಾ; ವರದಕ್ಷಿಣಿ ಎರಡು ಸಾವಿರ ರುಪಾಯ್ದಾಗ ನನ್ನ ಕೈಗೆ ಬಂದದ್ದವು ಇನ್ನೂರು. ಹೀಂಗ ನೀನ-ೀ-ಕೂತು-

ರಾಮಾಚಾರಿ :—(ನಡುವೆ ಬಾಯಿಹಾಕಿ) ಶ್ರೀಮಂತಾ—— ಹಾಂಗಮಾತ್ರ ಅನಬ್ಯಾಡ ನೋಡು. ಹುಟ್ಟಾ ಜನ್ಮಾ ಒಬ್ಬರ ರುಣದಾಗ ನಾ ಬೆಳದಾವ ಅಲ್ಲಾ. ನಾನೂ ಏನೋ ಆಚಿನಾಗ ಇದ್ದೆ ಅಂತ ನಿನ್ನ ರೂಪಾಯಿ ಬಳಿಸಿಕೊಂಡೆ; ಅದೂ ನಿನ್ನ ರೂಪಾಯಿ ಅಂತ ಬಳಿಸಿಕೊಂಡೆ. ಮತ್ತೊಬ್ಬರದಾಗಿದ್ರ ನನಗ ಹಾಂಗ ಧೈರ್ಯಾನೀ ಇರ್ತಿದ್ದಿಲ್ಲಾ. ನಿಂದೂ ನಂದೂ ಮೊದಲ್ನಿಂದ ಹತ್ತಗಡಿ. ಅದೇ ವಿಶ್ವಾಸಾ. ಈಗಾದ್ರೂ ಏನಾತೂ; ಇಕಾ ಜನಿವಾರಾ ಹಿಡಕೊಂಡು ಹೇಳ್ತೇನಿ; ಈಗ ಮತ್ತ ನನ್ನ ರೂಪಾಯಿ ಛೆಲ್ಲಿ ಮಾತಾಡು ಅಂದ್ರ ಒಂದ ತಾಸಿನಾಗ ನಿನ್ನ ರೂಪಾಯಿ ನಿನ್ನ ಮಾರೀಮ್ಯಾಲ ಒಗದಬಿಟ್ಟೇನು! ಆದ್ರ ನೀ ಹಾಂಗ ಅಂತೀದೇನು ಹೇಳು!

ರಾಯರು :-ಅದು ಹೋಗ್ಲಿ ಬಿಡಪಾ. ಈಗ ನನಗ ಹ್ಯಾಂಗ ಮಾಡಂತೀಹೇಳು

ರಾಮಾಚಾರಿ :—ಅದಕ್ಕೇನು ಬೇಖಾದ್ದು ಮಾಡ್ಲಿಕ್ಕೆ ಬಂದೀತು. ಅದೇನೋ ಹೇಳಿದೆಲ್ಲಾ— —ನಿನ್ನ ಹೆಂಡ್ತೀ ಹೆಸರ್ಲೇ ಅವರಪ್ಪಾ ಆರ್ನೂರು ರೂಪಾಯ್ದು ಜಮೀನು ಇಟ್ಟಾನ ಅಂದೆಲ್ಲೀ?

ರಾಯರು :—ಹೌದು, ಮೊದ್ಲ, ಆಕೀ ಮತ್ತ ಅವರ ತಾಯಿ ಇಬ್ಬರ್ದೂ ಹೆಸರಿತ್ತು—ಆ ಮ್ಯಾಲೆ ಈಗೆಂಟು ತಿಂಗಳ ಹಿಂದ, ನಾವು ಮದ್ವೀ ಕಾಲಕ್ಕ ಹಾಕಿದ ಸೋಗು ಹೊರಬಿದ್ದಮ್ಯಾಲೆ, ಆಕೀ ತಾಯಿ ಆ ಜಮೀನು ಎಲ್ಲಾ ಆಕೀ ಹೆಸರ್ಲೇ ಮಾಡಿಕೊಟ್ಟಳಲ್ಲಾ—

ಸುಬ್ಬಣ್ಣ :—ಆಗ, ಆ ಯುಕ್ತಿಯೆಲ್ಲಾ ಹೇಳಿದವ್ರೂ ರಾಮಾಚಾರೀ—ಅಲ್ಲ? ಯಾಕ್ರೀ ರಾಮಾಚಾರ—? ಹ್ಹಾ—ಹ್ಹಾ—ಹ್ಹಾ

ರಾಮಾಚಾರಿ:—ಹ್ಹ—ಹ್ಹ—ಹೌದಪ್ಪಾ—ಸುಬ್ಬ್ಯಾ—

ಸುಬ್ಬಣ್ಣ :—ಮತ್ತೀಗೂ ಏನಾರೇ ಹೇಳ್ರಿಲಾ ಹಂಚಿಕೀ.

ರಾಯರು :—ನಾನೂ ಅದೇ ಅಂತೀನಿ.

ರಾಮಾಚಾರಿ :—ಹಂಚಿಕೇನು—ಸುಲಭ ಅದ—. ಇಲ್ನೋಡು ಶ್ರೀಮಂತಾ ಈಗ ಹ್ಯಾಂಗಾದ್ರೂ ಹೆಂಡ್ತೀನ್ನ ತವರಮನೀಗೆ ಕಳಿಸಿ ಬಿಟ್ಟೀಯಾ?–ಅವರಿಗೆ ಸ್ವಚ್ಛ ಹೇಳಿಬಿಡು— —ಆ ಹೊಲಾ ಯೆಲ್ಲಾ ನಿನ್ನ ಹೆಸರ್ಲೆ ಮಾಡಿ ಕೊಡದ ಹೊರ್ತು ನೀಯೇನು ಹೆಂಡ್ತೀನ್ನ ಕರಕೊಂಡು ಬರಾವಲ್ಲಾ—ಅಂತ—. ಅಂದ್ರ ಏನ್ ಮಾಡ್ತಾರ ನೋಡೋಣು. ಈ ಬೀಗರಂಬವರ್ನ–ಇಕಾ–ಹೀಂಗೇ ಬಗ್ಗಸಬೇಕು—!—ತಮ್ಹುಡಿಗಿ ಗಂಡನ್ಜೋಡಿಗೆ ಸಂಸಾರಾ ಮಾಡಬೇಕು ಅಂತ ಅವರಿಗೆ ಅನಸ್ತಿದ್ದರ ಹೇಳ್ದೇಕೇಳ್ದ ನಿನ್ನ ಹೆಸರ್ಲೆ ಹೊಲಾಮಾಡಿ ಕೊಟ್ಟು, ವ್ಯಾಲೆ ದೀಡನಮುಸ್ಕಾರಾ ಹಾಕಿ ದಿಂಡರಕಿ ಉರಳ್ತಾರ.—ಯಾಕ. ಹೌದಂತೀಯೋ—ಅಲ್ಲಂತೀಯೋ ಸುಬ್ಬ್ಯಾ

ಸುಬ್ಬಣ್ಣ :—ಅವರಜ್ಜ— —ಅವರಜ್ಜ ದಿಂಡರಕಿ ಉಳ್ಳ್ಯಾನು!

ರಾಮಾಚಾರಿ :—ಅದೇ ಅಂತೀನಿ.— —ಶ್ರೀಮಂತಾ— —ನೀ ಅಷ್ಟು ಮಾಡು, ನಾ ಹೇಳಿಧಾಂಗ. ಇಕಾ ನೀ ಇದರೊಳಗ ಹಿಂದ ಮುಂದ ನೋಡಿದ್ರ ಹದಾ ತಪ್ಪೀತು! ಆ ಹುಡಿಗೀ ಅಣ್ಣನೂ ಆ ಹೊಲದ ವ್ಯಾಲೆ ಕಣ್ಣಿಟ್ಟ್ಯಾನ. ಈಗ ನೀ ಬಲೀ ಹಾಕಿದ್ರ ಅದೇ ನೋಡು ನಿನ್ನ ದೈವಾ!—ಏನಂತೀ

ರಾಯರು :—ಅವರು ಇದಕ್ಕ ಒಪ್ಪದಿದ್ದರೇ ?

ಸುಬ್ಬಣ್ಣ :—ಇನ್ನೊಂದು ಮದ್ವಿ ಮಾಡಕೋತೇನಿ ಅಂತ ಹೆದ್ರಿಕೀ ಹಾಕು.

ರಾಯರು :—ಇನ್ನೇಲ್ಲೀ ಮದಿವ್ಯೀ, ಸುಬ್ಬ್ಯಾ— ಹುಚ್ಚಾ!

ರಾಮಾಚಾರಿ :—ಅದ್ಯಾಕ, ಶ್ರೀಮಂತಾ! ಇಂಥಾ ಹತ್ತ ಮದ್ವೀ ಮಾಡೇನು ನಿನಗ—ಆ ಮಾತಿರ್ಲಿ. ಈಗ ನೀ ನಾ ಹೇಳಿಧಾಂಗ ಮಾಡು. ಬಲೀ ಬಿಲ್ಲಿಕ್ಕೀ ಬೇಕು. ಮುಂದಿನ್ಮಾತು ನಾ ನೋಡಿಕೋತೇನಿ.

ರಾಯರು :—(ತುಸು ಹೊತ್ತು ಎಣಿಕೆ ಹಾಕಿ, ಒಳ್ಳೇ ಹುರುಪಿನಿಂದ) ಆಗ್ಲಿ ರಾಮಾಚಾರೀ—ಅಂತೂ ನಿನ್ನ ಯುಕ್ತಿ ಹೆಚ್ಚು; ಆ ಹೊಲಾ ನನ್ನ ಹೆಸರ್ಲೇ ಆದ್ರ ಏನ್ ಕೇಳೀ! ಬೇಕಾದಷ್ಟು ಚೈನೀ—

ರಾಮಾಚಾರಿ :—ಅಲ್ಲೀ—ಮತ್ತ ! ಇಲ್ನೋಡು ಶ್ರೀಮಂತಾ, ನೀ ಮೊದ್ಲಿನ್ಹಾಂಗ ಯಾವಾಗ ಆದೀಯೋ ಅಂತ ನನ್ನ ಜೀವ ಚುರು ಚುರು ಅಂತೇದ. ನೀ ಇಷ್ಟ ಕನಿಷ್ಠಕ್ಕ ಬಂದಾಗಿನ್ತೊಟ್ಟೂ, ನನಗ ಜೀವ್ದಾಗ ಜೀವಿಲ್ಲಾ. ನನ್ನ ಮನೆತನಾ ಸಹಿತ ನನಗ ಭಾರಾಗೇದ—

ರಾಯರು :—ಆಗ್ಲಿ ರಾಮಾಚಾರಿ; ನೀ ಹೇಳಿಧಾಂಗ ಮಾಡೇಬಿಡ್ತೇನಿ. ನಿನ್ನಮಾತು ಗೆದ್ದರ ಎಲ್ಲಾರ್ದೂ ಚಿಂತಿ ತಪ್ಪೀತು ! ಯಾಕಣಾಸುಬ್ಬ್ಯಾ—

ಸುಬ್ಬಣ್ಣ :—ಹೌದು ಮಾರಾಯಾ ! ಅದಕ್ಕೇ ನಾವೆಲ್ಲಾ ನಿನ್ನಮ್ಯಾಲೇ ಜೀವಾ ಇಟಕೊಂಡು ಕೂತೇವಿ.

ರಾಮಾಚಾರಿ :—ಶ್ರೀಮಂತಾ ಇದರೊಳಗ ನೀ ಹೈಗೈ ಮಾಡೇಬ್ಯಾಡಾ ಬೀಗರ ಸಂಗ್ತೀಲೆ—ಅದರೊಳಗ ಹೆಣ್ಣಿನವರ ಸಂಗ್ತೀಲೆ ಕಠೋರಾಗಿರಬೇಕು ಅಂತ ಶಾಸ್ತ್ರದಾಗೇ ಹೇಳೇದ. ಅದಕ್ಕ ನೀ ಇವತ್ತ ಹೊಂಟೇ ಬಿಡು. ನಾ ಹೇಳಿದ ಮಾತು ಅವರಿಗೆ ಮುಟ್ಟಿಸೇ ಬಾ. ಮುಂದ ಬಂದದ್ದು ನಾ ನೊಡ್ಕೋತೀನಿ.

ರಾಯರು :—ನಾ ಇವತ್ತ ಸಂಜೀ ಮೋಟಾರ್ಗೆ ಹೋಗ್ತೇನಿ. ಈಗಷ್ಟು ತಯಾರೀ ಮಾಡಬೇಕಲ್ಲಾ—ಮನೀಕಡೇ ಹೋಗ್ಲ್ಯಾ—? ಹಾಂಗಾರೇ —ರಾಮಾಚಾರೇ—ಸುಬ್ಬಣ್ಣಾ—ನೀವೂ ಇವತ್ತ ನಮ್ಮಲ್ಲೀ ಬಂದಬಿಡ್ರಿ ಊಟಕ್ಕ—

ರಾಮಾಚಾರಿ :—ಏನ್ ಬ್ಯಾಡಾ ಶ್ರೀಮಂತಾ. ನೀ ಕರದೆಲ್ಲಾ ಶ್ರೀಮಂತಾ ! ಉಂಡಕಿಂತ ಹೆಚ್ಚಾತು ನೋಡು. ನೀ ಇವತ್ತ ಊರಿಗೆ ಹೋಗಾವಾ ! ಮತ್ತ ನಮಗೆಲ್ಲಾ ನೀನೇ ಅಡಿಗಿ ಮಾಡಬೇಕು. ಯಾಕಿಷ್ಟು ತ್ರಾಸಾ--

ರಾಯರು :—ಹಾಂಗಾದ್ರ—ನಾ ಹೋಗ್ಲ್ಯಾ ?—ನಮಸ್ಕಾರ—

ಬಂಡೆಪ್ಪ
ಮದ್ದೂ } :—ನಾವೂ ಬರ್ತೇವಿ ನಿಂದ್ರೋ ಶ್ರೀಮಂತಾ.
ಹೋಗ್ತೇವಿ ರಾಮಾಚಾರ. ನಮಸ್ಕಾರಾ !

ಸುಬ್ಬಣ್ಣ :—ಓಹೋ ನಮಸ್ಕಾರ— (ಶ್ರೀಮಂತ ಮೊದಲಾದವರು ಹೋದ ಮೇಲೆ) ಮತ್ತೇನೋ ಬಲೀ ಬಿಸೀರಲ್ಲ ರಾಮಾಚಾರೇ ? ಹೊಸಾ ಹೆಂಚಿಕಿ ಹುಡುಕೀರಿ ? ?—ಏನೋ—ಸ್ವಲ್ಪ ದೂರದೃಷ್ಟಿ ಇಟ್ಟ್ಹಾಂಗ ಕಾಣಸ್ತದೇ— —.

ರಾಮಾಚಾರಿ :—ನೀನೂ ಕಂಡ್ಹಿಡ್ದೆಲ್ಲಾ!—ವಾರೆನಾ!!—ಹಾಂಗಿಲ್ದಿದ್ರ ಹ್ಯಾಂಗಾದೀತು ಸುಬ್ಬ್ಯಾ—! ಈಗ್ನೋಡು ಈ ವರ್ಷಾ ನನ್ನ ಹೆಂಡ್ತೀ ಮತ್ತೊಂದು ಹೆಣ್ಣೀ ಹಡ್ದಾಳ—ಸೊಸೀಗೆ ಮೂರ್ಚಲ ಬಸರು—ಪ್ರಪಂಚಾ ಹೀಂಗ ಬೆಳೀಲಿಕ್ಕೆ ಹತ್ತಿದ ವ್ಯಾಲ ಏನಾದ್ರೂ ಹುಚಿಕಿ ಹಾಕ್ಲಿಕ್ಕೆ ಬೇಕೀ!—ಈಗ ನೋಡು ನಿನ್ದು ಸಂಸಾರ ಬೆಳೀಲಿಕ್ಕೆ ಹತ್ತಿಲ್ಲೀ?—ಅದರ ವಿಚಾರಾನೂ ನಾನು ಮಾಡ್ಲಿಕ್ಕೇ ಬೇಕು. ನೀ ಸುಮ್ಮನೇ—ನಾ ಹೇಳಿಧಾಂಗ ಕೇಳ್ತಿರು—ನಾ ಮಾಡಿದ್ದು ನೋಡ್ತಿರು—ಇದರೊಳಗ ನಿನ್ಗೂ ಫಾಯ್ದೆ ಅದೇ—ತಿಳೀತೇ?? ಬಾ—ಹೋಗೋಣ ಬಾ (ಹೊರಡುತ್ತ)—ಸುಬ್ಬ್ಯಾ—ಈ ಜಗತ್ತೇನು? ಜಗ್ಗಿಧಾಂಗ ಬಗ್ಗತದೇ—(ಸುಬ್ಬಣ್ಣನನ್ನು ಜಗ್ಗಿಕೊಂಡು ಹೋಗುವನು)

ಸುಬ್ಬಣ್ಣ :—(ಹೋಗಹೋಗುತ್ತ) ನಿಮ್ಮಂಥಾ ಬಗ್ಗಸವ್ರು ಇದ್ದರೇ—!

(ಹೋಗುವರು; ತೆರೆ)

ಮುಗಿಯಿತು.

ಶ್ರೀ

ಸಾಮುದ್ರಿಕರ ಸಾಮ್ರಾಜ್ಯ

(ಒಂದು ಪ್ರಹಸನ)

ಪಾತ್ರಗಳು

ಶೇಷಣ್ಣ : ಒಬ್ಬ ಕಾಲೇಜ ವಿದ್ಯಾರ್ಥಿ
(ಜಗನ್ನಾಥಪಂತ, ಗೌಡ, ಸಾನಿ ಮುಂತಾದ
ಇನ್ನುಳಿದ ಹತ್ತಿಪ್ಪತ್ತು ಜನರು.)

ಪಾತ್ರ ಪರಿಚಯ

ಈ ಪ್ರಹಸನ ಏಕಪಾತ್ರ ಪ್ರಧಾನವಾದ್ದು; ಶೇಷಣ್ಣನೇ ಆ ಪಾತ್ರ. ಕಾಲೇಜಿನ ಫೀಗೂ ಹೊಟ್ಟೆಯ ತುತ್ತಿಗೂ ಗತಿಯಿಲ್ಲದೆ, ಕೂತಾಗ ಹೊತ್ತು ಹಣ್ಣಾಗಿ ತಾನೇ ಬಂದು ಆತನ ಕೈಯಲ್ಲಿ ಬೀಳುವದು. ಕೈಗೆ ಬಂದದ್ದು ಬಾಯಿಗೆ ಬರಲಿಲ್ಲವೆನ್ನುವ ಸೋಲುಗೈಯವನಲ್ಲ ಶೇಷಣ್ಣ. ಅಂತೇ ಸಾಮದ್ರಿಕರ ಹತ್ಯಾರವನ್ನು ಬಾಗಿ ಬಂದವರ ತಲೆಯ ಮೇಲೆ ಸಲೀಸಾಗಿ ಆಡಿಸುತ್ತಾನೆ. ಹಾಗೆಯೇ, ಪ್ರಸಂಗದ ಹವನಾದ ಬಾಯಿಯಿಂದ ತನ್ನನ್ನೂ ರಕ್ಷಿಸಿಕೊಳ್ಳುತ್ತಾನೆ. ಆತನನ್ನುಳಿದ ಬೇರೆ ಪಾತ್ರಗಳೆಲ್ಲ ಬರೀ ಹಿನ್ನೆಳಲಿನವು.

೧ ನೇ ನೋಟ

(ಹುಬ್ಬಳ್ಳಿಯ ಮುನಸಿಪಾಲ್ಟಿ ಕಚೇರಿಯ ತೋಟದಲ್ಲಿ ಶೇಷಣ್ಣ ಊರೂರು ಅಲೆದು ಕಂಗಾಲಾಗಿ ಕಿಸೆಯಲ್ಲಿ ಕೊನೆಯದಾಗಿ ಉಳಿದ ಎರಡೇಬಿಲ್ಲಿಗಳ "ಚೂಡಾ" ಕೊಂಡು ತಿನ್ನುತ್ತ ಬಾಕಿನ ಮೇಲೆ ಕೂತಿದ್ದಾನೆ. ಚುಂಗಚ್ಚೆಹಾಕಿ ದಪ್ಪನಾದ ಖಾದೀ ದೋತರ ಉಟ್ಟಿದ್ದಾನೆ. ಹಾಕಿದ್ದೂ ಒಂದು ಖಾದೀ ಥಗಲಿ ಯಂಗಿ. ಟೊಪ್ಪಿಗೆ ಹಾಕುವ ಪದ್ಧತಿಯನ್ನೇ ವಿರೋಧಿಸುವವನಂತೆ ತಲೆಯಲ್ಲಾ ಗೋಸಾವಿಗಳ ಹಾಗೆ ಉದ್ದಕೂದಲ ಬಿಟ್ಟಿದ್ದಾನೆ. ಮಗ್ಗುಲಲ್ಲಿ ಒಂದು ದಟ್ಟ ಮುಟ್ಟಾದ ದೊಣ್ಣೆತಲೆಯ ಬಡಿಗೆಯಿದೆ. ಆ ಮಾಸಿದ ಖಾದೀ ಅಂಗಿ ದೋತರ ಗಳಿಂದ ಅನಿವಾಸಿ ಅಡಗಿಸಿದ ಆತನ ವರ್ಚಸ್ಸನ್ನು ಬಡಿಗೆ ಕೂದಲುಗಳು ಹೆಚ್ಚಿಸು ವಂತಿದೆ. ಕಾಲ್ಮರಿಯಲ್ಲಿ ಬಿದ್ದ ಅನೇಕ ತೂತುಗಳೊಳಗಿಂದ ಈ ವರ್ಚಸ್ಸು ಸೋರಿ ಹರಿದುಹೋದೀತೆಂದು ಅವುಗಳನ್ನು ಕಾಲುಗಳಿಂದ ಬಲವಾಗಿ ಮೆಟ್ಟಿಯೊತ್ತಿ ದ್ದಾನೆ. ಕೈಯಲ್ಲಿಯ ಚೂಡಾ ಸವಿದಂತೆ ಮುಕ್ಕುಗಳೂ ಸಣ್ಣವಾಗ ಹತ್ತಿವೆ.)

ಶೇಷಣ್ಣ:—ತಿರಗೋ ಭಗರಿ ಎಲ್ಲೀ ತನಕಾ ತಿರುಗೀತು! ಜೋರು ಕಡಿವಿ ಆಧಂಗ ಜೋಲೀ ಹೊಡೆಯೂದs! ನನ್ನ ಅವಸ್ಥಿನೂ ಹಾಂಗs ಆಗೇದ. ಇಕಾ ಈ ಚೂಡಾದ ಈ ಕಡೀ ಮುಕ್ಕು ಅಂದ್ರದ ನಮ್ಮ ಜನ್ಮದ ಭಗರೀ ಕಡೀಸುತ್ತು ಅಂದಾಂಗs! ಕಿಸೇದಾಗ ಇದ್ದ ಕಡೀ ಎರಡು ಬಿಲ್ಲೀ ಚೂಡಾದ ಕಡೀಮುಕ್ಕಿನ (ಅರ್ಧ ಮುಕ್ಕಿ) ಕಡೀ ಎರಡು ಕಾಳಿವು. ಏನರs ಆಗಲೀ ಈ ಎರಡs ಕಾಳs ಕಿಸೇದಾಗಹಾಕಿರ್ತೀನಿ. (ಹಾಗೆ ಮಾಡಿ) ಇನ್ನೇನಪಾ! ಕೆಲಸಾ! ಕೈಯಾಗಿದೊಂದು ಕಾಗದ ಉಳೀತು. ಈ ಎಣ್ಣೀ ಮುಣುಗಿದ ಕಾಗದ್ದೇನು ಉಪಯೋಗ? ಇದಕ್ಕ ಹತ್ತಿದ ಮಸಾಲೀ ನೆಕ್ಕಿದ್ರ ಸರಿ! ಛಲೋ ಕಾಗದಾಗಿದ್ರ ಹಡಗಾಮಾಡಿ ಯಾವುದಾದ್ರೂ ಹುಡುಗರಿಗೆ ಆಡಲಿಕ್ಕೆ ಕೊಡಬಹೇ ದಾಗಿತ್ತು. (ಅತ್ತಿತ್ತ ತೆರವುಗಣ್ಣುಗಳಿಂದ ನೋಡುತ್ತ) ಈ ಹುಬ್ಬಳ್ಳಿ; ಮುನಸೀಪಾಲ್ಟೀ ತೋಟ ಛಂದsದ. ಸಂಜೀ ಹೊತ್ತು; ಹೌದs ಅಲ್ಲೆಲ್ಲಾ ಮಂದಿ ಎಷ್ಟ ಇದ್ದಾರ; ಹುಡುಗರೆಷ್ಟಾಡತಾರs! ಆದ್ರ ಪರಸಿ ನೆರೆದಲ್ಲಿ ತಿರಕರಿಗೇನು ಕೊರತೀ!.... ನಾ ಈ ಮೂಲ್ಯಾಗ ಕೂತದ್ದು ಛಲೋ ಆತು; ಮೂಲಿಗುಂಪಾದವರು ಮತ್ತೇನು ಮಾಡೋದು! (ಮುದಿಚಿದ ಕಾಗದ ಕೈಯಿಂದ ತೀಡುತ್ತ) ಎಲಾ

ಇದರ! ಈ ಚೂಡಾದ ಕಾಗದ ಆ ಫೋರ್ಥ ರೀಡರದಾಗಿದ್ದು! ನಮ್ಮ ರೊಟ್ಟೀಮಾಸ್ತರು ಕಲಿಸತಿದ್ದರಲ್ಲಾ, ಭಾಳ ಮಜಾಮಾಡಿ "ದಿ ಪಾಪರ್ ಹೂ ಬಿಕೇಮ ಎ ಪ್ರಿನ್ಸ" ಅಂತ! ಅದಽ ಪಾನಿದು! ಹುಡುಗರಾಗಿದ್ದಾಗ ಇಂಥಾ ಕಥೀ ಮಜಾನಽ! ಒಬ್ಬ ತಿರುಕರಾವ್ಗ ಮೂರು ಮಂದಿ ಮಕ್ಕಳಿದ್ದರಂತ! ಅವನ ಆಸ್ತೀ ಹಂಚಿಕೊಂಡಾಗ ಕಿರೀ ಮಗನ ಪಾಲಿಗೆ ಒಂದು ಸತ್ತ ಇಲಿ ಬಂತಂತಽ! ಅದರಿಂದ ಅವಾ ರಾಜಕುಮಾರ ಆದ್ನಂತ! ನಾನೂ ನಮ್ಮಪ್ಪಗ ಮೂರನೇ ಮಗಾ! ನಮ್ಮ ಪಾಲಿಗೆ ಈ ಟಿರಕ ಕಥಿಯ ಹರಕ ಹಾಳಿ ಬಂದಽದ. ನಮ್ಮ ಅಪ್ಪ ನನಗೂ ಅಂತಿದ್ದ "ನಿನ್ನ ಜಾತಕ್ದಾಗ ದುಡ್ಡು ಭಾಳ ಅದಽ" ಅಂತ! ಜಾತಕ ಅಂದರ ಜನ್ಮದ ಕನ್ನಡಿ ಇದ್ದಾ್ಛಂಗ ಅಂತಾರ ಸುಳ್ಳಲ್ಲ! ಅಂದಮ್ಯಾಲೆ ಆ ಕನ್ನಡಿಯೊಳಗಿದ್ದ ದುಡ್ಡು ನಮ್ಮ ಕೈಯ್ಯಾಗ್ಯಾಕ ಬಂದೀತು! ಆ ಜ್ಯೋತಿಷಿಗಳೂ, ಮಕ್ಕಳು, ಮಾತು ಹ್ಯಾಂಗ ತೂಕದ ಮ್ಯಾಲೆ ತೂಗಾಡಿಸ್ತಾರಂದೀ! ತಾವು ತಿರುಕರು; ಮಂದೀ ಜಾತಕದಾಗ ದುಡ್ಡು ಹಾಕದಿದ್ದರೆ ಇವರ ಕೈ ಹ್ಯಾಂಗ ತುಂಬೀತು!

(ಅಷ್ಟರಲ್ಲಿ ಒಬ್ಬ ಕೊರವರ ಹೆಂಗಸು ತಿರಿದುಕೊಳ್ಳಲು ಬರುವಳು. ತಿರಿಯು ವದಕ್ಕೆ ಬಂದಿದ್ದರೂ ವೇಷ ಸಾಧಾರಣ ತಿರುಕರಿಗಿಂತ ಚೆನ್ನಾಗಿಯೇ ಇದೆ.)

ಕೊರವಗಿತ್ತಿ :—ಯಪ್ಪಾ, ಸ್ವಾಮಿ; ಉಳಿವೀ ಜಾತ್ರಿಗೆ ಹೋಗಬೇಕಂತ ಮಾಡೇನಯಪ್ಪಾ.

ಶೇಷಣ್ಣ :—ಉಳಿವೀ ಜಾತ್ರಿಗೇ! ಹಾಂಗಾರ ಮುನ್ನೋಡಿ ಹೋಗು. ಅಂದ್ರ ನಾಕೊಪ್ಪತ್ತು ನೀನೂ ಉಳಿದೀ ನಾನೂ ಉಳಿದೇನು!

ಕೊರವಗಿತ್ತಿ :—ಹಾಂಗನಬಾರ್ದ ಸಾಮೀ; ವೆಂಕಟ್ರಮಣ ನಿಮಗ ಕಲ್ಯಾಣ ಮಾಡ್ಯಾನು! ಒಂದೆರಡು ಕಾಸು ಕೊಡ್ರಿ!

ಶೇಷಣ್ಣ :—ಕಾಸಽ! ಇನ್ನೊಂದ್ಮಾತಾಡಿದ್ರ ನೆಟ್ಟಗ ಕಾಸೇ ಕೊಡತೇನಿ ನೋಡ್ ನಿನ್ನ ಕೆನ್ನಿಗೆ! ಉಳಿವಿ ತನಕಾ ಉಳ್ಯಾಡಕೋತಽ ಹೋಗಿರ ಬೇಕು! ಸರ ಹಿಂದಕ; ತಗೀ ಆ ಕೈ....; ಕೈ ತಗೀತೀಯೋ ಏನು ಒಂದ ಕೈ ನೊಡೇಬಿಡ್ಲೋ.

ಕೊರವಗಿತ್ತಿ :—ಅಯ್ಯs ಯಪ್ಪಾ! ಕೈ ನೋಡಾಕ ಬರ್ತ್ತೈತೇನ್ರಿ? ಶರಣ ಮಾಡ್ತೀನರಿ; ಸಾವೇರ, ನಾನೂ ಕೊರವಂಜೇರಾಕಿ, ಶಕಣಾ ಹೇಳ್ತೇನ್ರಿ.

ಶೇಷಣ್ಣ :—ಎಲಾ ಇವಳs! ಯಾವ್ ತೆಲಗ ದೇಶದಿಂದ ಬಂದಾಳೋ! ನಮ್ಮ ಧಾರವಾಡ ಸೀಮೀ ಕೆಚ್ಚ ಕನ್ನಡ ಮಾತು ಹ್ಯಾಂಗ ತಿಳೀಬೇಕು ಈಕೀಗೆ!

ಕೊರವಂಜಿ :—ನಾವ್ಯಾಕ ತೆಲಗರಾದೇವ್ರೀ ಸಾಮೀ! ನಾವು ಕರ್ನೂಲಿ ನವರೆಪ್ಪಾ. ಅಲ್ಲೆಲ್ಲಾ ಮನಾರ ಕನಡ ಮುಂದಿ ಐತಿ!

ಶೇಷಣ್ಣ :—ಅಲ್ಲs, ಕನ್ನಡ ಕೊರವಂಜೀ ಆದ್ರೂ ನನ್ನ ಮಾತಿನ ಮರ್ಮ ತಿಳೀಲಿಲ್ಲs ನಿನಗ! ಅದಕ್ಕs, ಈಗ ಕರ್ನಾಟಕ ಏಕೀಕರಣಾ ಮಾಡ ಬೇಕಂತಾರ ನೋಡು! ನೀ ನಮ್ಮ ಧಾರವಾಡ ಸೀಮಿಗೆ ಬಂದ್ಮ್ಯಾಲಿ ಯಾವನೂ ಒಂದು ಕೈ ನೋಡಿಲ್ಲ ಕಾಣಸ್ತsದ!

ಕೊರವಂಜಿ :—ನೀವs ನೋಡ್ರಿ ಸಾಮೀ! ಕೈ ನೋಡಿ ನಸೀಬಾ ಹೇಳಿದ್ರ, ನೀವೇನ್ ಬಿಕ್ಷಾ ಕೋಡೋ ಪರಸುಂಗಿಲ್ರಿ. ಮತ್ತ ನೀವ್ ಹೇಳಂದ್ರ ನಾನೂ ಒಂದೆರಡ ಶಕಣಾ ಹೇಳ್ತೇನ್ರಿ. (ಕೈ ಚಾಚಿ) ಸಾವೋರs, ನನ್ನ ಕೈಯಾಗ ಉಳಿವಿ ಯಾತ್ರಿ ಐತ್ರೀ, ಇಲ್ರೀ?

ಶೇಷಣ್ಣ :—ಟಿಕೀಟಿನ ರೊಕ್ಕ ಇದ್ರ ಆ ಬಸ್ಸಿನಾವನ ಕೈಯಾಗೈತಿ, ಉಳಿವೀ ಯಾತ್ರಿ, ಹೋಗಿನ್ನ!

ಕೊರವಂಜಿ :—ಗೆರೀ ನೋಡಿ ಹೇಳ್ರೀ ಸಾಮೀ.

ಶೇಷಣ್ಣ :—(ಮುಂಚಾಚಿದ ಅವಳ ಕೈ ಹಿಂದೂಡುತ್ತ) ಆ ಗೆರಿಗಳ ಗೆರಿ ನನ ಗ್ಗೊತ್ತಿದ್ರ ಇಲ್ಲೆ ಹೀಂಗ ಕೂಡ್ತಿದ್ದೆನೇನು ನಾನು! ಯಾರ್ದಾರs ಮನೀ ಮುಸುರೀ ತಿಕ್ಕಿ; ಅಂದ್ರ ಒಂದೆರಡು ಗೆರೀನೂ ಹೆಚ್ಚಾದಾವು; ಉಳಿವಿಗೆ ಹೋಗಾಕ ರೊಕ್ಕಾನೂ ಸಿಕ್ಕಾವು! ನಡಿ, ನಡೀ ಇನ್ನ! (ಕೊರವಂಜಿ ಅರ್ಧ ಸಿಟ್ಟಿನಿಂದ ಒಟಗುಟ್ಟುತ್ತ ಹೋಗುವಳು) ಅಲ್ಲಾ! ಅದೇನೋ ಅಂತಾರಲ್ಲಾ, ರಂಡಿ ರಂಡಿನ್ನ ಕಂಡ್ರ, ಉಂಡಷ್ಟು ಸಂತೋಷಾಂತ! ನಾನs ಕೈ ಬರೇದಾಗಿ ಕೂತಾಗ ಇನ್ನ ಇಂಥಾ ತಿರುಕರನ್ನ ನೋಡಿ ಸಮಾಧಾನಾ ಹಚ್ಚಿಕೊಂಡರs ಷ್ಟೆ. ಆದ್ರ ತಿರುಕರಿಗೆ ತಿರುಕರನ್ನ

ನೋಡಿದ್ರ ಮಾತ್ರ ವೈಯಿಲ್ಲಾ ಕೆರಕೊಂಬೂ ಹಾಂಗ ಆಗ್ತಿರಬೇಕು. ನನಗಂತೂ ಹಾಂಗs ಆಗೇದ! (ಅಷ್ಟರಲ್ಲಿ ಒಬ್ಬ ಹಳ್ಳೀ ಗೌಡ ಕೈಯಲ್ಲಿ ೫ ಬಾಳೀಹಣ್ಣಿನ ಗೊಂಚಲು ಹಿಡಿದುಕೊಂಡು ಭಯಭಕ್ತಿಯಿಂದ ಬರುವನು)

ಗೌಡ :—ಧಣೇರs, ಸಣಮಾಡ್ತೀನ್ರಿ! ಇಕಾಳ್ರಿ ಹಂಣು.... ಮತ್ತ ಈ ಐದಾಣೆ ದಕ್ಷಿಣಾ! (ಕೈ ತಿಕ್ಕುತ್ತ ಅನುಮಾನದ ನಗೆಯಿಂದ) ಮತ್ತ ಸ್ವಾಮೇರs, ನಂದೂ ಒಂದಿಟ್ಟು ಕೈ ನೋಡ್ರಿ ಮತ್ತs; ಬಾಳ ಚಿಂತ್ಯಾಗ ಇದ್ದೇನ್ರಿ!

ಶೇಷಣ್ಣ :—ಏನಂದೀ? ಅಂ! ನಿಂದೂ ಒಂದ ಕೈ ನೋಡಬೇಕs! ನೀ ಯೇನ್ಮಾಡೀದಿ ಅಂಥಾದ್ದು; ಈ ಹಣ್ಣ್ಯಾಕ, ಈ ರೊಕ್ಕ ಯಾಕ?

ಗೌಡ :—ಬಾಳ ಲುಕ್ಸಾಣಾಗಿದ್ದೇನ್ರಿ ಸ್ವಾಮೀ. ಮತ್ತ ಇದೇಗ ಆ ಹೆಣ್ಣ ಮಗಳ ಕೈ ನೊಡ್ತಿದ್ದಿಲ್ಲ್ರೀ ಯಪ್ಪಾ! ಒಬ್ಬರಿಗೊಂದು ಒಬ್ಬರಿಗೊಂದು ಮಾಡಬಾರದ್ರಿ ಆಚಾರ ಸ್ವಾಮೇರ! ಬೇಕಾದ್ರ ದಕ್ಷಿಣಾ ಇನ್ನೂ ಐದಾಣೆ ಕೊಡಂದ್ರ ಕೊಡತೀನ್ರಿ! (ರುಮಾಲದ ಗಂಟಿನೊಳಗಿಂದ ತೆಗೆದು ಮತ್ತೆ ಐದಾಣೆ ಇಡುವನು) ಧಾರವಾಡ ಸಂತಿಗೆ ನನ್ನವು ಎಡ್ಡೂ ಹೋರೀ ಮಾರಾಕ ಅಂತ ಹೊಂಟಿದ್ನಿ. ನಿನ್ನೆ ರಾತ್ರಿ ಈ ಹುಬ್ಬಳ್ಳಿ ಆಚೀಕೆ ತಿರಕಾರಾಮನ ಕೇರೀ ಹಂತ್ಯಾಕ ವಸ್ತಿ ಮಾಡಿದ್ನಿರೀ!

ಶೇಷಣ್ಣ :—ಯಾವುದೂ? ತಿರಕಾರಾಮನ ಕೇರೀನs! ಆಹಾ! ಈ ಹುಬ್ಬಳ್ಳಿ ಜಂಕ್ಯನ್ನು ತಿರಕೊಂಬವ್ರ ಜಂಕ್ಯನ್ನs ಕಾಣಸ್ತದ. ಇಲ್ಲೀ ಕೇರೀಗೂ ತಿರಕರ ಹೆಸರs ಇರಬೇಕs!.... ಅಲ್ಲಪಾ ಗೌಡಾ, ಆ ತಿರಕರ ಕೇರೀ ಇದ್ಮ್ಯಾಲೆ ನನ್ನ ಹಂತ್ಯಾಕ ಯಾಕ್ಬಂದಿ? ಮೊದ್ಲ ಪಂಚನಾಮಿ ಎವಸ್ಥಾ ಮಾಡಿಕೋಬೇಕಂತ ಬಂದೇನು! ಹೋಗ್ಹೋಗು!

ಗೌಡ :—ಪಂಚನಾಮೆಲ್ಲೀದರೀ! ಇನ್ನೂ ಸಿಗsವಲ್ಲವ್ರೀ!

ಶೇಷಣ್ಣ :—ಮೂರು ದಿವಸಾಗದ ಹ್ಯಾಂಗ ಮ್ಯಾಲ ಬಂದಾವೋ.

ಗೌಡ :—ಮೂರು ದಿವ್ಸದ ಮ್ಯಾಲ ಸಿಕ್ತಾವ್ರೀ! ನಿಮ್ಮ ಬಾಯ ಹರಕೀಲೆ ನನ್ನ ಹೋರಿ ಸಿಕ್ರ ಇನ್ನ ಐದ ರೂಪಾಯಿ ನಿಮ್ಮ ಪಾವದ್ಮ್ಯಾಗ ಹಾಕಿ ಹೋಕ್ಕೀನ್ರಿ! ಸ್ವಾಮೇರು ಬಾಳ ಹುಶಾರ ಕಾಣ್ತೀರಿ! ಕೈ

ನೋಡದುನು ಇಷ್ಟ ಹೇಳ್ತೀರಿ! ಸಾಮುದ್ರಿಕಾ ಅಂದ್ರ ಆ ಶಾಸ್ತ್ರಾ ಭಾಳ ದೊಡ್ಡದು ಸಾವೇರ. ಮತ್ತ ನನ್ನ ಹೋರಿ ಸಿಗೋದು ಖರೇ ಹೌದಲ್ರಿ ? ಒಂದೀಟು ಗೆರೀ ನೋಡಿ ಯಾವ ನಿಟ್ಟನ್ಯಾಗ ಅದಾವ್ರು, ಯಾವ ಸೂಳೀಮಗಾ ಒಯ್ದಾನ ಹೇಳಿಬಿಡ್ರಿ. ನಿಮ್ಮ ಮಾತು ಖರೇವಾದ್ರ, ಐದು ರೂಪಾಯ ಖಚೀತ್ರಿ! ನಮ್ಮ ಅದರಗುಂಚೆಪ್ಪನ ಜಾತ್ರೀಗೆ ನಿಮ್ಮನ್ನ ಅದು ಹೋರೀ ಹೂಡಿದ ಗಾಡ್ಯಾಗ ಕುಂದ್ರಿಸಿ ಕೊಂಡ ಹೋಗ್ತೀನ್ರಿ. ಜಾತ್ರ್ಯಾಗೇನ್ರೀ, ದಕ್ಷಿಣಾ ಬೇಕಾದಟ್ಟು! ....ಮತ್ತೀಗು ರೂಪಾಯಿ ತತಾ ಅಂದ್ರ ತಂದು ಬಿಡ್ತೀನ್ರಿ. (ಹೋಗುವನು)

ಶೇಷಣ್ಣ :—(ಎದುರಿಗಿದ್ದ ಹಣ್ಣು, ಹಣ ಪರಿಶೀಲಿಸಿ) ಚೂಡಾದ ಕಾಗದಾ ನೆಕ್ಕ್ಯಾದೊಂದುಳಿದಿತ್ತು; ಅಷ್ಟರಾಗ ಐದು ಬಾಳಿಹಣ್ಣು ಹತ್ತಣೆ ರೊಕ್ಕ ತಾವಾಗಿ ನನ್ನೆದುರಿಗೆ ಬಂದಿರುವಾಗ ಈ ಜನ ತಾವಾಗಿ ತಂದು ಕೊಟ್ಟ ಸಾಮುದ್ರಿಕನ ಸೋಗು ಹಾಕದೆ ಗತ್ಯಂತರ ಕಾಣ್ಸೋದಿಲ್ಲ. ಆಗಲಿ, ನೋಡೋಣ ಹಡಗ ಯಾವ ದಂಡಿಗೆ ಹತ್ತದೋ! (ಗೌಡ ಹಿಂದಿರುಗಿ ಬರಲು) ಯಾಕಣಾ ಗೌಡಾ; ಐದು ರುಪಾಯಿ ಖರೇನು ಮತ್ತ ?

ಗೌಡ :—ಹಳ್ಳೀ ಮಂದಿ ಕೊಳ್ಳ ಕೊಯ್ದರೂ ಸುಳ್ಳಾಡಾಣಿಲ್ರೀ, ಸಾವೇರು. ಇಕಾ ಈಗ ನಿಮ್ಮುಂದ ಇಟ್ಟು ಎರಡ್ನೇ ಕೆಲಸಾ ಮಾಡ್ತೀನ್ರಿ. ಮತ್ತ ಇನ್ನೂ ನಾಕಾರು ಮಾತು ಕೇಳೂವದಾವ್ರೀ! (ಐದು ರೂಪಾಯಿ ಬಿಚ್ಚಿ ಇಡುವನು)

ಶೇಷಣ್ಣ :—(ಅನುಭವಿಕ ಸಾಮುದ್ರಿಕನಂತೆ ನಟಿಸುತ್ತ) ಗೌಡಪ್ಪಾ, ಎಲ್ಲಿ, ತಾ ಕೈಯಿಲ್ಲೇ ನೋಡೋಣ! ಕುಂದ್ರು, ಪ್ಯಾಗ ಕುಂದ್ರು, ಏನಡ್ಡಿಯಿಲ್ಲಾ! (ಅವನ ಕೈ ಹಿಡಿದು ಕಣ್ಣು ಮುಚ್ಚಿ) ಓಂ, ಹ್ರೀಂ, ಹ್ರಾಂ, ಹ್ರುಂ, ಹ್ರೋಂ....ಮಹಾಕಾಲೀ ಮಹಾಮಾಯಾ! ಭಗವತೀ ಚಾಮುಂಡಿಕೆ, ಗಂಡಭೇರುಂಡವಾಹನೇ, ರುಂಡಮಾಲಾಧರೆ, ಪುಂಡ ಚಂಡಾಟಿಕೇ ಓಂ ಹ್ರಾಂ, ಹ್ರೀಂ, ಹ್ರುಂ........ಕಶ್ಚಿತ್ಕಾಂತಾವಿರಹ ಗುರುಣಾ,........ ಪ್ರಚಂಡ ಸೂರ್ಯಸ್ಪ್ರಹಣೀಯ ಚಂದ್ರಮಾ! ಉತ್ಕಂಠಾ ಕಂಠ

ಕೋಲಾಹಲ........ಕೆಲವಂ ಬಲ್ಲವರಿಂದ ಕಲ್ತು ಕೆಲವಂ ಮತ್ತೇಭ ವಿಕ್ರೀಡಿತಂ! (ಕಣ್ತೆರೆದು) ಮತ್ತೇನಣಾ ಗೌಡಾ! ನಿನ್ನ ಹೋರಿ ನೋಡು, ಉದ್ದ ಡೊಂಕ ಕೋಡಿನ್ವು, ಅಣಸು ಹಾಕಿಸಿದ್ವು; ಹೌದಲ್ಲೋ?

ಗೌಡ :—ಹೌದ್ರೀ ಸಾಮೇರ, ಬರಾಬರೀ ಹೇಳಿದ್ರಿ ಸಾಮೇರs!

ಶೇಷಣ್ಣ :—ಕಾಲುಪ್ಪರದ ಹೋರಿ, ಬಿಳೇ ಸಾದಗೆಂದು ಬೂದೀಬಣ್ಣದವು.

ಗೌಡ :—ಖರೇವ್ರಿ, ಸಾಮೇರ; ಒಂದಟು ಬಿಳೇ ಕಪ್ಪು; ಮತ್ತೊಂದು ಬೂದೀ ಬಣ್ಣದ್ದು ಖರೇವ್ರಿ. ಎರಡನೇದಕ್ಕ ಹೊಟ್ಟೀ ವ್ಯಾಗ....

ಶೇಷಣ್ಣ :—ಗೌಡಪ್ಪಾ! ಪರಶನೀ ಹೇಳಾವಾ ನಾನೋ ನೀನೋ....ಅಷ್ಟ ಸುಮ್ಮಾಕ ಇರ್ತೀಯಿಲ್ಲೋ........! (ಕೈ ಹೆಚ್ಚು ಪರೀಕ್ಷಿಸುವನು)

ಗೌಡ :—ಆಗಲೆಪ್ಪಾ, ನೀವs ಹೇಳ್ರಿ.

ಶೇಷಣ್ಣ :—ಹೊಟ್ಟೀವ್ಯಾಲಿ ಬರೀ....ಹಾಕಿದ....ಕಲಿ ಅದಾವs.

ಗೌಡ :—ಹೌದೆಪ್ಪಾ! ಬರೀ ಅಲ್ಲ್ರಿ, ಕಲಿ ಅದಾವ್ರಿ.

ಶೇಷಣ್ಣ :—ನಾನs ಹೇಳ್ಲಿಲ್ಲೇನು ಕಲಿ ಅದಾವಂತ....

(ಇಷ್ಟರಲ್ಲಿ ಮತ್ತಿಬ್ಬರು ಮೂವರು ಬಂದು ಸುತ್ತು ನೆರೆದು ನಿಲ್ಲುತ್ತಾರೆ. ಅವರನ್ನು ನೋಡಿ ಖೇಕರಿಸಿ ಹೆಚ್ಚು ಗಂಭೀರಭಾವದಿಂದ ಸೆಟೆದು ಕೂತು) ಇಕಾ ಗೌಡಾ, ಎಲ್ಲಾ ಗಡಾಗಡಾ ಹೇಳ್ತೀನಿ, ಮತ್ತ ಮುಂದಿ ಬರ್ತಾರಿನ್ನೂ; ಎಲ್ಲಾ ಸುಮೂಕ ಕೇಳಿಕೋ!

ಗೌಡ :—ಹೂಂನ್ರಿ ಸಾಮೇರ.

ಶೇಷಣ್ಣ :—ನಿಮ್ಮೂರು ನೋಡಣಾ, ಹುಬ್ಬಳ್ಳೀ ದಕ್ಷಿಣದ ಮೂಲೀ ಕಡೆ ಐತಿ...ನಿನ್ನ ಹೋರಿ ಅಲ್ಲಿಂದ ಮೊನ್ನೆ ಪಶ್ಚಿಮದ ಮೂಲೀ ನಿಟ್ಟಗೆ ಹೊಂಟವು....ಈಗ ಅವು ಇಲ್ಲಿಂದ ಎರಡs ಮೈಲಿನ ಅಂತರದಾಗs ಅದಾವು....ನಿನ್ನ ವರ್ಮದ ವೈರೀ ಕೆಲಸಿದು! ಆದರ ನನ್ನ ಮಾತಿನ ವ್ಯಾಗ ವಿಶ್ವಾಸ ಇಡೇನಪಾ! ಇನ್ನ ಮೂರs ದಿನದಾಗ ಹೋರೀ ನೀ ಇದ್ದಲ್ಲಿಗೆ ತಾವs ಬರ್ತಾವು. ನಿನ್ನ ವೈರೀ ಪೂರಾ ಫಜೀತಿ ಆಗತೈತಿ!

ಗೌಡ :—ಹೌದ ಬಿಡರಿ; ಅವನsರೀ ಕಿರವತ್ತೀ ಕಾಳ್ಯಾ, ನಂದೆಲ್ಲಾ ಗಾತಾ ಮಾಡಿದಾವಾ... ಏನ್ ಪುಣವಂತರೀ ಸಾಮೇರು! ಬಂಗಾರದಂಥಾ

ಮಾತು ಹೇಳಿದ್ರು! ಹೋರಿ ಎಡ್ಡs ಮೈಲಿನಾಗದಾನ್ರೀ! ಹಾಂಗಾರೇನ್ರಿ ಇವ್ವಲ್ಲಿಂದ ಹುಡುಕ್ಕೊಂಡು ಬರ್‍ತೀನಿ! ನಿಮ್ಮ ಬಾಯ್ಗುಣದ್ಲೆ ನೀವಂಥಂಗ ಆಗ್ಲಿ. ಸಾಮೇರ....ಮತ್ತ....ಇನ್ನೊಂದ್ಮಾತು....ಕೇಳೋದಿತ್ರಿ........ ....ಮತ್ತs.... (ನೆರೆದ ಜನರನ್ನು ನೋಡಿ ಅನುಮಾನಿಸುತ್ತ)....ನೀವ್ ಕೇಳಂದ್ರ ಕೇಳ್ತೀನ್ರಿ!

ಶೇಷಣ್ಣ :—ಗೊತ್ತಾತು ಬಿಡೋ ನೀ ಕೇಳೂದು. ನಿನ್ನ ಕೈಯಾಗs ಎಲ್ಲಾ ಕಾಣಸ್ತೈತಿ! ನೀ ಕೇಳಬೇಕನ್ನೋದು ಮನೆತನದ ಮಾತು!

ಗೌಡ :—ಕರೇವ್ರು, ಸ್ವಾಮೇರs! ಪುಟ್ಟಾ ಪೂರಾ ತಿಳದs ಹೇಳಿದ್ರಿ. ಇಂತಾ ಸಣ್ಣ ವಯಸ್ಸಿನಾಗ ನಿಮ್ಮದು ಜ್ಞಾನಾ, ಅನುಬವಾ ಬಾಳ್ರೀ! (ಸ್ವಲ್ಪ ಹತ್ತಿರ ಸರಿದು ಆಪ್ತಾಲೋಚನೆಯ ದನಿಯಲ್ಲಿ...) ಸ್ವಾಮೇರs, ಮತ್ತs ಏನಂತಂದ್ರ............ನನ್ನ ಉಡಕೀ ಹೆಂಡ್ತಿ ಅದಾಳಲ್ಲ............

ಶೇಷಣ್ಣ :—ಹೌದs; ನಾ ಹೇಳಿದ್ದಿಲ್ಲ, ಹೆಣ್ಣಿನ ಮಾತೂಂತ! ಗೌಡಾ, ಅಂತಾ ಮಾತಿಗೆ ಹೊತ್ತು ವ್ಯಾಳ್ಯಾ ಜಮಾಯಿಸಬೇಕು ತಿಳೀತಿಲ್ಲೊ; ಈ ಸಂಜೀ ವ್ಯಾಳ್ಯಾ ಹಸಾ ಅಲ್ಲ. ನಿನ್ನ ಹೋರೀ ಕೆಲಸಾದ್ರ ನೋಡೋ ಣಂತ ಮತ್ತ! ನೋಡಿದಿಲ್ಲೊ ಮತ್ತೆಷ್ಟು ಜನ ಕಾದು ನಿಂತಾರ! (ಇಷ್ಟರಲ್ಲಿ ಮತ್ತಿಷ್ಟು ಜನ ಗುಂಪಾಗಿ ಬರುವರು.)

ಗೌಡ :—ಹಂಗs ಆಗಲಿ ಸ್ವಾಮೇರs, ಮುಂಜಾಣೆ ಹೊತ್ತು ವಾಜ್ಮೀ ಆದೀತ್ರೀ? ನೀವ್ಹೇಳಿಧಾಂಗ ಹೋರಿ ಸಿಕ್ಕರ ಊರಿಗೆ ಅಟ್ಟಿ ಮತ್ತ ಬರ್ತೇನ್ರಿ ಯಪ್ಪಾ! ನಿಮ್ಮ ಬಾಯಿ ಬಾಳ ಸುದ್ದರೀ! ದೇವರಿದ್ದಂಗ! (ಕಾಲು ಮುಟ್ಟಿ ಬಾಗಿ ಭಕ್ತಿಪೂರ್ವಕ ನಮಸ್ಕಾರ ಮಾಡಿ ಹಿಂದಿರುಗಿ ಹೋಗುವನು. ಶೇಷಣ್ಣ ರೊಕ್ಕ ಜೇಬಿಗೆ ಹಾಕಿ, ಹಣ್ಣುಗಳನ್ನು ಬದಿಗೆ ಸರಿಸಿಟ್ಟುಕೊಳ್ಳುವನು. ಇಷ್ಟರಲ್ಲಿ ಮತ್ತೂ ಹೆಚ್ಚಾದ ಜನ ನಾ ಮುಂದೆ ನೀ ಮುಂದೆ ಎಂದು ಮೇಲಾಟವಾಡುವರು.)

ಶೇಷಣ್ಣ :—(ಆಭರ್ಟಿಸಿ) ಅಲ್ರೆಪಾ, ಇದೇನು ಸಂತೀ ಅಂತ ತಿಳಿದೀರೇನು? ಇಲ್ಲಿ ನೋಡ್ರಿ ಇಲ್ಲೆ (ಕೈಯಿಂದ ಐದೂ ಬೆರಳುಗಳ ಸನ್ನೆಮಾಡುತ್ತ) ತಿಳೀತಿಲ್ಲೊ? ಪಂಚ..........,ಪಂಚ............ತಿಳೀತs? (ಜನರು ಗುದ್ದಾಡುತ್ತಿರಲು, ಗಟ್ಟಿಗನಾದವನೊಬ್ಬನು ಮುಂದೆ ಬಿದ್ದು, ಶೇಷಣ್ಣ ನೆದುರು ರೊಕ್ಕ ಇಡುವನು.)

ಗಟ್ಟಿಗ :—ಎಷ್ಟರೀ ಶಾಸ್ತ್ರಿಗಳs? ಐದಾಣೇನೋ, ಐದ್ರೂಪಾಯಿನೋ?

ಮತ್ತೊಬ್ಬ :—ಇಗ್ತೊಗೊಳ್ರೀ ಐದು ರೂಪಾಯ್ರೀ!

ಇನ್ನೊಬ್ಬ :—ನನ್ನವಿವು ಐದು ರೂಪಾಯ್ರೀ!

ಗಟ್ಟಿಗ :—ಏ, ಮದ್ಲ ಬಂದವರ್‍ಯಾರ್ರೋ! ನಾ ಐದ್ರುಪಾಯಿ ಕೊಡಲಾರೆ. ನೇನು ಶಾಸ್ತ್ರಿಗಳಿಗೆ. ಸರ್ರಿ ಹಿಂದಕ! ಶಾಸ್ತ್ರಿಗಳs ನಾ ಈ ಸಾರೆ ಲೋಕಲ್ ಬೋರ್ಡಿನ ಕಂಟ್ರಾಕ್ಟು ಹಿಡಿದೇನ್ರಿ............

ಇನ್ನೊಬ್ಬ:—ನಾ ಈ ಸಾರೆ ಹತ್ತೀ ಬಿತ್ತೇನ್ರಿ........ಮಳಿಬೆಳೀ,........

ಮತ್ತೊಬ್ಬ:—ನನ್ನ ಗೋವಾ ಲಾಟ್ರೇದಷ್ಟು ಹೇಳ್ರಿ ಆಚಾರs!............

ಮಗದೊಬ್ಬ :—ನನ್ನ ರೇಸಿನ ತಿಕೇಟು........ನನ್ನ ಮಗನ ಪರಿಕ್ಷಾ....

ಬೇರೋಬ್ಬ :—ಈ ಸಾರೆ ತಂಬಾಕದ ಧಾರಣ್ರೀ...........

(ಹೀಗೆ ಮತ್ತೆ ಗಡಿಬಿಡಿಯಾಗುವದು; ಒಬ್ಬ ಪಾರ್ಸಿ ತನ್ನ ಸೆರೇದ ಗಡಂಗದ ಬಗ್ಗೆ, ಒಬ್ಬ ಮುಸಲ್ಮಾನ ವೀಳ್ಯೆದೆಲೆಯ ವ್ಯಾಪಾರದ ಬಗ್ಗೆ, ಒಬ್ಬ ಸಿಪಾಯಿ ಜಮಾದಾರನಾಗುವ ಬಗ್ಗೆ, ಕೈಯಲ್ಲಿ ಹಣ ಹಿಡಿದು ಪ್ರಶ್ನೆ ಕೇಳುತ್ತ ಗುದ್ದಾಡುವರು. ಗಟ್ಟಿಗ ಎದ್ದು ನಿಂತು ಎಲ್ಲರನ್ನೂ ಹಿಂದಕ್ಕೆತಳ್ಳಿ ನಿಲ್ಲುವನು. ಪೋಲೀಸನೂ ಮುಂದರಿದು ಬಂದು ಜನರನ್ನು ದಬ್ಬಿ ನಿಲ್ಲಿಸುವನು.)

ಶೇಷಣ್ಣ :—ನೋಡ್ರಿಪಾ; ಕೇಳ್ರಿಲ್ಲೀ! ಈ ಸಾಮುದ್ರಿಕ ಅಂದ್ರ ಎಲ್ಲಾ ಶಾಸ್ತ್ರದಾಗೂ ಶ್ರೇಷ್ಠ ಶಾಸ್ತ್ರ. ನೀವ್ಹೀಂಗ ಗುದ್ಯಾಡಿದ್ರ ಯಾರದೂ ಕೆಲಸಾಗೋದುಲ್ಲ. ನಮ್ಮ ಖಾಸ ಕೆಲವು ಶಿಷ್ಯರು ಕರಿಸಿದ್ರೂ ಅಂತ ಈ ಊರಿಗೆ ಒಂದ್ನಾಕ ದಿವಸದ್ದಶಿಂದ ಬಂದೀವಿ! ಈಗ ಸಂಜೀ ಹೊತ್ತು! ಎಲ್ಲಾರೂ ಶಾಂತರಾಗ್ರಿ; ಇದೇನು ಸಿನೇಮಾದ ತಿಕೀಟಿನ ಕಿಟಕಿ ಅಂತ ತಿಳಿದೀರೇನು! ಸ್ಟೇಷನ್ನದಾಗ ನೋಡೀರೋ ಇಲ್ಲೋ; ತಿಕೀಟಾಫಿಸಿನ ಹತ್ತರ ಹ್ಯಾಂಗ ಸಾಲಾಗಿ ನಿಂದ್ರಬೇಕೆಂಬೋ ಚಿತ್ರಾ ಹಚ್ಚಿರತಾರಲ್ಲಾ! ಹಾಂಗ ಸಾಲಾಗಿ ನಿಂದರ್ರಿ.

ಗಟ್ಟಿಗ :— }
ಸಿಪಾಯಿ: — } ಹೌದು ಹೌದು; ಶಾಸ್ತ್ರಿಗಳ ಮಾತು ಬರಾಬರಿ. ಎಲ್ಲರೂ ಸಾಲಕ ನಿಂದರ್ರಿ; ಸರ್ರಿ ಸರ್ರಿ; ಲಾಯಿನ್ನಾಗ ನಿಂದರ್ರಿ!

(ನೆರೆದ ಜನ ಸಾಲಾಗಿ ನಿಲ್ಲುವರು; ಗಟ್ಟಿಗ ಎಲ್ಲರಕಿಂತ ಮುಂದೆ ತಾನು ನಿಂತು ಜನರ ಸಾಲನ್ನು ಹಿಂದೆ ದಬ್ಬಿಕೊಳ್ಳುತ್ತ ಎರಡೂ ಕೈಗಳನ್ನು ಹಿಂಚಾಚಿ ಯಾರೂ ಮುಂದೆ ಬರದಂತೆ ನೋಡಿಕೊಳ್ಳುವನು. ಸಿಪಾಯಿ ಜನರನ್ನು ಹೊಂದಿಸುವನು)

ಶೇಷಣ್ಣ :—ಏ ಸಿಪಾಯಿ! ನಿನ್ನ ಹೆಸರೇನಪಾ?...........ಆಂ, ಏನಂದೀ? ಬೆಂಜಾಮಿನ್ ಎಲಿಝೂನಽ...........ಏನ್ಹರಕತ್ತಿಲ್ಲಾ! ಈ ಜನರ್ನೆಲ್ಲಾ ಒಬ್ಬೊಬ್ಬರನ್ನ ಇಲ್ಲಿ ಕರೀ! ಯಾರ್‍ಯಾರು ದಕ್ಷಿಣಿ ಇಡ್ತಾರಽ ಅವರ ಹೆಸರು ನಂಬರವಾರ ಬರಕೋ! (ಜನರ ಕಡೆ ತಿರುಗಿ) ಈಗ ನೋಡ್ರಿ. ರಾತ್ರ್ಯಾಗಲಿಕ್ಕೆ ಬಂತು. ಎಲ್ಲಾರೂ ನಿಮ್ಮ ನಿಮ್ಮ ಯೋಗ್ಯತಾದ ಪ್ರಕಾರ ಐದು ಐದು..............ದಕ್ಷಿಣಿ ಇಟ್ಟು ಹೆಸರು ಬರಿಸಿ ನಾಳೆ ಎರಡ ಗಂಟೆಕ್ಕ ಇದಽ ಜಗಾದಾಗ ನಂಬರವಾರ ಬರ್‍ರೀ; ತಿಳೀತಿಲ್ಲೋ! ಇನ್ನ ಯಾರಾದ್ರೂ ಭಾಳ ಬಡವರಿದ್ರ ಬರೇ ಐದ್ದುಡ್ಡು ಇಟ್ರೂ ಸಾಕು. ಒಂದ ನಮಸ್ಕಾರ ಮಾಡಿದ್ರೂ ಸಾಕು! ನಮಗ ದುಡ್ಡಿನ ಆಶಾ ಇಲ್ಲಽ ಇಲ್ಲಾ! ತಿಳೀತಿಲ್ಲೊ! ನಮ್ಮ ಈ ಸರ್ವಶ್ರೇಷ್ಠ ಶಾಸ್ತ್ರದಿಂದ ಜನತಾದ ಸೇವಾ ಘಟಿಸಿದ್ರ ಸಾಕು. ನಾಳೆ ಬರೂವಾಗಷ್ಟು ಹಣ್ಣುಕಾಯೀ ಕೈಯಾಗ ಹಿಡಕೊಂಡು ಬರ್‍ರಿ ಆಂ!

(ಗಟ್ಟಿಗ ಮೊದಲಾಗಿ ಎಲ್ಲರೂ ಹೇಳಿದಂತೆ ಮಾಡಿ, ಸಾಮುದ್ರಿಕಶಾಸ್ತ್ರಿಗಳನ್ನು "ಎಂಥಾ ಒಳ್ಳೆಯವರು" "ಎಷ್ಟು ಪ್ರಾಮಾಣಿಕರು" "ಏನು ಸ್ವಾರ್ಥತ್ಯಾಗಿಗಳು" "ಎಂಥಾ ಗುಣವಂತರು" "ಎಷ್ಟು ಸತ್ಯವಂತರು" ಎಂದು ಮುಂತಾಗಿ ಹೊಗಳುತ್ತ ಹೋಗುವರು)

ಸಿಪಾಯಿ :—ನಮ್ಮದಷ್ಟು ಕೆಲಸಾಽ.............ಸ್ವಾಮೇರಽ!.............. (ಪಾಕೀಟಿಗೆ ಕೈ ಹಾಕುವನು.)

ಶೇಷಣ್ಣ :—ನೀ ಏನು ಹಣ ಕೊಡೋ ಕಾರಣಿಲ್ಲ. ನಿನ್ನ ಚಥತೀ ಬಥತೀ ಸವಾಲಿಗೆ ನಾಯೆಲ್ಲಾ ಬರಾಬ್ಬರ ಹವಾಲ ಹೇಳ್ತಿನಿ ನಾಳೆ ಮಧ್ಯಾಹ್ನದಾಗ. ಈಗ ಕತ್ತಲಾಗಲಿಕ್ಕೆ ಬಂತು. ಆಂ. ನಡೀಯಪಾ ಇನ್ನಽ!

[ಕೂಡಿದ ಹಣ ಕಿಸೆಯಲ್ಲಿ ತುಂಬುತ್ತಿರಲು ತೆರೆ ಇಳಿಯುವದು]

೨ನೇ ನೋಟ

(ಹುಬ್ಬಳ್ಳಿಯ ರಾಜಬೀದಿಯಲ್ಲಿ ಶೇಷಣ್ಣ ಒಳ್ಳೇ ಐಟಾದ ಒಟ್ಟಿ ಹಾಕಿಕೊಂಡು ಮೇಲೆ ಶಾಲು ಹೊದೆದುಕೊಂಡು ಕೈಯಲ್ಲಿ ಒಂದು ಹೊತ್ತಿಗೆ-ಗಂಟು ಅನುಕಿಕೊಂಡು ಉಲುಕೋಚಿತನದ ಉಲ್ಲಾಸದೊಂದಿಗೆ ಆಢ್ಯತೆಯಿಂದ ಪ್ರವೇಶಿಸುವನು.)

ಶೇಷಣ್ಣ :—ಸಾಮುದ್ರಿಕಾ ಅಂದ್ರ ಇದೇನು ಸಾಮಾನ್ಯ ಅಲ್ಲಾ ಅಂಬೋದು ನನಗೂ ಖಾತ್ರಿ ಆತು. ಅಲ್ಲಽ........ಐದು ದಿವಸದಾಗ ಐವತ್ತು ರೂಪಾಯದ ಐಶ್ವರ್ಯಬಂದ್ರ ನಮ್ಮ ಐಟಿನ ಐಬಽ ಇಲ್ಲಾ; ಆ ನಮ್ಮ ಅದರಗುಂಚೀ ಗೌಡಾ ಐದರ ಮುಗ್ಗಿ ಒಳೇ ಕಲಿಸಿದಾ! ಈಗ ಅದರ-ಗುಂಚಿ ಜಾತ್ರಿಗೆ ಹೋಗೋದಽ ಅಂತ ಗಂಟಬಿದ್ದಾನ! ಅವನ ಹೋರೀ ರಾತ್ರಿ ಹರಕೊಂಡು ಯಾರದೋ ಹೊಲಾ ಮೆಯ್ದಿದ್ದ್ವಂತ; ಕೊಂಡ-ವಾಡಕ್ಕ ಹಾಕಿದ್ದರಂತ! ಅಂತೂ ನನ್ನ ಪುಣ್ಯಾದಿಂದಽನಽ ಹೋರಿ ಸಿಕ್ಕವಂತ; ಮ್ಯಾಲ ಹರಕೀನು ಕೊಟ್ಟಾ! ಅವನ ಹೋರಿಯಿಂದ ನಮಗೆ ಹೋರಿ ಸಿಕ್ಕಿತೂ; ಕೈತುಂಬ ಹಣಾ ಬಂತು. ಇದರೊಳಗೆಲ್ಲಾ ಜನರ ಹುಂಬತನಾ ಹೆಚ್ಚೋ ನನ್ನ ಜಾಣತನಾ ಹೆಚ್ಚೋ ನನಗಽ ತಿಳೀಧಾಂಗ ಆಗೇದ. ಜನಕ್ಕ ಹುಂಬರು ಅನ್ನೋ ಸಾಮಾಜಿಕ ದೋಷ ಕಟ್ಟಿಕೊಂಬೂದುರಕಿಂತ ನನ್ನ ಜಾಣತನಾನೇ ಹೆಚ್ಚು ಅಂತಽ ತಿಳಕೊಂಬೋದು ಸಮಯೋಚಿತ ಕಾಣಸ್ತದ. ಯಾಕಂದ್ರ ಮುಂದೀನೂ ಅಂತಾರಽ; ನನಗದರೊಳಗ ಫಾಯಿದೇನೂ ಅದ! ಮತ್ತ ನಾ ಜಾಣ ಅಲ್ಲಾಂತ ನಾನ ತಿಳಕೊಂಬೂದಾದರೂ ಯಾಕೆ? ಜಗತ್ತಿನಾಗ ಆತ್ಮವಿಶ್ವಾಸಿಲ್ಲದ್ದಕ್ಕ ಅರ್ಧಾ ಜನ ಮೂಲಿಗುಂಪಾಗತಾರ. ಇಂಟರ್ ಪಾಸಾಗಿ ಒಂದು ಕಾಲೇಜ್ ಸ್ಕಾಲರ್‌ಶಿಪ್ಪು ಹೊಡದ್ರ ಬಿಯೇ ಎಮ್ಮೆ ಎರಡೂ ಸುರಳೀತಾದಾವು ಅಂತ ಲೆಕ್ಕಾ ಹಾಕಿದ್ದೆ; ನಿಜ. ಆದ್ರ ನನ್ನದು ನನಗಽ ವಿಶ್ವಾಸಿದ್ದಿಲ್ಲಾ. ಮ್ಯಾಲೆ ಈ ಎರಡನೆ ಟರ್ಮಿನ ಫೀಗೆ ರೊಕ್ಕಾನೂ ಇದ್ದಿದ್ದಿಲ್ಲಾ. ಈಗ ಇತ್ತಲಾಗ ದುಡ್ಡಿನ ಚೀಲ ತುಂಬಲಿಕ್ಕೆ ಹತ್ತಿಧಾಂಗ ಅತ್ತಲಾಗ ಆತ್ಮವಿಶ್ವಾಸದ ಆಕಾಪಬುಟ್ಟೀನೂ ತುಂಬಲಿಕ್ಕೆ ಹತ್ತೇದ, ಹೊನ್ನಿನ ಹೋಗೀಯಿಂದ! ದುಡ್ಡೂ ಅಂದರಽ ಅರ್ಧಾ ಆತ್ಮಾಯೇನೋ ಅಂತ ಅನಸಲಿಕ್ಕೆ ಹತ್ತೇದ ಈಗಂತೂ!

ಗೌಡ :—(ಪ್ರವೇಶಿಸಿ) ಶರಣ ಸ್ವಾಮೇರs; ಹೋರಿ ಎಡ್ಡೂ ಬಿಡಿಸಿ ಕೊಂಡ್ಬಂದ್ನಿರಿ, ಇಪ್ಪತ್ರುಪಾಯ ದಂಡಾ ಕೊಟ್ಟ. ನಿಮ್ಮಾಯ್ಸ್ತ್ರಣದ್ಲೆ ಎಲ್ಲಾ ನೀವ್ಹೇಳಿಧಂಗs ಆತ್ರಿ........ಮತ್ತ........ನನ್ನ ಆ ಉಡಿಕೀ ಹೆಣ್ತೀದಷ್ಟೂ........

ಶೇಷಣ್ಣ :—ನಡ್ರಸ್ತೇದಾಗ ಆ ಮಾತ್ಯಾಕೋ! ನಾ ನಿಮ್ಮ ಆದರಗುಂಚಿಗೇ ಬರ್ತೀನಿ.

ಗೌಡ :—ಗಟ್ಟಿರೇ ಹಂಗಾರ? ಹುಣ್ಣಿವಿಗೆ ಕರ್ರ್ಯಾಕ ಬರ್ತೀನ್ರಿ ಮತ್ತ, ಗಾಡೀ ಹೂಡಿಕೊಂಡು. ಹೋಗಿ ಬರ್ತೀನ್ರಿ ಹಂಗಾರs. ಶರಣ್ರೀ. (ಹೋಗುವನು)

ಶೇಷಣ್ಣ :—(ಮಾತಿಲ್ಲದೆ ಗೌಡನನ್ನು ಸನ್ನೆಯಿಂದ ಹೋಗಿ ಬಾ ಎಂದು ಕಳಿಸಿದ ಮೇಲೆ) ಹಂ, ಈಗ ಜೋಗ ಜನಾರ್ದನ ಪಂತರ ವನಿತಾ ವಸ್ತು ಭಾಂಡಾರಕ್ಕ ಹೋಗೋ ಹೊತ್ತು ಆತು. ಇಷ್ಟ ದಿನಾ ಈ ಹೊತ್ತು ಹೊತ್ತುಕೊಂಡು ತಲೆ ಭಾರಾಗಿತ್ತು. ಈಗ ಹೊತ್ತು ಅಂದರ ಹಗುರು ಗಾಲಿನ ಕುದುರೀ ಹತ್ತಿಧಾಂಗ ಆಗೇದ. ಒಳ್ಳೊಳ್ಳೇ ಆಫೀಸರಕಿಂತಾ ನಮ್ಮ ಹೊತ್ತಿಗೆ ಕಿಮ್ಮತ್ತು ಹೆಚ್ಚು. ಯಾಕಂದ್ರ ಈಗ ಆ ಒಳ್ಳೊಳ್ಳೇ ಆಫೀಸರಂಬವ್ರs ನನ್ನ ಕೈಯಾಗ ಉಕ್ಕಾಡಲಿಕ್ಕೆ ಹತ್ಯಾರ. ಈ ಊರ ಮಾಮಲೇದಾರ್ರು ಮನೀ ತನಕಾ ಕರಿಸಿದ್ರು. ಕೇಶವಲಾಲ ಮಾರವಾಡೀ ಇಂಪೀರಿಯಲ್ ಬ್ಯಾಂಕಿನ ಇಪ್ಪತ್ರೂಪಾಯ್ದು ಚೆಕ್ಕೂ ಮ್ಯಾಲ ಈ ಶಾಲೂ ಕೊಟ್ಟಾ. ಮೊದಲ ಮೂರು ದಿನಾ ಮುನಿಸೀ ಪಾಲ್ಟೀ ತೋಟದಾಗ ಇರುದ್ರಾಗಂದ್ರ ಅಲ್ಲೇ ಜನಾ ಜಾತ್ರಿ ನೆರಧಂಗ ನೆರೀತು. ಚೀಫ ಆಫೀಸರ್ರೂ ಒಂದ ಕೈ ನೋಡೇಬಿಟ್ಟದ್ದೆ ಅಂತ ಮುನಿಸೀಪಾಲ್ಟೀನ ನಮ್ಮದಾಧಾಂಗಾಗಿತ್ತು. ಅಷ್ಟರೊಳಗs ಉಡುಪೀ ಸೀನಪ್ಪ "ನನ್ನ ಹಾಟೆಲ್ಲಿಗೇ ಬರ್ರಿ; ಇರೋದೂ ಊಟದ್ದೂ ಎಲ್ಲಾ ವ್ಯವಸ್ಥಾ ಮಾಡ್ತೀನಿ" ಅಂತ ಗಂಟಬಿದ್ದು ಕರಕೊಂಡ್ಹೋದಾ! ಎಲ್ಲಾ ಪುಕsಟಂತ ನಾನೂ "ಎದ್ದೆನೋ ಜೋಗೀ ಅಂದ್ರ ಹೆಗಲ ಮ್ಯಾಲs ಕಡಾಸಾಂತ" ಹೊಂಟೆ. ಅದ್ರ ಸೆಟ್ಟಿ ಇಳಿದಲ್ಲೇ ಪಟ್ಟಣಾ. ಹಾಟೇಲಿನ ಸೀನಪ್ಪನೂ ಬಲು ಹರೇಮಿ; ತಂದೂ ಪುಕsಟ ಅಡ್ವರ್ಟೈಯಿಜಾಗ್ಲೀ ಅಂತs ಬೇತ್ಮಾಡಿದ್ದ. ನಾ ಹೋದಾಗಿನ್ನೊತ್ತಿಟ್ಟೂ ಅವನ ಹಾಟೆಲ್ಲಂದ್ರ

ಇರುವೀ ಹುತ್ತದಾಂಗ ಆಗೇದ............ಎಲಾ ಇವನ! ನೆನಸೂ ದ್ರಾಗನ ಈ ಜನಾರ್ಧನ ಪಂತ ಇತ್ತಲಾಗನ ಬರಲಿಕ್ಕೆ ಹತ್ತ್ಯಾನಲ್ಲಾ! (ಆತ ಬರಲು) ಮತ್ತೇನ್ ಪಂತರನ, ಜೋರಿಲೆ ಹೊಂಟೀರಿ? ನಾನೂ ಬರಾವನೇ ಇದ್ದೀನಲ್ಲಾ ಅಂಗಡೀ ಕಡೇ.

ಪಂತ :—ಓಹೋ, ಶಾಸ್ತ್ರಿಗಳೇನು? ಬರ್ರಿ ಬರ್ರಿ ಬ್ಯಾಗ. ನಾನೂ ನಿಮ್ಮ ದಸಿಂದನ ಹೊರಟೇನಿ. ಇವತ್ತೊಂದು ಅಸ್ಸಲ್ ಗಿರ್ಹಾಕಿ ತಂದೇನಿ ನಿಮ್ದುಸಿಂದ. ಇದೇ ಈಗ ಆ ಅಸ್ಮಾನೀ ಬಣ್ಣದ ಕಾರು ಹೋತು ನೋಡಿದಿರಿಲ್ಲೊ? ಹಂ, ಅದನ ನೋಡ್ರಿ; ಅಕಾ ನೋಡ್ರಿ, ಕಾರು ನಮ್ಮಂಗಡಿ ಮುಂದೇ ನಿಂತ್ಯು. ನಾ ಒಂತುಸಾ ಮುಂದ ಹೋಗ್ತೀನಿ; ನೀವೂ ಬರ್ರಿ ಲಗೂನ, ಅಂ! (ಅವಸರವಸರವಾಗಿ ಹೋಗುವನು)

ಶೇಷಣ್ಣ :—ಈ ಪಂತನ ಮುಂಜಾಪು ಮುಗಿಲ ಮುಟ್ಟ್ಯವಂಥಾವು ಕಾಣಸ್ತನದ. ನಾ ಸೀನಪ್ಪನ ಹಾಟೆಲ್ಲಿನ್ಯಾಗ ಇದ್ದದ್ದು ನೋಡೇ ಈ ಕೊಂಕ್ಯಾ ಲೆಕ್ಕಾ ಹಾಕಿರಬೇಕು. ಇವಾ ಅಂದಾ—"ಮುಂಜಾನೆ ಮೂರು ತಾಸು ಹಾಟೆಲ್ಯಾಗ ಇರ್ತೀರಿ; ಸಂಜೀ ಎರಡು ತಾಸು ನಮ್ಮ ವನಿತಾ ವಸ್ತು ಭಾಂಡಾರಕ್ಕ ಬರ್ರೀ; ನಾ ಖುರ್ಚಿ, ಟೇಬಲ್ಲು, ಸೋಫಾ, ಕೋಚು ಎಲ್ಲಾದರ ವ್ಯವಸ್ಥಾ ಮಾಡ್ತೀನಿ" ಅಂತ. ಈ ಎರಡು ದಿನ ಪ್ಯಾಟೀ ಕೂಟನ ಆ ವನಿತಾ ವಸ್ತುಭಾಂಡಾರ್ದಾಗ ಒಂತಾಸು ಕೂತಿದ್ರ ಹೆಣ್ಗೋಳು ಹಿಂಡ ಕಟ್ಟಿಕೊಂಡು ಬರ್ಬೇಕನ! ಅದೊಂದು ಸ್ಪೆಶಲ್ ಝನಾನಾ ಮ್ಯಾಟಿನೀ ಇದ್ಧಂಗ ಇರ್ತನದ! ನಾ ಒಬ್ಬೊಬ್ಬರದನ ಕೈ ನೋಡೋ ತನಕಾಂದ್ರ, ಜನಾರ್ದನ ಪಂತರು ತಮ್ಮ ಸಂತೀ ಹರಿವಿ ಸುಲಿಗೀ ನಡ್ಸಿರತಾರನ! ಅಂತೂ ಪರಸ್ಪರಂ ಭಾವಯಂತಾ ಅಂತ ನಡದನದ! ವ್ಯಾಪಾರ ಛಲೋ ಆದ್ರ ಕಮೀಶನ್ ಬ್ಯಾರೆ ಕೊಡ್ತೇನಿ ಅಂದಾನ ಪಂತ! ಮುಂಜಾನೆ ಹಾಟೆಲ್ಲಿನಾಗ, ಸಂಜಿಗೆ ಈ ಅಂಗಡ್ಯಾಗ ಅಂಬೂದರಾಗ ನಿನ್ನಿನತೊಟ್ಟು ಮಟಮುರಿ ವಕೀಲರ ವಸೀಲಿಯಿಂದ ಮಧ್ಯಾನ್ಹದಾಗ ಎರಡ ತಾಸು ಬಾರ್‌ರೂಮಿಗೆ ಹೋಗೋದು ನಡದನದ. ನಿನ್ನೆ ಇವೊತ್ತ ಅಂದ್ರ ಬಾರ್‌ರೂಮಿನವೇ ಮತ್ತೊಂದು ಐವತ್ತು ರೂಪಾಯಿ ಆಗ್ಯಾವ. ಹೀಂಗಾಗಿ ಹೊತ್ತು ನಮ್ಮ ಕೈಯಾಗ

ತಿಪ್ಪರಲಾಗ ಹಾಕ್ಲಿಕ್ಕೆ ಹತ್ತ್ಯೇದ. ಇವೊತ್ತ ಈ ಜನಾರ್ದನ ಪಂತಾ ಹೇಳಿ ಕಳಿಸ್ಯಾನ "ಒಂದು ಅರ್ಧ ತಾಸು ಲಗೂ ಬರ್ರಿ, ಖಾಸ ಗಿರಾಕಿ ಬರೋದು ಅದ" ಅಂತ. ಅದಕ್ಕ ಬಾರ್‌ರೂಮಿನ ಕೆಲ್ಸಾ ಅಷ್ಟಕ್ಕ ಬಿಟ್ಟು ಹೊಂಟೇನಿ. ಅಂಥಾ ಖಾಸ ಇಸಮು ಇದ್ರ ಇಡೀ ಒಂದ ಟರ್ಮಿನ ಫೀನು ಎಬ್ಬಿಸ್ತೀನಿ. ಅಂದ್ರ ಉಳಿದ ನೂರು ರೂಪಾಯಿ ಈ ಟರ್ಮಿನ ಖರ್ಚಿಗೆ; ಜನಾರ್ದನ ಪಂತ ಕಮೀಶನ್ ಕೊಟ್ಟರೆ ಪರೀಕ್ಷಾದ ಫೀ ಆತು; ಬೇಕಾದ್ರ ಈ ಸಾರೆ ಮುಂಬಯಿ ಸೆಂಟರು ತುಂಬಿದರೂ ಬಂದೀತು! ಆಮ್ಯಾಲೇನು, ಎಮ್ಮೆ! ಪಿಯೆಚ್ಡೀಗೆ ಬೇಕಾದ್ರ ಇಂಗ್ಲಂಡಕ್ಕೂ ಹೋಗಬಹುದು. ಆಗಲಿ ಈಗ ವನಿತಾ ವಸ್ತು ಭಾಂಡಾರಕ್ಕ ಹೋಗೋಣ. ಮೂರು ಹೋಡೀತು. ಜನಾರ್ದನ ಪಂತ ಹಾದೀ ನೋಡ್ತಿದ್ದಾನು! (ಹೋಗುವನು. ತೆರೆಯೇಳುವದು. ರಂಗದ ಒಂದು ಬದಿಗೆ ಜನಾರ್ದನ ಪಂತನ ಅಂಗಡಿಯ ಭಾಗ. ಇನ್ನೊಂದು ಮಗ್ಗಲು ಸಾಮುದ್ರಿಕರ ಆಸ್ಥಾನ. ಟೇಬಲ್ಲು, ಖುರ್ಚಿ; ಸುತ್ತಲೂ ಸೋಫಾ ಇತ್ಯಾದಿ ಇಡಲ್ಪಟ್ಟಿವೆ. ಮೇಲೆ ಇಲೆಕ್ಟ್ರಿಕ್ ಫ್ಯಾನು ಬೀಸುತ್ತಿದೆ. ಸೋಫಾದ ಮೇಲೊಬ್ಬ ಚೆಡಗಿನ ಯುವತಿ ಕುಳಿತಿದ್ದಾಳೆ. ಹಿಮ್ಮಗ್ಗಲು ಜನಾರ್ದನ ಪಂತ ಕಪಾಟನಲ್ಲಿಯ ಸಾಮಾನು ಹೊಂದಿಸುತ್ತಿದ್ದಾನೆ. ಇಷ್ಟರಲ್ಲಿ ಶೇಷಣ್ಣ ಬರುತ್ತಾನೆ.)

ಶೇಷಣ್ಣ :—ಹೊರಗ ನ್ಯಾಸ್ಟ್ಯೇನ್ ಫಾರ್ಟೆ ಥ್ರೀ ಮಾಡೆಲ್ ಫೋರ್ಡು ಕಾರು ನಿಂತದ್ದು ನೋಡಿದ್ರ ಇವೊತ್ತಿನ ಗಿರಾಕಿ ಹಾಯ್‌ಕ್ಲಾಸ್ ಇರಬೇಕು! (ಹೊರಳಿ ಯುವತಿಯನ್ನು ನೋಡಿ, ತಟ್ಟನೆ ತಡೆದು) ಈ ಜರದ ಸೀರಿ ಜಬರು ನೋಡಿದ್ರ ಖಬರು ಹಾರೂಹಾಂಗ ಅದ ಅಲ್ಲಾ! ಆಂ! (ಹುಬ್ಬು ಹಾರಿಸುವನು.)

ಪಂತ :—(ಇಷ್ಟರಲ್ಲಿ ಮುಂಬಂದು) ಏನು ಮಹಾರಾಯರೇ, ನಿಮ್ಮ ಹಾದೀನ ನೋಡ್ಲಿಕ್ಕೆ ಹತ್ತಿದ್ವಿ. ಇಲ್ಲಿ ನೋಡ್ರಿ ಯಾರು ಬಂದಾರ! ನಮ್ಮ ಹುಬ್ಬಳ್ಳಿಗೇ ಹಿರಿದು ಈ ಹನುಮಾಸಾನೀ! (ಯುವತಿ ಮುಗುಳ್ನಗೆಯಿಂದ ಒಯ್ಯಾರ ತೋರುವಳು)

ಶೇಷಣ್ಣ :—ಆಹಾ! ಆ ಬಾಲಬ್ರಹ್ಮಚಾರೀ ಹೆಸರು ಇಟ್ಟುಕೊಂಡಾಳ ಈ ಸಾನೀ! ಸರಿ ಸರಿ! 'ಲಕ್ಷ್ಮಿ ಹೇರ್ ಕಟಿಂಗ್ ಸಲೂನ್' ಅಂತ

ಇದ್ದಾಂಗ! ಈ ಸಾಮುದ್ರಿಕ ಸಾಗರದಾಗ ಹೊಯ್ದಾಡೋ ನಮ್ಮ ಹಡಗದ ಚುಕ್ಕಾಣಿ ಇತ್ಲಾಗ ತಿರುಗಿತೇ! ಇಲ್ಲಿ· ನೋಡೋಣಂತ! (ಮುಂದರಿದು ಹೋಗಿ ತನ್ನ ಖುರ್ಚಿಯಲ್ಲಿ ಕೂತು ಹೊತ್ತಿಗೆ ಗಂಟು ಬಿಚ್ಚುವನು. ಯುವತಿ ಸಾವರಿಸಿಕೊಳ್ಳುವಳು. ಪಂತ ಮತ್ತೆ ತನ್ನ ಕೆಲಸದತ್ತ ಹೋಗುತ್ತಿರುವನು.)

ಪಂತ :—ಹನುಮಾಸಾನಿಗೆ ದೇವರು ಭ್ರಾಂಬರೂ, ಸಾಮುದ್ರಿಕಾ ಜ್ಯೋತಿಷ್ಯಾ ಅಂದ್ರ ಬಹಳ ವಿಶ್ವಾಸ. ನಮ್ಮ ಮ್ಯಾಲೂ ಆಕೀದು ಪೂರಾ ಮರ್ಜಿ. ಆಕೀಗೆ ಎಲ್ಲಾ ಅಗದೀ ಬಿಚ್ಚಿ ಹೇಳ್ರಿ ಅಂ! (ಕೊಂಕು ನಗೆ ನಗುತ್ತ ತನ್ನ ಕೆಲಸಪತ್ತ ಹೋಗುವನು.)

ಶೇಷಣ್ಣ :—ಮತ್ತೇನು! ನಿನಗೇನ್ಬೇಕು? ಪ್ರಶ್ನೆ ಕೇಳ್ತೀಯಾ? ಹೊತ್ತು ವ್ಯಾಳ್ಯಾದ ಲೆಕ್ಕದ ಮ್ಯಾಲಿಂದ ಹೇಳ್ಲ್ಯಾ? ಮಾರೀ ಲಕ್ಷಣದ ಮ್ಯಾಲಿಂದ ಹೇಳಲ್ಯಾ? ಕೈ ನೋಡಿ ಹೇಳಲ್ಯಾ?

ಸಾನಿ :—ಮಾರೀ ನೋಡ್ತಿದ್ರ ನೋಡ್ರಿ; (ಮುಂದೆ ಮುಖ ಮಾಡಿ ಹಾಸ್ಯ ಬೀರುವಳು) ಮತ್ತ ಕೈ ನೋಡ್ತಿದ್ದರ ಇಕಾ ಹಿಡೀರಿ! (ಸರಿಸರಿದು ಒಯ್ಯಾರದಿಂದ ತೀರ ಸನಿಯಕ್ಕೆ ಬಂದು ಕುಳಿತುಕೊಳ್ಳುವಳು.)

ಶೇಷಣ್ಣ :—(ಅವಳ ಇಂಗಿತವನ್ನರಿತು, ತುದಿಬೆರಳಿನಿಂದ ಅವಳ ಕೈ ಹಿಡಿದು) ಹಾಂ! ಹಾಂ!....ಇರಲಿ, ಏನ್ಹರಕತ್ತಿಲ್ಲಾ. ನಿನ್ನ ಮನಸಿನ್ಯಾಗ ಭಾಳ ದಿವಸದ್ದೊಂದು ಮಾತು ಉಳಕೊಂಡು ಕೂತsದ. ಅದರ ದಸಿಂದ ಒಂದು ಕಾಯಂ ಏನಾದ್ರೂ ವ್ಯವಸ್ಥಾ ಮಾಡ್ಬೇಕಂತ ಮಾಡೀದಿ?

ಸಾನಿ :—(ಇಂಗಿತ ಹೊರಪಡಿಸುವಂತೆ ನಗುತ್ತ) ಹೌದರೀ!

ಶೇಷಣ್ಣ :—ನಿನ್ನ ಕೆಲಸಕ್ಕ ದುಡ್ಡು ಭಾಳ ಹಿಡಿದೀತು!

ಸಾನಿ :—ಹಿಡೀಲ್ರಿ; ಏನಡ್ಡಿಯಿಲ್ಲಾ. ಮತ್ತ ಮುಂದ ಫಾಯ್ದೆ ಐತಿಯ್ಲೋ? ಇಕಾ ಈ ಉಂಗರಾನs ನಿಮಗ ದಕ್ಷಿಣಾ ಕೊಡತೀನ್ರಿ. (ಉಂಗುರ ಕೊಡಹೋಗುವಳು.)

ಶೇಷಣ್ಣ :—ಮುಂದಿನ ಫಾಯಿದೇದ ಗೆರಿ ಇನ್ನೂ ನೆಟ್ಟಗೆ ಎದ್ದಿಲ್ಲಾ; ಆದರs, ನಾವು ಉಂಗುರಾ-ಗಿಂಗರಾ ತಗೊಳ್ಳುವವರಲ್ಲಾ, ರೋಖ ಬೇಕು!

ಸಾನಿ :—ಹಾಂಗs ಆಗಲ್ರಿ, ಮನಿಗ್ಹೋಗಿ ಕಳ್ಸಿಕೊಡ್ತೀನ್ರಿ. (ಉಂಗುರ ತಿರುಗಿ ತೆಗೆದುಕೊಳ್ಳುವಳು.)

ಶೇಷಣ್ಣ :—ಮತ್ತ ನೀಯೀಗ ಒಬ್ಬರ ಮ್ಯಾಗ ಕಣ್ಣಿಟ್ಟೇದಿ?

ಸಾನಿ :—ಅನವಲ್ರ್ಯಾಕರಿ! (ಆತನ ಕಣ್ಣಲ್ಲಿ ಕಣ್ಣಿಟ್ಟು ದೃಢಚಿತ್ತಳಾಗುವಳು)

ಶೇಷಣ್ಣ :—ಆದ್ರ ಅವರ ಮ್ಯಾಲೆ ಈಗೊಂದು ದೊಡ್ಡ ಕುತ್ತು ಬಂದೈತಿ!

ಸಾನಿ :—ಎಂತಾ ಕುತ್ತು ಅಂತ್ಹೇಳಿದ್ರ ನಾ ಅವರ್ನ ಬಿಡ್ಸಿಗೋತೀನ್ರಿ!

ಶೇಷಣ್ಣ :—ಆದ್ರ, ಅವರು ನಿನ್ನ ಕೈಯಾಗಿನವರಲ್ಲಾ; ನಿನ್ನ ಕೈಯೇ ಅವರ ಕೈಯಾಗ ಸಿಕ್ಕೈತಿ. (ಇಬ್ಬರೂ ಇಂಗಿತದ ನಗೆ ನಗುವರು) ಈಗ ನಿನ್ನ ಮ್ಯಾಲೆ ಶನೀ ದೃಷ್ಟಿ, ಬಿದ್ದೈತಿ ಅದರ ಪರಿಹಾರಾದ್ರ, ಮುಂದ ನಿನ್ನ ಕೆಲಸ ಕೈಗೂಡೀತು.

ಸಾನಿ :—ಅದಕ ಇನ್ನೆಷ್ಟ ದಿನಾರೀ?

ಶೇಷಣ್ಣ :—ನಿನ್ನ ಹೆಸರೇನಂದೀ?

ಸಾನಿ :—ಹಣಮಾಸಾನಿರೀ.

ಶೇಷಣ್ಣ :—ಹ... ನಿ....ಸಾ....ಮಾ....ರೀ........ಉತ್ತರಾಷಾಢಾ ನಕ್ಷತ್ರ; ಪ್ರಥಮ ಚರಣಾ....(ಗುಣಿಸಿದಂತೆ ಮಾಡಿ) ಇನ್ನೂ ಒಂದು ತಿಂಗಳ ಬೇಕಾದೀತು. ಅಲ್ಲೀ ತನಕಾ ಕೇಶವಾಪುರದ ಹಣಮಪ್ಪಗ ನಡಕೋ! ಮತ್ತ ಇನ್ನೇನ್ಬೇಕು? ಸಂಜಿಗೆ ದಕ್ಷಿಣಾ ಕಳ್ಸಿಕೊಡು. ಆಂ.

ಸಾನಿ :—ಹೂನ್ರಿ. ಆದ್ರ ನೀವs ಒಮ್ಮೆ ನಮ್ಮ ಮನೀಗೆ ದಯಮಾಡಿಸಿದ್ರ ಛಲೋ ಆಗತೈತ್ರಿ. ನೀವು ಹೇಳಿದಾಗ ಕಾರು ಕಳಿಸಿಕೊಡ್ತೀನ್ರಿ. ನನ್ನ ತಂಗೀನೂ ಒಬ್ಬಾಕಿ ಅದಾಳ್ರಿ; ಬಾಳ ಅಪರೂಪದಾಕಿ. ಆಕಿನ್ನ ಸಿನೇಮಾದಾಗ ಕೆಲ್ಸಾ ಮಾಡಾಕ ಕರದಾರ್ರೀ. ಮತ್ತ ಆಕಿನ್ನೂ ಆಟ ನಿಮ್ಮ ಕಣ್ಣಮ್ಯಾಲೆ ಹಾಕಬೇಕಂತಿದ್ನಿರಿ.

ಶೇಷಣ್ಣ :—ಭಾಳ ಸರ್ವೋತ್ತಮ ವಿಚಾರ! ಆದ್ರ ನಿನ್ನ ಮ್ಯಾಲ ಶನೀ ದೃಷ್ಟಿಯಿರೋತನಕಾ ನನಗ ಬರಲಿಕ್ಕೆ ಬರೋದುಲ್ಲ. ನಮಗೂ ನಿಮಗೂ ಗೃಹದೋಷ ಅದs.

ಸಾನಿ :—ನಿಮ್ಮ ಕೈಯಾಗs ಸಾಮುದ್ರಿಕಾ ಜೋತಿಸ್ಯಾ ಇದ್ದಮ್ಯಾಗ ಯಾ ಗಿರಹ ಏನ್ಮಾಡ್ಯಾವ್ರಿ. ನನ್ನ ಮನಸ್ಸಿನ್ಯಾಗಿತ್ತೂ....ನಮ್ಮ

ಓಣ್ಯಾಗಽ ನಂದಽ ಒಂದು ಖಾಲೀ ಮನಿ ಐತರೀ, ಭರ್ತಿ ರಸ್ತೇದ ವ್ಯಾಗಿನ್ದ್ದು, ಅದನ್ನಽ ನಿಮಗ ಕೊಟ್ಟಬಿಡಬೇಕಂತ ಮಾಡಿದ್ನೆರೀ! ಅದು ನಡುಪ್ಯಾಟಿ ಮನೀರಿ, ಮತ್ತ ನಿಮ್ಹಂದೇನೂ ಅಲ್ಲಿ ಬಾಳ ಬೇಸಿ ನಡಿದೀತ್ರಿ. ನೀವಿನ್ನೂ ಹೊಸಾ ಹರೇದವ್ರು. ನಮ್ಮ ಓಣ್ಯಾಗಾದ್ರ ಎಲ್ಲಾ ತರದ್ದೂ ಫಾಯಿದೇ ಐತ್ರಿ.

ಶೇಷಣ್ಣ :—(ಗೋಣು ಹಾಕುತ್ತ)ಹೌದ್ಹೊದು! ಎಲ್ಲಾರಿಗೂ ತಮ್ಮ ತಮ್ಮ ಧಂದೇ ನೋಡಿಕೊಬೇಕಲ್ಲಾ. ಆದ್ರ ನಿನ್ನ ಶನೀ ದೃಷ್ಟಿ ಅಷ್ಟು ಕಳೆದುಹೋಗ್ಲಿ. ಆಮ್ಯಾಲ ಬರ್ತೀನಿ. ಈಗ ಈ ಓಣೀದು ಕೆಲ್ಸ ಭಾಳಽ ಅದಽ; ನಮ್ಮ ಜನಾರ್ದನ ಪಂತರೊಂದು ಬಿಡಬೇಕಽ!

ಪಂತ :—(ತೂಕಡಿಸುತಿದ್ದವ ತಟ್ಟನೆ ಎಚ್ಚತ್ತು) ಹೌದು ಹೌದು ಶಾಸ್ತ್ರಿಗಳೇ, ನಮ್ಮಂಗಡೀ ಏನಾದ್ರೂ ಬಿಡಬ್ಯಾಡ್ರೀ.

ಸಾನಿ :—ನೋಡಿದ್ರ್ಯಾ........ ನೀವಂಥಂಗ ಎಲ್ಲಾರೂ ತಂತಮ್ಮ ಧಂದೇ ನೋಡಾವ್ರು. (ಕಳ್ಳಗಣ್ಣಿನಿಂದ ಇಬ್ಬರನ್ನೂ ನೋಡುವಳು)

ಶೇಷಣ್ಣ :—ಹೌದ ಮತ್ತ, ಜಗತ್ತಿನ ವ್ಯವಹಾರಾನ ಹಾಂಗದಽ! ಆಗಲಿ, ಈಗ ಮತ್ತ ಬ್ಯಾರೆ ಮಂದಿ ಬರೂ ಹೊತ್ತಾಯಿತು; ನಿಮಗ ಮೂರೂ ಸಂಜಿ ಹ್ಯಾಂಗೋ ಹಾಂಗ ನನಗ ಈ ಮಧ್ಯಾನ್ಹ.

ಸಾನಿ :—ಆ ಮೂರೂಸಂಜಿನಾಗ ಬರಬೇಕಾದವ್ರು ಬರದಿದ್ರ ಮೂರೂ ಸಂಜೀನ ನಮಗ ಮಧ್ಯಾಣ ಆದಾವ್ರಿ!

ಶೇಷಣ್ಣ :—ನಾ ಹೇಳಿದ್ನೆಲ್ಲಾ ಹಣಮಪ್ಪಗ ನಡಕೋ ಅಂತಽ. ಅಷ್ಟು ಮಾಡಿ ನೋಡು! ಮತ್ತ ಬರೀಯಂತ. ಈಗ ಹೋಗೀಗ. (ಅವಳು ಮೆಲ್ಲನೆದ್ದು ಒಯ್ಯಾರದೊಡನೆ ಹೊರಡುವಳು)

ಪಂತ :—(ಅವಳು ಹೋದುದನ್ನು ನೋಡಿ) ಹ್ಯಾಂಗದಽ ಗಿರಾಕಿ? ಈ ಊರಾಗೆಲ್ಲಾ ಒಳೇ ಘಳಿಸೂವಾಕೀ ಅಂದ್ರ ಇಕೀನಽ! ಇಂತವ್ರು ನಿಮ್ಮ ಕೈಯಾಗ ಬಿದ್ರ ಸರ್ವತೋಪರಿ ಲಾಭಾ! ಯಾಕಽ ಅಂದೆ.... ಹ್ಹಾ ಹ್ಹಾ........! (ನಗುವನು; ಅಷ್ಟರಲ್ಲಿ ಹೊರಡುವ ತಯಾರಿಯಲ್ಲಿ ಇದ್ದುದನ್ನು ನೋಡಿ) ಯಾಕ ಶಾಸ್ತ್ರಿಗಳಽ ಗಡಿಬಿಡಿಯಿಂದ ಎದ್ದಿರಿ?

ಶೇಷಣ್ಣ :—ಹೌದು ಬಾರ್ ರೂಮಿಗೆ ಹೋಗ್ಬೇಕಾಗೇದ. ಇವೊತ್ತು ಧಾರವಾಡದಿಂದ ಜಜ್ಜ ಸಾಹೇಬರೂ ಬರೋವ್ರಿದ್ದಾರಂತ; ಅವರ್ದಷ್ಟು ಕೈ ನೋಡ್ಬೇಕಾಗೇದ. ನೀವು ಮುದ್ದಾಂ ಹೇಳಿಕಳಿಸಿದ್ರೀ ಅಂತ ಬಂದೆ.

ಪಂತ :—ಮತ್ತ ಸಾವಾನು ಎಲ್ಲಾ ಕಟ್ಟಲಿಕ್ಕೆ ಹತ್ತಿದಿರಲ್ಲಾ! ಆ ಸಾನೀ ಓಣಿಗೆ ಮಾತ್ರ ಹೋಗಬ್ಯಾಡ್ರಿ ಆಂ! (ಆತ ಹೋಗುತ್ತಿರಲು) ಮತ್ತ ಬರ್ರೆಪಾ! ನೀವಿದ್ರಷ್ಟು ನಮ್ಮ ವ್ಯಾಪಾರ ಛಲೊ ಇರ್ತದ. (ಶೇಷಣ್ಣ ಮುಂದರಿದು ಬರಲು ನಡುವಿನ ತೆರೆ ಬೀಳುವುದು.)

ಶೇಷಣ್ಣ :—ಸಮುದ್ರಾದಾಗ ಸಣ್ಣ ಹುಳಾ-ಹುಪ್ಪಡಿ ತಿನ್ನಲಿಕ್ಕೆ ಮೀನಾ ಇರ್ತಾವಂತ; ಆ ಮೀನಾ ತಿನ್ನಲಿಕ್ಕೆ ತಿಮಿ ಇರ್ತಾವಂತ; ಅವನ್ನ ತಿನ್ನಲಿಕ್ಕೆ ತಿಮಿಂಗಿಲ ಇರ್ತಾವಂತ; ಮತ್ತ ಅವನ್ನ ತಿನ್ನಲಿಕ್ಕೆ ತಿಮಿಂಗಿಲ'ಗಿಲಾ' ಅಂತೂ ಇರ್ತಾವಂತ ಕೇಳಿದ ಮಾತು. ಆದ್ರ ಸಮಾಜ್ದಾಗ ಮಾತ್ರ ಇವೆಲ್ಲಾ "ಗಿಲಾನೂ" ಇರ್ತಾವಂಬೊ ಗಿಲ್ಲಾ ಇವೊತ್ತ ಹೊರಬಿತ್ತು. ಎಲ್ಲಾರನೂ ಕಿಸೇದಾಗ ಹಾಕ್ಕೊಂಬಾವಾ ಸಾಮುದ್ರಿಕಾ ಹೇಳಾವಾ ಅಂತ ತಿಳಕೊಂಡಿದ್ದೆ. ಆದ್ರ ನನ್ನ ಬಗಲಾಗ ಹಾಕಲಿಕ್ಕೆ ಈ ಪಂತನ ಪಂಥ. ನಮ್ಮಿಬ್ರುನ್ನೂ ಜಡಿದು ಬಡೀಬೇಕೊಂತ ಆ ಸಾನಿ.........ತಿಮಿಂಗಿಲಥಾಂಗ..........ಬಂದಿದ್ದಳು. ಇನ್ನ ಭಾಳೊತ್ತು ಮಾಡಿದ್ರ ಈ ಸಾಮುದ್ರಿಕ ಸಮುದ್ರದಾಗ ನಾನಽ ಮುಳುಗೇನು. ಅಥವಾ ಈ ಹಣಮಾಸಾನೀ ಈ ಸಮುದ್ರಾ ಜಗಿದರೂ ಜಗಿದಾಳು! ನಾ ಕಾಲೇಜಿನ ವಿದ್ಯಾರ್ಥಿ; ಕೈಯಾಗ ಗಂಟಿಲ್ಲದ್ದಕ್ಕ ಕುಂಟಿಗೋ ಕೂರಿಗೋ ಅಂತ ಇಂಟರ್ ತನಕಾ ಬಂದೀನಿ. ಈಗಷ್ಟು ಕೈಯಾಗ್ಗಂಟು ಆತು ಸಾಕು. ಇಲ್ಲದ ಕಗ್ಗಂಟಿನಾಗ ಬೀಳೋದು ಬ್ಯಾಡಾ. ಈ ಸೋಗು ಸಾಕಿನ್ನ; ನಾ ಸಾದಾ ಖಾದೀ ಮನಸ್ಯಾ; ಈ ಶಾಲು ಶಕಲಾತಿ ಯಾಕ? (ಅವೆಲ್ಲಾ ತೆಗೆದೊಗೆಯುವನು) ಆದ್ರ ಇಷ್ಟ ಮಾತ್ರ ಖರೇ, ಈ ಸಾಮುದ್ರಿಕ ನನ್ನ ಬದುಕಿಸಿದ್ದೇನ್ಸುಳ್ಳಲ್ಲಾ. ಇದನ್ನ ಇಮರ್ಜೆನ್ಸಿ ಪಾವರಿನ ಬತ್ತಳಿಕೆಯೊಳಗ ಇಟ್ಟಿರತೇನಿ, ಮುಂದೆಂದಾದರೂ ಬಂದೀತಂತ ಕೆಲಸಕ್ಕ. ಇನ್ನೂ

ವಿಲಾಯಿತಿಗೆ ಹೋಗೋ ಆಶಾ ಬ್ಯಾರೆ ಹುಟ್ಟೇದ ಈ ಸಾಮುದ್ರಿಕ ಸಾಧಿಸಿದಾಗಿನ್ತೊಟ್ಟು. ಅಂತೂ ಈ ಕಲಾ ನನಗ್ಯಾಂಗ ಸಾಧಿಸಿ ತಪಾ ಅಂತೀನಿ! ಅನುಭವ ಇಲ್ಲದೆ ವ್ಯವಹಾರ ಬರೂದುಲ್ಲಂತ! ಆದ್ರ ನಾ ಆಡಾಡ್ತs ಸಾಮುದ್ರಿಕಶಾಸ್ತ್ರಜ್ಞ ಆದೆ. ಬಾಯಿ ಬಂಡವಾಳದ ಮುಂದ ಯಾವ ಬಂಡವಾಳನೂ ಅಲ್ಲ. ಮುಂದಿ ಹೇಳೋ ಮಾತಿನ್ಕಿಂತ ಒಂದ್ಹೆಜ್ಜಿ ಮುಂದೋಡೋದು ಕಲ್ತಕೊಂಡರ ಸಾಮುದ್ರಿಕ ಸಿದ್ಧಿ ಆಗಿ ಹೋಯಿತು. ಇನ್ನ ಮಾತು ಸುಳ್ಳಾದರ ಪಂಚ ಭವತಿ ಪಂಚ ನ ಭವತಿ ಅಂತ ಡಿ. ಆಯ್. ಆರ್. ಕಾಯ್ದೇ ಲಾಗೂ ಮಾಡಿಬಿಟ್ರ ಆತು. ಇಷ್ಟ್ಯಾ ಮೀರಿದ್ರ 'ಬಂದ ಪ್ಯಾಳ್ಯಾ ಕೆಟ್ಟ್ಯಾ,........ಅಥವಾ........ ಶನಿ ಮಂಗಳ ಯುತೀ ಅದ' ಅಂತ ಸ್ಪೆಶಲ್ ಆರ್ಡಿನೆನ್ಸ ತಗದ್ರಾ ಸೈನs! ಆದ್ರ ಒಂದ್ಮಾತು ಮಾತ್ರ ನಿಜ........ಈ ಸಾಮುದ್ರಿಕಕಾರರು ಅಂದ್ರ ಮಾನಸಶಾಸ್ತ್ರಸಂಶೋಧನಕಾರರೇ ಅನ್ನಬೇಕು. ಅದಕ್ಕ ಒಮ್ಮೊಮ್ಮೆ ಅನಸ್ತದ, ಎಮ್ಮೆಕ್ಕ ಸಾಯಕಾಲೊಜಿ ತಗೋ ಬೇಕೂಂತ. ಆದರ ಮೊದಲ ಇಂಟರದ ಕಂಟೀ ದಾಟಿದ್ರ ಬೇಯೋ ಎಮ್ಮೀ! ಅಂದಮ್ಯಾಲ ಟಾಯಿಮ್ ಬಾರ್ ಆಗೂದ್ರಾಗ ಆ ಪ್ರಿನ್ಸಿಪಾಲನ ಹೆಣಕ್ಕ ಈ ಟರ್ಮಿನ ಫೀ ಬಡಿಯೋಣಾ! ಹೆಸರು ಕಿತ್ತಿ ಹಾಕ್ತೀನಿ ಅಂತ ಹೆದರಸತಿದ್ದಾ. ಇಕಾ ಆ ಜೂಡಾದ ಎಣ್ಣಿಗಮುಟು ಕಾಗದಾ ಇನ್ನೂ ಇಟ್ಟೇನಿ; ಇದೇ ನಮ್ಮ ಪರ್ಸು. ಇದರಾಗs ಎಲ್ಲಾ ರೊಕ್ಕಾ ಕಟ್ಟಿಡತೇನಿ. ನ್ಯೂಲಿವೆರಡು ಒಣಗಿದ ಚೂಡಾದ ಕಾಳು. ಇವೂ ಇರಲಿ, ಮಂತ್ರಾಕ್ಷತಾ ಇಂದ್ಹಾಂಗ! (ಕಿಸೆಯೊಳಗಿಂದ ಎಣ್ಣಿಗಮುಟು ಕಾಗದ ತೆಗೆದು ಎರಡೂ ಕೈಯಿಂದ ತೀಡಿ, ಅದರಲ್ಲಿ ರೂಪಾಯಿಗಳನ್ನು ಸುರಿದು ಪುಡಿಕೆ ಕಟ್ಟುತ್ತಿರಲು, ತೆರೆ ಇಳಿಯುವದು.)

— ಮುಗಿಯಿತು —

ದೆವ್ವಗಳ ದೆವ್ವ

(ಒಂದು ಪ್ರಹಸನ)

ಪಾತ್ರಗಳು

ಮಿ. ಬಾದಾಮಿ : ಒಬ್ಬ ನವಯುವಕ

ಮಿ. ಪರ್ವತಿ : ಅವನ ಗೆಳೆಯ

ರಾನಡೇ ರಾಘೋಪಂತ : ಒಬ್ಬ ಆಸ್ತಿವಂತ

ಅಲ್ಲದೆ, ಮಿ. ಬಾದಾಮಿಯ ಇನ್ನುಳಿದ ನಾಲ್ಕು ಜನ ಗೆಳೆಯರು.

ಪಾತ್ರ ಪರಿಚಯ

ಬಾದಾಮಿ ಹಾಗೂ ಪರ್ವತಿ ಕಾಲೇಜಿನಲ್ಲಿಯ ಗೆಳೆಯರು. ಬಾದಾಮಿ ಪರ್ವತಿಗಿಂತ ಚಿಕ್ಕವರು; ಆದರೆ ಚುರುಕು ಹೆಚ್ಚು. ಆದರೂ ನೌಕರಿಗಾಗಿ ಕೆಲಕಾಲ ಅಂಡಲೆದವರು. ಯುದ್ಧದ ಖಾತೆಗಳು, ಒಮ್ಮೆಲೆ ನಾಯಿಚತ್ತ ರಿಗೆಯಂತೆ ಏಳಲು ಅವರಿಗೆ ಕೊರಳಿಗೆ ಬಿದ್ದ ಮಾಲೆಯಂತೆ ನೌಕರಿಯೂ ಮದುವೆಯೂ ಒಮ್ಮೆಲೇ ಕೈಗೂಡಿದ್ದರೂ ಪುಣೆ ಪಟ್ಟಣದಲ್ಲಿ ಮನೆಗಾಗಿ ಓಣಿ ಓಣಿ ಅಂಡಲೆಯುವದೂ ತಪ್ಪಲಿಲ್ಲ. ಕೊನೆಗೆ ಸೋತು ಕಾಲೂರುವ ಹೊತ್ತಿಗೆ ಅವರ ಚುರುಕುಬುದ್ಧಿ ಅಂಡಲೆಯಲಾರಂಭಿಸಿ ಹೊಸ ಹಂಚಿಕೆಯೊಂದನ್ನು ಹುಡುಕಿ ತಂದಿದ್ದಿತು. ಚುರುಕು ಬುದ್ಧಿಯ ನವತರುಣನ ಬೀಸುತನ-ಬಿಚ್ಚುತನವೂ ಹೊತ್ತಿಗೆ ಕೆಲಸಕ್ಕೆ ಬರುವ ಹಂಚಿಕೆಯ ಬುದ್ಧಿಯೂ ಅವ ರಲ್ಲಿ ತುಂಬ ಇವೆ. ಕೇಡುಬಯಸದ ನಗೆಯಾಟವೇ ಅವರ ಹಂಚಿಕೆಯ ಹಿನ್ನೆಲೆ. ಸಮಾಜದ ಅಟ್ಟಗಳನ್ನು ಮುರಿದೊಟ್ಟಬೇಕೆಂಬ ಗಟ್ಟಿಗತನ ಅವರ ಕೊನಕೊನೆಯ ಮಾತಿನಲ್ಲಿ ಮುಂಗುರುತಾಗಿ ಕಾಣುತ್ತದೆ. ಪರ್ವತಿ ಯವರು ಬಾದಾಮಿಯವರ ಕೈಗುಟುಕಿನವರು; ಆಕಳದಂತಹ ಸಂಸಾರಿಗರ ಜಾತಿಯವರಾದರೂ ಇರಿವ ಕೋಡು ಇದ್ದವರು. ಇನ್ನುಳಿದ ಗೆಳೆಯರು ಕೇವಲ ನೆರವುಗೈಗಳು. ರಾಘೋಪಂತರು ಮಾತ್ರ ಹೇಳಿಮಾಡಿಸಿದಂತೆ ದುಡ್ಡಿನ ದೆವ್ವಕ್ಕೆ ತವರುಮನೆಯಾದವರು. ಇಂತಹರು ನಮ್ಮ ಸಮಾಜ ದಲ್ಲಿ ಮಾರುಗೈಗೊಬ್ಬರಂತೆ ನೋಡಲು ಸಿಕ್ಕಬಹುದು.

೧ನೇ ನೋಟ

[ಪುಣೆಯ ಫರ್ಗ್ಯೂಸನ ಕಾಲೇಜ ರೋಡಿನಲ್ಲಿರುವ ಒಂದು ಬಂಗ್ಲೆ. ಬೆಳಗಿನ ೮ ಗಂಟೆ. ಮಿ। ಪರ್ವತಿ ತನ್ನ ಕೋಣೆಯ ಮುಂಭಾಗದಲ್ಲಿ ಟೇಬಲ್ಲಿನ ಬದಿಯಲ್ಲಿ ಒಂದು ಮಡಿಸುವ ಕುರ್ಚಿ ಮೇಲೆ ಕುಳಿತು ಚಹಾಪಾನವನ್ನು ಆರಂಭಿಸುವದರಲ್ಲಿದ್ದಾನೆ. ಆಚೆಯ ಬದಿಯಲ್ಲಿ ಅಂತಹದೇ ಇನ್ನೊಂದು ಕುರ್ಚಿ. ಅದರಾಚೆಯ ಬದಿಯಲ್ಲಿ ಅಡ್ಡಗಟ್ಟದ ಪಾರ್ಟೀಶನ್ನಿಗೆ ಹೊಂದಿ ಒಂದು ಕಬ್ಬಿಣ ಕಾಲುಗಳ ಹಲಗೆಯ ಕಾಟ್ಟಿನ ಮೇಲೆ ಹಾಸಿಗೆಗಳೂ ಅರಿವೆ-ಅಂಚಡಿಗಳೂ ಇವೆ. ಪರ್ವತಿ ಉಟ್ಟ ದೋತರದ ಮೇಲೆ ಒಂದು ಗಂಜೀಫ್ರಾಕ್ ಹಾಕಿದ್ದಾನೆ, ಅಷ್ಟೆ. ಆತ ಕಪ್ಪಿಗೆ ತುಟಿ ಹಚ್ಚುವಷ್ಟರಲ್ಲಿ ಆತನನ್ನೇ ಕೂಗುತ್ತ ಆಫೀಸ್ ವೇಷದಲ್ಲಿ ಮಿ। ಬಾದಾಮಿ ಬರುತ್ತಾನೆ.]

ಪರ್ವತಿ :—ಏನ್ರೀ ಬಾದಾಮಿ! ಬರಾಬ್ಬರಿ ಚಹಾದ ಹೊತ್ತಿಗೇ ಬಂದಿರೆಲ್ಲಾ, ಬರ್ರಿ. (ಒಳಗಡೆಗೆ) ಅಲ್ಲs, ಮತ್ತ ನಮ್ಮ ಬಾದಾಮಿಯವರು ಬಂದಾರs; ಅವರ ದಸಿಂದsನೂ ಒಂದು ಕಪ್ಪ ಚಹಾ ತಗೊಂಬಾರಲ್ಲಾ!

ಬಾದಾಮಿ :—ಏನ್ ಬ್ಯಾಡ್ರೀ, ಮಿ. ಪರ್ವತಿ. ಇವೆಲ್ಲಾ ರೇಶನ್ನಿನ ದಿವಸಾ. ಅಂತ, ಮಂದೀ ಮನೀಗೆ ಹೋಗೋದೂ ಅಂದ್ರ ಜೀವದ ಸುತ್ತs ಬರ್ತsದ. ಇನ್ನs, ಹೋಗೋದಾದ್ರೂ, ಚಹಾ–ಊಟದ ಹೊತ್ತು ತಪ್ಪಿಸಿ ಹೋಗ್ಬೇಕಾಗ್ತsದ.

ಪರ್ವತಿ :—ಹಾಂಗಂದರ ಹ್ಯಾಂಗರೀ ಬಾದಾಮಿ! ಭಾಳ ದಿವಸದ ನಂತರ ಬಂದವರು ನೀವು! ಆದ್ರ, ನಿಮ್ಮ ಮಾತಿನ ಮ್ಯಾಲಿಂದ ನೀವು ಚಹಾ ತಗೊಂಡs ಬಂದೀರೆಂತ ತಿಳೀತೂ, ಆದರೂ ಏನಾತೂ? ನಾವೂ ಅಷ್ಟು ಇದ್ದದ್ದರಾಗs ರೇಶನ್ನ್ ಮಾಡಿಕೊಂಡೇ ಕುಡಿಯೋಣಾ! ನಾನs ತರ್ತೇನಿ ನಿಂದರ್ರಿ. [ತನ್ನ ಕಪ್ಪು ಬಸಿಯೊಡನೆ ಒಳಗೆ ಹೋಗಿ, ಬರುವಾಗ ಆ ಕಪ್ಪು ಬಸಿಯೊಡನೆ ಇನ್ನೊಂದು ಮುಚ್ಚಳ ಹಾಗು ಬಟ್ಟಲ ತರುತ್ತಾನೆ.] ನೋಡ್ರಿ, ಮನಿಯಾಗಿನ ಕಪ್ಪು ಬಸಿಯೆಲ್ಲಾ ಒಡದು ಹೋಗ್ಯಾವ. ಈ ಯುದ್ಧದ ದಿವಸದಾಗ ಹೊಸಾವಕ್ಕ ಗತಿಯಿಲ್ಲ. ಇತ್ತೊಗೊಳ್ರಿ, ಒಂದೊಂದು ಸಿಂಗಲ್ಲು. (ಕಪ್ಪು ಬಸಿ ಬಾದಾಮಿಯತ್ತ ಸರಿಸಿ ತಾನು ಬಟ್ಟಲಲ್ಲೇ ಕುಡಿಯುವನು.)

ಆದರ; ಮನ್ಯಾಗ ಫಜೀತಿ ಏನ್ ಅಂದ್ರಿ? ಇಷ್ಟರಾಗs ನಮ್ಮ ಮನೀವರು ಪಟ್ಟಕ್ಕ ಕೂತಾರ!

ಬಾದಾಮಿ :—ಆತ್ ಹಂಗಾದs, ನೀವೂ ನಮ್ಮ ಹಾಟೆಲ್ಲಿಗೇ ನಡ್ರೆಲಾ ಊಟಕ್ಕs! [ಇಬ್ಬರೂ ನಗುವರು]

ಪರ್ವತಿ :—ಯಾಕರೀ ಬಾದಾಮೀ; ಮಂದೀಕಾಲು ಹೊಚ್ಚಲದಾಗಿರ್ತs, ಮನೀಯವರು ಪಟ್ಟಕ್ಕ ಕೂಡೋದು ಈ ರೇಶನ್ನಿನ ದಿನದಾಗ ಅನುಕೂಲಾಂತಿರೇನು? ಹಾಂಗೇನು ಮಾತ್ರ ತಿಳಕೋ ಬ್ಯಾಡ್ರೆಪಾ! ಅರ್ಧಾ ಅಡಿಗಿ ಆಗೇದನ್ರಿ. ಈಗಿನ್ನೂ ಎಂಟು ಹೊಡದು ಐದು ಮಿನಿಟು. ಇನ್ನೊಂದು ತಾಸಿನೊಳಗs ಎಲ್ಲಾ ರೆಡೀ ಮಾಡಿಬಿಡ್ತೇನಿ. ಇಬ್ಬರೂ ಕೂಡೇ ಊಟಾ ಮಾಡೋಣಂತ. ಅಲ್ಲಾ, ಮಿಲಿಟರಿ ಅಕೌಂಟ್ಸನ್ಯಾಗ ಕೆಲಸಾನs ಮಾಡ್ತೇನಿ; ಅಂತ ನಮ್ಮದೆಲ್ಲಾ ರಾಯಿಟುರಾಯೆಲ್ಲ್ ನಡದsದ ಅನ್ರಿ. ಇನ್ನೇನೂ, ಈ ಪುಣೆ ಶಹರದೊಳಗೆ ಮನೀದs ಮಾತ್ರ ಒಂದು ಬಹಾಳ ತೊಂದರಿ. ಈ ಗೇಣು ಕೋಣೆಯೊಳಗ ಎಲ್ಲಾ ಪ್ರಪಂಚಾ ಆಗಬೇಕು. ನೋಡಿದ್ರೋ ಇಲ್ಲೊ! ಆ ಸಾಮಾನಾ ಒಟ್ಟರೋ ರೀತೀನ! ಎಷ್ಟು ಹುಡುಕಿದರೂ ಒಂದು ಛಲೋ ಮನೀ ಸಿಗವಲ್ಲದು.

ಬಾದಾಮಿ :—ನಾನೂ ಅದರ ದಸಿಂದsನ ಬಂದಿದ್ದೆ, ಮಿ. ಪರ್ವತಿ; ಈ ನಿಮ್ಮ ಕಂಪಾವುಂಡದೊಳಗ ಒಂದೆರಡು ಮೂರು ಕೋಣೆಯೇನಾದ್ರೂ ಸಿಕ್ಕರ ನೋಡೋಣಾಂತ.

ಪರ್ವತಿ :—ಎಷ್ಟ್ಯಾ? ಎರಡು ಮೂರು ಕೋಣೇ! ಒಳೇ ಹೇಳಿದ್ರಿ. ರೂಮೇನೋ ತೆರವು ಅವs. ಆದರೂ ನನಗs ಇದೊಂದರಕಿಂತ ಚೋಟು ಜಗಾಯೇನು ಹೆಚ್ಚಿಗಿ ಸಿಗವಲ್ಲದು. ಮತ್ತ ನೋಡಿದ್ರ ಮೊದಲಿಂದ ಇಲ್ಲೇ ಇದ್ದಾವ ನಾನು. ಈ ಸಾರೆ ಮನೀಯವರನ್ನು ಕರಿಸಿಕೊಂಡದ್ದರಿಂದ ಒಂದು ರೂಮು ಆದ್ರೂ ಹೆಚ್ಚಿಗೀ ಬೇಕಾಗಿತ್ತು. ಆದರೇ ಈ ರಾನಡೇ ರಂಡೇಮಗಾ—ಮನೀ ಮಾಲಕಾ—ಪಕ್ಕಾ ಕೊಂಕ್ಯಾ, ಒಂದನೇ ನಂಬರಿನ ಜೀನಹುಂಕಾ! ಒಬ್ಬರಿಗೊಂದು ಪೈದ ಉಪಗ್ಗಾರಾ ಮಾಡಾವಲ್ಲಾ.

ಬಾದಾಮಿ :—ನನಗೂ ಸುದ್ದಿಹತ್ತಿತ್ತು ಇಲ್ಲಿಯೇನೋ ಒಂದು ಬ್ಲಾಕ್ಸು ತೆರವಾಗೇದಂತ. ಅಂತ, ಏನೋ ನಿಮ್ಮ ವಸೀಲಿ ವಕೀಲಿ ನಡದ್ರ ನಡೀಲಿ ಅಂತ ಬಂದೆ. ಈ ಪುಣೇದೂರೆಲ್ಲಾ ತಿರುಗಿದ್ರೂ ಎಲ್ಲೆಲ್ಲೆಲ್ಲೂ ಜಾಗಾ ತೆರವಿಲ್ಲೇ ಇಲ್ಲಾ !

ಪರ್ವತಿ :—ಹೌದು ನೋಡ್ರಿ. ಪುಣೇದ ಜನಸಂಖ್ಯಾ ಈಗ ಎರಡರಷ್ಟು ಹೆಚ್ಚಾಗೇದಂತ ! ಆದರೀ ಮನೀ ಸಂಖ್ಯಾ ಮಾತ್ರ, ಮಿಲಿಟರೀ ಆಕ್ಯೂಪಾಯ ಮಾಡಿದ್ದರಿಂದ, ಐವತ್ತು ಪಾಲು ಕಡಿಮಿ ಆಗ್ಯೇದ. ಇನ್ನಮ್ಯಾಲ ಹುತ್ತದ ಇರವೀ ಹಾಂಗ ಇರೋದೊಂದೇ ಬಾಕೀ. ಆದ್ರ, ಬಾದಾಮೀ, ನಿಮಗ ಎರಡು ಮೂರು ಕೋಣಿ ಯಾತಕ್ರೆಪಾ ಈಗಿನ್ನಿದ್ವಸದಾಗs ? ಹೊಸದಾಗಿ ಮದಿವೀ ಮಾಡಿಕೊಂಡೀರಿ, ಅಂತ ಹೌದs ?

ಬಾದಾಮಿ :—ಹೌದು. ಈ ಸಪ್ಲಾಯ್ ಡಿಪಾರ್ಟಮೆಂಟಿನೊಳಗ ಅರವತ್ತೇಳೂವರೀ ರೂಪಾಯಿದ ನೋಕರೀ ಹತ್ತೂದs ತಡಾ, ನಮ್ಮ ತಂದೀತಾಯಿ ಕೊರಳಿಗೆ ಗುದ್ದೀ ಸಪ್ಲಾಯ ಮಾಡಿದರು. ಅಲ್ಲಾ, ಅರ್ಜೀಹಾಕಿ, ಮುಂದ ನಾಕ ದಿವಸದಾಗ ಟೆಸ್ಟಿಮೋನಿಯಲ್ಸು ಕಳಸಾವಿದ್ದೆ; ಅಷ್ಟರಾಗs ಟೆಂಪರರಿ ಅಪಾಯಿಂಟಮೆಂಟದ ಆರ್ಡರು ಬಂತು ಅರ್ಜಂಟಾಗಿ. ಇನ್ನs ರಾಣೇಬಿನ್ನೂರಿಂದ ನಾ ಪುಣೇಕ್ಕ ಹೊರಡಾವಾ; ಅಷ್ಟರಾಗ ಹಾದಿಗೆ ಬುತ್ತೀಕಟ್ಟಿಕೊಟ್ರ ರೇಶನ್ನದ ಅಕ್ಕಿ ಹೆಚ್ಚ ಖರ್ಚಾದಾವು ಅಂತ, ನಮ್ಮ ಫಾದರು ತಲೇಮ್ಯಾಲs ನಾಕು ಅಕ್ಕೀಕಾಳು ಹಾಕಿ ಕೆಲಸಾ ಬಗೀಹರಿಸಿದ್ರು.

ಪರ್ವತಿ :—ಈಗೇನ್ರೀ ತಗಣೀ ಒರಥಾಂಗ ನೋಕ್ರೀ, ನೊರಜು ಹಾರಿಸಿಧಾಂಗ ಮದಿವಿ ! ಯುದ್ಧ ಸುರುವಾದ ತೊಟ್ಟು ಮದಿವೀ ರೇಟೂ ಹಿಂದುಸ್ತಾನದಾಗ ಟೂ ಹಂಡ್ರೆಡ್ ಪರ್ಸೆಂಟು ಏರೇದಂತ !

ಬಾದಾಮಿ :—ಮತ್ತ ಯುರೋಪದಾಗ ನೊರಜು ನುಸಿ ಹಾಂಗ ಮಂದಿ ಸಾಯ್ತಾರ; ಹಿಂದುಸ್ತಾನದಾಗ ಜಗತ್ತಿನ ಜನಸಂಖ್ಯಾದ ತೂಕಾ ಸರಿಯಾಗಿಡೋ ಯತ್ನಾ ನಾವು ನಡ್ಸೀವಿ. ಆದರ ನಮಗ

ಇರಲಿಕ್ಕೆ "ಹೋಮ್" ಸಿಗದಿದ್ದರೆ ಹಾಟೆಲ್ಲಿನಾಗ ಹೋಮಾ ಮಾಡ್ಲಿಕ್ಕೆ ಬಂದೀತಽ!

ಪಾರ್ವತಿ :—ಅಂತೂ ಬಹಳ "ಹೋಮುಸಿಕ್" ಆಗೀರ ಬಾದಾಮಿ. ಎಷ್ಟ ದಿವ್ಸ ಆತು ಊರು ಬಿಟ್ಟು! ಹೊಸಾ ನೌಕ್ರೀ; ಇಷ್ಟರಾಗ ರಜಾ ಬ್ಯಾರೆ ಸಿಗೂದುಲ್ಲಾ. ನಿಮ್ಮದೂ ವಾಜ್ಮೀನೇ!

ಬಾದಾಮಿ :—ಅದಕ್ಕಽರೆಪಾ! ಹೆತ್ತ ತಾಯಿಗಿಂತ ಹೊತ್ತ ತಾಯಿ ಉತ್ತಮನ್ನೋ ಹಾಂಗ, ಈಗಿನ್ದಿವಸ್ದಾಗ ಮದಿವೀ ಮಾಡಿದವರಿಗಿಂತ ಮನೀ ಕೊಡಿಸುವವರೇ ಉತ್ತುಮರು; ಆದ್ದರಿಂದ—ಅವ್ಯಾವೋ ತೆರವು ಆಗ್ಯಾವಂತಲ್ಲ ಎರಡು ಮೂರು ರೂಮ್ಸು ಹೋದವಾರ, ಅವನ್ನ ಕೊಡ್ಸಿ ನಮಗಽ!

ಪಾರ್ವತಿ :—ಅಲ್ಲಾ, ನೀವು ಗಂಡಾ ಹೆಂಡ್ತಿಗೆ ನಮ್ಹಾಂಗ ಇಂಥಾದೊಂದು ರೂಮು ಸಿಕ್ಕರ ಸಾಕು. ಎರಡು ಮೂರ್‍ಯಾಕ?

ಬಾದಾಮಿ :—ನಾವಿನ್ನೂ ಮೂರು ನಾಕ ಜನ ರೂಮುಮೇಟ್ಸ ಇದ್ದೇವಿ. ಅಲ್ಲಿ ಧೂರ ನಾರಾಣಪ್ಯಾಟಿಯೊಳಗಿದ್ದೇವಿ. ಒಂದು ಸಣ್ಣ ರೂಮು; ಅದರೊಳಗಽ ಒಂದು ಬಚ್ಚಲ; ಮ್ಯಾಲೆ ಒಂದು ಮೂಲೀ ಕೊರೆದು ಅಟ್ಟಕ್ಕ ಹೋಗೋ ಮೆಟ್ಟಲದ ದಾರಿ ಬ್ಯಾರೆ! ನಮ್ಮ ರೂಮ್ ಮೇಟ್ಸೂ ಎಲ್ಲಾ ಬಂದಾರ! ಹೊರಗೆ ಗೇಟಿನ ಹತ್ತರ ನಿಂತಾರ!

ಪಾರ್ವತಿ :—ಛೇ, ಛೇ, ಪಾಪ! ಅವರ್‍ನೆಲ್ಲಾ ಹೊರಗಽ ನಿಂದ್ರಸಬೇಕೇನ್ರಿ ಬಾದಾಮಿ! ನೀವೆಂಥವರು! (ತಡೆದು) ಆದ್ರರೇನು ಎಲ್ಲಾರು ಬಂದಿದ್ರ ಚಹಾದ್ಪಂಚೇತಿ ಇತ್ತು; (ನಗುತ್ತ) ಮ್ಯಾಲ, ಕೂಡ್ಲಿಕ್ಕೆ ಇವೆರಡಽ ಖುರ್ಚಿ! ಇದರೊಳಗ ನಾ ಕೂತ ಖುರ್ಚಿ ರಿಪೇರಿಗೆ ಬಂದಽದ; ಸಾಲೀಹುಡುಗರು ಖುರ್ಚಿ ಕೂತಾಂಗ ನಾ ಇದರ ಮ್ಯಾಲ ಸಂಭಾಳಿಸಿ ಕೂಡ್ತೇನಿ, ಬಂದವರ್‍ನ ಅದರ ಮ್ಯಾಲ ಕೂಡಿಸ್ತೇನಿ. ಆದ್ರ ಪಾಪ! ಅವರು ಹೊರಗ ನಿಂದ್ರೋದಽ ಇಲ್ಲಿ ನಿಂದರ್‍ಲಿ; ಗುರ್ತ ಆದ್ರೂ ಆಧಾಂಗಾಗ್ತಽದ; ಹೋಗ್ರಿ, ಅವರ್‍ನ ಕರಕೊಂಡು ಬರ್‍ರಿ. ನಾನೂ ಅಷ್ಟು, ಪಲ್ಯಾ ಹೊತ್ತಿದ ವಾಸನಿ ಬರ್‍ತಽದ, ಅದನ್ನಿಳಿಸಿ ಸಾರಿಂದು ಇಟ್ಟು ಬರತೇನಿ (ಪಾರ್ವತಿ ಒಳಗೆ, ಬಾದಾಮಿ ಹೊರಗೆ ಹೋಗುವರು;

ಮುಂದೆ ಎರಡು ನಿಮಿಷಗಳಲ್ಲಿ ಶರ್ಟು ಹಾಕಿಕೊಳ್ಳುತ್ತಾ ಪರ್ವತಿ ಬರುವನು. ಅತ್ತಣಿಂದ, ಆಫೀಸು ಡ್ರೆಸ್ಸಿನಲ್ಲಿದ್ದ ನಾಲ್ಕು ಜನ ಗೆಳೆಯ ರೊಂದಿಗೆ ಬಾದಾಮಿ ಬರುವನು. ಅವರನ್ನು ನೋಡಿ) ಒಹೋ ಬರ್ರಿ, ಬರ್ರಿ; ಗುಡ್‌ಮಾರ್ನಿಂಗ್, ಗುಡ್‌ಮಾರ್ನಿಂಗ್ (ಎಲ್ಲರೂ ಗುಡ್ ಮಾರ್ನಿಂಗ್ ಮಾಡಿ ನಿಲ್ಲುವರು.)

ಬಾದಾಮಿ :—ಇವರೇ ನಮ್ಮ ಫ್ರೆಂಡ್, ಮಿಸ್ಟರ್ ಪರ್ವತೀ, ಎಂ.ಎ. ಎಲೆಲ್ಬೀ, (ಇನ್ನುಳಿದವರ ಗುರುತು ಮಾಡಿಕೊಡುತ್ತ) ಇವರೂ ಮಿಸ್ಟರ್ ಕಾಮತ್, ಉಡ್ಪೀಯವರು; ಇವರೂ ಮಿಸ್ಟರ್ ಸೀ. ಹೆಚ್. ಅಯ್ಯಂಗಾರ್ರು, ಇವರು ಮಿ. ಫೋಂಗಡೇಯವರು, ಅಕ್ಕಲ ಕೋಟೆಯವರು; ಮತ್ತ ಇವರು ನಮ್ಮ ಗುಳೇದಗುಡ್ಡ ಅವರು. (ಎಲ್ಲರೂ ಒಬ್ಬರೊಬ್ಬರ ಕೈಕುಲುಕಿ ಕುಳಿತುಕೊಳ್ಳುವರು: ಪರ್ವತಿ ತನ್ನ ಕುರ್ಚಿಯ ಮೇಲೆ; ಬಾದಾಮಿ ಟೇಬಲ್ಮೇಲೆ; ಅಯ್ಯಂಗಾರರು ಇನ್ನೊಂದು ಕುರ್ಚಿಯ ಮೇಲೆ; ಉಳಿದಿಬ್ಬರು ಕ್ವಾಟ್ಸ ಮೇಲೆ.)

ಬಾದಾಮಿ :—ಅಲ್ರೀ ಪರ್ವತೀ, ಆ ಎರಡು ಮೂರು ರೂಮು ಅಂತೂ ತೆರವು ಅವs ಅಂತೀರೆಲ್ಲಾ, ನಡ್ರಿ, ಹೋಗಿ ಕೇಳೋಣ ಆ ಮಾಲಿಕನ್ನ.

ಅಯ್ಯಂಗಾರ್ :—ಖಂಡಿತ ಖಂಡಿತಾ! ನಮ್ಮಗಳಿಗೆಲ್ಲಾ ಒಂದೂ ರೂಮು ಸಿಕ್ಕದೇ ಹೋಗೀ, ಸುತರಾಂ ಸೌಖ್ಯವಿಲ್ಲದೆ ಶಾನೆ ತೊಂದ್ರೆ ಪಡ್ತಾ ಇದ್ದೇವೆ; ತಾವು ನಮ್ಮಗಳಿಗೆ ಕೊಂಚ ಮಾರ್ಗದರ್ಶಕರಾಗ್ಬೇಕೂಂತ ವಿಗ್ನ್ಯಾ(ಜ್ಞಾ)ಪಣೆ.

ಬಾದಾಮಿ :—ಮಾರ್ಗದರ್ಶನದ ವಿಘ್ನಪಣಾ ಬಿಡ್ರೀ ಸ್ವಾಮೀ, ಹಾಂಗ ಅಂದ್ರ ಅವರು ಹೊರಗ ಹೋಗೋ ಹಾದೀನೇ ತೋರಿಸ್ಯಾರು!

ಅಯ್ಯಂಗಾರ್ :—ಹಾಗಲ್ಲ ದಮ್ಮಯ್ಯ................

ಬಾದಾಮಿ :—ಸ್ವಲ್ಪ ದಮ್ಮ ಹಿಡಿಯಯ್ಯ............

ಅಯ್ಯಂಗಾರ್ :—ಅಲ್ಲಾ ಸಾರ್, ಏನೋ ನಮ್ಮ ಉದ್ದಿಶ್ಯದಲ್ಲಿ ನಮ್ಮ ಗಳಿಗೆಲ್ಲಾ ತುಂಬಾ ಸಹಾಯಾಬೇಕು ಅಂತಾ ಸಾರ್........

ಪರ್ವತಿ :—ಸಾರ್....ಅಃ! ಸರಿಯಾಗಿ ನೆನಪು ಮಾಡಿದ್ರಿ. ಆ ಸಾರಿಂದು ಒಲೀಮ್ಯಾಲ ಇಡ್ಲಿಕ್ಕೆ ಮರ್ತಿದ್ದೆ, ಇಟ್ಟು ಬರ್ತೇನಿ, ನಿಂದರ್ರಿ. (ಒಳಗೆ ಹೋಗುವನು)

ಕಾಮತ :—ಓ ಬಾದಾಮಿಯವರೇ, ಮತ್ತೆ ಇಲ್ಲಿ ರೂಮ್ಸು ಉಂಟಲ್ಲೊ ಮಾರಾಯ್ರೇ!

ಬಾದಾಮಿ :—ಉಂಟು ಸ್ವಾಮೀ, ಆದರೆ ಉಂಟಿಗೆ ಗಂಟು ಭಾಳ ಬಿದ್ದಾವಃ ನಿಂದರ್ರಿ ಸ್ವಲ್ಪ (ಅಷ್ಟರಲ್ಲಿ ಕೈಬಟ್ಟೆಯಿಂದ ಒರಸಿಕೊಳ್ಳುತ್ತ ಪರ್ವತಿ ಯುವರು ಬರುವರು) ಮಿ. ಪರ್ವತೀ ನಡೀರಿ ಆ ಮಾಲಿಕನ ಭೆಟ್ಟಿಗೆ ಹೋಗೋಣ.

ಪರ್ವತಿ :—ಅದರೊಳಗೇನ್ ಅರ್ಥಿಲ್ಲ ಬಿಡಿರಿ. ಆ ಜೀನ ಹೆಂಕ ಒಂದೊಂದು ರೂಮಿಗೆ ಮೂರಪಟ್ಟು ಬಾಡ್ಗೀ ಕೇಳತಾನಃ; ಮ್ಯಾಲ ಒಂದುನೂರು ರೂಪಾಯಿದ ಬೆಣ್ಣಿ ಬ್ಯಾರೆ ಅಂತ!

ಬಾದಾಮಿ :—ಅದೆಲ್ಲಾ ನೋಡ್ಲಿಕ್ಕೆ ಬಂದೀತು ಬಿಡ್ರೀ, ರೂಮು ತೆರವು ಅವಃ ಹೌದಲ್ಲೋ? ಮತ್ತಃ ಆ ಮಾಲಕನ ಹೆಸರೇನಂದ್ರೀ? ರಾನಡೇನಃ! ಅಚ್ಚ ಪುಣೇರಿ ಭಾಮಟ್ಯಾನಃ ಇದ್ದಾನ ಕಾಣಸ್ತಃದ!

ಪರ್ವತಿ :—ಸಾವಕಾಶ್ ಮಾತಾಡ್ರೀ ಬಾದಾಮೀ! ಆ ಮುದುಕಗ ಕನ್ನಡ ತಿಳೀತಃದ.

ಬಾದಾಮಿ :—ಹೀಂಗೇನೂ! ಅರ್ಧಾ ಮರಾಠೀ ಅರ್ಧಾ ಕನ್ನಡು ಅಂದ ಮ್ಯಾಲ ಬೆಳಗಾಂವೀ ಹಾರುವ ಇರಲಿಕ್ಕೆ ಬೇಕು.

ಪರ್ವತಿ :—ಅವಾ ಪಕ್ಕಾ ಪುಣೇರೀನೇ ಇದ್ದಾನನ್ರಿ. ಅದರ ಅವನ ಎರ ಡನೆ ಹೆಂಡತಿ ನಮ್ಮ ನರೇಗಲ್ಲಿನ ಸದಾಶಿವ ಪಂತರ ಮಗಳೂ. ಅಂತ ನಾಕಾರು ವರ್ಷದ ಬಳಿಕೀಯಿಂದ ಅಷ್ಟು ಕಃಮಃ ಕಃಮಃ ಕಲ್ತಾನ ಕಾಣಸ್ತಾಃದ.

ಘೋಂಗಡೆ :—ಹುಂಗಾರು ಕರ್ನಾಟಕದ ವಸೀಲೀನೂ ಹತ್ತಿಸಲಾಕ ಯಾನ್ ಹರಖತ್ ಇಲ್ಲಾ.

ಪರ್ವತಿ :—ಆದರೇ ಮರಾಠಿಮಂದಿ ಕನ್ನಡ ಕಲಿಯೋದೂ ಮಾರವಾಡೀ ಮಂದಿ ಕನ್ನಡ ಕಲಿಯೋದೂ ಒಂದಽ. ಆ ಮಗಾ ನಮಗೇನು ಮಣದಾನೂ ಅಂತ ಅನಸೂದುಲ್ಲಾ ನನಗ.

ಅಯ್ಯಂಗಾರ್ :—ನಮ್ಮಗಳಿಗೆ ಇದೆಲ್ಲಾ ನ್ಯಾವಿನ್ಯವಾಗಿದೆ ಸಾರ್, ಪ್ರಥಮತಃ ಕ್ರಿಯಾಧಿಕ್ಯವಾದ ಈ ಸಮಯದಲ್ಲಿ ನಾವುಗಳು ವಿಲಂಬ ಮಾಡದೇನೇ, ನಿಧಾನದಿಂದ ಪ್ರಯತ್ನ ಪೂರ್ವಕವಾಗಿ ಕಾರ್ಯಮಾಡಿ ಸಕಲ ಜನಗಳೂ ಅನ್ಯೋನ್ಯವಾಗಿದ್ದರೆ ಎಲ್ಲಾ ಸ್ವಾರಸ್ಯಾ, ಸಾರ್; ಮುಖ್ಯವಾಗಿ........

ಪರ್ವತಿ :—ಸಾರು ಸ್ವಾರಸ್ಯ ಏನಾದೀತ್ರಿ, ಉಪ್ಪು ಖಾರಾ ಹಾಕೋದಽ ಮರತಬಂದೆ. ಒಳೇ ನೆನಪು ಮಾಡಿದ್ರಿ (ಒಳಗೆ ಹೋಗುತ್ತ) ಮತ್ತ ಬಾದಾಮಿ, ಇನ್ನೊಮ್ಮೆ ನಮ್ಮ ಅಯ್ಯಂಗಾರ ಸ್ವಾಮಿಗಳನ್ನ ಕರಕೊಂಡು ಬರುವಾಗ, ಆ ಅಪ್ಟೇನ್ನ ಸಂಸ್ಕೃತ ಡಿಕ್ಸನರೀನು ಸಂಗ್ತಿಲೆ ತಗೊಂಡು ಬರ್ರಿ. ಅಂ! (ನಗುತ್ತಾ ಹೋಗುವನು)

ಅಯ್ಯಂಗಾರ :—(ವಿಶೇಷವೇನೂ ತಿಳಿಯದೆ) ಏನ್, ಸಾರ್; ಏನೋ ನೆನಪು ಅಂದ್ರಲ್ಲಾ, ಏನ್ ಗ್ಯಾಪಕ ಆಯ್ತು ಅವರಿಗೆ? ಸಾರ್!

ಬಾದಾಮಿ:—ನೆನಪು ಅಂದ್ರ ನೆನಪೇ ಆಯ್ತು ಸ್ವಾಮೀ, ಗ್ಯಾಪಕ ಪಾಪಕ ಏನಾಗ್ಲಿಲ್ಲ. ಅವರ ಮನಿಯೊಳಗ ಇವೊತ್ತ ಸ್ವರಾಜ್ಯ; ಸಾರಿಗೆ ಉಪ್ಪು ಮರ್‍ತಿದ್ರಂತಽ! ಇನ್ನ ವ್ಯಾಲ್ ಆ ನಿಮ್ಮ ಸಾರ್ ಸಾರ್ ಬಿಡ್ರಿ; ಇಲ್ಲದಿದ್ದರ ಅತ್ತಲಾಗ, ಅವರ ಸಾರೂ ಬೇಯೂದುಲ್ಲಾ, ನಮ್ಮ ಬ್ಯಾಳೀನೂ ಬೇಯುದುಲ್ಲಾ. ಪುಣೇಕ್ಕ ಬಂದೀರಿ! ಆ ಮೈಸೂರೀಭಾಷಾ ಬಿಟ್ಟು, ಸರಳ ಕನ್ನಡ ಮಾತಾಡ್ಲಿಕ್ಕೆ ಕಲೀರಿ.

ಅಯ್ಯಂಗಾರ್ :—ಅಯ್ಯೋ, ಅಯ್ಯೋ, ಅಯ್ಯೋ. ಹಾಗೆ ಅನ್ನಬಹುದೇ ಸಾರ್? ನಮ್ಮ ಮೈಸೂರಿನ ಭಾಷೆ ಶುದ್ಧ ಕನ್ನಡಾ ಸಾರ್!

ಬಾದಾಮಿ :—ಕನ್ನಡದ್ದು ಸಾರೋ ಹುಳಿಪಲ್ಯಾನೋ? ಆ ನಿಮ್ಮ ಶುದ್ಧ ಕನ್ನಡ ಒದ್ದು ಸ್ವಲ್ಪು ಅಚ್ಚಗನ್ನಡ ಕಲೀರೆಲ್ಲಾ ಇನ್ನಽ!

ಘೋಂಗಡೆ :—ಅಲ್ರೀ ಬಾದಾಮೀ, ಅಯ್ಯಂಗಾರ ಸ್ವಾಮೀರು ಪುಣೇಕ ಬಂದಕ್ಯಾಸ್ ಆಗದೀ ದೀಡಽ ಮಹಿನ್ಯಾ ಆದ್ವು. ಥೋಡೇ ಮರಾಟೀ

ಜಾಸ್ತ ಆವಡಾಸ್ತೆಂದರ, ಅವರೂ ನಮ್ಹಾಗ ಅಚ್ಛಫನ್ನಡದ ರಸ್ತೇಕs ಬರ್‍ತಾರೂ! ನೀವೇನು ಘಾಬರಾಸಬ್ಯಾಡ್ರಿ. (ಘೋಂಗಡೆಯುವರ ಮಾತಿಗೆ ಅಯ್ಯಂಗಾರರು ಹೌಹಾರುವರು).

ಬಾದಾಮಿ :—ಅಯ್ಯಂಗಾರ್‍ರೇ, ತಾಳ್ರಿ, ತಾಳ್ರಿ; ನಮ್ಮ ಘೋಂಗಡೆಯುವರದೂ ಕನ್ನಡಜಾತೀದೆ ಮಾತು. ಇಷ್ಟೇ ನಿಮ್ಮದು ಮುದಿಗನ್ನಡಾ, ಅವರದು ತುದಿಗನ್ನಡಾ!

ಪರ್ವತಿ :—(ಒಳಗಿನಿಂದ ಅನುಮಾನಿಸುತ್ತ ಬಂದು) ಅಲ್ರೀ, ಬಾದಾಮೀ ನಿಮ್ಮ ಸ್ನಾನಾs........ಸ್ನಾನಂತೂ ಆಧಾಂಗs ಹೌದಲ್ಲೋ. ಮತ್ತೇನಂತೀರಿ........(ಎಲ್ಲರ ಕಡೆ ನೋಡಿ, ಬಾದಾಮಿಯನ್ನೂ ನೋಡುವಸು) ಅಡಿಗಂತೂ ರೆಡಿ ಆತು· ಸಾರೇನು ಅಗದೀ ಬಯಂಕರ ಆಗೇಂದಂತೀರಿ!

ಅಯ್ಯಂಗಾರ :—(ಜಿಗಿದು ಬಿದ್ದು) ಅಯ್ಯೋ ಭಯಂಕರವೇ! ಏನು! ಎಲ್ಲಿ! ಓಡಿ ಓಡಿ!........(ಲಟಕಿ ಹೊಡೆಯುವರು)

ಬಾದಾಮಿ :—'ಘಾಬರಾಸ್ ಬ್ಯಾಡ್ರಿ' ಅಯ್ಯಂಗಾರs, (ತಿದ್ದಿ) ಸಾರು ಬಹಳ ರುಚಿಕಟ್ಟಾಗಿದೆ ಎಂದು ಪರ್ವತಿಯ ಅಭಿಪ್ರಾಯ.

ಅಯ್ಯಂಗಾರು:—ಸಾರಿನ ರುಚಿ ಕಟ್ಟಿಹೋಯಿತೋ! ಹಾಗಾದರೆ ಊಟ ಹ್ಯಾಗಪ್ಪಾ ಮಾಡ್ತೀರಿ?

ಬಾದಾಮಿ:—ನಿಮ್ಮೆಲ್ಲಾರದೂ ಕಣ್ಕಟ್ಟ ಮಾಡ್ತೇವಿ.

ಘೋಂಗಡೆ :—ನಮುಗಾನೂ ಊಟಾಮಾಡಿ ಆಫೀಸಕ ದೌಡಾಸೋ ವ್ಯಾಳಾ ಆದುವ್ರಿ. ಮತ್ತ ರೂಮ್ಸಿನ್ ಸೋಯಿ ಆsಟು ಗಾಠಾಯಿಸಿಕೊಡ್ರಿ ಮತ್ತs.

ಪರ್ವತಿ :—ಆ ರೂಮ್ಸು ಬೀಮ್ಸು ಸಿಗೋದಿಲ್ಲ ಬಿಡ್ರಿ.

ಅಯ್ಯಂಗಾರು :—ಹಾಗೆನ್ನಬಹುದೇ ಸಾ....ಸಾ....ಸಾರ್! ತಾವುಗಳು ಪ್ರಯಾಸಪಟ್ಟರೆ ನಮ್ಮಗಳಿಗೆಲ್ಲಾ ಅಲಭ್ಯ ಲಾಭವಾಗುತ್ತೆ. ತದನಂತರ ನಾವುಗಳೆಲ್ಲಾ ತಮ್ಮ ಪಕ್ಕದಲ್ಲೇ ಬಂದುಬಿಡ್ತೇವೆ.

ಪರ್ವತಿ :—ನಮುಗೆಲ್ಲೀ ಪಕ್ಕರೀ, ನಾವೇನು ಗರುಡಪಕ್ಷಿಯಂತ ತಿಳಿದ್ರೊ ಏನು?

ಬಾದಾಮಿ :—ಅಯ್ಯಂಗಾರ್, ನೀವೇನು ಚಿಂತೀ ಮಾಡಬ್ಯಾಡ್ರೀ. ಆ ರೂಮ್ನು ನಮ್ಮಮಂತ್ಸ ತಿಳಕೊಳ್ರಿ. ಪರ್ವತೀಯುವರ ಮಾತಿರಲಿ ಬಿಡ್ರಿ. ಜಾಗಾ ಖಾಲೀ ಇದ್ರ ಸಾಕು. ಈ ಬಾದಾಮಿ ಹಾದಲ್ಲೆ ಬೀದಿಗೊಂದು ಬಿಡಾರಾ ಅಂತ ತಿಳೀರಿ.

ಕಾಮತ :—ಹಾಗಾದರೆ ಒಂದು ಚಲೋ ಸ್ಥಳಾ ಸಿಕ್ಕ್ಯೋ ಆಸೆ ಉಂಟಲ್ಲೋ, ಮಾರಾಯ್ರೇ? ಅಷ್ಟೇ ಸಾಕು ಇವಾಗ!

ಅಯ್ಯಂಗಾರು :—ಎಂಥದೋ ಒಂದು ರೂಮು ಸಿಕ್ಕರೇನೂವೆ ಸ್ವಲ್ಪ ಸಮಯ ಎಲ್ಲರೂ ಸುಮಾರಾಗಿ ಸಂತೋಷದಿಂದ ಇರಬಹುದು.

ಬಾದಾಮಿ :—ಸುಮಾರಾದ್ರ ಆದೆಂಥಾ ಸಂತೋಷ್ರೀ ಅಯ್ಯಂಗಾರ್ರs, ಮುಂದೀ ಸುಮಾರಾದ್ರ ಸಂತೋಷರೆಪಾ. ಸ್ವಲ್ಪ ತಡೀರಿ, ನಾಮಾಡಿದ ಹಂಚಿಕೆ ಅಷ್ಟು ಬಗೀ ಹರಿದ್ರ, ಈ ಮನೀ ಮಾಲಿಕನ್ಗೇ ಸುಮಾರು ಮಾಡೋಣಂತ. ಆಗಲಿ ನೀವೆಲ್ಲಾ ಆಫೀಸು ತೀರಿಸಿಕೊಂಡು ಬರ್ರಿ. ರಾತ್ರಿ ಮತ್ತ ಕೂಡೋಣಂತ.

(ಬಾದಾಮಿ ಪರ್ವತಿಯುವರ ಹೊರತು ಉಳಿದವರೆಲ್ಲ 'ಆಗಲಿ ಆಗಲಿ' ಎನ್ನುತ್ತ ಒಬ್ಬರಿಗೊಬ್ಬರು ನಮಸ್ಕಾರಮಾಡುತ್ತ ಹೊರಡುವರು)

ಪರ್ವತಿ :—ಅಂಥಾದ್ದೇನು ಯುಕ್ತೀ ಮಾಡೀರಿ ಬಾದಾಮೀ. ಆ ರೂಮ್ನು ಖಾಲೀ ಆಗಿ ಒಂದು ವಾರಾ ಆತು. ಒಂದs ಸವನ ಮುದುಕಗ ಅಲ್ಪರಿದರೂ ನನಗ ಅಂತ ಹಚ್ಚಿಗೊಡವಲ್ಲಾ. ಜನರಂತೂ ಇರುವೀ ಹಾಂಗ ರೇಜಗಟ್ಟಿರತ್ತಾರ. ಇಷ್ಟs ಯಾಕ, ಏನಾದರೊಂದು ನೆವಾ ಸಿಕ್ಕ್ರ ಆ ಮುದುಕಾ ನನ್ನೂ ಬಿಡ್ಸಿದರೂ ಬಿಡಿಸಿದನೇ. ಅಂಥಾದ್ದು ನೀವೂ ಒಳೇ ಖಾತ್ರೀ ಹೇಳ್ತೀರಿ. ಮೊದಲs, ಈ ಮರಾಟೀ ಮಂದಿ ಕನ್ನಡ ಜನ ಅಂದ್ರ ಮೂಗು ಮುರಿತಾರs.

ಬಾದಾಮಿ :—(ತಾಲದೊಂದಿಗ ಹೇಳುತ್ತ) ಕನ್ನಡ ಜನರಾ ಕರಾಮತೀ! ಇದಿರುಗಷ್ಟದಾ ಹಜಾಮತೀ ಮಾಡಲು ಮರಹಾಟೀರ ಗತಿ, ಹೇಳಲು ಬರಥಾಂಗಾಗ್ತೈತೀ!

ಪರ್ವತಿ :—ಅಲ್ಲಪಾ! ಇನ್ನೂ ನೀವು ಆ ಮುದುಕನ ಮುಖಾ ಕೂಡ ನೋಡಿಲ್ಲಾ! ಇಷ್ಟ ಹಾರ್ಯಾಡ್ತೀರಲ್ಲಾ!

ಬಾದಾಮಿ :—ಮುಖಾ ಕೂಡಾ ನೋಡಿಲ್ಲs?........ಆಂ? ಅಲ್ಲಿ ಬರೋ ಮುದುಕ ಯಾರವಾ? (ತೆರೆಯ ಕಡೆ ತೋರಿಸುವನು)

ಪರ್ವತಿ :—(ನೋಡಿ) ಹೌದಲ್ರೀ, ಅವನೇ ಆ ಮುದುಕ.

ಬಾದಾಮಿ :—ನೋಡ್ರಿ. ಅವನ ಮುಖ ನೋಡಿದ್ಮ್ಯಾಡಲೇ ತಳಾಬುಡಾ ಎಲ್ಲಾ ತಿಳಿದ ಹೋದವು! ಬಾಡಿಗ್ಗೆ ಬಂದಾನ ಕಾಣಸ್ತsದ! ಕೊಟ್ಟ ಗಿಟ್ಟೀರಿ! ಬಾಡಿಗೀ ಬೇಡವ್ರನ ಕಾಡಿಗಟ್ಟಬೇಕು! ಅಲ್ರೀ ಪರ್ವತಿ, ಬಾಡಿಗೀ ಕೊಟ್ಟು ಮನ್ಯಾಗಿರೋದೂ, ಅಭ್ಯಾಸಮಾಡಿ ಪರಿಕ್ಷಾ ಪಾಸಾಗೋದೂ, ವಸೀಲಿಹಚ್ಚಿ ವಕೀಲಿ ಮಾಡೋದೂ, ವೈಹುಳೀ ನೌಕರೀ ಮಾಡಿ ಪಗಾರ ತರೋದು, ಇದೆಲ್ಲಾ ಏನು ಜಾಣತನದ ಮಾತs?

ಪರ್ವತಿ :—ಹಾಂಗಾದರೇನು ಈ ಮುದುಕನ ಕೋಣೆಗಳನ್ನು ಬಾಡ್ಗಿಲ್ಲದನs ಹಿಡೀಬೇಕಂತ ಮಾಡೀರೇನು! ನೀವೂ ಮುಗಿಲಿಗೆ ಹಗ್ಗಾ ಹಾಕವ್ರು ಕಾಣಿಸ್ತೀರಿ.

ಬಾದಾಮಿ :—ಮುಗಿಲಿಗೋ, ಈ ಮುದುಕನ ಮೂಗಿಗೋ ಹಗ್ಗಾ ಹಾಕೋದು ನೋಡೀರೆಂತ. ಅಕಾ ಬಂತ ನೋಡ್ರಿ ಅಸಾಮಿ.
(ಇಷ್ಟರಲ್ಲಿ ಸುಮಾರು ೫೦ ವರ್ಷದ ರಾಘೋಪಂತ ರಾನಡೇ, ಪುಣೇರಿ ವೇಷದಲ್ಲಿ ಪ್ರವೇಶಿಸುವನು)

ಪರ್ವತಿ :—ಬರ್‍ರಿ ರಾಘೋಪಂತ! ಮತ್ತೇನು ಮುಂಜಾನೆ ಗಡಿಬಿಡಿ ಹೊತ್ತಿನಾಗ ಬಂದ್ರಿ. ಬಾಡಿಗ್ಗೆ ಹೌದಲ್ಲೊ. ನಿಂದಿರ್‍ರಿ, ನಿಮ್ಮ ಹೆಸರ್ಲೆ ತಗದs ಇಟ್ಟೇನಿ (ರಾಘೋಪಂತನು ಹರ್ಷವನ್ನು ಸೂಚಿಸುತ್ತ ನಗುತ್ತಿರಲು, ಪರ್ವತಿ, ಮಂಚದ ಬುಡದ ಟ್ರಂಕನ್ನು ಹೊರಗೆಳೆದು ಅದರಲ್ಲಿಂದ ಹಣ ತೆಗೆದು ಈ ರಾಘೋಪಂತರಿಗೆ ಕೊಡಲುದ್ಯುಕ್ತನಾಗುವನು)

ರಾಘೋಪಂತ :—(ಬಾದಾಮಿಯ ಕಡೆ ಹೊರಳಿ) ಆಪಲs ಮಿಸ್ಟರ್ ಪರ್ವತಿ ಖೂಬ ಸಮಝುದಾರ ಮಾಣಸ ನೋಡ್ರಿ. ಹೋಯ್ಕಿ ನಹೀ! ಮಹಿನಾ ಆದ್ರ ಲಗೇಚ್ ಭಾಡಾ ಆಪೋಆಪ ಪಾಠಾಯಿಸಿ ಬಿಡ್ತಾರ. ಬಾಕೀ ಲೋಕಾಪ್ರಮಾಣೇ ತ್ರಾಸ ಮತ್ತ ಖಟಖಟ ಏನಿಲ್ಲಾ. ಹೊಯ್ಕಿನಹೀ!

ಬಾದಾಮಿ :—ಅಂದ್ಮ್ಯಾಲೆ ಮಿ. ಪರ್ವತೀಯವರ ಬಾಡ್ಗೀ ಅಷ್ಟ ಕಡಿಮೀ ಮಾಡ್ರಿ ಅಲ್ಲಾ! (ಇಷ್ಟೊತ್ತಿಗೆ ಪರ್ವತಿ ರೂಪಾಯಿ ಕೊಡುವನು)

ರಾಘೋಪಂತ :—(ಹಣತೆಗೆದುಕೊಂಡು ಒಳಜೇಬಿಗೆ ಹಾಕುತ್ತ)ಛೇ, ಛೇ, ಛೇ....ಹ್ಹಾಂಗ ಮಾಡ್ಲಿಕ್ಕೆ ಬರೋಣಿಲ್ಲ. ನಮ್ಮ ರಾನಡೇ ಘರಾಣೇ ಅಂದರ ಈ ಪುಣೆಶಹರಕ್ಕs ನಾಮದ್ದಾರ ಘರಾಣೆ, ಹೋಯ್ಕಿನಹೀ! ನಮ್ಮ ವಡೀಲರು ಈ ಠಾವಿನ್ಯಾಗ ಏಕ್ಯೋಣೀಸೇ ಸಾತ ಸಾಲಿನಾಗ ಒಂದ್ಮನೀ ಕಟ್ಸಿದರು. ಈಗ ನಮ್ಮವು ಚಾರಪಾಚ ಬಂಗ್ಲೆಗೋಳು ಅದಾವು. ವಡೀಲರ ಘರಾಣೆ ವಾಢಾಸೋದು ಖರೇ ಧರ್ಮ. ಹೊಯ್ಕಿನಹೀ! ಮಿಸ್ಟರ್ ಪರ್ವತೀ, ನಿಮ್ಮದು ವ್ಯಣ್ಣೀ ಏನದs? ಹಾಲ್‌ನೋಡ್ರಿ, ಈ ಬಂಗ್ಲೀದ ತೀಸರೀ ಮ್ಹಾಡೀ ಕಟ್ಟಸಬೇಕಾಗೇದ. ಲಢಾಯಿ ಅಟಪಾಸೋ ಪರ್ಯಂತ ಇಲಾಜಿಲ್ಲಾ. ಹೋಯ್ಕಿನಹೀ!

ಪರ್ವತಿ :—ಆತು ಹೋಗ್ರಿ ಇನ್ನೊಂದು ಹತ್ತು ಮಜಲು ಕಟ್ಟಸರಿ. ಹೊಸಾ ಸಂಸಾರಾ ಬ್ಯಾರೇ ಹೂಡೀರಿ!

ರಾಘೋಪಂತ :—(ಟೊಂಕದ ನಾಸಿಪುಡಿ ತೆಗೆದು ಏರಿಸುತ್ತ) ನಿಮಗೆಲ್ಲಾ ಠಾವಿಕಿ ಅದsಕೀ, ನಮ್ಮ ಪಹಿಲೀ ಕುಟುಂಬದಿಂದ ಸಂತತಿ ಆಗಲಿಲ್ಲ. ಈ ಅವಾಢವ್ಯ ಮೀಳಖತ್ತಿಗೆ ವಾರಸದಾರ ಜರೂರು ಬೇಕಲ್ಲಾ. ಹೋಯ್ಕಿನಹೀ! ನಮ್ಮ ದೂಸರೀ ಕುಟುಂಬಾ ನಿಮ್ಮ ಕರ್ನಾಟಕ ದಾಕೀನs. ನನಗಿನ್ನೂ ಈಗ ಪಂಚೇಚಾಳೀಸಾ. ಪಣ, ನೋಡ್ರಿ ಮನೀಯೊಳಗೆ ಕುಟುಂಬ ಇದ್ರ ಅತೋನಾತ ಖರ್ಚ ವಾಢಾಸ್ತsದ ಹೋಯ್ಕಿನಹೀ! ಪಹಿಲೀ ಕುಟುಂಬ ತೀರಿದ ನಂತsರ ಸಾಡೇತೀನ ಸಾಲ ಏಕಟಾ ಇದ್ದಾಗ ಬೇತದಿಂದ ಖರ್ಚಿರತಿತ್ತು. ಏಕದಾ ಸಂಸಾರ ಕೂಡಿಸಿದ್ರ ಕೀ ಏನ್ಹೇಳೊ ಸೋಯಿಲ್ಲ. ಹೋಯ್ಕಿನಹೀ!

ಬಾದಾಮಿ :—ಛೇ, ಛೇ, ಭಯಂಕರ ಖರ್ಚರೆಪಾ. ಹೆಂಡತಿ ದಸಿಂದ ಖರ್ಚು, ಮನೀ ದಸಿಂದ ಖರ್ಚು, ಮಕ್ಕಳ ದಸಿಂದ........(ರಾಘೋಪಂತ ನಡುವೆ ಬಾಯಿ ಹಾಕುತ್ತಿರಲು)........ ಹಾ ಹಾ ಇನ್ನೂ ಮಕ್ಕಳಿಲ್ಲ ಹೌದs! ಆದ್ರ ನೀವಾವರೂ ಅಷ್ಟು ನೆಟ್ಟಗ ಉಂಡು ತಿಂದು ಲಠ್ಠ ಆಗಿರಲ್ಲಾ.

ರಾಘೋಪಂತ :—ಅದೆಲ್ಲಾ ನಸೀಬದ ಗೋಷ್ಟ, ಕಾಹೋ, ಪರ್ವತೀ! ಹೋಯ್ಸಿನಹೀ!

ಪರ್ವತಿ :—ಹೌದರೀ ಪಂತರು, ಅದಿರಲಿ, ಮೊನ್ನೆಮೊನ್ನೆ ತೆರವಾದ ಆ ಮೂರ ಖೋಲೀ ಅಷ್ಟು ಬಾಡಗೀ ಕೊಡ್ರೆಲ್ಲಾ ನಮಗ

ರಾಘೋಪಂತ :—ಛೇ, ಛೇ, ಛೇ. ಆ ಖೋಲಿ ಭಾಡಾ ನಿಮಗ ಪರವಡ ಸೋಣಿಲ್ಲ ಬಿಡ್ರಿ. ಮಹಾಗಾಯಿ ವೇಳ್, ಹೊಯ್ಕಿನಹೀ! ಆ ಖೋಲೀ ಭಾಡಾ ಬೇಖೂಬ ವಾಢಾಯ್ಸೇದ. ಏಕಾ ಖೋಲೀಲಾ ತೀಸ ತೀಸ್ ರೂಪಾಯಿ ಭಾಡಾ! ನೀವು ಆಪಲ್ಯಾಪೈಕಿ ಅಂತ ಸಮಜಾಸಿ ನಿಮ್ಮ ಖೋಲೀ ಭಾಡಾ ವಾಢಾಯ್ಸಿಲ್ಲ, ಹೋಯ್ಕಿನಹೀ! ನಿಮ್ಮ ಕುಟುಂಬ ನಮ್ಮ ಕುಟುಂಬ ಮೈತ್ರೀಣ್ ಅಂತ. ದೂಸರೀ ಗೋಷ್ಟ, ಅಂದ್ರ ನೀವು ಭಾಡಾ ಟಾಯಿಮ್ ಶೀರ ಭರಾಯಸ್ತೀರಿ, ಹೊಯ್ಕೀನಹೀ. ನಿಮ್ಮ ಕಾನಡೀ ಮುಂದಿ ನಮಗ ಬಹಾಳ ಅವಡಸ್ತಾ ರ. ಬಾಕೀ ಎಲ್ಲಾರಿಗೂ ನಾಳಿನ ಪಹಿಲೀಯಿಂದ ಕಮೀತ್ಕಮೀ ಪಾಚ್‌ಪಾಚ ರೂಪಾಯ್ತರೀ ವಾಢಾಸವಿದ್ದೇನಿ. 'ಜಾಸ್ತದೇತ್ ನಸ್ಲತರ್ ನಿಘೂನ್ ಜಾ ಜಾಗಾ ಖಾಲೀ ಕರೂನ್' ಅಂತೇನಿ ಹ್ಯಾಚಾಂತ ಛಿಡೇ ಏನ್ನಿರೀ ಪರ್ವತೀ, ಹೋಯ್ಕೀನಹೀ?

ಬಾದಾಮಿ :—ಬರಾಬ್ಬರೀ, ಪಂತರು, ಎಲ್ಲಾ ಸೂಳೇಮಕ್ಕಳನ್ನು ಜಾಗಾ ಬಿಡಿಸಿ ಹೊರಗ್ಹಾಕಿ ಬಿಡ್ರಿ.

ರಾಘೋಪಂತ :—ವೇಳ ಜಮಾಸಬೇಕಲ್ಲ. ಹೊಯ್ಕಿನಹೀ, ಪರ್ವತೀ! ಬರ್, ನಿಮಗ ಊಟಕ್ಕ ಉಸೀರಾತು ಕಾಣಸ್ತದ. ನೀವೇನು? ಊಟಾಮಾಡಿ ತಾಬಡತೋಬ ಆಫೀಸಿಗೆ ದೌಡಾಸವ್ವ. ಆಗಲಿ. ಬರ್ತೇನಿ (ಸ್ವಲ್ಪ ಹೋದಂತೆ ಮಾಡಿ ಹಿಂದಿರುಗಿ ಬಂದು) ಅಹೋ ಪರ್ವತಿ. ಈ ಪಾಹುಣೇ ಯಾರು? ನಮಗ ಖೂಣ ಆಗಲಿಲ್ಲಾ.

ಬಾದಾಮಿ :—(ಪರ್ವತಿಯನ್ನು ಮಾತಾಡಿಸಗೊಡದೆ) ನಾನು, ನಾನು ಪರ್ವತಿಯವರ ಪಾಹುಣೇ ಅಲ್ಲಾ, ಮೇಹುಣೆ....ಅಂದರ ಅವರ ಬೀಗ.

ರಾಘೋಪಂತ :—ಅಸ್ಸ ಕಾಂಯ್, ಬರಽ ಬರಽ, ಅಹೋ ಪರ್ವತೀ ನೀವು ನಿಮ್ಮ ಮೋಹುಣೆ ಅವರಿಗೆ ನಮ್ಮಕಡೆ ಇವತ್ತ ಸಾಯಂಕಾಳೀ ಕರಕೊಂಡ ಬರ್ರಿ. ಬರಽಕಾ? (ಹೋಗುವನು)

ಪರ್ವತಿ :—ಅಲ್ರೀ ಬಾದಾಮೀ, ನೀವ್ಯಾವಾಗ ನಮ್ಮ ಬೀಗ ಆದ್ರೀ!

ಬಾದಾಮಿ :—ನಿಮಗ ಬೀಗ ಆಗದಿದ್ರೂ, ಸಧ್ಯ ನಿಮ್ಮ ಬಾಯಿಗೆ ಬೀಗ ಆಗ ಬೇಕಿತ್ತು. ಇನ್ನ ಈ ಪಂತನ ಮನೀಗ ಬೀಗಾ ಬಡಿಸೋ ತನಕ ನಿಮ್ಮ ಬೀಗನೂ ಆಗಿರ್ತೇನಿ.ಅಷ್ಟು ಕೃಪಾ ಆಗಲಿ.

ಪರ್ವತಿ :—ಅಲ್ರೀ ಬಾದಾಮೀ. ನೀವೇನೋ ದೊಡ್ಡ ಯುಕ್ತೀ ಹಾಕಿ ಧಾಂಗ ಕಾಣಸ್ತಽದ. ಹೇಳೆರ ಹೆಳ್ರೆಲ್ಲಾ.

ಬಾದಾಮಿ :—ಎಲ್ಲಾ ಹೇಳ್ತೇನಿ ನಡ್ರಿ ಊಟಕ್ಕೂತಾಗ. ಮೊದ್ಲ ನಿಮ್ಮ ಮನಿಯವರದು ಅಷ್ಟ ಗುರ್ತಾಮಾಡಿಸಿ ಕೊಡ್ರಿ. ಈ ಪಂತನ ಹೆಂಡತಿ ನಿಮ್ಮನಿಯವರ ಗೆಳತೀ ಅಂತ. ಅಂದ್ಮ್ಯಾಲೆ ನಿಮ್ಮನೀ ಯವರ ಸಹಾಯ ಮುಖ್ಯಬೇಕು ನಮ್ಮ ಯುಕ್ತಿಗೆ. ಮೇಲಾಗಿ ನಿಮ್ಮ ಬೀಗಾದ್ದರಿಂದ ನಾನು ನಿಮ್ಮನೀಯವರಿಗೆ ಕೆಲವು ದಿನ ಅಣ್ಣನೂ ಆಗ ಬೇಕಾಗೇದ. ನಡ್ರಿ ಒಳಗಂತೂ!

(ಇಬ್ಬರೂ ಒಳಗೆ ಹೋಗುವರ. ತೆರೆ)

೨ನೇ ನೋಟ

(ಮುಂದೆ ನಾಲ್ಕು ದಿನಗಳ ನಂತರ, ರಾತ್ರಿ ಹತ್ತು ಗಂಟೆಯ ಹೊತ್ತಿಗೆ, ಪರ್ವತಿಯವರ ಕೋಣೆ ಹಾಗು ರಾಘೋಪಂತನ ಮನೆಯ ನಡುವಿನ ವೆರಾಂಡದಲ್ಲಿ ಬಾದಾಮಿ, ಅಯ್ಯಂಗಾರ, ಗುಳೇದಗುಡ್ಡ ಕಾಸುತ, ಹಾಗು ಘೊಂಗಡೆಯವರು ಪಿಸುಪಿಸು ಮಾತನಾಡುತ್ತ ಮೆಲ್ಲಗೆ ಅತ್ತಿತ್ತ ಹಣಕುತ್ತ ಓಡಾಡುತ್ತ, ಸಂಕೇತ ಗಳನ್ನು ಮಾಡುತ್ತ ಏನೋ ಸಂಚಿನಲ್ಲಿರುವರು. ಕೊನೆಗೆ ಬಾದಾಮಿ ಉಳಿದ ನಾಲ್ವರನ್ನು ಒಬ್ಬೊಬ್ಬರನ್ನೇ ಕಿವಿಯಲ್ಲಿ ಏನೇನೊ ಹೇಳಿ ಪರ್ವತಿಯವರ ಕೋಣೆ ಯಲ್ಲಿ ಕಳಿಸಿ, ಒಬ್ಬನೇ ಸಣ್ಣದನಿಯಲ್ಲಿ ಸಿಳ್ಳಿನ ಗಾನಮಾಡುತ್ತಾ ನಿಲ್ಲುವನು. ಅಷ್ಟರಲ್ಲಿ ಕೋಣೆಯೊಳಗಿಂದ ಕಳ್ಳಹೆಜ್ಜೆಯಿಡುತ್ತ ಪರ್ವತಿ ಬರುವನು. ಕೆಲ ಹೊತ್ತು ಇಬ್ಬರಲ್ಲೂ ಕಣ್ಣು-ಕೈ-ಬಾಯಿ ಸನ್ನೆಗಳೇ ನಡೆಯುವವು. ಕೊನೆಗೆ ಮೆಲ್ಲಗೆ ಮಾತು ಆರಂಭವಾಗುವವು. ಸ್ಟೇಜಿನ ಮೇಲೆ ಮೆಲ್ಲಗೆ ಕತ್ತಲೆ ಹೆಚ್ಚು ತ್ತಿರುವುದು)

ಬಾದಾಮಿ :—ಅಲ್ರೀ, ಪರ್ವತಿ ನಾ ಹೇಳಿದ ಸಾಮಾನೆಲ್ಲ ನೋಡಿಟ್ಟೇ ರಿಲ್ಲೊ ? ತಂತಿ, ಕರೇ ರೇಶ್ಮಿರೀಲು, ಮೇಣಬತ್ತಿ, ಅಂಟೂ, ಮತ್ತs, ಫಾಸ್ಫರಸ್ ಹಳಕು, ರಾಳಾ........

ಪರ್ವತಿ :—ಎಲ್ಲಾ ಬರಾಬ್ಬರೀ ನೋಡಿಟ್ಟೇನಿ. ಆದ್ರ ನೀವು ಆ ಬಿಳೇ ನಿಲುವಂಗಿ ಮತ್ತ ಮಾರಿಗೆ ಮುಸುಕಿನ ಮುಖಾಮಾಡಿಸಿ ತರ್ರಿ‌ತೇನಿ ಅಂದಿದ್ರೆಲ್ಲಾ ಅವು ಎಲ್ಲಿ ಅವs.

ಬಾದಾಮಿ :—ಅಯ್ಯಂಗಾರ ಕಡೆ ಕೊಟ್ಟೇನಿ. ನೀವೇನು ಚಿಂತಿ ಮ್ಯಾಡ ಬ್ಯಾಡ್ರಿ. ನಿಮ್ಮ ಹೆಂಡತಿ ಹೇಳಿದ್ದೆಲ್ಲಾ ಕೆಲಸಾ ಪೂರಾ ಮಾಡ್ಯಾ ರಿಲ್ಲೊ ! ನೋಡ್ರಿ, ಅವರು ಇದ್ದದ್ದರಿಂದ ಈ ರಾಘೋಪಂತನ ಹೆಂಡತಿನ್ನ ನಮ್ಮ ಕಡೆ ಒಡಿಸಿಕೊಳ್ಳಲಿಕ್ಕೆ ಛಲೋ ಆತು.

ಪರ್ವತಿ :—ಒಡಿಸಿಕೊಳ್ಳೋದೇನ್ಮಹಾರೀ ! ಆ ರಂಗೂಬಾಯಿ ಈ ಮುದಿ ರಂಡೇಮಗನ ಕಂಸ್ರ ಹೇಸಿಕೋತಾಳ. ಭುಂಗಾರದಂಥಾ ಹರೇದ್ಹುಡಿಗಿನ್ನ ದುಡ್ಡಿನ ಆಶಾಕ್ಕ ಈ ಹದ್ದಿಗೆ ಕೊಟ್ಟಾರ. ಬಾಕೀಸುಖಾ ಇಲ್ಲದಿದ್ದರೂ ಈ ಸೂಳೇ ಮಗಾ ಎರಡು ಹೊತ್ತು ಹೊಟ್ಟಿತುಂಬ ಊಟಾ ಹಾಕ ಬಾರದs. ತಾ ತಿಂಬೋದುಲ್ಲಾ, ದುಡ್ಡಿಗೆ ದುಡ್ಡು ಕೂಡಿ ಹಾಕ್ತಾನ,

ಆದ್ರ ಹೊಸಾ ಹೆಂಡ್ತಿ, ಬೆಳೆಯೂ ಹುಡುಗಿ ಬೆಳವಲದ ಹೆಣ್ಣು.... ನೋಡ್ರಿ ಬಾದಾಮಿ, ಈ ಒಂದು ವರ್ಷದಾಗ ಹುಡುಗಿ ಕಡ್ಡಿಯಾ ಗ್ಯಾಳ. ಔಷಧಕ್ಕ ಕೂಡ ಒಂದು ಪೈ ಖರ್ಚು ಮಾಡಾವಲ್ಲ ಈ ಶನೀಸೂಳೀಮಗಾ! ಏನs ಆಗಲಿ ಇವನ ಪಾಲಗಾ ಶಿಸ್ತ ಮಾಡ ಬೇಕು ನೋಡ್ರಿ. ರಂಗೂಬಾಯಂತೂ ನಾವು ಹೇಳಿಧಂಗ ಮಾಡ್ತೀನಿ ಅಂತ ಹೇಳ್ಯಾಳ. ನನ್ನ ಹೆಂಡ್ತಿ ಸ್ವತಃ ಸೂತ್ರಧಾರ ಆಗ್ಯಾಳ.

ಬಾದಾಮಿ :—ಮತ್ತ ನಾನೂ ಆ ಸೂತ್ರದ ಬಲಾ ಇದ್ದಲ್ಲೇ ಥಾರಾ ಜಗ್ಗಲಿಕ್ಕೆ ತಯಾರಾಗೇನಿ. ಆದರ ಕಮಲಕ್ಕ ಆ ರಂಗೂಬಾಯರಿಗೆ ಚೀರೋದು, ಕೂಗೋದು ಏನೇನ' ಬೇಡೋದು ಎಲ್ಲಾ ನೆಟ್ಟಗ ಹೇಳಿ ಕೊಟ್ಟಾರಿಲ್ಲೊ.

ಪರ್ವತಿ :—ಅದ್ಯಾಕ್ರಿ ಬಾದಾಮಿ. ಇವೊತ್ತ ಮಧ್ಯಾನ್ಹದಾಗ ಒಮ್ಮೆ ರಿಹರ್ಸಲ್ಲೂ ಆಗೇದ. ಶನಿವಾರಾಂತ ನಾನೂ ಲಗೂ ಬಂದಿದ್ದೆ. ರಂಗೂಬಾಯಿ ಎಲ್ಲಾ ನನ್ನ ಹೆಂಡ್ತಿ ಕಲಿಸಿಕೊಟ್ಟ್ಹಾಂಗ ಮಾಡಿ ಆ ದೆವ್ವನ ಪಾರ್ಟಿನ ಒಂದು ಮಾಸಲೇ ನೆಟ್ಟಗ ತೋರಿಸಿದಳು ಆ ಮುದಿ ಗೂಗಿಗೆ. ಆಗs ಆ ರಾಘೋಪಂತನ ಟಾಕಿ ಬಿಚ್ಚಿಧಾಂಗ ಆತು ಅಸ್ನಿ. ಇನ್ನs ಈ ರಾತ್ರಿ ಅಂತು ಒಂದಾದರ, ಪುಂಗಿ ಪೂರಾ ಬಿರೀ ತsದ ಅಪ್ಪನವರದು.

ಬಾದಾಮಿ :—ಅದಕ್ಕ ನಾವು ಪ್ರಸ್ತಾವನೀ ಹ್ಯಾಂಗ ಮಾಡಿದ್ವಿ ಹೇಳ್ರಿ ಈಗೆರಡು ಮೂರು ದಿವ್ಸ!

ಪರ್ವತಿ :—ನಿಮ್ಮಂಥಾ ಕಂತ್ರಾಟದಾರ್ರು ಇದ್ರೇನ್ಬಿಡ್ರಿ. ಮೊದಲ ಈಗೆರಡು ದಿನದಿಂದ ಈ ರಾಘೋಪಂತನ ಮೊದಲನೇ ಹೆಂಡತಿ ರುಕ್ಮಿಣಿಬಾಯಿ ನನ್ನ ಹೆಂಡ್ತೀ ಮೈಮ್ಯಾಲೆ ಬಂದದ್ದರ ನಕಲು ಮಾಡ್ಸಿದ್ರೆಲ್ಲಾ. ಆ ಸುದ್ದೀ ಕೇಳೇ ರಾಘೋಪಂತನ ನೀರಿಳಿದಬಿಟ್ಟತು. ಇಲ್ಲದಿದ್ದರೆ ನನ್ನ ಹೆಂಡ್ತೀಗೆ ಎರಡು ಜರದ ಸೀರಿ, ಖಣಾ, ಒಂದು ತೊಲಿ ಭಂಗಾರಾ ಐದು ಜನ ಮುತ್ತೈದೆರ್ಗೆಲ್ಲಾ ತುಂಬಿದ ಬಾಗಣಾ ಇಷ್ಟೆಲ್ಲಾ ಕೊಡೂ ಕೈಯೇ ದುಡ್ಡಿನ ದೆವ್ವ ಬಡಕೊಂಡ ಈ ದರಿದ್ರ್ಯಂದು. ಇಲ್ಲಿ ನೋಡ್ರಿ ಈ ಬಂಗ್ಲೆ ಕಟ್ಟಿಸಿದ ತೊಟ್ಲೂ ರಾತ್ರಿ ಹತ್ತು ಹೊಡೆದ

ವ್ಯಾಲ ಇಲೆಕ್ಟ್ರಿಕ್‌ದ ಮೇನ್‌ಸ್ವಿಚ್ ತಾನೇ ಬಂದ್ಮಾಡ್ತಿದ್ದ ಈ ಬದ್ಮಾಷ; ಆದರೆ ಈ ವಾರೆಲ್ಲ ಮನಿಯೊಳಗ, ಕಂಪೌಂಡದೊಳಗ, ರಾತ್ರೆಲ್ಲಾ ದೀಪಾ ಉರಿಸಲಿಕ್ಕೆ ಹತ್ತ್ಯಾನs. ಮತ್ತs, ಆ ಕರಿ-ಗಡಬೂ!!

ಬಾದಾಮಿ :—(ಮುಂದಿನ ಹಂಚಿಕೆಯಲ್ಲಿದ್ದು) ಅಂತೂ ನಮ್ಮ ಒಳಸಂಚು ಸಫಲಾಗ್ತsದ· ಅಂಬೋದರ ಲಕ್ಷಣಾ ಅವೆಲ್ಲಾ. ಇದು ನೋಡ್ರಿ, ಹತ್ತು ಹೊಡೀಲಿಕ್ಕೆ ಬಂತು. ನಾವೆಲ್ಲಾ ದೀಪಾ ಆರಿಸಿ ಕೋಣಿ ಯೊಳಗ ಕೂಡೋಣ. ಕಮಲಕ್ಕನ ಜೋಡಿಗೆ ನೀವು ಹಿತ್ತಲ ಬಾಗಿಲಿಂದ ಹೋಗಿರಿ. ಮತ್ತ ರಂಗೂಬಾಯಿಗೆ ಹೊತ್ತಾತೂ ಅಂತ ಸೂಚನಾ ಕೊಡ್ರಿ. ಸಣ್ಣ ಹುಡಿಗೀ, ನಿದ್ದಿ ಬಂದು ಮಲಗಿಬಿಟ್ಟಾರು.

ಪರ್ವತಿ :—ಛೀ ಛೀ.... ಈ ಮುದುಕನ ಫಜೀತಿ ಮಾಡ್ಲಿಕ್ಕೆ ನಮಕಿಂತ ಮುಂದ ಆಕಿ ತಯಾರಾಗ್ಯಾಳ. ಇದರೊಳಗ ನಮ್ದೇನೂ ದುರುದ್ದೇಶ ಇಲ್ಲಾ; ಶಕ್ಯ ಆದರ ಆ ಮುದಿಗುಂಡಗ ಅಷ್ಟು ಬುದ್ಧಿ ಕಲಿಸಲಿಕ್ಕೆ ಬಂದೀತು ಅಂತ ಆಕೀಗೂ ಖಾತ್ರೀ ಅದ. ನಡ್ರಿ, ನಡ್ರಿ. ಹೋಗೋಣ.

ಬಾದಾಮಿ :—ಅಲ್ರಿ ಮತ್ತ....ನಿನ್ನೆ ಅವು ಎರಡು ಪುಲೀಜು (Pulleys) ಮತ್ತ ರಿಂಗು ಕೊಟ್ಟ ಹೋಗಿದ್ದೆನಲ್ಲಾ....

ಪರ್ವತಿ :—ಆ ಕೆಲಸಾಗೇದೇಳ್ರಿ. ರಂಗಕ್ಕ ನನ್ನ ಹೆಂಡ್ತೀ ಇಬ್ಬರೂ ಕೂಡಿ ಸ್ವತಃ ರಾಘೋಪಂತನ ಮಲಗೋ ಕೋಣಿಯೊಳಗ ಅವೆರಡೂ ಪುಲಿ ಮತ್ತ ರಿಂಗು ಜಂತಿಗೆ ಕಟ್ಟಿಟ್ಟಾರ. ಮತ್ತ ನೀವ್ಹೇಳಿದ್ಹಾಂಗ ಕರೀ ರೇಶ್ಮಿಧಾರ ಆ ಕೋಣೀ ಖಿಡಕಿಯಿಂದ ನಮ್ಮ ಕಿಡಕಿಯೊಳಗ ಹಾಸಿ ಕಟ್ಟ್ಯದ. ಇನ್ನ ಮುಂದಿನ ಕೆಲಸಾ ನಿಮ್ಮದು.

ಬಾದಾಮಿ :—ಛೆ. ಛೇ. ನಾ ಲೆಕ್ಕಾ ಹಾಕಿದಕಿಂತ ಹೆಚ್ಚs ಕೆಲ್ಸಾ ಮಾಡೀರಿ ಬಿಡ್ರಿ. ನಿಮ್ಮ ಹೆಂಡ್ತೀನೂ ಬಹಾಳ ಚುರುಕು ಕಾಣಸ್ತಾರ್ರೀ!

ಪರ್ವತಿ :—ಮತ್ತ ಈ ಕೆಲಸದ ಪೂರ್ತೆಯಾದರೂ ನಿಮ್ಮಂಥವರ ತಂಗಿ ಆಗ್ಯಾಳಂದ ಮ್ಯಾಲೆ ಚುರುಕಾಗಬ್ಯಾಡs!

ಬಾದಾಮಿ :—(ಗಂಟೆ ಕೇಳಿ) ನೋಡ್ರಿ ಪೋಲೀಸ ಕ್ವಾರ್ಟರ್ಸದಾಗೂ ಹತ್ತು ಹೊಡೀತು. ನಮ್ಮ ಅಪಾಯಿಂಟಮೆಂಟಿನ ಪ್ರಕಾರ ರಾನಡೇ ರುಕ್ಮಿಣಿ

ಬಾಯಿ ಪರಲೋಕದಿಂದ ಬರೋ ಹೊತ್ತಾತು. ನಡೀರಿ, ನಡೀರಿ; ಅಯ್ಯಂಗಾರ ಕಾಮತ ಅವರು ದಾರೀ ನೋಡ್ತಿದ್ದಾರು. (ಇಬ್ಬರೂ ಮೆಲ್ಲಗೆ ಸರಿದು ಹೋಗುವರು. ಕೆಲಹೊತ್ತು ನೀರವ. ರಂಗ ಗಾಢವಾಗಿ ಕತ್ತಲೆಗೊಳ್ಳುವದು. ಮತ್ತೆ ಮೆಲ್ಲಗೆ ಮಸುಕುಗತ್ತಲೆಗೆ ಬರುವದು. ಇಷ್ಟರಲ್ಲಿ ತೆರೆಯಾಚೆ ಚೀರಾಟದ ದನಿ ಕೇಳಬರುವದು. ಗಲಾಟೆ; ಮುಂದೆರಡು ನಿಮಿಷದಲ್ಲಿ ಕಳೆದ ಕಚ್ಚೆ ಸಿಗಿಸಿಕೊಳ್ಳುತ್ತ ಗಾಬರಿಗೊಂಡ ರಾಘೋಪಂತ ಬರುವನು)

ರಾಘೋಪಂತ :—(ಕೂಗುತ್ತ) ಅಹೋ, ಮಿಸ್ಟರ್....ಮಿಸ್ಟರ್ ಪರ್ವತೀ. ಇಕಡೇ ಬರ್ರೀ, ಲಗೇಚ; ಅಹೋ ಮಿಸ್ಟರ ಪರ್ವತೀ ಲವಕರ ಬರ್ರೀ; ಸರ್ವ ಘೋಟಾಳಿ ಆತ್ರೀ; ದಾರ್ ಉಘಡಾಸ್ರೀ.

ಪರ್ವತಿ :—(ಗಾಬರಿಯಾದವನಂತೆ ಪ್ರವೇಶಿಸಿ) ಓಹೋಹೋ, ರಾಘೋಪಂತ ರೇನು? ಯಾಕ್ರೀ ಏನಾತೂ? ಈ ಅಪರಾತ್ರೀ ವ್ಯಾಳ್ಯಾದಾಗ ಯಾಕ ಕೀಸರುಬಾಸರು ಮಾಡ್ಲಿಕ್ಕೆ ಹತ್ತೀರಿ. ಇದೇ ಈಗ ದೇವರಣ ಅಂತ ಕಣ್ಣಿಗೆ ಕಣ್ಣು ಹತ್ತಿದ್ದವು. ಏನು ಆಯಿತಾದ್ರೂ ಏನು?

ರಾಘೋಪಂತ :—ಏನು ಹೇಳೋ ಸೋಯ್ ಇಲ್ರೀ; ಫಾರ್ ಅನಾಹುತ ಗೋಷ್ಟ ಘಡಾಯಿಸೇದ್ರಿ ನಮ್ಮ ಕುಟುಂಬಕ. ನಿಮ್ಮ ಮೇಹುಣೇ ಎಲ್ಲಿದ್ದಾರ? ತಾಬಡತೋಬ ಕರೀರಿ ಅವರ್ನ........

ಪರ್ವತಿ :—(ನಗೆ ತಡೆಯುತ್ತ) ಅವರು ಜೋರ ನಿದ್ದೀಯೊಳಗಿದ್ದಾರ; ಆದ ದ್ದಾದ್ರೂ ಏನ್ಹೇಳ್ರಿ. ಏನಿದು, ಚೀರಾಟ ನಿಮ್ಮನೀಯೊಳಗ?

ರಾಘೋಪಂತ :—ಏನ್ ನಗ್ತೀರೇನ್; ನಮ್ಮದೂ ಘರಾಣೆ ಡುಬಾಯಿಸೊ ವೇಳ್, ತಿಳೀತಿಲ್ಲೊ. ಮೊನ್ನೆ ನಿಮ್ಮ ಕುಟುಂಬದ ವ್ಯೈಮ್ಯಾಲೆ ಬಂದಿತ್ತಲ್ಲಾ ಅದಣ ದೆವ್ವ ಬಂದಣದ ನಮ್ಮ ಕುಟುಂಬದ ಮ್ಯಾಲೆ. ಅದಕ್ಕ ನಿಮ್ಮ ಮೆಹುಣೇನ್ನ ಕರೀರಿ.

ಪರ್ವತಿ :—ಅದಣ ದೆವ್ವ ಬಂದಣದ; ಆಂ! ನಿಮ್ಮ ಮೊದಲ್ನೇ ಹೆಂಡತೀ?

ರಾಘೋಪಂತ :—ಹೌದ್ರೀ. ಅದಣ ದೆವ್ವ. ಆಕೀನ ನನ್ನ ಪಹಿಲಿ ಹೆಣ್ತಿ ರುಕ್ಮಿಣಿ ರಂ........ನಕೋ ಹೋ....ಹಳೂಚ ಮಾತಾಡೋಣ. ನಿಮ್ಮ ಮೇಹುಣೇನ್ನ...., ನಿಮ್ಮ ಬೀಗನ್ನ ಮೊದಲ ಕರೀರಿ. ಮೊನ್ನೆ

ನಿಮ್ಮ ಹೆಣ್ತೀ ವೈನ್ಯಾಲ ಇದೇ ದೆವ್ವ ಬಂದಾಗ ಅವರೇ ಅದನ್ನ ಸುಟಾಯಿಸಿದ್ದಿಲ್ಲs! ಇವೊತ್ತು ನೋಡ್ರಿ, ಮಧ್ಯಾನ್ಹದಾಗೂ ಬಂದಿತ್ತು ಈ ದೆವ್ವ. ಈಗ ಮತ್ತ ಅಪರಾತ್ರಿಯೊಳಗ ಬಂದsದ. ಲಗೂ ಕರೀರಿ ಅವರ್‍ನ; ಅಹೋ ಮಿಸ್ಟರ ಬಾದಾಮೀ.... ಬಾದಾಮೀ!! ಪರ್ವತೀ, ಅವರ್‍ನಷ್ಟು ಲಗೂ ಬುಲಾಯಿಸರೆಪಾ, ನೀವಾದರೂ!

ಪರ್ವತಿ :—ಯಾಕಾಗವಲ್ಲದು, ನೀವ್ ನಡೀರಿ; ನಾ ಬಾದಾಮಿಯವರ್‍ನ ಕರಕೊಂಡು ಬರ್‍ತೀನಿ.

ರಾಘೋಪಂತ :— ಇಲ್ರಿ, ನಾ ಏಕ್‌ಟಾ ಹೋಗಲಿಕ್ಕೆ ಒಲ್ಲೆ್ರಪಾ. ಮುಪ್ಪಿನ ಜೀವಾ!........ಅಕಾ ಕೇಳಿದಿರಾ; ಆಕೀನs ನನ್ನ ಮೊದಲಿನ ಹೇಣ್ತಿ. ಹ್ಯಾಂಗ ನನ್ನ ಹೆಸರರ್ಲೆ ಓರಡಾಸ್ತಾಳs; ನೀವೂ ಬರ್‍ರಿ; (ನಡುಗುತ್ತ ಅಂಜಿಕೆ ತುಂಬಿ ನಿಲ್ಲುವನು. ಪರ್ವತಿ ಕೈಸನ್ನೆಯಿಂದ ಧೈರ್ಯಹೇಳಿ ಒಳಗೆ ಹೋಗುವನು. ಇಷ್ಟೊತ್ತು ನಡುನಡುವೆ ಅಸ್ಪಷ್ಟ ವಾಗಿ ಕೇಳುತ್ತಿದ್ದ ಕೂಗಾಟ, ಈಗ ಸ್ಪಷ್ಟ ಆಕ್ರೋಶವಾಗಿ ಕೇಳುತ್ತಿರು ವದು. ನಡುನಡುವೆ ರಾಘೋಪಂತನ ಹೆಸರೂ ಬಂದಂತೆ ಆತ ಮೆಟ್ಟಿ ಬೀಳುತ್ತಿರುವನು. ಭಯ ಹೆಚ್ಚುವುದು. ಇಷ್ಟರಲ್ಲಿ ಪರ್ವತೀ, ಬಾದಾಮಿ ಇಬ್ಬರೂ ಬರುವರು)

ಬಾದಾಮಿ :—ಕಾಹೋ ಪಂತ; ಏನಾಯ್ತು. ಮತ್ತ ಬಂತೇನು ನಿಮ್ಮ ಸುತ್ತ ಉರ್ಲು?

ರಾಘೋಪಂತ :—ಹೌದ್ರಿಪಾ. ನಮ್ಮ ಪರ್ವತೀ ಅವರ ಹೆಣ್ತೀ ದೆವ್ವ ನೀವs ಬಿಡ್ಸಿದರೆಲ್ಲಾ. ನಮ್ಮಾ್ಯಲೆ ಅಷ್ಟು ಮೆಹರ್ಬಾನೀ ಮಾಡ್ರಿ.

ಪರ್ವತಿ :— ಹೌದು ಪಂತರs, ನಮ್ಮ ಬೀಗರು ದೆವ್ವಾ ಬರಸಲಿಕ್ಕೆ ಹೋಗಿ ಸಲಿಕ್ಕೆ ಬಹಾಳ ಹೆಸರಾದವ್ರು.

ಬಾದಾಮಿ :—ಅಂತೇ ನಮ್ಮ ತಂಗೀಗೆ ತ್ರಾಸಾಗೋ ಲಕ್ಷಣ ಕಂಡಕೂಡಲೇ ವಾಯರು ಮಾಡಿ ನನ್ನ ಕರೆಸಿದ್ರು. ನಿಮ್ಮ ಮೊದಲಿನ ಹೆಂಡ್ತಿ ಭಾಳ ಕೆಟ್ಟ ದೆವ್ವ ಆಗ್ಯಾಳ ನೋಡ್ರಿ. ನಿಮ್ಮ ಮ್ಯಾಲ ಒಳೇ ವರ್ಮಾ ಸಾಧಿಸತಾಳಲ್ಲರೀ. ಮೊನ್ನೆ ನಮ್ಮ ತಂಗೀ ವೈನ್ಯಾಲೆ ಬಂದಾಗ ಹೇಳ್ತಿದ್ಲು, "ನೀವು ಆಕಿನ್ನ ಭಾಳ ಉರಸ್ತಿದ್ರೀ, ಭಾಳ ಗೋಳ ಕಟ್ಟಿ ಕೊಂಡ್ರಿ, ಕಡೀಕೆ ನೀವೇ ವಿಷ ಹಾಕಿ...........

ರಾಘೋಪಂತ :—ರಾಯರs, ರಾಯರs, ಅದನ್ನೆಲ್ಲಾ ಈಗ ನೆನಪು ತಗೀಬ್ಯಾಡ್ರೀ; ನಿಮ್ಮ ಕೈಕಾಲ ಕಟ್ಟಿಕೋತೀನಿ, ಅದೆಲ್ಲಾ ಹೋಗಲೀ. ಸಧ್ಯ ನಿಮ್ಮ ತಂಗಿನ್ನ ಪಾರುಮಾಡಿಧಾಂಗ ನನ್ನ ಹೆಂಡ್ತಿನ್ನೂ ಅಷ್ಟು ಪಾರುಮಾಡ್ರಿ. ಇನ್ನೂ ಎಳೀ ಹರೇದ ಹುಡಿಗಿರೀ.

ಬಾದಾಮಿ :—ನೋಡ್ರಿ, ನೀವು ಇಷ್ಟ ಹದಾ ನೋಡಿ ಇರುವಾಗ, ನಿಮ್ಮಂಥಾ ಸದ್ಬ್ರಾಹ್ಮಣರಿಗೆ ಹೀಂಗ ಕಾಡಬೇಕs ಆ ಡಾಕಿಣಿ! ಅಲ್ಲಾ ನಿಮ್ಮನಿಯೊಳಗ ಇದ್ದದ್ದಕ್ಕ ನಮ್ಮ ತಂಗಿಗೆ ಆಗಬಾರ್ದ ತ್ರಾಸು ಅತು. ಇನ್ನೊಮ್ಮೆ ಒಂದs ನಮ್ಮ ತಂಗೀ ಹತ್ತರ ಹಾಯಿಲಿ, ಆ ದೆವ್ವನ ಧೂಳಾ ಹಾರಿಸಿಬಿಡತೇನಿ. ನಮ್ಮ ಮಂತ್ರ ಅಂದ್ರ ಮಹಾ ಪ್ರಚಂಡ ಶಕ್ತೀವು. ಮಿ. ಪರ್ವತೀ, ನೀವು ಮಂತ್ರದ ಸಾಮಾನೆಲ್ಲಾ ತಗೊಂಡು ಬರ್ರಿ. (ಪರ್ವತಿ ಹೋಗುವನು)

ರಾಘೋಪಂತ :—ಏನಾದ್ರೂ ಮಾಡ್ರೆಪಾ. ನಮ್ಮ ಪರ್ವತಿಯವರ ಕುಟುಂಬದ ಮ್ಯೆಮ್ಯಾಲೆ ಆ....ಆ....ಆ....ಕಠೋರ ....ಪಿ....ಶಾ.... ಅಲ್ಲಲ್ಲ (ಗಾಬರಿಯಿಂದ ತಡೆದು) ನನ್ನ ಮೊದಲಿನ ಹೆಂಡ್ತೀದೆ....ದೆ.... ದೆ....ವ್ವ....ಅಲ್ಲಲ್ಲಾ....ಆಕೀ ಬಂದಾಗ, ನೀವು ಹೇಳಿಧಾಂಗ ಎಲ್ಲಾ ಶಾಂತೀ ಮಾಡ್ಸಿದೆ; ಬಾಗಣಾ ದಾನಾ ಎಲ್ಲಾ ಮಾಡ್ಸಿದೆನೋ ಇಲ್ಲೋ. ಆ ದೆವ್ವ ಕರಿಗಡಬು ಬೇಡ್ತಿತ್ತಲ್ಲಾ; ಅದನೂ ಮಾಡ್ಸಿ ಹಾಕಿಸಿದೆ. ಈಗೂ ನೀವು ಹೇಳಿದ್ದೆಲ್ಲಾ ಮಾಡ್ಸತೀನಿ !........ಅಲ್ರೀ,....(ಮೆಲ್ಲಗೆ) ಈ ದೆವ್ವಕ ದೆವ್ವ ಅಂದ್ರ ಮತ್ತಿಷ್ಟು ಮ್ಯೆಮಾಲೆ ಬರ್ತಾವಂತ ಹೌದೇನು.

ಬಾದಾಮಿ :—ಹೌದ್ರೀೀೀ.... (ರಾಘೋಪಂತ ಮೆಟ್ಟ ಬೀಳುವನು) ಅದಕs ಜನಿವಾರದ ಬ್ರಹ್ಮಗಂಟು ಹಿಡಿಕೊಂಡಿರ್ರಿ. ನಡ್ರಿ, ಪರ್ವತಿಯವರು ಬಂದ್ರು (ಪರ್ವತಿ ಕೈಯೆಲ್ಲೊಂದು ಚೀಲ ತಗೊಂಡು ಬರಲು ಮೂವರೂ ಹೊರಡುವರು)

ರಾಘೋಪಂತ :—ನೀವs ಮುಂದ ನಡೀರೆಪಾ. ನನಗ್ಯಾಕೋ ಜೀವ ಕೆಳಗs ಮ್ಯಾಲ ಆಗ್ತsದ.

ಪರ್ವತಿ :—ನಿಮ್ಮ ಮನ್ಯಾಗ ಹೋಗಲಿಕ್ಕೆ ಯಾರದೇನು ಹಂಗರೀ, ನಡ್ರಿ !

ರಾಘೋಪಂತ :—ಈಗ ನಾಲ್ಕೈದು ದಿನದಿಂದ ರಾತ್ರಿ ಮನೀಮ್ಯಾಲ ಕಲ್ಲು ಬೀಳ್ತಾವ, ಗೊತ್ತಿಲ್ಲs, ನಿಮಗ? ಹೀಂಗ ಈ ನೆಲಾ ಎದ್ದು ಬಡೀಲಿಕ್ಕ ಹತ್ತಿದರ, ಈ ಮನೀ ಏನು ನಂದು ಆದೀತ್ರಿ. ಹ್ಯಾಂಗಾದ್ರೂ ಈ ಬ್ರಹ್ಮೇತಿ ಒಂದು ತಪ್ಪಲಿ. ಮತ್ತ ಮಿ. ಬಾದಾಮೀ ನಿಮಗೆ ಬಗೀ ಹರಿಯದಿದ್ದರ, ಬ್ಯಾರೇ ಬೇಕಾದ ಮಾಂತ್ರಿಕರನ್ನ ಕರಸರಿ. ಆದ ಖರ್ಚು ಆಗಲಿ. ಈ ನಿಗ್ಗರ ಒಂದು ನೀಗಿ ಹೋಗಲಿ.

ಬಾದಾಮಿ :—ಅಲ್ರೀ, ಪರ್ವತೀ, ನಮ್ಮ ರಾಘೋಪಂತರು ಎಷ್ಟು 'ಈಡಿಯಾಮೆಟಿಕ್' ಕನ್ನಡ ಮಾತಾಡ್ಲಿಕ್ಕ ಹತ್ತಿದರಲ್ಲಾ.

ಪರ್ವತಿ :—ಅದೂ ಆ ದೆವ್ವನ ಕೃಪಾನs ಏನ್ ಮತ್ತ !

ಬಾದಾಮಿ :—ಇದೆಲ್ಲಾ ಒಳಗಿನ ಹಸೀರಿ! ಮೊದ್ಲ ಕನ್ನಡ ಕೇಳಿದ್ರ ಮುಖ ತಿರುವ್ರೋ ಈ ಕೆಲವು 'ಇಕಡೆ ತಿಕಡೇ'ದ ಮರಾಟೀ ಮಂದಿ ಮೈಮ್ಯಾಲೆ ಬಂದಾಗ "ಥೋಡಸ ಕಾನಡೀ ಕಳ್ತs, ನಮ್ಮದೂ ವಡೀಲ ಕೊಲ್ಹಾಪುರಚೇ, ಸಾಸರಾ ಜಮಖಂಡೀದೂ" ಅಂತ ಧನೀ ತಗದು ತಮ್ಹಂಗs ಕುಲಗೆಡಿಸಿ ಕನ್ನಡ ಮಾತಾಡ್ತಾರs. ಆದರ ಪೂರಾ ಕೈಯಾಗ ಸಿಕ್ಕಾಗ ಮಾತ್ರ ಅಚ್ಚಗನ್ನಡಿಗರ ಅಪ್ಪ ಆಗ್ತಾರ.

ರಾಘೋಪಂತ :—ನೀವಂಬೋದೂ ವಾಜಮೀನೇ. ನಾನು ಸಣ್ಣಂದಿನಾಗ ಸಾಲಿ ಕಲ್ತದ್ದು ಬಾಗಲಕೋಟ್ಯಾಗ. ನಾಕೆತ್ತಾ ಕನ್ನಡs ಕಲ್ತಿದ್ದೆ.

ಪರ್ವತಿ :—ಅಂತೂ ನಿಮ್ಮ ಕನ್ನಡದ ಕರುಳು ಈಗ ಹೊರಬಿದ್ದವೇನು? ಆಗಲಿ ನಡ್ರಿ, ಆಟನ್ನೂ ಮುಂಪ ಅದ.

(ಎಲ್ಲರೂ ಹೋಗುವರು ತೆರೆ ಏಳುವದು)

೩ ನೇ ನೋಟ

(ರಾಘೋಪಂತನ ಮಲಗುವ ಕೋಣೆ. ಒಂದು ಬದಿಗೆ ಆತನ ಪಲ್ಲಂಗ; ಎದುರಿಗೆ ನಡುಮನೆಗೆ ಹೋಗುವ ಬಾಗಿಲು. ಇನ್ನೊಂದು ಬದಿಗೊಂದು ಹಳೇ ಟೇಬಲ್ಲು; ಅದರ ಮೇಲೆ ಪೀಕದಾಣಿ, ಎಲೆಯಡಿಕೆ ಡಬ್ಬಿ; ಮೂಲೆಯಲ್ಲಿ ಕೊಡೆ, ಕೋಲು; ಗೂಟಕ್ಕೆ ಅಂಗಿ-ರುಮಾಲಗಳು. ತೆರೆಯೆದ್ದೊಡನೆಯೇ ಮೂವರೂ ಬರುವರು. ಇಷ್ಟೊತ್ತು ಕಡಮೆಯಾಗಿದ್ದ ಆಕ್ರೋಶ ಮತ್ತೆ ಜೋರಾಗಿ ಕೇಳುವದು. ಒಳ ಬಾಗಿಲಿಂದ ರಾಘೋಪಂತನ ಹೆಂಡತಿ "ಏ ರಾಘೋಪಂತಾ, ಏ ರಾಘೂ; ಏ ರಾಘ್ಯಾ, ಬಾಯಿಲ್ಲೆ; ನೋಡು ಈ ನನ್ನ ಸವತೀ ಜೀವಾ ನಾ ತಗೋತೀನಿ. ಈ ನಿನ್ನ ಮನೀ ಹಾಳಮಾಡಿ ಬೆಂಕೀಹಚ್ಚಿ ಬೂದೀ ಮಾಡ್ತೀನಿ; ನಿನ್ನ ದುಡ್ಡೆಲ್ಲಾ ಸೂರಿಸೂರಿ ಮಾಡ್ತೇನಿ. ನನ್ನ ಕೊಂದು ಮತ್ತೊಬ್ಬಾಕಿನ್ನ ತಂದ್ಯಾ? ನನ್ನ ಸಿಗದ ಸುಖಾ ನಿನಗ ಸಿಕ್ಕೀತೇನೋ ರಾಘ್ಯಾ; ಬಾ, ಬಾ, ಬಾಯಿಲ್ಲೆ; ನಿನ್ನ ಜೀವಾ ಹಿಂಡತೇನಿ; ನಿನ್ನ ಪ್ರಾಣಾ ಕುಡೀತೇನಿ ಎಲ್ಲಿ ಅಡಗೀದಿ ಏ ಕುತಿಗೊಗ್ಗಿಯ್ಯಾ......! ಏ ಜೀವಂತ ದೆವ್ವದಂಥಾವನೇ......! ನಾ ದೆವ್ವೊ, ನೀ ದೆವ್ವೊ!! ಬಾರೋ ಬಾಯಿಲ್ಲೇ......" ಎಂದು ಮುಂತಾಗಿ ಹಲವು ತರದಿಂದ ಕೂಗುತ್ತಾ ಆರ್ಭಟಿಸುತ್ತಿರುವಳು. ಒಂದೊಂದು ಮಾತೂ ಕೇಳಿದಂತೆ ರಾಘೋಪಂತನ ಹೆದರಿಕೆ ಹೆಚ್ಚಿ ಮೆಟ್ಟಿ ಬೀಳುತ್ತಿರುವನು. ಪರ್ವತಿ ಅವನನ್ನು ಮುಂದೂಡಿದಂತೆ, ಆತ ಬಾದಾಮಿಯ ಬೆನ್ನುಬಿದ್ದು ಆತನ ಹಿಂದ್ಹಿಂದೆ ಅಡಗುವನು. ಕೂಗಾಟದ ಕೊನೆಯ ಮಾತು ಮುಗಿದ ಮೇಲೆ............)

ರಾಘೋಪಂತ :—ಅಯ್ಯೋ ನನಗs ದೆವ್ವಂತಾಳಲ್ಲರೀ, ಇದ್ದ ಮಾತು ಹೇಳ್ರಿಪಾ. ಮತ್ತೆಲ್ಲಾದರೂ ನನಗs ದೆವ್ವ ಬಡಕೊಂಡೀತೂ!

ಬಾದಾಮಿ :—ನಿಮಗೇನ್ ದೆವ್ವ ಬಡಕೊಂಡೀತು? ನೀವು ಸ್ವತಃ ದೆವ್ವದ ಗಂಡ ಅಲ್ಲs? ಮಿ। ಪರ್ವತಿ, ನೀವೂ ಸ್ವಲ್ಪ ರಾಘೋಪಂತರ್ನ ಹಿಡ ಕೊಳ್ರಿ. ನಾ ದೆವ್ವದ ಸಮಾಚಾರ ತಗೋತೀನಿ. (ಪರ್ವತಿ ಕೈಯಲ್ಲಿಯ ಚೀಲ ತಗೊಂಡು) ರಾಘೋಪಂತರ, ಆಚಮನಕ್ಕ ನೀರು ಬೇಕಲ್ಲಾ.

ರಾಘೋಪಂತ :—ನೀರು ಅಲ್ಲೆ ಒಳಗ ಅವರೀ, ಅಲ್ಲೆ ನಾ ಹ್ಯಾಂಗ ಹೋ ಗಲೀ. ಪರ್ವತಿ, ನೀವೊಂದು ಸ್ವಲ್ಪ ನೀರು ತರ್ತೀರಾ? ದೇವರ ಕಟ್ಟೀ ಹತ್ತರ ಇಟ್ಟsದ (ಪರ್ವತಿ ಒಳಗೆ ಹೋಗುವನು. ರಾಘೋಪಂತ ಆತನನ್ನೂ ಬಿಟ್ಟು ಓಡಿ ಬಂದು ಬಾದಾಮಿಯನ್ನು ಅವಚಿಕೊಳ್ಳುವನು)

ಬಾದಾಮಿ :—(ಅವನನ್ನು ಬಿಡಿಸುತ್ತ) ಬ್ರಹ್ಮಗಂಟು ಹಿಡಿಕೊಳ್ರಿ, ಬ್ರಹ್ಮ ಗಂಟು. ಜನಿವಾರ ಅದs ಹೌದಲ್ಲೊ ಪಂತರ.

ರಾಘೋಪಂತ :—ಬ್ರಹ್ಮಗಂಟು ಏನ್ಮಾಡೀತ್ರೀ. ಮೇಲಾಗಿ ಮೊನ್ನೆ ಗಂಟಿದ್ದಲ್ಲೇ ಜನಿವಾರ ಹರಿದಿತ್ತು; ಮುಂದಿನ ತಿಂಗಳ ನಾರಳೀ ಪೂರ್ಣಿಮಾ; ಇಷ್ಟರಾಗ ಮತ್ತೆರಡು ಬಿಲ್ಲಿ ಏನು ಖರ್ಚುಮಾಡೋದು ಅಂತ ನಾನs ಹಾಕೇನಿ ಒಂದು ಕಗ್ಗಂಟು.

(ಪರ್ವತಿಯುವರು ನೀರು ತರಲು, ಬಾದಾಮಿ ರಾಘೋಪಂತನನ್ನು ಬಿಡಿಸಿ, ತಂದ ನೀರಿನಿಂದ ಆಚಮನಮಾಡಿ ಸುತ್ತಲೆಲ್ಲಾ ನೀರು ಸಿಡಿಸುತ್ತ ನಡುವೆ ನಡುವೆ ಒಳಗಿನ ಬಾಗಿಲುಕಡೆಗೆ ಜೋರಾಗಿ ಚಿಮುಕಿಸುವನು. ಆ ನೀರು ಚಿಮುಕಿಸಿದಾಗೆಲ್ಲಾ ಒಳಗಿನ ಆರ್ಭಟ ಹೆಚ್ಚಾಗುವದು)

ಬಾದಾಮಿ :—(ಮಂತ್ರಕ್ರಿಯೆ ತಡೆದು) ರಾಘೋಪಂತರ, ನಿಮ್ಮ ಹಳೇ ಮಚ್ಛಿ ಅವs ಏನು? ತರ್ರಿ. ಈ ಹೆಣ್ಣದೆವ್ವಕ್ಕ ಮಚ್ಛೀ ಏಟs ಮಂತ್ರ.

ರಾಘೋಪಂತ :—ಅಲ್ಲಿ, ಪಡಸಾಲೀ ಬಾಗಲಸಂದ್ಯಾಗ ಅವs. ('ನಾ ತರ್ತೀನಿ' ಅನ್ನುತ್ತ ಪರ್ವತಿ ಅತ್ತ ಹೋಗುವನು)ಆದ್ರ ಬಾದಾಮೀ, ನನ್ನ ಮಚ್ಛೀಲೆ ಬ್ಯಾಡ್ರೀ, ಅದರ ಸಂಪರ್ಕದಿಂದ ನನಗ ಬಡಿದೀತು ದೆವ್ವಾ. ಮೇಲಾಗಿ ಅವು ಖಾಸ ಪುಣೇದ ಮಚ್ಛಿ. ಮೂರು ವರ್ಷತ್ತೊಟ್ಟು ಹಾಕ್ತೇನಿ. ಹೊಡತಾ ತಡೀದೇ ಹರದಾವು!

ಪರ್ವತಿ :—(ಮಚ್ಛೀ ತಂದಿಡುತ್ತ) ಅಲ್ರೀ ಬಾದಾಮೀ, ಹೆಣ್ಣದೇವ್ವಕ್ಕೆ ಮಚ್ಛೀ ಪೆಟ್ಟಾದರ, ದೆವ್ವದ ಗಂಡಗ....ಅಲ್ಲಲ್ಲಾ....ಗಂಡದೆವ್ವಕ್ಕ ಏನು ಮಂತ್ರ ?

ಬಾದಾಮಿ :—ಅಂಥಾ ಗಂಡ ದೆವ್ವಕ್ಕ ಹಂದೀ ನೈವೇದ್ಯನೇ ಸೈ; ಇರ್ಲಿ, ನೀವಿಲ್ಲೇ ಇರ್ರಿ. ನಾ ಒಂದ ಕೈ ನೋಡ್ತೀನಿ, ಆ ದೆವ್ವದ್ದು. (ಬಾದಾಮಿ ಮತ್ತೊಮ್ಮೆ ನೀರು ಚಿಮುಕಿಸುತ್ತ ದೆವ್ವದ ಕೂಗಾಟಕ್ಕಿಂತ ಜೋರಾಗಿ ಓಂ ಹ್ರಾಂ ಹ್ರೀಂ ಹ್ರೋಂ ಮಹಾಕಾಲಾಯನಮಃ ಓಂ ಹ್ರೂಂ ಹ್ರೀಂ ಮಹಾ ದುರ್ಗಾಯೈ ನಮಃ........ಎನ್ನುತ್ತ ಬಾಗಿಲಲ್ಲಿ ಪ್ರವೇಶಿಸುವನು. ಒಳಗೆ ಮಂತ್ರದ ಜೋರೂ ದೆವ್ವದ ಕೂಗಾಟವೂ ಕೇಳುವದು. ಸ್ವಲ್ಪ ಹೊತ್ತಿನ ಮೇಲೆ ಮೊಚ್ಚೆಯೇಟಿನ ಸಪ್ಪಳವೂ ಬಾದಾಮಿ

ಯವರ ಉಚ್ಚಾಟನೆಯು ಉಚ್ಚಸ್ವರವೂ ಹೆಚ್ಚುವುವು. ದೆವ್ವವು ಕೊನೆಗೆ ಸೋತಂತಾಗಿ "ನಾ ಹೋಗ್ತೇನಿ, ಆ ಮಂತ್ರಾ ಸಾಕುಮಾಡ್ರಿ; ಇನ್ನೆಂದೂ ಬರೂದುಲ್ಲ ಹೋಗ್ತೇನಿ; ಈ ಮನಿ ಬಿಟ್ಟ ಓಡಿ ಹೋಗ್ತೇನಿ; ಬಿಡ್ರಿ, ಬಿಡ್ರಿ; ಹೊಡಿಬ್ಯಾಡ್ರಿ" ಎನ್ನುತ್ತ ಚೀರುತ್ತಿರುವದು. ಒಂದೊಂದು ಹೊಡೆತಕ್ಕೆ ರಾಘೋಪಂತನ ಒಂದೊಂದು ನರವೇ ಹರಿದಂತಾಗುವುದು. ಕೊನೆಗೆ ಆತ ಸೋತು ತಲೆ ಹಿಡಿದು ಕುಸಿಬೀಳುವನು. ಪಾರ್ವತಿಯವರು ಆತನನ್ನು ಆಗಾಗ ಸಾವರಿಸುತ್ತಿರುವರು. ಅತ್ತ ಒಳಗಿನ ಹೊಡೆದಾಟ ಕೂಗಾಟ ಕಡಮೆಯಾಗುತ್ತ ಬರುವವು. ಸ್ವಲ್ಪ ಹೊತ್ತಿನ ಮೇಲೆ ಬಹಳ ದಣಿದಂತಾದರೂ ರಾವೇರಿದಂತೆ ಬಾದಾಮಿ, ಕೈಯಲ್ಲಿ ಒಂದು ಮೊಚ್ಚೇ ಹಿಡಿದುಕೊಂಡೇ ಬರುವನು.)

ಬಾದಾಮಿ :—ಹೋಗ್ಗದs ಏನ ಮಾಡ್ತsದ ಅದರಪ್ಪನ; (ಮೊಚ್ಚೆ ಒಗೆದು) ಪಾರ್ವತೀ, ದೆವ್ವದ ಉಚ್ಚಾಟನಾ ಪೂರಾ ಆತು. ರಾಘೋಪಂತರಿಗೆ ನಿದ್ದೆ ಹತ್ತಿತೇನು, ಎಬ್ಬಿಸಿರಿ. (ಪಾರ್ವತಿ ಆತನನ್ನು ಹಿಡಿದೆತ್ತುವನು. ಆತ ಏಳಲಾರದಷ್ಟು ಸೋತು, ಸತ್ತಂತೇ ಆಗಿದ್ದಾನೆ.) ರಾಘೋಪಂತರ, ದೆವ್ವದ ಉಚ್ಚಾಟನಾ ಆಥಾಂಗಾತು. ಆವರ ಒಂದು ಕರಾರು ಅದs ಏನಂತೀರಿ.

ರಾಘೋಪಂತ :—ಆಂ; ಆಂ; ಏನಂದಿರಿ;........ಕರಾರs........ಆಂ........

ಬಾದಾಮಿ :—ಹೌದು, ನಿಮ್ಮ ಮೊದ್ಲೇ ಹೆಣ್ತೀ....ಹೆಳ್ತಾಳ....ತನ್ನ ಎಷ್ಟ ಗೋಳಾಡಿಸಿದ್ರಿ ಅಷ್ಟು ತನ್ನ ಸವತಿಗೆ ಎಲ್ಲಾ ಸುಖಾ ನೀವು ಕೊಡಬೇಕಂತ, ದಿನಾ ಪಂಚಪಕ್ವಾನ್ನದೂಟ; ಅಮಾಸಿಗೊಂದು ಹೊಸಾ ಸೀರಿ ಖಣಾ; ಬೇಡಿದಷ್ಟು ವಸ್ತಾ ಎಲ್ಲಾ ಕೊಟ್ಟು ದಿನಾ ಒಬ್ಬ ಮುತ್ತೈದಿಗೆ ಬೆಳ್ಳೀ ಬಾಗಣಾ ಕೊಡಬೇಕಂತೆ. ಏನಂತಂತೀರಿ? ಮತ್ತ ವಾರಕ್ಕೊಮ್ಮೆ ಕರಿಗಡಬೂ ಆಗ್ಬೇಕಂತ!

ರಾಘೋಪಂತ :—ಹೂಂ ಆಗಲಿ; ತಿಜೂರೀ ಕಿಲೀನs ಆಕೀ ಕೈಯಾಗ ಕೊಡ್ತೀನಿ; ಏನೆಲ್ಲಾ ಮಾಡ್ಲೀ!

ಬಾದಾಮಿ :—ಹಾಂಗಾದ್ರೇನು! ಒಂದು ನಿಮಿಷದಾಗ ಓಡ್ಸತೇನಿ ಆ ದೆವ್ವಾನ; (ಮತ್ತೆ ಒಳಗೆ ಹೋಗುವನು; ಮಂತ್ರ, ಹೊಡೆತ, ಕೂಗಾಟವ ಜೋರೂ ಹೆಚ್ಚುವುದು: ರಾಘೋಪಂತನ ಹೆದರಿಕೆ ಹೆಚ್ಚುವುದು.)

ಪಾರ್ವತಿ :—ಅಷ್ಟ್ಯಾಕ ಗಡಬಡಿಸ್ತೀರಿ; ಪಂತರ! ಸ್ವಲ್ಪ ತಾಳ್ರಿ.

ರಾಘೋಪಂತ :—ಇಲ್ಲ್ರಿ; ಆ ಹೊಡತಾ ಹ್ಯಾಂಗ ತಾಳ್ರಿ, ನನಗೊಂದು ಸ್ವಲ್ಪ ಹೊರಗ ಕಳಿಸ್ರಿ, ನನ್ನ ಸಂಗ್ತೀಲೆ ಬರ್ರಿ ನೀವು, ಒಂದಕ್ಕ ಹೋಗಬೇಕಾಗೇದ.

(ಪರ್ವತಿ ಅವನ ರಟ್ಟೆಯನ್ನು ಹಿಡಿದೆತ್ತುವನು; ಆತ ಅರ್ಧವೇ ಎದ್ದು ಹಾಗೇ ಕುಂಟು ನಡೆಯುತ್ತ ಹೊರಬದಿಗೆ ಸಾಗುವನು. ಹೋಗಹೋಗುತ್ತ "ಆ ದೆವ್ವ ಪೂರ್ಟಾ ಪೂರಾ ಹೋದಮ್ಯಾಲ ನನ್ನ ಕರೀರಿ; ಅಲ್ಲೇ ಹೊರಗ ಕಟ್ಟೇಮ್ಯಾಲೆ ಕೂತಿರ್ತೇನಿ" ಎಂದು ಹೇಳಿ ಹೋಗುವನು. ಆತ ಪೂರಾ ಹೊರಗೆ ಹೋಗುವ ವರೆಗೆ ತಡೆದು ಆಮೇಲೆ ತಟ್ಟನೆ ಹೋಗಿ ಬಾದಾಮಿಯನ್ನು ಕೈತಟ್ಟಿ ಕರೆಯುವನು. ಬಾದಾಮಿಯು ಓಡಿ ಬರಲು ಇಬ್ಬರೂ ಸಂಚಿನಂತೆ ಮುಂದಿನ ಏರ್ಪಾಡಿಗೆ ತೊಡಗುವರು.)

ಬಾದಾಮಿ :—(ಕಳ್ಳದನಿಯಲ್ಲಿ) ಆ ಕರೇ ರೇಶ್ಮಿ ದಾರಾ, ನಿಮ್ಮ ಖಿಡಕಿಯೊಳಗಿಂದ ಹಾಸಿ ತಂದದ್ದರ ಚಂಗು ಎಲ್ಲೆದರೀ!

ಪರ್ವತಿ :—ಇಕಾ ಇಲ್ಲೇ ಅದರೀ, ಈ ಬಾಗಿಲ ಹತ್ತರ.

ಬಾದಾಮಿ :—ಅದನ್ನ ಆ ಬಾಗಿಲ ಚಿಲಕಕ್ಕ ಕಟ್ಟರಿ. ಮತ್ತ ಆ ವಾಯುರದ ತುಂಡು?

ಪರ್ವತಿ :—(ದಾರ ಕಟ್ಟುತ್ತ) ಚೀಲದೊಳಗ ಅದs ನೋಡ್ರಿ; ಮತ್ತ ಆ ರಬ್ಬರಿನ ಗಮ್ ಬೂಟೂ ಅದರೊಳಗs ಅವs.

ಬಾದಾಮಿ :—ಇಕ್ಕೊತ್ತಗೊಳ್ರಿ ವಾಯುರದ ತುಂಡು, ಇದನ್ನ ಆ ಇಲೆಕ್ಟ್ರಿಕ್ ಬಟನ್ನಕ್ಕ ತಳಕ ಹಾಕ್ರಿ. (ಅದನ್ನಾತನಿಗೆ ಕೊಟ್ಟು) ನಾ ಈ ಬೂಟು ನಡಸೋ ಹಂಚಿಕೀ ಮಾಡ್ತೇನಿ. ಆ ಪುಲ್ಲೀಜು ಮತ್ತ ರಿಂಗ್ಸು ಎಲ್ಲಿ ಕಟ್ಟ್ಯಾರಂದ್ರೀ?

ಪರ್ವತಿ :—ಅಕಾ ಆ ಜಂತಿಗೆ ಪುಲ್ಲೀಜು, ಇತ್ತಲಾಗಿನ ಜಂತಿಗೆ ರಿಂಗ್ಸು ಹುರಿಹಾಯ್ಸಿ ತಯಾರೇ ಅದ, ನೀವು ಬರಾಬ್ಬರಿ ಹಂಚಿಕಿ ಮ್ಯಾಲೆ ಬೂಟಿಗೆ ಹುರಿ ತೊಡಕಿಸಿ ಇಡ್ರಿ. ಆ ದೊಡ್ಡ ಪುಲ್ಲಿ ಒಣಹಾಕೊ ಕೋಲಿನ ಗುಂಟ ನೆಟ್ಟಗ ಸರೀತದೋ ಇಲ್ಲೋ ನೋಡ್ರಿ. ಅಷ್ಟ ಮಾಡಿದ್ರ ಎಲ್ಲಾ ಆತು.

(ನಂತರ ಇಬ್ಬರೂ ಕೆಲಹೊತ್ತು ಆ ಈ ತಯಾರಿಯಲ್ಲಿ ತೊಡಗಿ ಎಲ್ಲವೂ ಸಜ್ಜಾದುದನ್ನು ನೋಡಿ ಸಂತೋಷಗೊಳ್ಳುವರು.)

ಪರ್ವತಿ :—ಅಂತೂ ಎಲ್ಲಾ ಠೀಕ ಆತಿಲ್ರಿ! ನಾ ಆ ಮುದುಕನ್ನ ಕರ ಕೊಂಡ ಬರ್ಲ್ಯಾ!

ಬಾದಾಮಿ :—ಹೂಂ, ಹೋಗ್ರಿ, ಕರಕೊಂಡು ಬರ್ರಿ. ಆದ್ರ....ಆ ಫಾಸ್ಫರಸ್‌ದ ತುಣುಕು ರಾಳದ ಪುಡೀ ಅಷ್ಟು ಮರ್ತೆವಲ್ಲಾ, ಹಾಂ, ಇಲ್ಲಿ ಕೊಡ್ರಿ, (ಪರ್ವತಿ ಚೀಲದಿಂದ ಒಂದು ನೀರಿನ ತಂಬಿಗೆ ಒಂದು ಕಾಗದ ಪುಡಿಕೆ ಕೊಡುವನು, ಬಾದಾಮಿ ತಂಬಿಗೆಯೊಳಗಿಂದ ತುಣುಕು ತೆಗೆದು ಕೊಂಡು) ಈ ಫಾಸ್ಫರಸ ನೆಟ್ಟಗ ತೊಯ್ದಾವಿಲ್ಲೋ ಮತ್ತ; ಸರಿ ಏನಡ್ಡಿಯಿಲ್ಲ. ಇಕಾ ನೆಲದ ಮ್ಯಾಲ ಅಲ್ಲಿಯೊಂದು ಇಲ್ಲಿಯೊಂದು ತುಣುಕು ಇಟ್ಟು ಸುತ್ತಲು ರಾಳದ ಪುಡಿ ಉದುರಿಸಿ ಬಿಡೋಣ, (ಇಬ್ಬರೂ ಹಾಗೆ ಮಾಡುವರು) ನಡೀರಿನ್ನ; ಈ ಫಾಸ್ಫರಸ್ ಒಣ ಗೋದರೊಳಗs ಮುದಕನ ಮೂರಾಬಟ್ಟೆಯಾಗಬೇಕು; ಚಿಲಕ ಅಗ ಳಾಡ್ಸೋದು ಇಲಕ್ಟ್ರಿಕ್ ಬಟನ್ ಒತ್ತೋದೂ ನಿಮ್ಮ ಕೆಲಸಾ, ಬೂಟು ನಡಸೊದು ನನ್ನ ಕೆಲಸ, ತಿಳೀತಿಲ್ಲೋ ಹೋಗ್ರಿ, ಮುದುಕನ್ನ ಕರ ಕೊಂಡು ಬರ್ರಿ. (ಪರ್ವತಿ ಹೊರಗೆ ಹೋಗುವನು; ಬಾದಾಮಿ ಒಳಗೆ ಹೋಗುವನು; ಮರುನಿಮಿಷದಲ್ಲಿ ಪರ್ವತಿ ಮುದುಕನನ್ನು ಕರೆದುಕೊಂಡು ಬರುವನು. ನಂತರ ಬಾದಾಮಿಯೂ ಒಳಗಿಂದ ಬರುವನು.)

ಪರ್ವತಿ :—ರಾಘೋಪಂತರಿಗೆ ಅಷ್ಟು ಆಶ್ವಾಸನ ಕೊಡ್ರಿಪಾ ಬಾದಾಮಿ! ಅವರು ಪಾಪ ಭಾಳ ಗಾಬ್ರಿ ಆಗ್ಯಾರ.

ಬಾದಾಮಿ :—ಬರ್ರಿ, ಬರ್ರಿ, ಪಂತರ ಈಗೇನು ಹರಕತ್ತಿಲ್ಲಾ. ದೆವ್ವಾ ಎಲ್ಲಾ ಓಡಿಹೋತು. ನಾಕೂ ಕಡೆ ಮಂತ್ರಬಂಧನ ಮಾಡಿಬಿಟ್ಟೇನಿ; ಇನ್ನೇನು ಆರಾಮಿರ್ರಿ. ಅಂ. ನೊಡ್ರಿ, ಮಧ್ಯರಾತ್ರಿ ಮೀರಿತು. ದೇವಸಂಚಾರದ ಹೊತ್ತು ಇನ್ನಮ್ಯಾಲ; ಗಡದ್ದ ನಿದ್ದಿಮಾಡ್ರಿ.

ರಾಘೋಪಂತ:—ಇನ್ನೇನ್ ನಿದ್ದಿ ಬಂದೀತ್ರಿ. ಆದರ ಆ ದೆವ್ವ ಖರೇ ಅಂದ್ರೂ ಹೋತಂತೀರಾ? ಇನ್ನೆಂದೂ ಬರಲಿಕ್ಕಿಲ್ಲ ಹೌದಲ್ಲೋ? ಪುಣ್ಯಾ ಕಟ್ಟಿಕೊಂಡ್ರಿ ಬಿಡ್ರಿ. ಇದೇ ವರ್ಷ ಹೊಸದಾಗಿ ಈ ಬಂಗ್ಲೆ ಕಟ್ಸೇನಿ, ಓಂ ಬರಲಿಲ್ಲೆನೋ ಅಂದೆ. ಮೊನ್ನೆ ನಮ್ಮ ಪರ್ವತಿಯವರ ಕುಟುಂಬದ

ನ್ಯೆವ್ಯಾಲೆ ಅದು ಬಂದಿತ್ತಲ್ಲಾ ಅಂದಿನಿಂದ ಬ್ಯಾರೇ ಬಾಡಗೀ ದಾರ್ರೆಲ್ಲಾ ಮನೀ ಬಿಡ್ತೀವಿ ಅಂತ ನೋಟೀಸು ಕೊಟ್ಟಾರ್ರಿ. ಮತ್ತ ಕಂಪೌಂಡಿನ ಗ್ವಾಡೀವ್ಯಾಲೆ ಎಲ್ಲಾ 'ದೆವ್ವಿನ ಮನೆ' 'ದೆವ್ವಿನ ಮನೇ' ಅಂತ ಯಾರೋ ಬರದಾರ ಬ್ಯಾರೇ; ಏನ ಮಾಡಬೇಕು. ನೀವಿದ್ರಿ ಅಂತ ಛಲೋ ಆತು.

ಪರ್ವತಿ :—ಆತಲ್ಲ; ಇನ್ನ ಮಲಕೋಳ್ರಿ.

ರಾಘೋಪಂತ :—ಅಲ್ರೀ; ಮತ್ತ, ನನ್ನ ಹೆಣ್ತೀ...........?

ಬಾದಾಮಿ :—ಪಾಪ ಆ ಪ್ರಾಣಿ, ದೆವ್ವದ್ದಸಿಂದ ಹೊಡಿಸಿಗೊಂಡು ಹಣ್ಣುಣ್ಣ ಆಗ್ಯಾಳಂತ, ನಮ್ಮ ತಂಗೀ ತನ್ನ ಜೋಡಿಗೇ ಕರಕೊಂಡು ಹೋಗ್ಯಾಳ. ಮುಪ್ಪಿನ್ನಿದ್ವಸದಾಗ ಇವತ್ತೊಂದು ರಾತ್ರಿ ಆದರೂ ವಾನಪ್ರಸ್ಥಾಶ್ರಮ ತಗೊಳ್ರಿ.

ರಾಘೋಪಂತ :—ಅದಕಲ್ರೀ; ಜೋಡಿಗೇಂತಂದೆ; ಹಾಂಗಾರ ನೀವೂ ಇಲ್ಲೆ ಮಲಕೊಂಡು ಬಿಡ್ರಿ; ಬ್ಯಾರೆ ಎರಡು ಪಲ್ಲಂಗ ಹಾಕಿ ಕೊಡ್ತೀನಿ.

ಬಾದಾಮಿ :—ಛೇ. ಛೇ. ಛೇ; ನೀವೇನು ಹೆದ್ರಬ್ಯಾಡ್ರಿ ಮಲಕೋಳ್ರಿ ನಾವು ಇಲ್ಲೇ ಮಗ್ಗುಲ ಕೋಣೆಯಲ್ಲೇ ಇರ್ತೇವಿ. ನೀವು ಎಲ್ಲಾ ಬಾಗಲಾ ಹಾಕ್ಕೊಂಡು ನಿಶ್ಚಿಂತರಾಗಿ ಮಲಗಿಕೊಳ್ರಿ. ಜರೂರ ಬಿದ್ರ ನಮ್ಮನ್ನು ಕರೀರಿ. ನಮುಗೂ ನಾಳೆ ಲಗೂ ಆಫೀಸಿಗೆ ಹೋಗೋದದ; ಒಂದು ಸ್ವಲ್ಪ ಮಗ್ಗಲೂರತೇವಿ.

ರಾಘೋಪಂತ :—ಹಂಗಾದ್ರ, ನಮ್ಮ 'ರಾಮಾ'ಗಷ್ಟು ಇಲ್ಲೇ ಹೊರಗ ಕಟ್ಟೀವ್ಯಾಲ ಮಲಕೊಳ್ಳಿಕ್ಕೆ ಹೇಳ್ರಿ. (ಆಗಲಿ ಎನ್ನುತ್ತ ಪರ್ವತಿ, ಬಾದಾಮಿ ಹೋಗುವರು. ರಂಗದ ಮೇಲೆ ಮೆಲ್ಲಗೆ ಮುಸುಕುಗತ್ತಲೆ ಅಡರುವುದು. ರಾಘೋಪಂತ, ಕಕ್ಕಾವಿಕ್ಕಿಯಾಗಿ ಅತ್ತಿತ್ತ ಓಡಾಡಿ, ಎಲ್ಲಾ ಬಾಗಿಲು ಬಂದುಮಾಡಿ ಬಂದು ತುಂಬ ಮುಸುಕು ಹಾಕಿಕೊಂಡು ತನ್ನ ಪಲ್ಲಂಗದ ಮೇಲೆ ಮಲಗುವನು. ಕೆಲಕಾಲ ಎಲ್ಲೆಲ್ಲೂ ನಿಸ್ತಬ್ಧತೆ. ಮುದುಕ ಮುಸುಕಿನಲ್ಲೇ ಗೊರಕೆ ಹೊಡೆವಂತೆ ನಟಿಸುವನು. ತನ್ನ ಸಪ್ಪಳಕ್ಕೆ ತಾನೇಹೆದರಿದಂತೆ ಒಮ್ಮೆ ತಟ್ಟನೆ ಮುಸುಕು ಬಿಗಿದುಕೊಳ್ಳುವನು. ಮತ್ತೆ ಸ್ತಬ್ಧತೆ; ಕತ್ತಲೆ ಹೆಚ್ಚುವುದು. ಅಷ್ಟರಲ್ಲಿ, ಒಂದು ಬಾಗಿಲದ

ಚಿಲಕದ ಸಪ್ಪಳ. ಮುದುಕ ಹಾರಿಬೀಳುವ; ಇನ್ನೊಂದು ಚಿಲಕದ ಸಪ್ಪಳ; ಮತ್ತೆ ಹಾರಿಬೀಳುವ. ಹೀಗೇ ಕೆಲಕಾಲ ನಡೆಯುವುದು; ಕೊನೆಗೆ ಗಟ್ಟಿಧೈರ್ಯಮಾಡಿ ಮುದುಕ ಜೋರಾಗಿ ಮುಸುಕು ಸುತ್ತಿಕೊಂಡು ಮಲಗುವನು. ಅಷ್ಟರಲ್ಲಿ ಇಲೆಕ್ಟ್ರಿಕ್ ದೀಪ ತಾನೇ ಹತ್ತುವದು. ಮುಸುಕು ತೆರೆದು ನೋಡುತ್ತಾನೆ; ಯಾರೂ ಇಲ್ಲ; ದೀಪ ತಾನೇ ಆರುವದು. ಇದು ಮೂರು ನಾಲ್ಕು ಸಲ ಆಗುವದು. ಕೂಗಾಡಬೇಕೆಂದು ಬಾಯಿ ತೆರೆದರೂ ಶಬ್ದ ಹೊರಡುವದಿಲ್ಲ. ಕೊನೆಗೆ ಮಲಗುವುದೇ ಬೇಡವೆಂದು, ಮುಸುಕು ಮೈಯೆಲ್ಲಾ ಸುತ್ತಿಕೊಂಡು, ಪಿಳಿಪಿಳಿ ಕಣ್ಣುಬಿಡುತ್ತ ಸ್ವಲ್ಪ ಧೈರ್ಯ ತಂದುಕೊಂಡು ಕೂಡುವನು. ಸ್ವಲ್ಪ ಹೊತ್ತು ಕೂಡುವುದರಲ್ಲೇ ಎರಡು ಗಮ್ ಬೂಟುಗಳು ತಾವೇ ಅತ್ತಿಂದಿತ್ತ ಅಡ್ಡಾಡಿ ಹೋಗುವವು. ಅದರಿಂದಂತೂ ಮುದುಕನು ಗಾಬರಿಗೆಟ್ಟು ಕುಣಿದಾಡುವ. ಅಷ್ಟರಲ್ಲಿ ಹೊರಬಾಗಿಲು ತೆಗೆದ ಶಬ್ದ. ನಿಮಿಷಾಂತರದಲ್ಲಿ ಒಂದು ಅಕರಾಳ ವಿಕರಾಳವಾದ, ಹೊಟ್ಟೆಯಲ್ಲಿ ತೆರೆದ ನಾಲಗೆಯ ಮುಖವಿದ್ದ, ಹಣೆಯಲ್ಲಿ ಉರಿಯುವ ಕಣ್ಣಿದ್ದ ರೂಪವು ಬಂದು ಆತನೆದುರಿಗೆ ಹಾದು ಆಚೆಗೆ ಹೋಗುವದು. ಅದನ್ನು ನೋಡಿ ಆತ "ಅಯ್ಯೊ ದೆವ್ವ" ಎಂದು ಚಿಟ್ಟನೆ ಚೀರಿ ಕಾಲೇಳದೆ ಹೌಹಾರಿ ಹಾಸಿಗೆಯಲ್ಲಿ ಕುಕ್ಕರಿಸುವನು. ಆತ ಮತ್ತೊಮ್ಮೆ ಕಣ್ಣೆತ್ತಿ ನೋಡುವ ಹೊತ್ತಿಗೆ, ಸುಮಾರು ೧೨ ಫೂಟು ಎತ್ತರವಾದ ಅಡಿಮುಡಿಯ ವರೆಗೆ ಬೆಳ್ಳಗಾದ ತಿರುವುಗಾಲಿನ ರೂಪವೊಂದು ಕೈಯಲ್ಲಿ ಒಂದು ಉದ್ದವಾದ ತ್ರಿಶೂಲ ಹಿಡಿದುಕೊಂಡು ಮತ್ತೊಂದು ಕಡೆಯಿಂದ ಬಂದು ಮೆಲ್ಲನೆ ಸರಿದು ಹೋಗುವದು. ಆಗ ಮುದುಕ ಕುಪ್ಪರಿಸಿಬಿದ್ದು ಬಾ-ಬಾ...ಬಾ... ಪರ್...ಪರ್...ಎಂದು ಅಸ್ಪಷ್ಟವಾಗಿ ಕೂಗಿಡುವನು. ಒಂದು ನಿಮಿಷ ಮೂರ್ಛೆ ಹೋದಂತೆ ಬಿದ್ದು ಮತ್ತೆ ಏಳುವಷ್ಟರಲ್ಲಿ ನೆಲದ ಮೇಲೆ ಅಲ್ಲಲ್ಲಿ ಉರಿಯೇಳುವದು. ಆಗಂತೂ ಇಲ್ಲದ ಕಕ್ಕಾವಿಕ್ಕಿಯಾಗಿ ಜೀವದಲ್ಲಿ ಜೀವ ನಿಲ್ಲದಂತಾದರೂ ಎಲ್ಲಿಂದಲೋ ಧೈರ್ಯ ತಂದುಕೊಂಡು ಮುದುಕ ಹುಚ್ಚೆದ್ದು ಕುಣಿಯುತ್ತ, ಕೂಗಾಡುವನು: "ಬಾ...ಬಾ......ಬಾ...... ಬಾದಾ--ದಾ--ಮೀ......; ಬರ್ರೀ-ಬ-ರ್-ರ್-ರೀ, ಪರ್‌ರ್...ಪರ್‌ರ್-- ವ--ತೀ, ಯಾರಾದರೂ...ಬ-ರ್-ರ್-ರೀ..." ಆತನ ಆರ್ಭಟೆ ಕೇಳಿ ಬಾದಾಮಿ ಮತ್ತು ಪರ್ವತಿ ಓಡಿ ಬರುವರು. ಅಷ್ಟರಲ್ಲಿ ಉರಿ ಆರಿರುವದು.)

ಬಾದಾಮಿ :—ಏನಾತ್ರೀ ಪಂತರಃ ಮತ್ತೇನಾತೂ; ನಿಮ್ಮ ಹೆಣ್ತಿನ್ನಂತೂ ನಾವು ಪರ್ವತೀಯವರ ಮನ್ಯಾಗ ಮಲಗ್ಸೀವಿ. ಮತ್ತೇನು ನಿಮ್ಮ ಮೈಮ್ಯಾಲೇ ಬಂತೇನು ದೆವ್ವ?

ರಾಘೋಪಂತ :—ಅದೊಂದು ದೆವ್ವ ಯಾಕ್ರೀ; ಮನಿತುಂಬೆಲ್ಲಾ ದೆವ್ವನೇ ಆಗ್ಯಾವಃ. ನನಗೀ ಮನೀನೇ ಬ್ಯಾಡಾ; ನಾ ಹೋಗ್ತೀನ್ರಿ, ಇನ್ನಿಲ್ಲಿ ಇರೋದಿಲ್ಲ. ನನ್ನ ಕರಕೊಂಡು ಹೋಗ್ರಿ.

ಪರ್ವತಿ :—ಏನಾಯ್ತೇನು ಹೇಳ್ರಿ, ಅಂಥಾದ್ದು.

ಬಾದಾಮಿ :—ನೀವು ಸುಮ್ಮನ ಗಾಬರಿ ಆಗೀರಿ ಪಂತರ.

ರಾಘೋಪಂತ :—ಇಲ್ರಿ ಬಾದಾಮಿ. ಈ ಮನಿಯೊಳಗೆಲ್ಲಾ ದೆವ್ವನಃ ತುಂಬ್ಯಾವ್ರಿ. ನೀವು ಹೋದಾಗಿನ್ನೊತ್ತಟ್ಟು ಥರಥರದ್ದ ಆಟಾ ಹುಡ್ಯಾವ್ರಿಸಾ. ಒಂದು ಕ್ಷಣಾಯೇನು ಕಣ್ಣಿಗೆ ಕಣ್ ಹತ್ತಿಲ್ಲಾ. ಜೀವಾ ಅನ್ನೋದು ನೆತ್ತೀ ಅಂಚಿಗೆ ಬಂದು ತಾಕಿತ್ತು. ಕೂಗೇನೂ ಅಂದ್ರ ಬಾಯೇ ಏಳಲಿಲ್ಲ. ಕಡೀಕೆ ಹ್ಯಾಗೋ ಒಮ್ಮೆ ಕಿತ್ತಿ ಚೀರಿದೆ. ನೀವು ಅಡ್ರಾಸಿ ಬಂದಿರಿ.

ಬಾದಾಮಿ :—ನೀವು ನರಾ ಹರಿಯೋ ಹಾಂಗ ಚೀರಿದ್ದೊಂದೇ ನಿಜ, ಬಾಕಿದೆಲ್ಲಾ ಸುಳ್ಳು.

ರಾಘೋಪಂತ :—ಅದ್ಯಾಕ್ರೀ, ಬಾಗಿಲ ಚಿಲಕೆಲ್ಲಾ ತಾವಃ ತಗೀತಿದ್ವು, ತಾವಃ ಹಾಕತಿದ್ವು, ಲಾಯಿಟು ತಾನಃ ಆರ್ತಿತ್ತು. ಧಡಾಯಿಲ್ಲದೆ ಬರೇ ಕಾಲಷ್ಟೇ ಬೂಟು ಹಾಕ್ಕೊಂಡು ನಡದಾಡ್ತಿದ್ವು, ಆಮ್ಯಾಲೆ, ಉರಿ, ಎಲ್ಲಿ ನೋಡಿದ್ರು ಉರಿ, ಕೊಳ್ಳೀ ದೆವ್ವರೀ, ಒಂದಂತೂ ನೆಲದಿಂದ ಮುಗಿಲ್ತನಕಾ ಉದ್ದಾ, ಇನ್ನೊಂದರ ಮಾರೆಲ್ಲಾ ಬೆಂಕೀದು.... (ಒಮ್ಮೆಲೆ ಗಾಬರಿಯಿಂದ ಕುಸಿಬೀಳುತ್ತ ಇಬ್ಬರ ಹಿಂದಡಗಿಕೊಂಡು ಚೀರುವನು· ......) ನೋಡ್ರಿ, ಅಲ್ಲಿ ಅಲ್ಲಿ ನೊಡ್ರಿ.... ಮತ್ತ ಬಂದವು........ ಎರಡು........ ಅಲ್ಲರಿ, ಇತ್ಲಾಗ........ಹೂಂ........ಅಲ್ಲೇ.... ನೋಡ್ರಿ ....ನೋಡ್ರಿ........ಬಂದವು........ಮುನ್ಯಾಗ ಬಂದವ್ರಿ.... ನಾವೊಲ್ಲೆ ನಾ ಹೋಗ್ತಿನಿ ಈ ಮನೀ ಬಿಟ್ಟು, ನನ್ನ ಉಳಿಸಿರೆಪಾ........ ಉಳಿಸಿರಿ ಅಯ್ಯ್ಯೊಯ್ಯೋ........ (ನಡುಗುವನು)

(ಇಷ್ಟರಲ್ಲಿ ಮೊದಲಿನ ಎರಡೂ ರೂಪಗಳು ಒಂದರ ಹಿಂದೊಂದು ಹೊಂದಿಕೊಂಡು ಮೆಲ್ಲಗೆ ಒಂದು ಕಡೆಯಿಂದ ಬಂದು ಇನ್ನೊಂದು ಕಡೆಗೆ ಸರಿದುಹೋಗುವವು. ಪರ್ವತಿಯೂ ತುಸು ಗಾಬರಿಯಾಗುವನು.)

ಬಾದಾಮಿ :—ಎಲ್ಲ್ರೀ ಪಂತರಅ, ಏನಿಲ್ಲಾ, ಎಲ್ಲಾ ನಿಮ್ಮ ಭ್ರಮಾ! ನನ ಗಂತೂ ಏನೂ ಕಾಣ್ಸೂದುಲ್ಲಾ. ನೀವು ಸುಳ್ಳ ಹೆದರಿಕೊಂಡೀರಿ.

ರಾಘೋಪಂತ :—ಅದ್ಯಾಕ ನೋಡ್ರಿ, ಅಗದೀ ನಡುವೇ ಬಂದವು,....—ಹಾ....ಹಾ....ಹಾ, ನೋಡ್ರಿ....ಅತ್ಲಾಗ ಅಡಿಗೀ ಮನೀಕಡೆ ಹೊರಟವು....ನಿಮಗ ಕಾಣ್ಸುದುಲ್ಲಅ, ಒಂದು ನೆಲದಿಂದ ಜಂತೀ ತನಕಾ ಬೆಳದಅದ, ಇನ್ನೊಂದು ಬೆಂಕೀ ಕಣ್ಣಾಲೆ ನನ್ನ ಕಡೆಗೆ ನೋಡತಅದ, ನೋಡ್ರಿ ಅದರ ಕಾಲು ಹ್ಯಾಂಗ ತಿರುವು ಮುರುವು ಅವಅ, ಕಾಣ್ಸ್ತಿಲ್ಲೊ !

ಬಾದಾಮಿ :—ಛೇ ಬಿಡ್ರಿ, ಎಲ್ಲೀ ಕಾಣಸೋದು? ನಿಮಗೇನೋ ಕಣ್ಕಟ್ಟು ಆಗಿರಬೇಕು. ದೆವ್ವಂತ ದೆವ್ವ. ಎಲ್ಲಾ ಸುಳ್ಳಅ! ದೆವ್ವ ಇದ್ರ, ನಿಮ್ಮ ತಲಿಯಾಗ ಇದ್ದೀತು ಅಷ್ಟೇ!

ರಾಘೋಪಂತ :—ನೀವೆಂಥವ್ರಿ ಬಾದಾಮಿ, ಧಡಧಡೀತ ಕಣ್ಣಿದುರಿಗೆ ಹಾಯ್ದು ಹೋತು. ನಿಮಗ್ಯಾಣಿಸಿತಿಲ್ರೆಪಾ ಪರ್ವತಿ,

ಪರ್ವತಿ :—ಹೌದ್........ಹೌದ್........ಅಲ್........ಅಲ್........

ಬಾದಾಮಿ :—(ನಡುವೇ ಬಾಯಿಹಾಕಿ, ಅದುಮುವಂತೆ) ಪರ್ವತಿ, ನಾನಿಮ್ಮ ಬೀಗಾ ಅಂದೆ! (ಪರ್ವತಿ ಅರ್ಥಕ್ಕೇ ಸುಮ್ಮನಾಗುವನು)

ರಾಘೋಪಂತ :—ಬ್ಯಾಡ್ರಿ, ಬಾದಾಮಿ; ಸಾಕಿನ್ನ ;ನಾಯಿಲ್ಲೆ ಒಲ್ಲೇವೊಲ್ಲೆ! ನನ್ನ ಪರ್ವತಿಯವರ ಕೋಣೆಗೆ ಕರಕೊಂಡು ಹೋಗ್ರಿ; ಅಲ್ಲೇ ಪರ್ವತಿಯವರ ಕುಟುಂಬದ ಜೋಡಿಗೆ ನನ್ನ ಹೆಣ್ತೀನೂ ಇದ್ದಾಳಲ್ಲಾ; ಅಲ್ಲೆ ಬೆಳತನಕಾ ಹ್ಯಾಂಗಾದರೂ ಹೊತ್ತು ಕಳೆದು, ಬೆಳಗು ಮುಂಜಾನೆ ನಮ್ಮ ಊರಾಗಿನ ಮನಿಗೆ ನಾವಿಬ್ರೂ ಗಂಡಾಹೆಣ್ತಿ ಹೋಗಿಬಿಡತೇವಿ. ಹ್ಯಾಂಗೂ ದೆವ್ವ ನಿಮ್ಮ ಹತ್ರ ಹಾಯೋದಿಲ್ಲ, ಬೇಕಾದ್ರ ನೀವಅ ಈ ಮನಿಯಾಗ ವರ್ಷೊಪ್ಪತ್ತು ಇರ್ರಿ. ಆದ್ರ ಆಜೂಬಾಜೂದವರ ಬಾಡಗಿ ಕೈಬಿಡದ್ಹಂಗ ಮಾಡ್ರಿ ಹ್ಯಾಂಗಾರ. ನೀವೇನು ಕೊಡೋದು ಬ್ಯಾಡಾ ಬಿಡೋದು ಬ್ಯಾಡಾಅ.

ಪರ್ವತಿ :—ಹಾಂಗಾರ ಲಥಾಯಿ ಮುಗಿಯೋತನಕಾ ಬಾದಾಮಿಯವರು ಈ ಮನಿಯಾಗ ಇರ್ಲಿಕ್ಕೆ ಏನ್ಹರಕತ್ತು ಅದಅ.

ರಾಘೋಪಂತ :—ಅವರು ಇರೋತನಕಾ ಈ ಮನೀ ಅವರಿಗೇ ದತ್ತಕ ಅನ್ರಿ ಬೇಕಾದ್ರ. ಎಡಬಲದ ಬಾಡಗಿ ಅಷ್ಟು ಮುಣುಗದಿದ್ರ ಸಾಕು. ನಡೀರಿ ಪರ್ವತಿ ನನ್ನ ನಿಮ್ಮ ಕೋಣೆಗೆ ಕರಕೊಂಡು ಹೋಗ್ರಿ. ನಾ ಇಲ್ಲೇ ಇದ್ರ ನಾಳಿನ ಬೆಳಕು ಏನು ಕಾಣಲಿಕ್ಕಿಲ್ಲ.

ಬಾದಾಮಿ :—ಹೌದ್ರಿ ಪರ್ವತಿ ಇವರನ್ನಷ್ಟು ಅವರ ಹೆಣ್ತಿ ಹತ್ತರ ಕಳಿಸಿ ಬರ್ರಿ, ಅಂತೂ ನಮಗs ಈ ಮನೀಗೇ ಗಂಟುಬಿದ್ಹಾಂಗಾತು. ಆದ್ರ ಮತ್ತ ಲಗೂ ಬರ್ರಿ, ನೀವೂ ಮತ್ತತ್ತಲಾಗs ಈ ಮುದುಕನ್ಹಾಂಗ ಜೋಡೀ ನೋಡಿ ಮಗ್ಗಲೂರೀರಿ....ಆಂ! (ಅವರಿಬ್ಬರೂ ಹೋಗುವರು) ....ಅಂತೂ ಯುಕ್ತಿ ಪೂರಾ ಕೈಗೂಡಿದ್ಹಾಂಗಾತು. ನಾಳೆ ಬೆಳಗ್ಗೆ ಈ ಮುದುಕಾ ಮನೀ ಬಿಟ್ಟು ಗಚ್ಚಹೊಡೆಸುದ್ರಾಗs ನಾನು ಒಂದು ತಂತೀ ಹೊಡದು ಮನೀಯವರ್ನ ತಂತಿಯಿಂದನs ಕರ್ಸಿಗೋತೀನಿ. ಅಲ್ಲಾ, ಹೊಸದಾಗಿ ಶೋಭನಪ್ರಸ್ತಾ ಮಾಡಿಕೊಂಡದ್ದು ಹೆಣ್ತೀ ಸಂಗ್ತಿಲೋ ಏನೀ ಮಿಲಿಟರೀ ಖಾತೇದ ನೋಕ್ರೀ ಸಂಗ್ತೀಲೋ ಅಂತ ನನಗ ದಿಗಿಲು ಬಿದ್ದಿತ್ತು, ಓಣಿಓಣಿ ತಿರುಗಿ ಮನೀ ಸಿಗದ್ದಕ್ಕ. ನಾನು ನನ್ನ ಒತ್ತರದ್ದಸಿಂದ ಈ ಮುದುಕಗ ಗೋತೀ ಹೊಡಿಸಿದೆ, ಬರಾಬರಿ. ಆದ್ರ ಈಗಿನ್ದಿವ್ಸದಾಗ ಸಂಣ ಪಗಾರದ ಜನ ಸಂಣಾಗಿ ಸವೀಲಿಕ್ಕೆ ಹತ್ತ್ಯಾರ ದೇಶದ ತುಂಬ. ಬಡವರಂತೂ ಇದ್ದಲ್ಲೇ ಕರಗಲಿಕ್ಕೆ ಹತ್ತ್ಯಾರ. ತಲೆನೆರಳಿನ ಪೂರ್ತೆ ಒಂದು ಗೇಣು ಜಾಗಾ ಸಿಗದ್ಹಂಗ ಆಗೇದ, ಲಕ್ಷಾವಧಿ ಪರದೇಶೀ ಜನರಿಗೆ ಕೂಡಾ ಆಶ್ರಯ ಕೊಟ್ಟ ನಮ್ಮೀ ದೇಶದಾಗ. ಇಂಥಾದ್ದರಾಗ ಈ ದುಡ್ಡಿದ್ದ ದೆವ್ವಗಳು ಜನರ ಗೋಣು ಮುರಿತಾರ. ಇಂಥವರ್ನ ನೆಲಸಮಾ ಮಾಡೋ ಲಂಡತನಾನೂ ಒಂದು ಸತ್ಕಾರ್ಯನೇ ಆದೀತು. ಅಧರ್ಮದ ರಾಜ್ಯದಾಗ ಅಳತೆಗೆಟ್ಟು ಆಸ್ತಿಗಳ ಅಟ್ಟಾ ಅಡರಸೋ ಈ ಅನ್ಯಾಯದ ಅವತಾರಿಗಳನ್ನ ಅರಜೀವದಿಂದ ಹುಗಿಯೋ ಹೊತ್ತು ಬರೋದೇ ಒಂದು ಸತ್ಯಯುಗ ! ಹೊರಗಿನ ಕಾಟ ಕೋಟಿಗಟ್ಟಲೇ ಇರೋ ನಮ್ಮ ದೇಶಾದಾಗ ಇಂಥಾ ಆಸ್ತಿಪಿಶಾಚಿಗಳು ಕರುಳೊಳಗಿನ ಕೊಳ್ಳಿ ಇದ್ಹಾಂಗ ಹಾಂ....ಏ....ನಿಸ !....ಮುದುವಾ ಮುದುವಾ! ಹೆಣ್ತೀ ಹೊಟ್ಟೆಗೂ

ಹಾಕದ ನಿನ್ನ ಹೊಟ್ಟೇನೇ ಇನ್ನವ್ಯಾಲ ಹುರಪಳಿಸಿ ಹೋಗ್ತದ. ನಿನ್ನ ದುಡ್ಡು ನಿನ್ನ ದುಂದುಮಿಸಿ ಬಿಡ್ತದ, ಈ ದುಡ್ಡಿದ್ದವರ ಲಡ್ಡು ಹಿರಿಯೋ ದಿನಾ ಇನ್ನೇನು ಧೂರಿಲ್ಲಾ. (ಇಷ್ಟರಲ್ಲಿ ಪರ್ವತಿ ಗಡಿಬಿಡಿಯಿಂದ ಆದರೂ ಕಳ್ಳಹೆಜ್ಜೆಯಿಂದೋಡಿ ಬರುವನು)

ಪರ್ವತಿ :—ಬಾದಾಮಿ. ಅಂತೂ ನಿಮ್ಮ ಹಂಚಿಕೆ ಹೊಂದುಗೂಡಿತಲ್ಲಾ. ಆದ್ರ, ಅಲ್ಲರೀ ಬಾದಾಮಿ, ಆ ಮುದುಕಗ ಕಾಣಿಸಿದ ಆ ಎರಡೂ ಆಕಾರ ನನಗೂ ಕಂಡವು. ನಿಮಗೆ ಕಾಣಿಸಲಿಲ್ಲ? ಅಲ್ಲಾ, ದೆವ್ವದಾಟಾ ಹೂಡೂದರಾಗ ಮತ್ತ ನಿಜವಾಗಿಯೂ................

ಬಾದಾಮಿ :—ಯಾಕ್ರಿ, ಮತ್ತ ನೀವೂ ಗಾಬರಿಯಾದ್ರೇನು? ಆ ಮುದುಕನ ಮಂಕು ನಿಮಗೂ ಬಡೀತೇನು? .... ಅಲ್ಲಿ ನೋಡ್ರಿ ಆ ನಿಮ್ಮ ದೆವ್ವ ಬಂದವು. ಅವs ಹೌದಲ್ಲೊ? ಗುರ್ತು ಹತ್ತಿತೇ ಬರಾಬ್ಬರಿ. (ಆ ಆಕಾರಗಳು ಮತ್ತೆ ಮೆಲ್ಲನೆ ಸರಿದು ಬಂದು ಇವನೆದುರು ನಿಲ್ಲುವವು. ಒಳಗಿಂದ ಬಿಗಿಹಿಡಿದ ಪಿಸುನಗೆಯು ಕೇಳಬರುವದು) ಏ ಅಯ್ಯಂಗಾರ ದೆವ್ವಾ, ನಿನ್ನ ಘೊಂಗಡೀ ತಗೀ; ಏ ಕಾಮತ ದೆವ್ವಾ, ನಿನ್ನ ಗುಡ್ಡಾ ಇಳಿಸು. (ಕೂಡಲೇ ಎರಡು ಆಕಾರಗಳ ವೇಷದ ಗೌಸಣಿಕೆಗಳು ಕಳಚಿ ಬೀಳುವವು. ಅಯ್ಯಂಗಾರರ ಹೆಗಲ ಮೇಲೆ ಬೆನ್ನಿಗೆ ಬಿದುರು ಕಟ್ಟಿಕೊಂಡು ಮುಖದಿರುವಿ ನಿಂತ ಘೋಂಗಡೆಯವರು ಕಟ್ಟನ್ನು ಬಿಡಿಸಿಕೊಂಡು ಕೆಳಗೆ ಜಿಗಿಯುವರು. ಹಾಗೆಯೆ ಕಾಮತರ ಹೆಗಲ ಮೇಲೆ ಕುಳಿತ ಗುಳೆದಗುಡ್ಡ ಅವರೂ ಇಳಿಯುವರು)

ಪರ್ವತಿ :—ಓಹೋ ಈ ದೆವ್ವಗಳೇs. ಮಿ. ಬಾದಾಮಿ ನೀವು ನಮಗೂ ಫಸಗಿ ಹಾಕಿದ್ರಲ್ಲಾ. ಆ ಉದ್ದನ್ನ ಗೌಸಣಿಕೆ ಹೊಲಿಸಿದ್ದು ಯಾತಕ್ಕೊ ಅಂತ ಮಾಡಿದ್ದೆ.

ಬಾದಾಮಿ :—ಅಲ್ಲಾ, ಈ ಮನಿಯಂತೂ 'ಫಾರ್ ದಿ ಡ್ಯೂರೇಶನ್' ಆದ್ರೂ ದತ್ತಕ್ಕ ಸಿಕ್ಕಿತಿಲ್ಲೋ! ರಾಘೋಪಂತನ ಇವು ನಾಲ್ಕು ಖೋಲಿ, ಮೊದಲs ತೆರವಿದ್ದ ಆ ಮೂರು ಖೋಲಿ; ಅಂತೂ ಏಕ್ರಾಗ ನಿಮಗೂ ಒಂದು ಖೋಲಿ ಭಕ್ಷೀಸು, ಪರ್ವತಿ. ಆಗಲಿ, ಸಧ್ಯ ಎಲ್ಲರೂ ಮುದುಕನ ಮನೀ ಸರ್ಚ್ ಮಾಡ್ರಿ. ಸ್ಟೋ ಹುಡುಕರಿ. ರಾತ್ರೀ ಎರಡು ಹೊಡೀತು. ಚಹಾ ಆಗಲಿ ಒಂದನ್ನು. (ಅಯ್ಯಂಗಾರ ಕಡೆ ನೋಡಿ)

ಮತ್ತ ನಮ್ಮ ದಮ್ಮಯ್ಯಾ ಅವರ ದಸಿಂದ ಒಂದು ಸ್ಟ್ರಾಂಗ್ ಕಾಫೀ. ಆವ್ಯಾಲೆ ಬೆಳತನಕ ಇಸ್ಪೇಟು ಹಂಚಯೂಣಂತ;

ಎಲ್ಲರೂ :—ಬರಾಬ್ಬರಿ ಹಂಚಿಕಿ. (ಅಯ್ಯಂಗಾರರು:—ತುಂಬ ಶ್ಲಾಘ್ಯವಾದ ವಿಚಾರಾ.)

ಪರ್ವತಿ :—ರಂಗೂಬಾಯಿ ಮತ್ತ ನನ್ನ ಹೆಣ್ತಿ ಕೂಡಿ ಚಹಾ-ಕಾಫಿ ರೆಡಿ ಮಾಡಿಟ್ಟು ಹೋಗ್ಯಾರ. ನಿಂದರ್ರಿ, ಆ ಮುದುಕೇನು ರಂಗೂಬಾಯಿನ್ನ ಬಿಡೂದುಲ್ಲ; ನಾ ನನ್ನ ಹೆಣ್ತಿನ್ನರ ಕರಕೊಂಡು ಬರ್ತೀನಿ, ಚಹಾ ಪಾರ್ಟಿಗೆ.

ಬಾದಾಮಿ :—ಅಲ್ರೀ ನೀವ್ಯಾಕ ಆ ಮುದುಕನ ಸಂಗ್ತಿ ಮೇಲಾಟಕ್ಕ ನಿಲ್ಲತೀರಿ, ಅಂತೀನಿ. ನಾವೆಲ್ಲ ಇಲ್ಲೆ ಗಂಡಸಾಗಾದಾಗ ಲಂಡ ಬ್ರಹ್ಮಚಾರಿಗಳು ಇರೋವಾಗ ನಿಮ್ಮೊಬ್ಬರಿಗೇ ರತಿದೇವಿ ಒಲಿದರ ನಾವ್ಯಾಕ ಕೇಳೇವು. ನೀವs ಹೋಗಿರಿ, ಆ ಚಹಾ, ಕಿಟ್ಲಿ, ಕಪ್ಪು, ಬಸಿ, ಎಲ್ಲಾ ತಗೊಂಬರ್ರಿ. ನಮ್ಮ ನಾಟಕದ ಪಾತ್ರಗಳೆಲ್ಲ ದಣಿದು ಧಪ್ಪಟ ಆಗ್ಯಾವ.

ಪರ್ವತಿ :—(ಆತುರದಿಂದ) ಕಡೀಕೆ ಈ ನಮ್ಮ ನಾಟಕದ ಸುದ್ದೀನರs ಹೇಳಿ ಬರ್ತೀನ್ರಿ ಆಕೀಗೆ, ಯಾಕೊ ನನ್ನ ಹೊಟ್ಟ್ಯಾಗ ಹಿಡಿಸವಲ್ಲದು;

ಬಾದಾಮಿ :—ಮಿ. ಪರ್ವತೀ (ಗದ್ದರಿಸಿ) ನಾನೂ ನಿಮ್ಮ ಬೀಗ ಅಂದೆ!! ಆಂ!!

(ಪರ್ವತಿ ತಣ್ಣಗೆ ಬಾಯಿಮುಚ್ಚಿಕೊಳ್ಳುವನು. ತೆರೆ)

(ಮುಗಿಯಿತು)

ಟಿಪ್ಪಣಿ

ಅಯ್ಯಂಗಾರ, ಘೋಂಗಡೆಯವರಿಗೂ, ರೆಡ್ಡಿ ಹಾಗೂ ಗುಳೇದಗುಡ್ಡ ಅವರಿಗೂ ದೆವ್ವದ ವೇಷ ಹಾಕುವ ರೀತಿ:—

(೧) ಅಯ್ಯಂಗಾರರೂ ಘೋಂಗಡೆಯವರೂ ಎತ್ತರದ ಆಳತಿಯವರು ಇರಬೇಕು; ಅಯ್ಯಂಗಾರರ ಹೆಗಲ ಮೇಲೆ ಘೋಂಗಡೆ ಮೋರೆ ವಿರುದ್ಧ ದಿಕ್ಕಿಗಾಗುವಂತೆ ನಿಲ್ಲಬೇಕು. ಅಯ್ಯಂಗಾರರು ತಮ್ಮ ಕೈಯಲ್ಲೊಂದು ಗಟ್ಟಿಮುಟ್ಟಾದ ಬಡಿಗೆ ಎದೆಗವಚಿ ಎತ್ತಿ ಹಿಡಿಯಬೇಕು. ಘೋಂಗಡೆಯವರ ಬೆನ್ನಿಗಾಧಾರವಾಗುವಂತೆ ಬಿಗಿಯಬೇಕು. ಘೋಂಗಡೆಯವರ ಹೆಗಲಿನಿಂದ ಅಯ್ಯಂಗಾರರ ಮೊಳಕಾಲ ಕೆಳಗೆ ನಿಲುಕುವಂತೆ ಒಂದು ಬಿಳಿ ಬಟ್ಟೆಯ ಸಡಿಲುತೋಳಿನ ನಿಲುವಂಗಿ ಇಳಿಬಿಡಬೇಕು. ಘೋಂಗಡೆಯವರ ಮೋರೆಗೆ ತಲೆಬುರುಡೆಯಂತಹ ಮುಖ ಕಟ್ಟಬೇಕು. ಅವರ ಕೈಯಲ್ಲಿ ನಡೆಯುವಾಗ ಆಧಾರಕ್ಕೊಂದು ಉದ್ದವಾದ ತ್ರಿಶೂಲದಾಕಾರವುಳ್ಳ ದೊಡ್ಡ ಕೋಲನ್ನು ಕೊಡಬೇಕು. ಅಯ್ಯಂಗಾರರ ಕಾಲಿನ ಬೆರಳುಗಳೂ ಘೋಂಗಡೆಯವರ ಕೈಯ್ಯ ಬೆರಳುಗಳೂ ಆಳತೆಗಿಂತ ಬಹಳ ಉದ್ದವಾಗಿ ಜೋಲ ಬೀಳುವಂತೆ ಬಟ್ಟೆಯ ಬೆರಳುಗಳನ್ನು ಕಟ್ಟಬೇಕು. ಅಯ್ಯಂಗಾರರು ಯಾವಾಗಲೂ, ಘೋಂಗಡೆಯವರ ಮೋರೆ ಮುಂದಾಗುವಂತೆ ಅಂದರೆ ಸ್ವತಃ ಹಿಂಬರಿಕೆಯಾಗಿ ನಡೆಯಬೇಕು.

(೨) ಕಾಮತ ಅವರ ಹೆಗಲಮೇಲೆ, ಗುಳೇದಗುಡ್ಡರು ಕುಳಿತು ತಮ್ಮ ಕಾಲುಗಳನ್ನು ಕಾಮತ್ ಅವರ ಬಗಲಲ್ಲಿ ತೊಡಕಿಸಿ ಹಿಡಿಯಬೇಕು. ಮೇಲೆ ಕುಳಿತವರ ತಲೆಯಿಂದ ನಿಂತವರ ಕಾಲವರೆಗೆ ಇಡೀ ಮೈಯೆಲ್ಲ ಬಣ್ಣದ ಪಟ್ಟೆಯುಳ್ಳ ಬಟ್ಟೆಯಿಂದ ಮುಚ್ಚಿ ನಡುವೆ ಕಾಮತರ ಮೋರೆ ಮಾತ್ರ ಹೊರಚಾಚಿ ಕಾಣುವಂತೆ ಮಾಡಬೇಕು. ಅವರ ನಾಲಗೆ ಉದ್ದ ಮಾಡಬೇಕು. ಹಣೆಗೆ ಒಂದು ಸೀರವಾದ ಮೇಣಬತ್ತಿಯನ್ನು ಬುಡದಲ್ಲಿ ಸ್ವಲ್ಪ ಮಣಿಸಿ ಹೆಚ್ಚು ಹೊರಚಾಚುವಂತೆ ಗರ್ಪ್ಲ್ಯಾಸ್ಟ ಪಟ್ಟಿಯಿಂದ ಅಂಟಿಸಿ ದೀಪ ಹಚ್ಚಬೇಕು. ಆ ಮೋರೆಗಿಂತ ಮೇಲುಭಾಗದಲ್ಲಿ ಗುಳೇದಗುಡ್ಡರ ತೋಳುಗಳು ತೂಗಾಡುತ್ತಿರಬೇಕು.

೭

ತೆರೆಯ ಹಿಂದೆ

(ಒಂದು ಪ್ರಹಸನ)

ಪಾತ್ರಗಳು

ದತ್ತಪ್ಪ : ವಾಚನಾಲಯದ ಪಾರುಪತ್ಯಗಾರ
ಪ್ರಹ್ಲಾದರಾಯ : ನಾಡಹಬ್ಬದ ಮುಖ್ಯಕಾರ್ಯದರ್ಶಿ
ಕುಲಕರ್ಣಿ : ನಾಟ್ಯ ಸಮಿತಿಯ ಕಾರ್ಯದರ್ಶಿ, ನಾಟಕಕಾರ ಹಾಗೂ ರಂಗನಿರ್ದೇಶಕ
ಬಂಡೆಪ್ಪ ಮಾಸ್ತರ್: ರಂಗಸಾಲೆಯ ಸಹಾಯಕ.

ಈ ಪ್ರಹಸನದಲ್ಲಿ ಬರುವ ನಾಟಕದಲ್ಲಿ ಪಾತ್ರಗಳನ್ನು ವಹಿಸುವವರು

ಈ ಪ್ರಹಸನದಲ್ಲಿ ಬರುವ ನಾಟಕದಲ್ಲಿ ಪಾತ್ರಗಳನ್ನು ವಹಿಸುವವರು	
ಗೋವಿಂದಾಚಾರು :	ಮನೋಹರ :
ಚಿದಂಬರಭಟ್ಟ :	ಸೆಟ್ಟಿ :
ವೆಂಕಣ್ಣ :	ಸುಂದ್ರಾಸಾನಿ :
ಪಂತನಾರಾಯಣ :	ಮಾಲತಿ :

ಪಾತ್ರ ಪರಿಚಯ

ಈ ಪ್ರಹಸನದಲ್ಲಿ ಸಾಕಷ್ಟು ಪಾತ್ರಗಳಿದ್ದರೂ, ಇದು ಪಾತ್ರ ಪ್ರಧಾನವಾದುದಲ್ಲ. ಎಂದರೆ ವ್ಯಕ್ತಿನಿರೂಪಣೆ ಇದರಲ್ಲಿ ಇಲ್ಲವೆಂದರೂ ನಡೆದೀತು. ಮುಖ್ಯತಃ ಸನ್ನಿವೇಶನಿರೂಪಣೆಗಾಗಿ ಬರೆದದ್ದು ಇದು. ಅಂತೆಯೇ ಇಲ್ಲಿ ಪಾತ್ರಪರಿಚಯದ ಅತ್ಯವಶ್ಯಕತೆ ಇಲ್ಲ. ಇದರಲ್ಲಿಯ ವೇಷ, ನಡೆವಳಿಕೆ, ಏರ್ಪಾಡುಗಳು ಒಟ್ಟಾರೆ ಮಾತಿಗೂ ಸಂದರ್ಭಕ್ಕೂ ಹೊಂದುವಂತಿದ್ದರೆ ಸರಿ.

೧ನೇ ನೋಟ

(…………ಕರ್ನಾಟಕ ಸಂಘದ ವಾಚನಾಲಯದ ಕಚೇರಿ. ಸುತ್ತಲೂ ಪುಸ್ತಕಗಳ ಕಪಾಟುಗಳು. ನಡುವೊಂದು ಲಂಬಗೋಲಾಕಾರದ ಮೇಜಿನ ಮೇಲೆ ಮಾಸಪತ್ರಿಕೆಗಳೂ ವೃತ್ತಪತ್ರಿಕೆಗಳೂ ಇಡಲ್ಪಟ್ಟವೆ. ಮೇಜಿನ ಸುತ್ತ ಕುರ್ಚಿಗಳು. ತೆರೆ ತೆರೆಯುವಾಗ ವಾಚನಾಲಯದ ಪಾರುಪತ್ಯಗಾರನಾದ ದತ್ತಪ್ಪ ಟೇಬಲ್ಲಿನ ಮೇಲೆ ಮಾಸಪತ್ರಿಕೆಗಳನ್ನು ಹೊಂದಿಸುತ್ತಿರುವನು.)

ದತ್ತಪ್ಪ :—ಕರ್ನಾಟಕ ಕರ್ನಾಟಕ ಅಂತ ಹೂಲೀ ಎಬ್ಬಿಸಿ ಕಡೆಗೊಂದು ಈ ಕರ್ನಾಟಕ ಸಂಘ ಹೂಡಿದಿವಿ ಈ ಊರಾಗ. ಮೂಗಿಗೊಂದು ಮೂಗತಿ ಬೇಕಂತಂಬೂಹಾಂಗ ಮ್ಯಾಲೆ ಇದೊಂದು ವಾಚನಾಲಯ ಬೇರೆ. ಹೋದ ವರ್ಷ ನಾ ಸೂಚನಾ ಮಾಡಿದ್ದೇ ತಪ್ಪು. ಈ ವಾಚನಾಲಯದ ಕೆಲಸ ನನ್ನ ಮ್ಯಾಲೆ ಬೀಳಬೇಕs? ಈ ಆನರರೀ ಕೆಲಸಾ ಅಂದರ ಗಂಗಾಳಮುರಿಗಿಯೊಳಗಿನ ಲಡ್ಡು ಇದ್ಧಾಂಗ. ಯಾರೂ ತಮ್ಮ ಹತ್ತರ ಇಟ್ಟುಗೊಳ್ಳುವವರಲ್ಲ. ನನ್ನಂಥ ಒಳ್ಳೇ ಮಂದಿ ಮಳ್ಳ ಬಿದ್ದರ ಹಳ್ಳಾ‌ನs ಹಿಡಿಯೋದು. ಮ್ಯಾಲ, ಈ ವಾಚನಾಲಯ ಆದ್ರೂ ಏನು! ವಾಚಕನೂ ನಾನs ಪಾರುಪತ್ಯಗಾರನೂ ನಾನs. ನಾಕ ಮಂದಿ ಸಾಲಶುದ್ಧ ಓದಲಿಕ್ಕೆ ಬರೋದುಲ್ಲ. ಇಂಥಾ ಮಂದಿ ನಮ್ಮ ಕನ್ನಡ ಜನ. ಈ ಮಾಸಪತ್ರಿಕೆಗಳಿಗಂತೂ ಕೈ ಹಚ್ಚೋ ಜನಾನೇ ಇಲ್ಲಾಂತ ಮಾಸದ ಪತ್ರಿಕೆಗಳು ಅಥವಾ ಇಟ್ಟಿಟ್ಟು ಮಾಸುವ ಪತ್ರಿಕೆಗಳು. ಅಥವಾ ಹೊತ್ತಿಗೆ ಬರೋದಿಲ್ಲಾಂತ ಮೋಸದ ಪತ್ರಿಕೆಗಳು ಅಂದರೂ ಸರಿ. ಅಲ್ಲಾ—ಜೂನದ ಜಯಕರ್ನಾಟಕ ಸಪ್ಟೆಂಬರಾದರೂ ಸನೇಕ ಹಾದಿಲ್ಲ. ಈ ಪರಿಷತ್ಪತ್ರಿಕೆಯಂತೂ ಹೋದ ಜಾನೇವರೀದು ಮೀಸಲ ಮುತ್ತೈದಿ ಹಾಂಗ ಜಾಗಾ ಹಿಡಿದು ಕೂತsದ. ಇಂಥಾ ಪರಿಸ್ಥಿತಿಯೊಳಗ ನಾಡಹಬ್ಬದ ಬೊಬ್ಬಾಟ ಬ್ಯಾರೆ. ಇವೊತ್ತು ನಾಟಕದ ಮೀಟಿಂಗು ನಾಕು ಗಂಟೇಕ್ಕ ಅಂತ ನಾ ಬಂದ ಕೂತು ತಾಸಾದ್ರೂ ಒಂದು ಪಿಳ್ಳಿ ಬಂದಿ....ಲ್ಲಾ.... ಕಾಂಬೋದರಾಗ....(ಆಚೆಗೆ ನೋಡಿ) ಇಕಾ ನಮ್ಮ ಜೋಶಿ ಗೋವಿಂದಾ ಚಾರು ಈಗ ಬಂದರು.

ಗೋವಿಂದ :—ಯಾಕಣಾ ದತ್ತಪ್ಪ. ಉಳಿದ ಮಂದಿ ಬಂದೇ ಇಲ್ಲ ಇನ್ನೂ? ನಮ್ಮ ನಾಟಕ ಕಮಿಟೀ ಕಾರ್ಯದರ್ಶಿನೂ ಬಂದಿಲ್ಲಲ್ಲಾ! ಇಪ್ಪೊತ್ತಿನ ಮೀಟಿಂಗೂ?

ದತ್ತಪ್ಪ :—ಕ್ಯಾರ್ಯ'ದರ್ಶಿ'ಗಳು ಅವರು, ಮಂದಿಗೆ ಕಾರ್ಯ ತೋರಿಸವರು, ತಾವು ಮಾಡವ್ರಲ್ಲಾ.

ಗೋವಿಂದ :—ಮತ್ತ ಶೇಷಗಿರಿ, ನಾರಾಯಣ ಭಟ್ಟ, ಪ್ರಹ್ಲಾದರಾಯಾ, ವೆಂಕಣ್ಣ, ಚಿದಂಬರಾ ಇವರಿಗೆಲ್ಲಾ ಏನು ಧಾಡಿಯಾತು? ನಾಡ ಹಬ್ಬ ಎರಡು ವಾರ ಉಳೀತು? ನಾಟಕಾ ಏನ್ಮಾಡ್ತಾರ ಇವರು ಹಿಂಡೇಕೂಳು!

ದತ್ತಪ್ಪ :—ಅಕಾ, ಪ್ರಹ್ಲಾದರಾಯಾ ಮತ್ತ ಚಿದಂಬರಾ ಚಹಾದಂಗಡಿ ಯೊಳಗಿಂದ ಹೊರಬಿದ್ದರು ನೋಡ್ರಿ.

ಗೋವಿಂದ :—ಈ ನಾಟಕಾ ಮಾಡಬೇಕಂಬೂ ಮಂದಿ ತಾವು ಮಾಡೂ ದೆಲ್ಲಾ ನಾಟಕಾನss ಅಂತ ತಿಳಿದಾರೇನು?

(ಪ್ರಹ್ಲಾದ ಚಿದಂಬರರು ಬರುವರು)

ಪ್ರಹ್ಲಾದ :—ಏನು, ಇನ್ನೂ ಮೀಟಿಂಗು ನಡದೇ ಇಲ್ಲೇನು?

ಚಿದಂಬರ :—ನಾವು ಸುಮ್ಮನss ಬ್ಯಾಗ ಬಂಧಂಗ ಆತು!

ಗೋವಿಂದ :—ಮೀಟಿಂಗು ಮುಗದವ್ಯಾಲೇ ಬರ್ಬೇಕಂತ ಮಾಡಿದ್ರೇನು? ಮತ್ತ ನಾರಾಯಣಪಂತ, ವೆಂಕಣ್ಣಾ, ಕಾರ್ಯದರ್ಶಿ ಕುಲಕರ್ಣಿ ಅವರೆಲ್ಲಾ ಎಲ್ಲಿದ್ದಾರ?

ಚಿದಂಬರ :—ಅವರು ನಮಕಿಂತ ಮೊದಲss ಹೊರಟಿದ್ದರಲ್ಲಾ!

ದತ್ತಪ್ಪ :—ಆದರ ಇದ್ದಾರೆಲ್ಲೆ (ಎನ್ನುತ್ತ ಕಪಾಟನಲ್ಲಿಯ ಪುಸ್ತಕ ಹೊಂದಿ ಸಲು ಹೋಗುವನು)

(ಇಷ್ಟರಲ್ಲಿ ಮೂವರೂ, 'ಹಜsರ, ಸ್ವಾಮೀ. ಹಜsರ, ಹಜsರ್' ಎನ್ನುತ್ತ ಬರುವರು. ಕಾರ್ಯದರ್ಶಿ ಕುಲಕರ್ಣಿ ಗಡಿಬಿಡಿಯಿಂದ ಕುರ್ಚಿಯೊಳಿದು ಕುಳಿತು ಕೊಂಡು ತನ್ನ ಹೊತ್ತಿಗೆ ಬಿಚ್ಚುವನು)

ಕುಲಕರ್ಣಿ :—ಬರ್ರಿ ಬರ್ರಿ; ಕೂಡ್ರಿ. ಚಿದಂಬರ, ವೆಂಕಣ್ಣ, ನಾರಾಯಣ ಪಂತ ಕೂಡ್ರಿ ಎಲ್ಲಾರೂ.

ಗೋವಿಂದ :—ತಾ ಬರೋದು ತಡಾಮಾಡಿ ಬಂದು ಈಗೆಷ್ಟು ಗಡಿಬಿಡಿ ಮಾಡ್ತಾನೋ ನಮ್ಮ ಕುಲಕರ್ಣಿ.

ನೆಂಕಣ್ಣ :—ಗಡಿಬಡಿಯೊಳಗs ಕಾರ್ಯದರ್ಶಿತ್ವ ತೀರಿಸಿಗೋಬೇಕಂತಾನ ಕುಲಕರ್ಣೀ.

ಗೋವಿಂದ :—ಕಾರ್ಯದರ್ಶಿಗಳದೂ ಪುರೋಹಿತರದೂ ಒಂದs ಜಾತೀ!

ಕುಲಕರ್ಣಿ :—ಆಗಲಿ ಕುಡ್ರಿನ್ನ. ನಾಡಹಬ್ಬದ ಸಲುವಾಗಿ ಆಡೋ ನಾಟಕದ್ದಶಿಂದ ನಾ ಇವು ಮೂರು ಆರ್ಸೇನಿ, ನೋಡ್ರೆಪಾ.

ನಾರಾಯಣ :—ಯಾವ್ಯಾವೂ? ಹೇಳ್ರೆಲ್ಲಾ! ಅದರೊಳಗ, ನೀವು ಸ್ವತಃ ಒಂದು ನಾಟಕ ಬರ್ದೀರೆಂತ; ಅದೂ ಇದ್ದೀತಲ್ಲ!

ಕುಲಕರ್ಣಿ :—ಇಲ್ಲ ಮಾರಾಯಾ! ಅದೇನಿಲ್ಲ. ನಿಮ್ಮೆದುರಿಗೆ ನಾವೇನು ನಾಟಕಕಾರರಾಗಿ ಬದುಕೇವು.

ಗೋವಿಂದ :—ಹಂಗಾರ, ಯಾವ್ಯಾವು ಅವು ಮೂರು?

ಪ್ರಹ್ಲಾದ :—ಆ ನಾಟಕ ಯಾವಾದರೂ ಇರಲಿ. ಮೊದಲ್ನೆ ಮಾತಂದ್ರ ನಿಮ್ಮ ನಾಟಕ ಒಂದೂವರಿ ತಾಸು ಮೀರಬಾರದು!

ನೆಂಕಣ್ಣ :—ಈ ನಿಯಮೆಲ್ಲೀದೂ? ಒಂದೆರಡು ಎರಡೂವರಿತಾಸು ಆದ್ರ ಪ್ರೊಗ್ರಾಮಿಗೆ ರಂಗ ಬರ್ತ್ತದ.

ಪ್ರಹ್ಲಾದ :—ಇದು ನಾಡಹಬ್ಬದ ಪ್ರೊಗ್ರಾಮು. ಬರಿ ತಿಕೇಟು ಹಚ್ಚಿ ಆಡೋ ನಾಟಕದ ಪ್ರೊಗ್ರಾಮಲ್ಲ; ತಿಳೀತಿಲ್ಲೊ.

ಚಿದಂಬರ :—ನಾಡಹಬ್ಬದ ಪ್ರೋಗ್ರಾಮಾದ್ರ ನಾಟಕಕ್ಯಾಕ ಇಷ್ಟು ನಿಯಮಾ ನಿರ್ಬಂಧಾ ಅಂತೀನಿ.

ಪ್ರಹ್ಲಾದ :—ಜನರಲ್‌ಸೆಕ್ರೆಟರಿ ಆದ ನನಗ ಅದೆಲ್ಲಾ ಗೊತ್ತೋ ನಿನಗೋ? ಮತ್ತ ನಾಚಿನ ಪ್ರೋಗ್ರಾಮು ಅದ ಆ ರೂಪರಾಗಿಣಿ ಕಲಾಶಾಲಾದ ಹುಡುಗೇರದು. ನಮ್ಮ ಶೇಷಗಿರಿದು ನಕಲು ಅದs. ಮ್ಯಾಲೆ ಭಾಷಣ; ನನ್ನ ರಿಪೋರ್ಟು.

ನಾರಾಯಣ :—ನಾಟಕಕ್ಕ ಹೊತ್ತು ಕಡಿಮೆ ಮಾಡಿ, ನೀವು ನಿಮ್ಮ ರಿಪೋರ್ಟಿಗೇ ಹಾಕ್ಕೊಂಡೀರಿ ಕಾಣಸ್ತದ, ಎಲ್ಲಾ ವ್ಯಾಳ್ಯಾನೂ!

ವೆಂಕಣ್ಣ :—ಅದೇನಿಲ್ಲ. ಎರಡು ತಾಸಿಲ್ಲದಿದ್ದರ ನಾವು ನಾಟಕಾನೇ ಮಾಡವ್ರಲ್ಲಾ!

ಚಿದಂಬರ :—ಹೌದ್ಹಾದೂ. ನಾವೇನೂ ಮಾಡವ್ರು ಅಲ್ಲಾ!

ಗೋವಿಂದ :—(ರಾಸಿನಿಂದ) ಮತ್ತ, ಪ್ರಹ್ಲಾದನ ರಿಪೋರ್ಟಿಗೆ ಟಾಯಿಮು ಬ್ಯಾಡ್ರೇನೋ ಮಕ್ಕಳಿರಾ! ತ್ರೇತಾಯುಗದಿಂದ ಹಿಡಿದು ನಾಯಿನ್ಟೀನ್ ಫಾರ್ಟೀಥ್ರೀ....ಸೆಕೆಂಡ್ ವರ್ಲ್ಡ್‌ವಾರಿನ ವರೆಗಿನ ರಿಪೋರ್ಟು ಅವನ್ದು!

ನಾರಾಯಣ :—ಅದನ್ನ ಆ ನರಸಿಂಹನ ಮುಂದ್ಹೇಳಿಕೊಳ್ಳಿ; ಬೇಕಾದ್ರ ನಮ್ಮ ಜಾಗೀರ್ದಾರ ಕಡೆ ಹೋದ್ರ, ಆ ನರಕದ ನರಸಿಂಹಗೂ ಇಂಟ್ರೊಡ್ಯೂಸ್ ಮಾಡಿಕೊಡ್ತಾರ! ರಿಪೋರ್ಟಿಂತ ರಿಪೋರ್ಟು.

ವೆಂಕಣ್ಣ :—ಅದಕ್ಕೊಂದು ಐದು ಮಿನಿಟು ಆದ್ರ ಸಾಕು!

ಪ್ರಹ್ಲಾದ :—(ಕೆರಳಿ) ಅಂ, ನನ್ನ ರಿಪೋರ್ಟಿಗೆ ಐದs ಮಿನಿಟs! ನಿಮ್ಮ ನಾಟಕಾನೇ ಬ್ಯಾಡ ಹೋಗ್ರಿ. ನನ್ನ ರಿಪೋರ್ಟಿಗೆ ಅರ್ಧಾ ತಾಸು ಬೇಕು ಅರ್ಧಾ ತಾಸು.

ಗೋವಿಂದ :—ಆಗಲಿ ಕೊಡ್ರೋ; ಅರ್ಧಾ ತಾಸs ಕೊಡ್ರಿ ನಮ್ಮ ಜೀಯೆಸ್ಸ ಅವರಿಗೆ.......; ಕಡೀ ಅರ್ಧಾತಾಸು ಕೊಡ್ಲಿಕ್ಕೆ ಏನು ಹರಕತ್ತು?

ಪ್ರಹ್ಲಾದ :—(ಮತ್ತಿಷ್ಟು ಕೆರಳಿ) ಕಡೀ ಅರ್ಧಾತಾಸs? ಅದ್ಯಾಕ, ನನ್ನ ರಿಪೋರ್ಟಿಲ್ಲದ ನಿಮ್ಮ ನಾಟಕಾದ್ರೂ ಏನ್ ನಡೀತsದ? ಏನ್ನಿಮ್ಮ ನಾಟಕ ಸುಟ್ಟಿತು? ಯಾರೋ ಬರದದ್ದು ಪಾಠಮಾಡಿ ಬಕಬಕಾ ಬಾಯ್ಬಿಡ್ತೀರಿ. ಅಷ್ಟs ಹೌದಲ್ಲೊ.

ನಾರಾಯಣ :—ನಿಮ್ಮ ರಿಪೋರ್ಟಿರ ಏನು? ಭರಾಭರಾ ಬಾಯ್ಗೇನು ಬರೂದುಲ್ಲಾಂತ ಬರ್ಕೊಂಡ ಬಂದು ಮುಂದೀ ಎದುರ್ಗೇ ಪಾಠ ಒಪ್ಪಿಸ್ತೀರಿ. ಅಷ್ಟs ಅದಲ್ಲೊ.

ಕುಲಕರ್ಣಿ :—(ಎಲ್ಲರನ್ನು ತಡೆದು) ತಡೀರಿ, ತಡೀರಿ. ಒಣಾ ನ್ಯಾಯ ಬ್ಯಾಡಾ. ಪ್ರಹ್ಲಾದರಾವ್, ನೀವು ನಿಮ್ಮ ರಿಪೋರ್ಟಿಗೆ ಹದಿನೈದು ಮಿನೀಟು........ಅದ್ಯಾಕ ಇಪ್ಪತ್ತು ಮಿನೀಟು ತಗೊಳ್ರಿ....ಆತs....

ಪ್ರಹ್ಲಾದ :—ನಾನೂ ಅದs ಅಂದೆ; ಹಾಂಗ ಹಾದಿಗೆ ಬರ್ರಿ.

ಕುಲಕರ್ಣಿ :—ನಾಟಕಕ್ಕ ಎರಡು ತಾಸಿರಲಿ.

ಚಿದಂಬರ
ವೆಂಕಣ್ಣ
ನಾರಾಯಣ } ನಾನೂ ಅದs ಅಂದೇ ಅಂದೆ!

ಪ್ರಹ್ಲಾದ :—ನಾಟಕಕ್ಕ ಎರಡ ತಾಸಾದ್ರ ಬಾಕೀ ಪ್ರೋಗ್ರಾಮು ಹೊಂದಸವ್ರ ನಾವೋ ನೀವೋ!

ಕುಲಕರ್ಣಿ :—ಪ್ರೋಗ್ರಾಮು ತಾನs ಹೊಂದತsದ. ಅಧ್ಯಕ್ಷರ ಭಾಷಣ ಸ್ವಲ್ಪದರಾಗ ಮುಗಿಸಿದರಾತು. ಆ ಅಧ್ಯಕ್ಷರಿಗೆ ಜಾಣತನ ಇದ್ದರ "ಈಗ ರಾತ್ರಿ ಬಹಳಾತು; ಎಲ್ಲಾ ಜನರಿಗೂ ತಡಾ ಆಗೇದ; ಅಂಥಾದ್ದರೊಳಗ ನಿಮ್ಮನ್ನೇನು ಭಾಳೊತ್ತು ಕೂಡಿಸೋ ಗೊಡವಿಗೆ ನಾ ಹೋಗೂದುಲ್ಲ" .... ಅಂತs ತಮ್ಮ ಭಾಷಣ ಸುರುಮಾಡೇ ಮಾಡ್ತಾರ. ಇನ್ನ ಅಷ್ಟ ಬುದ್ಧಿ ಇಲ್ಲದಿದ್ದರೆ, ಹಿಂದಿನ ಜನ ಏಳಕೊತ ಬಂಧಾಂಗ ಮುಂದಿನ ಖುರ್ಚಿಸಾಲಿನವರು ಮುಂದ ಕೂತ ತಪ್ಪು ಒಪ್ಪಿಕೊಂಡು ಮುಖ ಕಿವುಚ್ಲಿಕ್ಕೆ ಹತ್ತಿದ್ರ ಅಧ್ಯಕ್ಷರ ಗಂಟಲಾ ಹಿಚಿಕಿಧಾಂಗ ಆಗ್ತsದ. ಇನ್ನೇನು, ಅಧ್ಯಕ್ಷರ ಭಾಷಣ ನಾಟಕದಕಿಂತ ಮೊದ್ಲs ಹಾಕಬ್ಯಾಡ್ರೀ ತೀರ್ತು.

ಪ್ರಹ್ಲಾದ :—ಅದು ಬೇಖಾಧಾಂಗ ಮಾಡೂಣಂತ. ಆದ್ರ ನಮ್ಮ ರಿಪೋರ್ಟು ರಿಪೋರ್ಟಂತೂ ಆಗಲಿಕ್ಕೆಬೇಕು.

ಗೋವಿಂದ :—ಅಲ್ರೀ, ಕುಲಕರ್ಣಿ; ಜನರಲ್ ಸೆಕ್ರೆಟರಿ ರಿಪೋರ್ಟು ಓದೂ ಪಾರ್ಟಿದ್ದಂಥಾ ಒಂದು ನಾಟಕಾನs ಹುಡುಕರೀ, ಅಂದ್ರ ಎರಡೂ ಕೆಲಸಾಗ್ತಾವ.

ಪ್ರಹ್ಲಾದ :—ಆ ಪಾರ್ಟು ನನಗ ಕೊಟ್ರೂ, ನಾ 'ನನ್ನ' ರಿಪೋರ್ಟs ಓದಾವ ಮತ್ತ!

ಕುಲಕರ್ಣಿ :—ಅದರ್ಕಿಂತ ನೀವೇನೋ ನಿಮ್ಮ ರಿಪೋರ್ಟೇನೊ; ತಲೀ ಬೋಳಿಸಿಕೊಳ್ರಿ; ಆತೇ!

ಚಿದಂಬರ
ವೆಂಕಣ್ಣ
ನಾರಾಯಣ } ಓದಿಕೊಳ್ಳಿ, ಓದಿಕೊಳ್ಳಿ, ಆಗ ನಾವಂತೂ ಬಣ್ಣಾ ಬಡಕೋತಿರ್ತೀವಿ. ನಮಗ್ಯಾಕ ಅದರ ಚಿಂತೀ!

ಕುಲಕರ್ಣಿ :—ಆಗಲಿ, ಅಂತೂ ನಾಟಕಕ್ಕ ಎರಡು ತಾಸಂತೂ ಆತೇ! ಆದ್ರ ನಾ ಆರಿಸಿದ ನಾಟಕದೊಳಗ ಯಾವದಿರಲಿ ನೋಡ್ರಿ.

ಗೋವಿಂದ :—ಆ ನಾಟಕ ಎರಡು ತಾಸಿನವು ಅವs ಏನೂ?

ಕುಲಕರ್ಣಿ :—ಒಂದು ನಾಟಕಾ ಒಂದೂವರಿ ತಾಸಿನ್ದು ಅದs! ಇನ್ನೆರಡೂ ಕೂಡಿ ಎರಡು ತಾಸಿನ್ವು ಅವs!

ಚಿದಂಬರ :—ನಡುವ ಇಂಟರ್‌ವಲ್ ಇಟ್ಟು ಎರಡು ನಾಟ್ಕ ಮಾಡ್ಲಿಕ್ಕೆ ಏನ್ ಅಡ್ಡೀ ಅದs?

ನಾರಾಯಣ :—ಛೀ ಛೀ. ಎರಡು ನಾಟಕಾದ್ರ ಹದಾ ಕೆಡ್ತsದ. ಒಂದs ನಾಟಕಿದ್ದರs ಛಲೋ!

ವೆಂಕಣ್ಣ :—ನಾನೂ ಅದಂತೀನಿ. ಆ ಮೊದಲಿನ ನಾಟಕಾನs ಇರಲಿ; ಒಂದೂವರಿ ತಾಸಿನ್ದು.

ಪ್ರಹ್ಲಾದ :—ಅದ್ಯಾಕರ್ರ್ಯೋ; ನನ್ನ ಮಾತು ಕೇಳ್ರಿಲ್ಲೇ; ಮೊನ್ನೆ ಲಿಂಗರಾಜ ಕಾಲೇಜಿನ್ಯಾಗ ಎರಡು ಬ್ಯಾರ್ಬ್ಯಾರೇ ನಾಟಕ ಆಡ್ಲಿಲ್ಲ? ಸಿಸ್ತ ಆದ್ವು. ಅದಕೇನಡ್ಡೀ? ಅದರೊಳಗ ಈಗ ಒಂದಂಕಿನ ನಾಟಕಾನs ಹೆಚ್ಚು ಪಾಪ್ಯುಲರ್ ಆಗ್ಯಾವs.

ವೆಂಕಣ್ಣ :—ನಾ ಅಂತೀನಿ ಆ ಒಂದೂವರೀ ತಾಸಿನ್ನಾಟಕಾನೇ ಇರಲಿ.

ಪ್ರಹ್ಲಾದ :—ಅಲ್ರೀ, ಅಪನವರs, ಇಷ್ಟೊತ್ತಿನ ತನಕಾ ನಾಟಕಕ್ಕ ಎರಡು ತಾಸು ಬೇಕೂ, ಎರಡು ತಾಸು ಬೇಕೂ ಅಂತ ಹಾರ್‍ಯಾಡ್ತಿದ್ರಿ. ನನ್ನ ಮಾತು ಕೇಳಿದ್ರ್ಯ? ಈಗ ಬಂದಿರಿ ಹಾದಿಗೆ!

ಚಿದಂಬರ :—ವೆಂಕಣ್ಣನ ಬೇತು ಬ್ಯಾರೇನs ಅದs.

ಪ್ರಹ್ಲಾದ
ಕುಲಕರ್ಣಿ } ಮತ್ತೇನಪಾ, ವೆಂಕಣ್ಣಾ, ಏನದು ಗತ್ತು.

ವೆಂಕಣ್ಣ :—ಗತ್ತೇನು ಗತ್ತು. ಒಂದೂವರಿ ತಾಸಿನ್ನಾಟಕ ಎರಡ್ತಾಸಿಗೆ ಬಂದs ಬರ್ತsದ.

ಗೋವಿಂದ :—ಅಂದರೇನು ನಡುವೇನು ನಿದ್ದಿಗೆ ಜಾಗಾ ಇಡ್ತೀರೇನು?

ನಾರಾಯಣ :—ಹೌದು; ಸಂಗೀತದ ಇಂಪಿನಿಂದ ನೋಡ್ಲಿಕ್ಕೆ ಬಂದವರಿಗೆ ಒಂದು ಸ್ವಲ್ಪ ನಿದ್ದೆ ಬಂದರೇನು ತಪ್ಪು?

ಪ್ರಹ್ಲಾದ :—ಅಂತೂ ಸಂಗೀತದ ತಿಂಡೀ ಅನಬಾರದs ವೆಂಕಣ್ಣ ಗ.

ನಾರಾಯಣ :—ಮತ್ತs ಸಂಗೀತಿಲ್ಲದ ನಾಟಕೆಂಥಾದ್ರೀ?

ಗೋವಿಂದ :—ಹೌದೋ ನಾರಾಯಣಾ; ನೀನೂ ಆಗತ್ತಿನಾವನೇ ಕಾಣಿಸ್ತೀ; ಮೊನ್ನೆಮೊನ್ನೆ ಒಂದು ಹೊಸಾ ಹಾರ್ಮೋನಿಯಂ ಕೊಂಡು ನೀನೂ ಸ್ವಲ್ಪ ಕೊಂಯ್ ಕೊಂಯ್ ಕುಂಯ್ ಕುಂಯ್ ಅಂತ ಮಾಡ್ಲಿಕ್ಕೆ ಕಲ್ತೀ ಹೌದs?

ನಾರಾಯಣ :—ನನ್ನ ಬಿಡ್ರಿಪಾ; ಆದರ ವೆಂಕಣ್ಣ ನಮ್ಮ ಕಂಪೂದ ಕೋಗಿಲಾ ಅಂತ ನೀವೆಲ್ಲಾರೂ ಅಂತೀರಲ್ಲಾ; ಅವನೇ ಹಾಡಲಿ!

ವೆಂಕಣ್ಣ :—ಅದ್ಯಾಕ ನಾರಾಯಣಗೂ ಒಂದೆರಡು ಹಾಡು ಹಾಕೋಣ. ಆರು ತಿಂಗಳಾತು, ರಾಘುನಂದನಜೀ ಅವರ ಹತ್ತರ ತಾಲೀಮು ಮಾಡ್ತಾನ ಅವಾ. ಉತ್ತಮು ಹಾಡ್ತಾನ. ಮತ್ತ ನಮ್ಮ ಗುರೂಜೀ ಅವರ ಸಂಗೀತದ್ದ ಶಿಂದ ಒಂದು ಇನಾಮು ಇಡ್ಲಿಕ್ಕೆ ಒಪ್ಪ್ಯಾರ!

ಚಿದಂಬರ :—ಆದರೀ ಹೊಸಾ ನಮೂನಿ ಏಕಾಂಕ ನಾಟಕದೊಳಗ ಹಾಡು ಶೋಭಿಸೋದಿಲ್ಲ.

ವೆಂಕಣ್ಣ
ನಾರಾಯಣ } ಹಾಡಿಲ್ಲದಿದ್ದರ ನಾವೇನು ಪಾರ್ಟು ಮಾಡವ್ರಲ್ಲಾ. ನೀವೇನೋ ನಿಮ್ಮ ನಾಟಕೇನೋ! (ಇಬ್ಬರೂ ಸಿಟ್ಟಿನಿಂದ ಸಿಟಿಯುವರು)

ಗೋವಿಂದ :—ನಾಟಕಾ ಮಾಡವ್ರಲ್ಲಾ ಅಂತೀರಿ; ಈಗ ಸುರುವೇ ಮಾಡಿದ್ರೆಲ್ಲಾ, ಸಿಟ್ಟಿನ ಪಾರ್ಟು!

ನಾರಾಯಣ :—ಗೋವಿಂದಾಚಾರs, ಈ ಚ್ಯಾಷ್ಟಿ ಸಾಕೂ ಅಂದೆ.

ವೆಂಕಣ್ಣ :—ನಡಿಯೋ ನಾರಾಯಣಾ; ಹಾಡಿಲ್ಲದಿದ್ದರ ನಮಗ್ಯಾಕ ಈ ನಾಟಕ? ನಡೀ ಹೋಗೋಣ (ಇಬ್ಬರೂ ಸಿಟ್ಟಿನಿಂದ ನಡೀ, ನಡೀ, ಅನ್ನುತ್ತ ಆದರೂ ಹಿಂದೆ ಹಿಂದೆ ಬೀಳುತ್ತ ಹೋಗುವರು)

ಚಿದಂಬರ :—ಹೋದರ ಹೋಗಲಿ ಬಿಡೋ.

ಪ್ರಹ್ಲಾದ—ಇವರ್ಯಾಕ ಇಷ್ಟು ದಿವಸಾಕು ಮಾಡ್ತಾರs ? ಬಹಾಳ ಛಲೋ ತಮ್ಮ ಆ್ಯಕ್ಟಿಂಗು ಅಂತ ತಿಳಿದಾರೇನು ಇವ್ರು ?

ಗೋವಿಂದ :—ಎಲ್ಲೀ ಆ್ಯಕ್ಟಿಂಗ್ರೀ; ಒಮ್ಮೆ ಬಿಟ್ಟು ಎರಡು ಸಾರೆ ಮೇಲ್ಬಿದ್ದು ಕರದರ ಯಾರ್ದಾದರೂ........ಅಟ್ಟಕ್ಕೇರೋದೇ! ಈಗ್ ನೋಡ್ರಿ; ಒಬ್ಬ ಸೆಕ್ರೆಟರೀನ್ನs ಮತ್ತ ಮತ್ತ ಎರಡು ಮೂರ ವರ್ಷ ಆರಿಸಿದ್ರ ಹ್ಯಾಂಗೋ ಹಾಂಗ.

ಪ್ರಹ್ಲಾದ :—ಏ, ಗೋವಿಂದಾ, ನನ್ನ ಗೊಡವಿಗೆ ಬರಬ್ಯಾಡಾಂದೇ!

ಕುಲಕರ್ಣಿ:—ಅದಿರಲಿ; ಅವರ್ನ ಹೋಗಿ ಕರಕೊಂಡು ಬರ್ರಿ ಯಾರಾದರೂ; ಅವರನ್ನು ಬಿಟ್ಟು ಬ್ಯಾರೇ ಯಾರು ಹೆಣ್ಣ ಪಾರ್ಟು ಮಾಡವ್ರಿಲ್ಲಾ. ಅಂತ ಸೀರಿ ಉಡಸೋ ತನಕಾ ಅಷ್ಟು ಮರ್ಜಿ ಹಿಡೀ ಬೇಕಲ್ಲಾ. ಏ ಚಿದಂಬರಾ, ಹೋಗಪಾ!

ಚಿದಂಬರ :—ಅವರೆಲ್ಲೆ ಹೋದ್ರೊ ಏನೋ; ಎಲ್ಲಂತ ಹುಡುಕಲಿ.

ಗೋವಿಂದ :—ಹೋಗ್ತಾರೆಲ್ಲೆ; ಹೆಚ್ಚಾದರ ಬಸವನಗುಡಿ ಬಂಕದಾಗ ಇದ್ದಿದ್ದಾರು. ಅವರ್ಮನಿಸಿನಾಗ ನಾಟಕಾ ಮಾಡೋದು, ಅದರೊಳಗ ಹೆಣ್ಣ ಪಾರ್ಟಿನ ಒನಪು ಮಾಡೋದು, ಮ್ಯಾಲೆ ಅಷ್ಟು ಹಾಡು ಹಾಡೋದು ಅದನs ಅದs. ಆದ್ರ ಇವರ ಸಂಗೀತಾದ್ರೂ ಏನು ಸಂಗೀತಾ!

ಚಿದಂಬರ :—ಮತ್ತೀ ನಾಟಕದ ಬ್ಯಾಟಾ ಹೂಡಿದವರs ಅವರು. ಆಗಲಿ ನೋಡ್ತೇನಿ, (ಹೊಗುವನು).

ಕುಲಕರ್ಣಿ :—ಏ ದತ್ತಪ್ಪಾ, ಈ ಲೆಕ್ಕಾಚಾರಾ ನೋಡಿದ್ರ, ನಾ ಆರ್ಸಿದ ನಾಟಕ ಪಾಸಾಗಲಿಕ್ಕಿಲ್ಲ; ಲ್ಯಾಬ್ರರಿಯೊಳಗಿನ ಬ್ಯಾರೇ ಏಕಾಂಕ ನಾಟಕಗಳಿದ್ದರ ತೆಗೆದು ಕೊಡಿಲ್ಲಿ.

ದತ್ತಪ್ಪ :—ಇಕಾ ಈ ನಾಟಕದ ಪಟ್ಟೇನs ಕೊಡ್ತೇನಿ; ನಿನಗ ಬೇಕಾದ್ದು ಆರಿಸಿಕೋ!

(ಇಷ್ಟರಲ್ಲಿ ಚಿದಂಬರ, ವೆಂಕಣ್ಣ, ನಾರಾಯಣ ಬರುವರು)

ನಾರಾಯಣ :—ಹಾಡು ಬೇಕs ಬೇಕೂ ಅಂದೆ.

ಕುಲಕರ್ಣಿ :—ಆದ್ರ ನಾ ಆರಿಸಿದ ಮೂರೂ ನಾಟಕದೊಳಗ ಹಾಡು ಇಲ್ಲೇ ಇಲ್ಲಾ.

ನಾರಾಯಣ :—ಇಲ್ಲದಿದ್ರೇನಾತೂ. ವೆಂಕಣ್ಣ ತನ್ನದಶಿಂದ ಮೂರು ನನ್ನದಶಿಂದ ಎರಡು ಹಾಡು ಸ್ವತಃ ತಯಾರಿಸ್ಯಾನs.

ವೆಂಕಣ್ಣ :—ಹಾಡಿನ ಪ್ರಾಕ್ಟೀಸೂ ಉತ್ತಮ ಆಗೇದ.

ಕುಲಕರ್ಣಿ:—ಆದ್ರ, ಆ ಹಾಡು ಈ ನಾಟಕಕ್ಕ ಹ್ಯಾಂಗ ಹೊಂದ್ಯಾವರೀ ?

ವೆಂಕಣ್ಣ :—ನಾವೆಲ್ಲಾ ಹೊಂದಿಸಿಕೊಂಡು ಹಾಡ್ತೇವಿ. ನಾಟಕ ಯಾವದಿದ್ದರೇನು !

ಚಿದಂಬರ:—ಆಗಲಿ ಬಿಡ್ರೆಪಾ ! ಅದರ್ದೇನಾದ್ರೂ ಮಾಡೋಣಂತ; ಆದರ ನೀವಾರಿಸಿದ ನಾಟಕದ ಹೆಸರಾದ್ರೂ ಹೇಳ್ರಿ.

ಕುಲಕರ್ಣಿ :—ಇದು ನೋಡಿರಿ, ಇದು ನಮ್ಮ ಜಾಗೀರದಾರರ............

ವೆಂಕಣ್ಣ:—ಆ ನಾಟಕ ಯಾವದಿದ್ರೇನಾತೂ; ಆಡೂದ್ಯಾವ ಥೇಟರಿನ್ಯಾಗ ಅದನ್ನ ಹೇಳ್ರಿ ಮೊದ್ಲ.

ಗೋವಿಂದ :—ಹೌದು ಕುಲಕರ್ಣಿ; ಕಡೀಕೆ ಫಂಗ್ಶನ್ನದ ಸ್ಥಳಾ ಯಾವದೂ ಅಂತ ಗೊತ್ತಾತೂ?

ಕುಲಕರ್ಣಿ :—ಅದನ್ನ ನಮ್ಮ ಜನರಲ್ ಸೆಕ್ರೆಟರಿಯವರೇ ಹೇಳ್ಬೇಕು.

ಪ್ರಹ್ಲಾದ :—ಬಹುತೇಕ ಶಿವಾನಂದ ಥೇಟರು ಗೊತ್ತಾದಂಗs !

ನಾರಾಯಣ :—ಶಿವಾನಂದ ಥೇಟರಾದ್ರ ನಾಟಕಾ ಆಡೂದಾದ್ರೂ ಯಾಕ ?

ವೆಂಕಣ್ಣ :—ಆ ಥೇಟರೇನೂ ? ಹಳೇತರದ್ದು ; ನಾದ ತುಂಬೋದುಲ್ಲ. ನಮ್ಮ ರಾಮದುರ್ಗ ಸೆಟ್ಟರು ಹೊಸದಾಗಿ ಕಟ್ಟಿದ ಮಲ್ಲಿಕೇಶ್ವರ ಥಿಯೇಟರಾದ್ರ ಹಾಡಲಿಕ್ಕೆ ಹುರುಪು ಬಂದೀತು.

ಪ್ರಹ್ಲಾದ :—ಆ ಹೊಸಾ ಥೇಟರಿಗೆ ಕೈತುಂಬ ಬಾಡಿಗೀ ತುಂಬ ಬೇಕಾಗ್ತದ, ವೆಂಕಣ್ಣವರs ! ಶಿವಾನಂದ ಥೇಟರಾದ್ರ ಟಕಪುದಾಗ ಕೆಲಸಾಗ್ತsದ. ಇಲ್ದಿದ್ರ, ಹಿಂದಾಗಡೆ ಆ ಗರ್ಲ್ ಹ್ಯಾಸ್ಕೂಲ ಹಾಲಿನೊಳಗ, ಅದೂ ಇಲ್ದಿದ್ರ, ಬೈಲಾಗ ಹಂದರಾ ಹೊಡಬೇಕಾದೀತು.

ನಾರಾಯಣ :—ಹಾಂಗಾದರ ಲೌಡ್‌ಸ್ಪೀಕರ್ಸ ಆದ್ರೂ ಹಚ್ಚಿದರ ಸರಿ.

ಚಿದಂಬರ :—ಆಗಲ್ರೆಪಾ; ಮೊದ್ಲ ನಾಟಕ ಯಾವುದೂ ಅದುಇರ ಗೊತ್ತಾಗ್ಲಿ. ಈ ಬರೇ ಕೈಲೆ ಮೊಳಾ ಹಾಕೋದು ಸಾಕು.

ಕುಲಕರ್ಣಿ :—ಇದು ಕೇಳ್ರೆಪಾ; ಬಾಕಿ ಎಲ್ಲಾ ಮಾತು ಹಿಂದಾಗಡೆ ಹೊಂದಿಸೋಣಂತ, ನಾಟಕ ಯಾವ್ದು ಗೊತ್ತಾಗ್ಲಿ.

ಪಹ್ಲಾದ :—ಹೇಳಿಯಾದ್ರೂ ಹೇಳ್ರಿ.

ಕುಲಕರ್ಣಿ :—ಇಕಾ, ಈ ಒಂದನೇ ನಾಟಕಾ ನಮ್ಮಾ ಜಾಗೀ...........

ಗೋವಿಂದ :—ಅದಿರ್ಲ್ರೆಪಾ! ಆದರ ನಾವಾಡೋದೂ ಸಾಮಾಜಿಕ ನಾಟಕನೋ ಐತಿಹಾಸಿಕನೋ ಪೌರಾಣಿಕನೋ ಅದು ಗೊತ್ತಾಗ್ಲಿ. ಅಂದ್ರ ಯಾರ ನಾಟಕಾ ಆಡೋದು ಅಂತ ಮುಂದ ಆರಿಸಲಿಕ್ಕೆ ಬಂದೀತಂತ.

ಕುಲಕರ್ಣಿ :—ಛೇ ನಿಮು, ನಿಮು, ನಿಮು; ಏನಾದ್ರೂ ಒಂದು ಅಡ್ಮಾತು ತಗೀತೀರಲ್ಲೊ!

ವೆಂಕಣ್ಣ :—ಹೌದ್ ಮತ್ತs; ನಾಡಹಬ್ಬದ್ದಶಿಂದ ಆಡತೀವಿ ನಾಟಕಾ ಅಂದಮ್ಯಾಲೆ ಐತಿಹಾಸಿಕ, ಇಲ್ದಿದ್ರ ಪೌರಾಣಿಕ ಆಡಿದ್ರs ಶೋಭಿಸ್ತದs?

ನಾರಾಯಣ :—ಬರಾಬ್ಬರಿ; ಐತಿಹಾಸಿಕ ಅಥ್ವಾ ಪೌರಾಣಿಕ ನಾಟಕಾದ್ರ ನಮುಗೆ ಬೇಕಾದಲ್ಲೆ, ಪ್ರಸಂಗ ಹೊಂದಿದರೇನು, ಹೊಂದದಿದ್ದರೇನು, ಹಾಡು ಹಾಡಲಿಕ್ಕೆ ಬರ್ತsದ.

ಚಿದಂಬರ :—ಆದರೆ, ಮಕ್ಕಳೇ; ನಿವೇನು ಇಪ್ಪತ್ತನೇ ಶತಮಾನ ದಾಗಿದ್ದೀರೋ ಏನು ಕೃತಯುಗದಾಗೋ? ಈಗಿನ್ನಿವ್ಸದಾಗ ಸಾಮಾಜಿಕ ನಾಟಕಾನೇ ಹೆಚ್ಚು ಪರಿಣಾಮಕಾರಕ ಇರ್ತಾವs.

ಪ್ರಹ್ಲಾದ :—ಅದು ಖರೆ; ನಮ್ಮ ಸಮಾಜಾಂದ್ರ ಕೊಳತ ಹುಣ್ಣಿನ್ಹಾಂಗ ಅದs; ಆ ಹುಣ್ಣಿಗೆ ಒಳ್ಳೇ ಪರಿಣಾಮಕಾರಿ ಆಗೋಹಾಂಗ ಕೈಲಾಸಂ ಕಾರಂತ, ಕೆರೂರು, ಅ. ನ. ಕೃಷ್ಣರಾವ್, ಶ್ರೀರಂಗ ಮುಂತಾದ ದೊಡ್ಡ ದೊಡ್ಡ ಸಾಹಿತ್ಯದ ಡಾಕ್ಟರರು ಸಾಮಾಜಿಕ ನಾಟಕಗಳೆಂಬೊ ಮಲಾಮು ತಯಾರ್ಮಾಡ್ಯಾರ; ತೀಳೀತಿಲ್ಲೊ.

ಗೋವಿಂದ :—ಆದರ ಒಂದೊಂದು ಥರದ ಮಲಾಮು ಬಹಾಳ ಕೆಟ್ಟ ನಾರ ತಿರತಾವಪಾ!

ಪ್ರಹ್ಲಾದ :—ಅದು ಹುಣ್ಣಿನ ರೀತೀವ್ಯಾಲೆ ಅವಲಂಬಿಸಿರತ್ತದ.

ವೆಂಕಣ್ಣ :—ಆದ್ರs, ಈ ಸಾಮಾಜಿಕ ನಾಟಕದಿಂದ ಏನು ಸುಧಾರಿಸೇದ ನಮ್ಮ ಸಮಾಜಾ! ಮೇಲಾಗಿ ಈ ನಾಟಕಕಾರರು, ತಾವು ತಮ್ಮ ಜೀವನದಾಗ ಸಾಧಿಸಲಾರದೆ ಸೋತಂಥಾ ಮಾತುಗಳನ್ನ ಮಾತಿಲೆ ಸಾಧಿಸಬೇಕಂತ ಬರೆದ ನಾಟಕಿವು.

ನಾರಾಯಣ :—ಮ್ಯಾಲೆ, "ಈ ಸಾಮಾಜಿಕ ನಾಟಕಗಳು ನಮ್ಮ ನಾಡಿನ, ನಮ್ಮ ಸಮಾಜದ, ಒಟ್ಟಾರೆ ನಮ್ಮ ಜನಜೀವನದ ಪಡಿಗನ್ನಡಿ, ನಡೆಗನ್ನಡಿ, ಪುಡಿಗನ್ನಡಿ" ಅಂತ ಎಲ್ಲಾ ನಾಟಕಕಾರರೂ ಜಂಭಾ ಕೊಚ್ಚಿಕೋತಾರ. ಆದ್ರ ಈ ನಾಟಕದಾಗ ಇರ್ತsದೇನೂ.... ಯಾವುದೋ ಮುಂಡೇಗಂಡ ಇಂಗ್ಲಂಡಕ್ಕ ಹೋಗಿ ಲಂಡ ಆಗಿ ಬಂದದ್ದು, ಅಥವಾ ಯಾವದೋ ಒಬ್ಬ ಗಂಡನ ಮುಂಡಿ ಪಂಢರಪುರದ ಯಾತ್ರಾ ಮಾಡಿದ್ದು. ಇದs ಹೌದಲ್ಲೊ!

ವೆಂಕಣ್ಣ :—ನಾನೂ ಅದs ಅಂತೀನಿ. ನಮ್ಮ ಸಮಾಜಯೇನು ಬರೇ ಬ್ರಾಹ್ಮಣರಿಗೆ ಗುತ್ತಿಗೀ ಕೊಟ್ಟsದ? ಸಮ್ಲಲ್ಲಿ ಮುಸಲ್ಮಾನರು, ಕಿರ್ಶ್ಚನ್ನರು, ಬಣಜಿಗೇರ, ದೇವಾಂಗರು, ಬಡಿಗೇರು, ಬೆಸ್ತರು, ಮಾದರು ಮೊದಲಾದ ಹದಿನೆಂಟ ತರದ ಸಮಾಜ ಅವs. ಆ ಎಲ್ಲಾ ಸಮಾಜಗಳ ಸುಖದುಃಖ, ಅವರವರ ಕುಂದುಕೊರತೆ ಇವೆಲ್ಲಾ ನಿಮ್ಮ ಈ ಸಾಮಾಜಿಕ ನಾಟಕದಾಗ ಎಷ್ಟು ಮೂಡ್ಯಾವ ಹೆಳ್ರಿ? ಇಕಾ ನಮ್ಮ ನಾವಲಿಗೇರ ಕುಲದಾಗs ಸುಧಾರ್ಸಬೇಕೂ ಅಂದ್ರ ಒಂದು ಸಾವಿರ ಮಾತು ಅವs. ನಾವಲಿಗೇರ ಮ್ಯಾಲ ಒಂದsರ ನಾಟಕ ಅವನs? ಹೇಳ್ರಿ.

ಚಿದಂಬರ :—ವೆಂಕಣ್ಣ ಅನ್ನೋ ಮಾತೇನೋ ನಿಜ. ಆದರೆ ವೆಂಕಣ್ಣಾ, ಈಗ ನಾವು ನಿನ್ನ ಮುಟ್ಟಿಸಿಗೋತೀವೋ ಇಲ್ಲೋ; ಇದೆಲ್ಲಾ ಆ ಸಾಮಾಜಿಕ ನಾಟಕಗಳ ಪರಿಣಾಮನೇ. ಆದ್ರ ಅದಿರಲಿ; ಅಂಥಾ ನಾಟಕಿದ್ರ ನೀ ಪಾರ್ಟು ಮಾಡ್ತೀಯಾ?

ವೆಂಕಣ್ಣ :—ಹೋ, ಹೋ.... ಬೇಕಾಧಾಂಗ.

ನಾರಾಯಣ :—ಅದರಾಗ ಹಾಡ್ಮಾತ್ರ ಇರಬೇಕು.

ವೆಂಕಣ್ಣ :—ಅದು ಮಾತ್ರ ಖಚೀತನs.

ಕುಲಕರ್ಣಿ :—ಇಲ್ಲಿ ನೋಡ್ರಿ, ಸಧ್ಯಕ್ಕಂತೂ ಅಂಥಾ ನಾಟಕಿಲ್ಲ ; ಇದ್ದದ್ದ ರಲ್ಲಿ ಆರಿಸಿಗೊಂಡು ಈ ನಾಡಹಬ್ಬಾ ಪಾರುಮಾಡೋಣ.

ಪ್ರಹ್ಲಾದ :ಹೌದಪಾ ವೆಂಕಣ್ಣ ; ನಾಟಕಕಾರರೂ ತಮ್ಮ ಜಾತೀ ಹಿಡಿದು ಬರದ್ರ ತಪ್ಪೇನು ? ಈಗ ನೀ ಪದಾ ಬರೀತಿ; ನಾಳೆ ನಾಟ್ಕಾ ಬರೀಲಿಕ್ಕೆ ಹತ್ತಿದೆಂದರ, ನಾವಲಿಗೇರ ವ್ಯಾಲ ಬರಿ; ಅಂದ್ರ ನಮಗೂ ಬ್ಯಾರೆ ಬ್ಯಾರೆ ಸಮಾಜದ ಸ್ಥಿತಿಗತಿ ಗೊತ್ತಾಗ್ತsದ. ಕನ್ನಡದೊಳಗೆ ಸಾಮಾನ್ಯ ಜನಗಳ ಜೀವನದ ಮೇಲೆ ಸಾಹಿತ್ಯ ಇಲ್ಲದಿದ್ದರೆ, ಅದು ಈ ವರೆಗೆ ಬರೆದವರ ತಪ್ಪಲ್ಲಾ; ನಿನ್ನಂಥಾ ಬರೆಯದೆ ಇರುವವರ ತಪ್ಪು. ನಮ್ಮ ನಮ್ಮ ಅಂಗೈಹುಣ್ಣು ನಾವೇ ನೋಡ್ಕೋಬೇಕು.

ಕುಲಕರ್ಣಿ :—ಅಂತೂ ನಮ್ಮ ಜನರಲ್ ಸೆಕ್ರೆಟರಿಗಳು ತೀರ್ಮಾನಿಸಿದರಲ್ಲಾ! ಈಗಾದ್ರೂ, ಈ ಮೂರು ನಾಟಕದ ಪೈಕಿ ಯಾವ್ದು ಆರಸೂಣ ಹೇಳ್ರಿ. ಮೊದಲ್ನೇದು ನಮ್ಮ ಜಾಗೀರದಾರರ ಸಂಧ್ಯಾಕಾಲ.

ಗೋವಿಂದ :—ಅದರೊಳಗ ಪಾರ್ಟು ಎಷ್ಟು ಅವs ?

ನಾರಾಯಣ :—ಹೆಂಣು ಪಾರ್ಟು ಎಷ್ಟು ಅವs ?

ಕುಲಕರ್ಣಿ :—ಪಾರ್ಟಿಲ್ಲಾ ಹವಣಿ ಅವs; ಏಳು; ಹೆಣ್ಪಾರ್ಟು ಒಂದು.

ಚಿದಂಬರ :—ಆ ಮುದುಕೀ ಪಾರ್ಟು ಹೌದಲ್ಲೋ!

ವೆಂಕಣ್ಣ :—ಮುದುಕೀ ಪಾರ್ಟಿದ್ರ ನಾವೇನು ಮಾಡವ್ರಲ್ಲ!

ನಾರಾಯಣ :—ಈ ಮುದುಕೇರ್ದ್ದೂ, ವಿಧವಾಗಳವೂ ಪಾರ್ಟ ಇದ್ದ ನಾಟಕಾ ಬ್ಯಾಡಾs ! ಹೋದ ವರ್ಷ ನಾಗತ್ತೇ ಪಾರ್ಟು ನನಗs ಕೊಡ್ಲಿಕ್ಕೆ ಬಂದಾಗs ಕೈಲಾಸಂ ಅವರ ನಾಟಕಾನs ಕೈಲಾಸಕ್ಕ ಕಳಿಸು ಅಂತ ಹೇಳಿದ್ನೋ ಇಲ್ಲೋ ! ನನ್ನ ಹೆಸರು ನಾರಾಯಣಾ; ವೈಕುಂಠದಾಗ ಆ ನಾಟಕಕ್ಕ ಪ್ರವೇಶ ಇಲ್ಲಾ !

ಗೋವಿಂದ :—ಏ ನಾರಾಯಣಾ, ನೀ ನಾಟಕ್‌ದಾಗ ಮುತ್ತೈದಿ ಮಾಲಕ್ಷ್ಮಿ ಯಾಗಬೇಕು ಅಂತ ಹಾತೊರೀತೀದಿ ; ಯಾಕ ಆ ನಾರಾಯಣ ನಾಮದ ಜಂಭಾ !

ಚಿದಂಬರ :—ಅಲ್ರೋ, ಮುದುಕೀ ಪಾರ್ಟ ಒಲ್ಲೆ ಅಂತ, ನಮ್ಮ ಜಾಗೀರದಾರರ್ನ ಲಾಗಾಹೊಡಸ್ತೀರಲ್ಲೋ; ಎಂಥಾ ಉತ್ತಮ್‌ಪ್ರತಿ ನಾಟಕಾ!

ಕುಲಕರ್ಣಿ :—ಹಾಂಗಾರ, ಈ ಎರಡನೇ ಮೂರನೇವಾದ್ರೂ ಪಾಸ ಮಾಡ್ರಿ. ಇನ್ನs, ದಿವಸ ಭಾಳಿಲ್ಲಾ. ರಿಹರ್ಸಲ್ಲೂ ಲಗೂ ಆರಂಭಿಸಬೇಕು.

ಗೋವಿಂದ :—ಆತ ಭಡಕ್ಕನ ಹೆಸರಷ್ಟು ಹೇಳೀ ಬಿಡು; ಒಗಟಾ ಹಾಕಿ ಹೇಳಾವ್ರ್ಹ್ಯಾಂಗ ಅಷ್ಟ್ಯಾಕ ಮಿಜಿಮಿಜಿ?

ಕುಲಕರ್ಣಿ :—ಎರಡನೇದ್ದು ಅ. ನ. ಅವರ "ಆದದ್ದೇನು", ಮೂರನೇದ್ದು ಅವರ "ಆಹುತಿ"!

ಚಿದಂಬರ :—ಅ. ನ. ಕೃಷ್ಣರಾಯರ ಆಹುತಿ, ಆದದ್ದೇನು, ನಾಡಹಬ್ಬಕ್ಕ ಒಪ್ಪೋ ಮಾತಲ್ಲ.

ಪ್ರಹ್ಲಾದ :—ಅದರಕಿಂತ, ನಮ್ಮ ಶ್ರೀರಂಗರ ಹರಿಜನ್ವಾರವs ಆಡಿಬಿಡ್ರ್ಯೋ; ಫಸ್ಟಕ್ಲಾಸು ನಾಟಕಾ!

ಗೋವಿಂದ :—ಆದ್ರ ಆ ಹರಿಜನವಾರದಾಗ, ಹರಿಜನರs ಬರೂದುಲ್ಲಾ!

ಚಿದಂಬರ :—ಜನವಾರಾದ್ರೂ ಬರ್ತsದಿಲ್ಲೋ!

ಗೋವಿಂದ :—ಬರೋದಿಲ್ಲ; ಹೋಗ್ತsದ ಹರಿದು!

ವೆಂಕಣ್ಣ :—ಮತ್ತ, ನೀವು ಬರೇ ಹಾರೋರ ನಾಟಕದ ಮಾತs ಆಡ್ತೀರಲ್ಲೊ!

ನಾರಾಯಣ :—ಮೇಲಾಗಿ, ಆ ನಾಟಕಾ ಹೋದಸಲ ಸಿಟಿ ಅಮೆಚೂರ್ಸಿನವರು ಆಡ್ಯಾರ. ಹೊಸಾದಿದ್ರ ಛಲೋ.

ಕುಲಕರ್ಣಿ :—ಹಾಂಗಾರ, ನಿಮಗ ಖರೇ ಹರಿಜನರ ನಾಟಕಾನs ಬೇಕಾಗಿದ್ರ, ಬೇಂದ್ರೆಯವರ ಉದ್ಧಾರ ಆಡೋಣ.

ಗೋವಿಂದ :—ಉದ್ಧಾರಾ! ಆಡೋದೋ ಮಾಡೋದೋ?

ಕುಲಕರ್ಣಿ :—ನಾಟಕಕಾರರು ಕುಡುಗೋಲು ಕುಂಬಳಕಾಯಿ ನಾಟಕಾ ಆಡೋವ್ರ ಕೈಯಾಗs ಕೊಟ್ಟಿರ್ತಾರಂತs; ನೀವ್ಹ್ಯಾಂಗ ಮಾಡಿದ್ರೂ ಸರಿ.

ವೆಂಕಣ್ಣ :—ಅದರೊಳಗೆಷ್ಟರವs ಪಾರ್ಟು?

ಕುಲಕರ್ಣಿ :—ಹನ್ನೆರಡವs; ಅದರೊಳಗೊಬ್ಬ ಆಚಾರ್ರೂ, ಒಬ್ಬ ಭಟ್ಟರೂ ಸಹಿತ ಇದ್ದಾರ; ನಮ್ಮ ಗೋವಿಂದಾಚಾರಿಗೆ, ಚಿದಂಬರಗ, ಯೋಗ್ಯ ಆಗ್ತsದ.

ನಾರಾಯಣ :—ಆದರ ಹೆಣ್ಣಾಟ್ರ್ಗ?

ಕುಲಕರ್ಣಿ :—ಅದರ ನಿಗ್ಗರಾನೇ ಇಲ್ಲ.

ವೆಂಕಣ್ಣ :—ಹಾಂಗಾರ ನೀವs ಆಡಿಕೊಳ್ಳಿ್ರ ಆ ನಾಟಕಾನs; ನಡಿಯೋ ನಾರಾಯಣಾ!

ಚಿದಂಬರ :—ಬಿಡ್ರಿ; ಅದನ್ನ ಹೋಗಲಿ. ಇವರಿಬ್ಬರೂ ಹೋದ್ರ ಗತಿ ಯೇನೂ? ಮ್ಯಾಲ ಹನ್ನೆರಡು ಪಾರ್ಟ್ರ ಅವsಂತೀರಿ.

ಕುಲಕರ್ಣಿ :—ಹಾಂಗಾದ್ರಿನ್ನ ಯಾ ನಾಟಕಾ ಆಡೂಣಾಂತೀನಿ! ಈಗ ನಾವು ನಡ್ಸಿರೋದs ಒಂದ ನಾಟಕಾಥಾಂಗ ಆಗ್ಲಿಕ್ಕೆ ಹತ್ತ್ಯೇದs! ಒಳೇ ಬಂತಿದು ಸಾಯೋ ಆಟ!

ಪ್ರಹ್ಲಾದ :—ಬರಾಬ್ಬರೀ ಅಂದಿ! ಹಾಂ, ಬೇಂದ್ರೆಯವರ ಸಾಯೋ ಆಟ ಸರಿಪಾಗ್ತsದ ನೋಡ್ರಿ.

ಗೋವಿಂದ :—ಅಲ್ರ್ಯೋ, ಇಗಿಷ್ಟರಾಗs ಅವರ್ನ ಉದ್ಧಾರಾ ಮಾಡೀರಿ! ಮತ್ತಿನ್ನ................

ವೆಂಕಣ್ಣ :—ಆ ಬೇಂದ್ರೆಯವರ ನಾಟಕದಾಗ ಪಾರ್ಟ್ರ ಎಷ್ಟವರೀ ಕುಲಕರ್ಣಿ?

ನಾರಾಯಣ :—ಅಂದ್ರ ಹೆಣ್ಣಪಾರ್ಟ್ರ ಎಷ್ಟು ಅವs ಅಂತ?

ಕುಲಕರ್ಣಿ :—ಎರಡು ಅವs.

ವೆಂಕಣ್ಣ :—ಸರೀ ಆತು; ಯಾಕಣಾ ನಾರಾಯಣಾ?

ಕುಲಕರ್ಣಿ :—ಆದ್ರ ಬ್ಯಾರೇ ಪಾತ್ರ ಹತ್ತು ಹನ್ನೆರಡು ಅವs.

ಪ್ರಹ್ಲಾದ :—ಅವನ್ನೇನು ಹಿಂದs ಮುಂದs ಹೊಂದಿಸಿಗೊಳ್ಳಿಕ್ಕೆ ಬರ್ತsದ.

ನಾರಾಯಣ :—ಅದs ಇರ್ಲಿರೀ! ನಾಟಕಾನೂ ಮಜಾ ಇದ್ದೀತು.

ಕುಲಕರ್ಣಿ :—ಎಲ್ಲಾರದೂ ಒಪ್ಪಿಗೇ? ಹೆಚ್ಚಿನ ಪಾತ್ರಗಳ ದಸಿಂದ ಶೇಷ ಗಿರಿ, ಹನುಮರೆಡ್ಡಿ, ರಂಗನಾಥ, ಕಮಲಾಕರ ಅವರ್ನೆಲ್ಲಾ ಒಪ್ಪಸ ಬೇಕಾಗ್ತsದ. ಆ ರಂಗನಾಥ ತನಗೆಲ್ಲಿ ಹೆಣ್ಣಾಟ್ರ್ಗ ಕೊಡ್ತಾರೋ ಅಂತ ಹೆದರಿ ಹತ್ತರೇ ಹಾದಿಲ್ಲ!

ಗೋವಿಂದ :—ಅಂತೂ ಒಮ್ಮೆ ಬಗೀಹರೀತs? ಇನ್ನ ಯಾರ್ಯಾರಿಗೆ ಯಾವ್ಯಾವ ಪಾರ್ಟೂ ಹೇಳ್ರಿ.

ಕುಲಕರ್ಣಿ :—ದತ್ತಪ್ಪಾ, ಆ ಸಾಯೋ ಆಟಾ ತಗೀ; ಬೇಂದ್ರೆಯವರ ಹುಚ್ಚಾಟದೊಳಗ ಅದs ನೋಡು........(ದತ್ತಪ್ಪನು ಪುಸ್ತಕ ತಂದು ಕೊಡಲು)........ಹ....ಹ.... ಇಲ್ಲಿ ನೋಡ್ರಿ. ಹೆಣ್ಪಾರ್ಟು ಎರಡೂ; ಒಂದು ಕಳ್ಳೀ; ಇನ್ನೊಂದು ಸೂಳೀ!

ವೆಂಕಣ್ಣ / **ನಾರಾಯಣ** } ಇಂಥಾ ಪಾರ್ಟಿದ್ದರ ನಾವೇನು ಒಲ್ಲಿವಿ; ನಡಿಯೋ ನಾರಾಯಣ!

ಪ್ರಹ್ಲಾದ :—ಅದರೊಳ್ಗೇನ್ತಪ್ಪೋ! ಎಷ್ಟಂದರೂ ನಾಟಕಾ!

ನಾರಾಯಣ :—ಆದ್ರ ನಾವು ದೇಸಾಯರ ಮೀನಾಕ್ಷೀ ಮರ್ಜಿ ಹಿಡಿದು ಜರದ ಸೀರಿ ತಂದಿಟ್ಟೇವಿ ಈಗಾಗಳೇ! ಅದಕ್ಕೇನಂತೀರಿ?

ಚಿದಂಬರ :—ಆತು! ಆ ನಾಟಕದಾಗಿನ ಸೂಳಿಗೆ ಜರದಸೀರಿ ಉಡ್ಸೋಣಂತ.

ವೆಂಕಣ್ಣ :—ಅದು ನಾರಾಯಣಗಾತೂ, ನನಗೇನು? ನನ್ದು ಮುಖ್ಯ ಪಾರ್ಟು!

ಕುಲಕರ್ಣಿ :—ಅಂದ್ರ ನೀ ಕಳ್ಳೀಪಾರ್ಟು ತಗೊಂಡಾಂಗಾತs! ಆದ್ರ ಕಳ್ಳಿಗೆ ಹ್ಯಾಂಗ ಜರದ ಸೀರಿ ಉಡಿಸಲಿಕ್ಕೆ ಬಂದೀತು! ಹಾಂಗ ನೋಡಿದ್ರ, ಆ ಸೂಳಿ ಸೈತ ಹಳ್ಳಿಗಾಡ ಸೂಳಿ; ವೇಶ್ಯಾ ಅಲ್ಲಾ ವಾರಾಂಗನಾ ಅಲ್ಲಾ!

ಗೋವಿಂದ :—ಈ ಕಳ್ಳಿ, ಹೇಳಿಕೇಳಿ ಕಳ್ಳಿ ; ಜರದ ಸೀರಿನೂ ಕದ್ದಿದ್ದಾಳು!

ಕುಲಕರ್ಣಿ :—ಆದ್ರ ನಾಟಕದಾಗ ಹಾಂಗ ಬರೂದುಲ್ಲಾ!

ವೆಂಕಣ್ಣ :—ಹಾಂಗ ಬರದಿದ್ರ ನಾವು ಹೀಂಗ ಹೋಗೋಣ್ನಡಿಯೋ ನಾರಾಯಣಾ; ಏನ್ಹಚ್ಚಿ ಇವರದು, ಆ ಶೇಷಗಿರಿ, ಕಮಲಾಕರ ಅವರ್ನ ಹುರಿದುಂಬಿಸಿ ನಾವು ಬ್ಯಾರೇ ನಾಟಕಾ ಮಾಡೋಣ್ನಡೀ! ಹೂಂ, ಏಳು ಯಾಕs; ನಿನಗೊಬ್ಬಗs ಜರದ್ಸೀರಿ ಸಿಕ್ಕರೆ ಸಾಕೇನು? ಯಾಕ್ಕೂತೀ! ಹುಂ ಏಳಿನ್ನ (ಇಬ್ಬರೂ ಹೋಗುವರು)

ಪ್ರಹ್ಲಾದ :—ಗೋವಿಂದಾಚಾರs; ಗೋವಿಂದಾ, ಗೋsವಿಂದಾ !!!

ಗೋವಿಂದ :—ನನಗ್ಯಾಕ ಹೇಳ್ತಿರಿ; ಆ ಕುಲಕರ್ಣಿಗೆ ಹೇಳ್ರಿ.

ಕುಲಕರ್ಣಿ :—ಅಂತೂ ಇದು ನನ್ನ ಸಾಯೋ ಆಟಾನs ಬಂತು, ಕಾರ್ಯ ದರ್ಶಿ ಆದ ತಪ್ಪಿಗೆ. ಇನ್ನ್ಯಾವ ನಾಟಕಾ ಆರಿಸಬೇಕೂಂತೀನಿ?

ಇಷ್ಟೊತ್ತಿನಕಾ, ಹೆಣ್ಪಾರ್ಟು ಇದ್ದ ನಾಟಕಾ ಆರಿಸ್ಬೇಕಾಗಿತ್ತು; ಅದೂ ಎರಡಕ್ಕಿಂತ ಹೆಚ್ಚಿರಬಾರದು ಕಡ್ಮಿ ಇರಬಾರದು. ಮ್ಯಾಲೆ ಜರದ ಸೀರೀ ಹೆಣ್ಣೂ ಆಗಬೇಕು! ಈಗ ನೋಡೀಯಾ, ಬರೇ ಗಂಡ ಪಾರ್ಟಿನ ನಾಟಕಾನs ಆರಿಸ್ಬೇಕಾತೂ! ಅವರಿಬ್ಬರ್ನ ಬಿಟ್ರ ಮತ್ಯಾರೂ ಹೆಣ್ಪಾರ್ಟು ಮಾಡ್ಲಿಕ್ಕೆ ತಯಾರಿಲ್ಲಾ!

ಗೋವಿಂದ:—ಅವರಾದ್ರೂ ಏನೂ! ನೀವೆಲ್ಲಾರೂ ಹಾಡು ಬರ್ತsದಂತ ಉಬ್ಬಿಸಿದ್ದಕ್ಕ, ಮ್ಯಾಲೆ ಆ ಮೀನಾಕ್ಷಿ ಜರದ ಸೀರಿ ಕೊಟ್ಟದ್ದಕ್ಕs ಹಿಗ್ಗಿ ಹೆಣ್ಪಾರ್ಟಿಗೆ ಹೂಂ ಅಂದಾವs! ಆದರಿವರ ಮೊಸಡಿ ಎಂಥಾವೂ! ಎಂಥಾ ಜರದ ಸೀರಿ ಉಟ್ಟರೂ ಇವು ಖೊಜ್ಜೇರ ಹಾಂಗ ಕಾಣ್ಸೋದೇನು ತಪ್ಪಿದ್ದಲ್ಲಾ.

ಚಿದಂಬರ:—ಆದ್ರ ಹೆಣ್ಪಾರ್ಟಿಲ್ಲದ ನಾಟ್ಕ ಶೋಭಿಸೋದಿಲ್ಲ ಅಂಬವ್ರೂ ನೀವs!

ಕುಲಕರ್ಣಿ:—ಅಂತೂ ಆ ಸಾಯೋ ಆಟದಾಗ ಶೂಲ ಯಾರಿಗೆ ಹಾಕತ ಆಗ್ತsದ ಅವರ್ನs ಶೂಲಕ್ಕೇರಿಸಿರಿ ಅನ್ನೋ ಹಾಂಗ ನಾವು ನಾಟಕ ಆಟಾ ಆಡಾವ್ರಿಗೆ ಯಾವದು ಹೊಂದೀತು ಅಂಥಾದ್ದನ್ನ ಆಡೂ ಪ್ರಸಂಗ ಬಂತು. ನಾ ಸುಮ್ಮನs ಈ ನಾಟಕಾ ಆರ್ಸೋದರಾಗ ಒಂದು ವಾರಾ ಕಳೆದೆ.

ಪ್ರಹ್ಲಾದ:—ಆತು; ಈಗ ಉಳಿದ ಜನಾ ಏಳು! ಅಂತ, ಏಳs ಪಾರ್ಟಿದ್ದದ್ದು, ಹೆಣ್ಪಾರ್ಟಿಲ್ಲದ್ದು, ಒಬ್ಬೊಬ್ಬ ಆಚಾರಿ ಭಟ್ಟಾ ಇದ್ದದ್ದು, ಸಂಗೀತ ಇಲ್ಲದ್ದು, ಎಲ್ಲಾರಿಗೂ ಸಮಾ ಮಾತು ಇದ್ದದ್ದು, ಹೀರೋನ ಗೊಂದಲ ಇಲ್ಲದ್ದು, ಇನ್ನೆರಡು ವಾರದಾಗ ತಯಾರಾಗೋವಂಥಾದ್ದು, ಹೆಚ್ಚಿನ ಆಡಂಬರ ಇಲ್ಲದ್ದು, ಎರಡು ತಾಸಿನಾಗs ಆಗುವಂಥಾದ್ದೂ, ಜನರಿಗೆ ಬ್ಯಾಸರಬರದಂಥಾದ್ದು, ಮತ್ತ ಸ್ವಲ್ಪs ಖರ್ಚಿನಾಗ ಆಗುವಂಥಾದ್ದು.... ಇಂಥಾ ಒಂದು ನಾಟಕಾ ಹುಡುಕಿ ತಗೀರಿ!

ಚಿದಂಬರ:—ಮತ್ತ ಯಾರಾದರೂ ಆಯತ ತಪ್ಪಿಸಿದರೂ ಒಂದೆರಡು ಪಾರ್ಟು ಕಡಿಮಿ ಮಾಡಲಿಕ್ಕೆ ಬಂದಿರಬೇಕು.

ಗೋವಿಂದ :—ಮತ್ತ ವೈಷ್ಣವರದೂ ಮಠದ್ದೂ ಟೀಕಾ ಇರಬಾರದು; ಈ ಸಾರೆ ಜಜ್ಜ ಜಯತೀರ್ಥರಾಯರು ಅಧ್ಯಕ್ಷರಾಗವ್ರಿದ್ದಾರ.

ಪ್ರಹ್ಲಾದ :—ಮತ್ತ ಬ್ರಾಹ್ಮಣೇತರದೂ ಹೆಸರು ತಗಿದಿರಬಾರದು; ನಮ್ಮ ಹತ್ತರಕಿ ಹಂಪಣ್ಣದೇಸಾಯ್ರು ಹತ್ತು ರೂಪಾಯಿ ಪಟ್ಟೀ ಕೊಡ್ತೀವೆಂದಾರ.

ಚಿದಂಬರ :—ವಿಧವಾ ಜನರ ವಧಾ ಇರಬಾರದು; ಭಾಗೀರಥಿಬಾಯರು ಭಾಷಣಾ ಮಾಡ್ತಾರ!

ಪ್ರಹ್ಲಾದ :—ಹೌದಪಾ, ವಿಧ್ವಾ ಅಂದಕೂಡ್ಲೆ ನೆನಪಾತು; ಮತ್ತೀ ಮರಾಟೀ ಜನರ ಮಕ್ಕಷ್ಟಾನೂ ಇರಬಾರದು. ಯಾಕಂದ್ರ, ದೇಶಮುಖ ಗಂಗಾನಾಥರಾಯರನ್ನ ಭಾಳ ಶ್ರಂಬಟ್ಟು ನಾಡಹಬ್ಬದಾಗ ಮಾತಾಡ್ಲಿಕ್ಕೆ ಹೂಂ ಅನಿಸೇವಿ!

ಕುಲಕರ್ಣಿ :—ಆದ್ರ, ಆ ಮಗಾ ಮರಾಟ್ಯಾಗ ಮಾತಾಡೋ ಹಟಾ ಹಿಡದ್ನಂದರ ನ್ಯಾಯಕ್ಕ ಹಾದಿ!

ಪ್ರಹ್ಲಾದ :—ಇಲ್ಲಾ, ನಾಡಹಬ್ಬದ್ದಶಿಂದ ಕನ್ನಡದಾಗ ಮಾತಾಡ್ಲಿಕ್ಕೆ ಒಪ್ಪಿಸೇವಿ. ಮತ್ತೀ ಕರ್ನಾಟಕದ ಮುಂದಿಗೆ ಕನ್ನಡ ಜನರ ಮರ್ಜಿ ಹಿಡಿಯೂದೂ ಬೇಕಾಗಿರತ್ತದ; ಅಂತಃ ಒಪ್ಪತಾರ.

ಚಿದಂಬರ :—ಆದ್ರ, ನಮ್ಮ ದೇಶದಾಗ ನಾವು ಈ ಮರಾಟೀರಿಗೆ ಅಳಕೋ ದ್ಯಾಕಂತೀನಿ?

ಪ್ರಹ್ಲಾದ :—ಅಲ್ಲಾ, ಮಾನವಂತರು ತಮ್ಮ ಮಾನಕ್ಕಂಜಿದರೆ, ಮಾನಗೇಡಿ ತನಗs ಅಂಜಿದರು ಅಂತ ತಿಳಕೊಂಬೊ ಲೆಕ್ಕ. ಒಟ್ಟು ನಮ್ಮೂರ ಹೆಸರು ಕೆಡಬಾರದೂಂತ ನಮ್ಮ ಚಿಂತಿ! ಅದಕ್ಕ, ನಾಡಹಬ್ಬದಂತಾ ಪ್ರಸಂಗದಾಗ ಮಲಗಿದ ನಾಯೀ ಎಬ್ಬಿಸೋದು ಬ್ಯಾಡಾ!

ಕುಲಕರ್ಣಿ :—ಅಂತೂ, ಈ ವಿಧಿನಿಷೇಧೆಲ್ಲಾ ಬರದಿಟ್ರ ಕನ್ನಡ ನಾಟಕಕಾರ ದೊಂದು ಮನುಸ್ಮೃತೀನ ಆದೀತು. ಒಟ್ಟಿನ ಮ್ಯಾಲ ಇದು, ಸಾವಿತ್ರಿ ವರಾ ಹುಡುಕಲಿಕ್ಕೆ ದೇಶಯೆಲ್ಲಾ ತಿರುಗಿ ಕೊನೆಗೆ ವರ್ಷದೊಳಗs ಸಾಯೋ ಗಂಡನ್ನ ಗಂಟು ಹಾಕಿಕೊಂಡ ಲೆಕ್ಕಕ್ಕ ಬಂತು. ಇರಲಿ.

ದತ್ತಪ್ಪಾ, ಕೈಲಾಸಂ ಅವರ ನಾಟ್ಕಾ ನಮ್ಮ ಲಾಯಬ್ರರಿಯೊಳಗೆಷ್ಟವ? ತಾ ಇಲ್ಲೆ.

ಗೋವಿಂದ :—ಕೈಲಾಸಂರ ನಾಟಕ ಬ್ಯಾsಡಾs! ನಮಗ ಅವರ ಶಬ್ದಗಳನ್ನ ಉಚ್ಚರಿಸಲಿಕ್ಕೆ ಬೇಕಾಗುವಷ್ಟು ಸೊಟ್ಟಬಾಯಿ ಮಾಡ್ಲಿಕ್ಕೆ ಬರೋಣಿಲ್ಲಾ! ಮಾಸ್ತಿಯವರವು ಬೇಕಾದ್ರ ನೋಡ್ರಿ.

ಕುಲಕರ್ಣಿ :—ಅವರವು ಸಾಮಾಜಿಕ ನಾಟಕ ನಮಗ ಉಪಯೋಗಕ್ಕ ಬರುವಂಥಾವು ಯಾವೂ ಇಲ್ಲಾ.

ಗೋವಿಂದ :—ಇಲ್ಲs, ಹಂಗಾರ ಅವರಿನ್ನೂ ಪೂರಾ ಆಲ್‌ರೌಂಡ ಆಗಿಲ್ಲಾ ಅಂಥಂಗಾತೂ. ಮತ್ಯಾರೂ? ನಮ್ಮ ಪುಟ್ಟಪ್ಪನವರು!

ಪ್ರಹ್ಲಾದ :—ಅವರದು ಭಾಳ ಕ್ಲಾಸಿಕಲ್ ನಮೂನಿ ಮಾರಾಯಾ! ಮತ್ತ ಅಷ್ಟು ತಿದ್ದಿ ತಿದ್ದಿ ಯಾರು ಮಾತಾಡ್ಯಾರು? ನಮ್ಮ ಎನ್ಕೆ ಅವರವು ನೋಡ್ರಿ! ಇದ್ದದ್ದರಾಗs ಉತ್ತರ ಕರ್ನಾಟಕದ ನಾಟಕಾದ್ರ ಛಲೋ.

ಚಿದಂಬರ :—ಹೌದು, ಅಂದರ ನಮ್ಮ ಹುಂಬ ಜನಕ್ಕ ತಿಳಿದೀತು. ನಮ್ಮ ಜನರ ಕಿವಿ ವೀಣಾ, ಪಿಟೀಲು ಕೇಳಿದ್ವು ಅಲ್ಲಾ; ಹಲಗಿ, ಡೊಳ್ಳು ಕೇಳಿದ ಕಿವಿ.

ಕುಲಕರ್ಣಿ :—ನಾಯಿನ್ನೂ ಮಂಗಳೂರ ಕಡಿ ನಾಟಕಾ ಆಡಸಾವಿದ್ದೆ; ಮೊದ್ಲ ಹಾರಿಸಿಬಿಟ್ಟಿರೆಲ್ಲಾ! ನಮ್ಮ ಎನ್ಕೆಯವರ ನಾಟಕೆಲ್ಲಾ ಚೀಪ ಗಲ್ಲಿನ್ಹಾಂಗ ಅವ. ಅಂದ್ರ ಚೂಪಿದ್ದರೂ ಚಿಕ್ಕವೂ ಅಂತ!

ಗೋವಿಂದ :—ಅದು ನಿಜವೇ! ನಮ್ಮ ಜನಕ್ಕ ಬಂಡಿಗಲ್ಲು ಬೇಕು, ಏಣಿದ್ದದ್ವು. ನಮ್ಮ ಗೋಕಾಕರ ವಿಮರ್ಶಕ ವೈದ್ಯ ತಗೊಳ್ರಿಲಾ.

ಪ್ರಹ್ಲಾದ :—ಏನ್ಹರಕತ್ತಿಲ್ಲಾ; ಅದರೊಳಗ ಎಲ್ಲಾ ತರದ ಕಲ್ಲೂ ಅವs.

ಕುಲಕರ್ಣಿ :—ಆದರ ಹದಿನೈದು ಪಾತ್ರ ಎಲ್ಲಿಂದ ತರೋಣಾ? ಮ್ಯಾಲ ಏನೂ ಹೆಚ್ಚು ಕಡಿಮಿ ಮಾಡಬಾರ್ದಂತ ಟಿಪ್ಪಣಿ ಬ್ಯಾರೆ. ಅಲ್ಲದ, ಮತ್ತಿನ್ನ ಪರವಾನಗಿ ತರಿಸಿಕೋತ ಕೂಡಬೇಕು.

ಚಿದಂಬರ :—ಹಾಂಗಾದರ, ಹೊಸದಾಗಿ ಕೃಷ್ಣಕುಮಾರರ ನಾಟಕಾ ಪ್ರಸಿದ್ಧ ಆಗ್ಯಾವಲ್ಲಾ, ಆ 'ಮಿಂಚಿನ ಹುಡಿ'ಯೊಳಗ! ಅದರ ಪೈಕಿ ಆರಸರೀ.

ಅವರ ನಾಟಕಕ್ಕ ಪರವಾನಗಿ ಕಾರಣಿಲ್ಲ. ಮ್ಯಾಲ ಒಂದೆರಡು ಪಾತ್ರದ ನಾಟಕಾಂದ್ರ ಅಂಥಾವು; ನಾಲ್ಕಾರು ಪಾತ್ರದ್ದೂ ಅಂದ್ರ ಅಂಥಾವು, ಹೆಣ್ಣಿಲ್ಲದ್ದವು, ಇದ್ದರೂ ತೆರೆಯೊಳಗಿದ್ದಂಥಾವೂ, ರಂಗದ ಮ್ಯಾಲ ಬಂದ್ರೂ ಮೂಕಾಗಿರುವಂಥಾವು, ಅದೂ ಒಂದs ಎರಡs ಅಷ್ಟs, ಸೀನಿಕ್ ಇಫೆಕ್ಟು ಇದ್ದದ್ವು, ಇಲ್ಲದ್ವು; ಒಂದೆರಡs ನೋಟದ್ವು; ಬೇಕಾದ್ರ ನಾಕೆಂಟ ನೋಟದ್ವು........ಹೀಂಗ ಅವರು ಲೆಕ್ಕದ ಮ್ಯಾಲ ನಮ್ಮಂಥವರ ದೆಶಿಂದಾನೇ ಬರಧಾಂಗ ಕಾಣಸ್ತದ. ಮುದಿ ಹೆಂಗಸು; ಸಾದಾ ಹೆಂಗಸು, ಥಾಟಮಾಟಿನ ಹೆಂಗಸೂ, ಕಾಲೇಜ ಸ್ಟಾರ್ಸ್ ಎಲ್ಲಾ ನಮೂನೀನು ಅವs ಅವರ ನಾಟಕದಾಗ.

ಪ್ರಹ್ಲಾದ :—ಏನಡ್ಡಿಯಿಲ್ಲ; ಒಂದೆರಡು ಮಜಾ ಆಗೋವಂಥಾವು ನೋಡ್ರಿ.

ಗೋವಿಂದ :—ಬರಾಬ್ಬರೀ ಆತು. ಆ ಮಿಸ್ ಚಾರುಗಾತ್ರಿ ತಗೊಳ್ರಿ; ಕಾಲೇಜದ ವಾತಾವರಣ ಸಿಸ್ತಾಗಿ ಬಂದsದ; ಮ್ಯಾಲೆ ಜರದ ಸೀರಿ ಉಡ್ಸಲಿಕ್ಕೆ ಹರಕತ್ತಿಲ್ಲದ ಎರಡು ಹೆಣ್ಪಾರ್ಟು ಅವ!

ನಾರಾಯಣ :—(ಒಮ್ಮೆಲೆ ಬಂದು) ಹಂಗಾದ್ರs ನಾವೂ ಕರ್ನಾಟಕದ ಸೇವಾ ಮಾಡ್ಲಿಕ್ಕೆ ಸಿದ್ಧರಿದ್ದೇವಿ! ಬಾ, ಬಾರೋ ವೆಂಕಣ್ಣ (ಆತನೂ ಬರುವ.)

ವೆಂಕಣ್ಣ :—ಕಾಲೇಜ ಗರ್ಲ್ಸ ಬಾಯಾಗ ಎರಡು ಮೂರು ಹಾಡು ಹಾಕಿದ್ರೂ ಒಪ್ಪತsದ!

ಗೋವಿಂದ :—ಅಂತೂ ತಿರುಗುಪ್ಪಾತೇ! ಜರದ ಸೀರಿ ಮಹಿಮಾ!

ಚಿದಂಬರ :—ಹಾಂಗಾದ್ರ ನಾಟಕಂತೂ, ಎಲ್ಲಾರ ಮನಸಿಗೂ ಬರೂಹಾಂಗ ಆತೇ? ಆದರ ಮಿಸ್ ಚಾರುಗಾತ್ರಿಯೊಳಗ ಆಚಾರ ಪಾರ್ಟಿಲ್ಲಾ; ನಡೀತದಿಲ್ಲೋ ಗೋವಿಂದಾಚಾರ?

ಗೋವಿಂದ :—ನಿನಗ ಭಟ್ಟನ ಪಾರ್ಟಿಲ್ಲದ ನಡೀತಿದ್ರ, ನನಗೂ ನಡೀತsದ.

ಪ್ರಹ್ಲಾದ :—ಆತಿನ್ನ, ಪಾರ್ಟು ಹಂಚಿಕೊಳ್ರಿ ಲಗುಲಗೂ; ಒಂದ್ ತಾಸಾತು ಈ ರಗಳಿ ನಡದು. ನಾ ಜನರಲ್ ಸೆಕ್ರೆಟರಿ ನಿಮ್ಮೆಲ್ಲರ ಪರವಾಗಿ, ನಿಮ್ಮ ಕೊರಳಿಗೆ ತಕ್ಕ ಶೂಲ ಮಾಡಿಕೊಟ್ಟದ್ದಕ್ಕ ಕೃಷ್ಣ ಕುಮಾರ ಅವರಿಗೆ ಧನ್ಯವಾದದ ಪತ್ರಾ ಬರೀತೇನಿ!

ಕುಲಕರ್ಣಿ :—ಆದ್ರ, ಕೃಷ್ಣಕುಮಾರರು ಅಷ್ಟು ಪ್ರಸಿದ್ಧ ನಾಟಕಕಾರರ ಪೈಕೀ ಅಲ್ಲಾ. ಅದಕ್ಕನುಮಾನಾ!

ಪ್ರಹ್ಲಾದ :—ಮಾತು ಮುಗೀತೂ ಅನ್ನೋದರಾಗ ಮತ್ತೊಂದು ಕೊಳ್ಳಿ ಇಟ್ಟೆಲ್ಲಪಾ ಕುಲಕರ್ಣೀ!

ಗೋವಿಂದ :—ಪ್ರಸಿದ್ಧ ಇಲ್ಲದಿದ್ದರೇನಾತೂ! ನಮ್ಮಂಥವರು ಕೂಡಿ ಪ್ರಸಿದ್ಧಿಗೆ ತಂದರs ಅಲ್ಲs ಯಾವ ಸಾಹಿತಿಯಾದರೂ ಪ್ರಸಿದ್ಧ ಆಗೋದೂ! ಎಲ್ಲಾ ಸಾಹಿತಿಗಳ ಹಾಂಗ 'ಇದೇ ಗ್ರಂಥಕಾರರ ಇತರ ಗ್ರಂಥಗಳು' ಅಂತ ಇನ್ನೂ ಇಷ್ಟುದ್ದಾ ಪಟ್ಟಿ ಹಚ್ಚಿಕೊಂಡಿಲ್ಲಾಂತ ಅವರ ಪ್ರಸಿದ್ಧಿ ಆಗsಬಾರದೇನು?

ಕುಲಕರ್ಣಿ :—ಅವರ ನಾಟಕ ಮೇಲಾಗಿ, ನಮ್ಮ ಕಾರಂತರ ನಾಟಕಗಳ್ಹಾಂಗ ಮಿಂಚಿನ ಕುಡೀನೂ ಅಲ್ಲಾ, ನಮ್ಮ ಜಾಗೀರದಾರರ ನಾಟಕದ್ಹಾಂಗ ಮಿಂಚಿನ ಕಿಡೀನೂ ಅಲ್ಲ; ಮಿಂಚಿನ ಹುಡಿ ಮಾತ್ರ.

ಪ್ರಹ್ಲಾದ :—ಅಂತೂ ಮಿಂಚು ಅದs ಹೌದಲ್ಲೊ? ಇನ್ನ ನೀವು ಸಂಚು ಮಾಡ್ರಿ, ಗೋವಿಂಧೇಳಿಧಾಂಗ!

ಕುಲಕರ್ಣಿ :—ನನ್ನ ಅಂಬೋಣೇನೂಂದ್ರ, ಭಾಳ ಪ್ರಸಿದ್ಧ ಅಲ್ಲದ ನಾಟಕಾ ಮಾಡೋದ್ರಕಿಂತ ನಮ್ಮ ಪೈಕೀನs ಒಂದು ನಾಟಕಾ ಯಾಕ್ ಮಾಡಬಾರದೂ? ಅಂತ.

ವೆಂಕಣ್ಣ :—ಬರಾಬ್ಬರಿ. ಕುಲಕರ್ಣಿ, ನಿನ್ನ ಆ "ಸ್ವಚ್ಛಂದ ಸಂಶಯ" ನಾಟಕಾ ಆಡ್ಲಿಕ್ಕೆ ಏನಡ್ಡೀ? ಇಲ್ಲದಿದ್ರ ನಿನ್ನ ಹೊಸಾ ನಾಟಕಾ, ಆ "ನಾರದs ನಾರದಾ" ಅನ್ನೋದೂ; ಅದರೊಳಗೂ ನನ್ನ ಹಾಡು ಕೂಡ್ತಾವ! ಮತ್ತ ನೀನೇ ಸ್ವತಃ ನಾಟಕಕಾರಾ; ನಿನಗೆಲ್ಲಾ ಹೊಂದಿಸಲಿಕ್ಕೆ ಬರ್ತsದ!

ಕುಲಕರ್ಣಿ :—ಅದೆಲ್ಲಾ ನಾ ತಯಾರ್ಮಾಡೇ ಇಟ್ಟೇನಿ. ನಮ್ಮೆಲ್ಲಾರನೂ ಲಕ್ಷ್ಯದಾಗಿಟ್ಟ ಬರ್ದೀನಿ!

ಗೋವಿಂದ :—ಕೆರದಳತಿಗೆ ಕಾಲು ಕೊಯ್ಸಿಧಾಂಗಾತಿದು! ಅಂತೂ ನಿನ್ನ ನಾಟಕಾನs ಆಡ್ಸೋದಿದ್ದರ ಮೊದ್ಲ ಹೇಳಬೇಕೆತ್ತೊ ಕುಲಕರ್ಣೀ!

ಪ್ರಹ್ಲಾದ:—ಮಾರಾಯಾ! ನಮ್ಮ ಒಂದು ತಾಸು ವ್ಯರ್ಥ ಕಳೆದಿ! ಪಾಪ, ಕರ್ನಾಟಕದ ನಾಟಕಕಾರ್ರೆಲ್ಲಾ ಸುಮ್ಮನ ಬೋಡಂತೀ ಮಾಡಿದ್ರಿ!

ಚಿದಂಬರ:—ಆದ್ರ, ಆ ನಿನ್ನ ಹಳೇ ನಾಟಕಧಾಂಗ, ಭಾಷಾಂತರಾ ಅಥ್ವಾ ಅತ್ತಲಾಗಿಂದಿತ್ತಲಾಗಿಂದಷ್ಟು ತ್ಯಾಪಿ ಹಚ್ಚಿ ಬರದದ್ದೂ ಇದ್ದರ ಬ್ಯಾಡ್ಮಾರಾಯಾ!

ನಾರಾಯಣ
ವೆಂಕಣ್ಣ } ಛೇ. ಛೇ. ಅವು ಕಾಲೇಜ್ ಡೇಜಿನಾಗ ಬರದದ್ದು. ಈ "ನಾರದ ನಾರದ"ದೊಳಗ ನಾರೋದೇನೂ ಇಲ್ಲಾ! ಹಾಡ ಮಾತ್ರ ಅವs!

ಪ್ರಹ್ಲಾದ:—ಅಲ್ಲಾ, ಈ ಒಂದು ನಾಟಕದ್ದಶಿಂದ ಇಷ್ಟು ಜಗತ್ತು ಕೆಳಗs ಮ್ಯಾಲs ಆತೂ! ಇನ್ನ ಇಡೀ ನಾಡಹಬ್ಬದ ಪ್ರೋಗ್ರಾಮು ಅಂದರ ಎಂಥಾ ಹಿರಣ್ಯಕಶಿಪುವಿನ ಸಾವು ಇದ್ದೀತು ನೋಡ್ರಿ!

ಗೋವಿಂದ:—ಅದಕ್ಕs, ಪ್ರಹ್ಲಾದಾ ನಿನ್ನ ಜನರಲ್ ಸೆಕ್ರಟರಿ ಮಾಡಿದ್ದು!

ಪ್ರಹ್ಲಾದ:—ಅಂತೂ ಈಗಾದರೂ ಮುಗೀತಿಲ್ಲೋ? ಏಳ್ರಿನ್ನ!

ಕುಲಕರ್ಣಿ:—ಹೌದೇಳ್ರಿನ್ನ; ಮತ್ತ್ಯಾವಾದ್ರೂ ಹುಳಾ ಗೊಯ್ಯಂದಾವು!

ಗೋವಿಂದ:—ಅಂತೂ ನಮ್ಮ ಕುಲಕರ್ಣೇರ ಕುದುರಿ ಹೊಂಟಲ್ಲಿಂದ ಪೃಥ್ವಿ ಪ್ರದಕ್ಷಿಣಾ ಮಾಡಿ ಹೊಂಟಲ್ಲಿಗೇ ಬಂತು! ಏಳ್ರಿನ್ನ! (ಎಲ್ಲರೂ ಏಳುವರು) ಕುಲಕರ್ಣಿ, ಪಾರ್ಟೀ ನೀನs ಹಂಚಿಕೊಟ್ಟು ಬಿಡು!

ದತ್ತಪ್ಪ:—ಹಾ, ಹಾ! ನಿಂದರ್ರಿ; ಹಾಜರಿ ಬುಕ್ಕಿನ್ಯಾಗ ಸಹಿಮಾಡಿ ಹೋಗ್ರಿ! ಇವೊತ್ತಿನ ಹಜರಿ ಅಂದ್ರ ರಿಕಾರ್ಡ್ ಅಟೆಂಡನ್ಸ ನಮ್ಮ ಲಾಯಬ್ರೀಗೆ! (ಒಬ್ಬೊಬ್ಬರಾಗಿ ಎಲ್ಲರೂ ಸಹಿ ಮಾಡುತ್ತಿರಲು, ತೆರೆ)

೨ನೇ ನೋಟ

ಸೂಚನೆ:—ಈ ನೋಟದ ರಂಗಸ್ಥಳವೆಂದರೆ ಕುಲಕರ್ಣಿ ಕಂಪೂದವರು ಆಡುವ ನಾಟಕದ ರಂಗಸ್ಥಳದ ಹಾಗೂ ರಂಗಸಾಲೆಯ ನಡುವಿನದೊಂದು ವಿಂಗು. ಆ ನಾಟಕದ ರಂಗಸ್ಥಳ ಈ ನೋಟದ ರಂಗಸ್ಥಳದ ಬಲ ವಿಂಗಿನಲ್ಲಿದೆ ಎಂದೂ ರಂಗಸಾಲೆ ಎಡ ವಿಂಗಿನಲ್ಲಿದೆ ಎಂದೂ ತಿಳಿಯಬೇಕು. ಈ ನೋಟದ ಪಾತ್ರಗಳೆಲ್ಲ ಹೆಚ್ಚಾಗಿ ಆ ಬಲ ವಿಂಗಿನಲ್ಲಿದ್ದ ರಂಗದತ್ತ ಲಕ್ಷ್ಯವಿಡಬೇಕು.

(ತೆರೆಯೆದ್ದಾಗ, ಕುಲಕರ್ಣಿ ನಮ್ಮ ರಂಗಸ್ಥಳದ ನಡುವೆ, ಎಂದರೆ ತನ್ನ ರಂಗಸ್ಥಳದ ವಿಂಗಿನಲ್ಲಿ ನಿಂತಿದ್ದಾನೆ. ಸುತ್ತಲೂ, ಕುರ್ಚಿ, ಸ್ಟೂಲು, ಡಬ್ಬಿ, ಪೆಟ್ಟಿಗೆ, ಬಟ್ಟೆಗಳ ಗಂಟು, ಇತ್ಯಾದಿ ಬಿದ್ದಿವೆ. ಕುಲಕರ್ಣಿ ಗಡಿಬಿಡಿಯಲ್ಲಿದ್ದಾನೆ.)

ಕುಲಕರ್ಣಿ :—ಅಂತೂ ಇವೊತ್ತ ನಾಡಹಬ್ಬದ ಉತ್ಸವಕ್ಕ ಮುಂದಿ ಜಗ್ಗಿ ಬಂದಽದ. ಆತಿನ್ನ, ಮೊದಲ್ನೇ ಸೀನಿನ ಜನಾ ತಯಾರಾಗ್ರಿ; ಅಧ್ಯಕ್ಷರ ಭಾಷಣ ಮುಗೀಲಿಕ್ಕೆ ಬಂತು. (ಅಷ್ಟರಲ್ಲಿ ಪ್ರಹ್ಲಾದ ಕೈಯ್ಯಲ್ಲಿ ಕಾಗದಪತ್ರ ಹಿಡಿದುಕೊಂಡು ಬೆವರು ಒರೆಸಿಕೊಳ್ಳುತ್ತ ಬರುತ್ತಾನೆ.) ಏನ್ರೀ ಕಾರ್ಯದರ್ಶಿಗಳು, ಅಧ್ಯಕ್ಷರ ಭಾಷಣಾ ನಡುವೇ ಹಾಕಿಬಿಟ್ರಿ?

ಪ್ರಹ್ಲಾದ:—ಏನಡ್ಡೀಯಿಲ್ಲ; ನಿಮಗ ಪೂರಾ ಎರಡು ತಾಸು ಸಿಗ್ತಾವ. ನನ್ನ ರಿಪೋರ್ಟು ಹ್ಯಾಂಗಾತು? ಕೇಳಿದ್ರಿಲ್ಲೊ ?

ಕುಲಕರ್ಣಿ :—ಏನ್ಬಿಡ್ರಿ, ಇಪ್ಪತ್ತು ಮಿನಿಟಂದ್ರ ನಾಲ್ವತ್ತು ಮಾಡಿದ್ರಿ.

ಪ್ರಹ್ಲಾದ:—ಮತ್ತ ಮಾತೆಲ್ಲಾ ಎಷ್ಟು ಮಹತ್ವದವಿದ್ದವು ಗೊತ್ತಿಲ್ಲ! ಆಗಲಿ ನಿಮ್ಮ ನಾಟಕದ ತಯಾರಿ ಆಗೇದಿಲ್ಲೋ?

ಕುಲಕರ್ಣಿ :—ನಮ್ಮದೆಲ್ಲಾ ರೆಡೀ ಅದಽ; ಆದ್ರ ಈ ಪರಡೇ, ವಿಂಗ್ಜು ಏನ ಹೊಲಸು ತರ್ಸೀರೆಪಾ! ಡ್ರೆಸ್ಸೂ ಹುಂಗ್ಯಾಂಗಽ ಅವಽ!

ಪ್ರಹ್ಲಾದ:—ಇವಾ ಯಾವಾಕೀಕಿ? ವೆಂಕಣ್ಣಾ; ಏನ ಡೌಲಾಗಿದೋ? ಜರದ ಸೀರಿ ಮೆರೆಸಲಿಕ್ಕೆ ಹೊಂಟೀನೂ?

ವೆಂಕಣ್ಣ :—(ಸ್ತ್ರೀ ವೇಷದಲ್ಲಿ ಚಹಾ ಕುಡಿಯುತ್ತ ಬರುವನು) ಮತ್ತ ಬಿಟ್ಟೇನು? ಆದ್ರ ಏನ್ ಶಕೀರಿ ಕುಲಕರ್ಣಿ, (ತಲೆಯ ಸೆರಗು ತೆಗೆದು, ಒಂದು ಡಬ್ಬೀಮೇಲೆ ಕೂಡುವನು. ಪ್ರಹ್ಲಾದ ಗಾಬರಿಯಿಂದ ನೋಡುವನು)

ಪ್ರಹ್ಲಾದ :—ಅಲ್ಲೋ ಸುಂದರಾಸಾನೀ, ತಲೀಗೆ ಟೋಪಣಽನೇ ಇಲ್ಲಲ್ಲಾ? ಸೆರಗು ತಗದು ಒಗಿದೀ; ಒಳಗಿನ ಶರ್ಟೆಲ್ಲಾ ಕಾಣಸ್ತಽದ. (ಈ ಮಾತು

ನಡೆದಾಗ ಕುಲಕರ್ಣಿ ರಂಗದ ಕಡೆ ನೋಡುತ್ತ ಅಲ್ಲಿದ್ದವರೊಡನೆ ಸನ್ನೆಯಿಂದ ಮಾತಾಡುತ್ತಿರುವನು.)

ವೆಂಕಣ್ಣ :—ಇದೇನು ಸ್ಟೇಜೇನ್ರಿ? ಶಕೀ ಅಂತ ಹೇಳ್ಲಿಲ್ಲೇನು!

ಪ್ರಹ್ಲಾದ :—ಏನ್ ಅಪದ್ಧ ಕಾಣಿಸ್ತೀಯೋ!

ವೆಂಕಣ್ಣ :—ನಿಮಗ ಇಲ್ಲಿ ಯಾರು ಬಾ ಅಂದ್ರು, ವಿಂಗಿನೊಳಗ? ಅಲ್ಲಿ ಆಡಿಯನ್ಸದಾಗ ಕೂತು ನೋಡ್ರಿ. ಇದೇಗ ಆ ಉಪವನದ ಸೀನಿನೊಳಗ ಮನೋಹರ ತನ್ನ ಹೆಣ್ತೀ ಸಂಗ್ತೀಲೆ-ಅಂದರ ನಾರಾಯಣನ ಸಂಗ್ತೀಲೆ-ಜಗಳಾಡೋವಾಗ ನಾನು ಜರತಾರೀ ಸೀರಿ ಜಬರಿಸಾಗ ಝೋಕಿನಿಂದ ಬಂದೆನೆಂದರ, ಈ ಸುಂದರಾಸಾನೀ ಮನೀ ಎಲ್ಲಿದ್ದೀತೂ ಅಂತ ರಾತ್ರೆಲ್ಲಾ ಓಣಿಓಣಿ ಹುಡುಕೀರಿ; ಹೋಗ್ರಿ ಮುನ್ನೋಡಿ. (ಚಹಾ ಕುಡಿದು) ಛೀ. ಬಾಯಾಗೆಲ್ಲಾ ಬಣ್ಣ ಹೋತು.

ಪ್ರಹ್ಲಾದ :—ಇತಿಹಾಸದಾಗ ಓದಿದ್ವಿ; ವಿಕ್ರಮನ ಸಿಂಹಾಸನದ ಮ್ಯಾಲೆ ಕೂತ ಒಬ್ಬ ಒಕ್ಕಲಿಗಾ ವಿಕ್ರಮನ್ಹಾಂಗs ಆದಾ ಅಂತ. ಹಾಂಗ ಈ ಸೀರೀ ಮಹಿಮಾ ಏನೋ, ಸ್ತ್ರೀ ಪಾರ್ಟು ಹಾಕಿದಾಕ್ಷಣಕ್ಕ ಆ ಹೆಂಗಸರ ಜಂಭಾ, ಸಡಗರಾ, ಸೆಡಕೂ, ಸೆಡವೂ ಎಲ್ಲಾ ಸಾಲಗುಂಟ ಬರಬೇಕs ಗಂಡ್ಸಿನಾಗೂ!

ಕುಲಕರ್ಣಿ :—ಹರಟೀ ಸಾಕುಮಾಡ್ರಿ. ಏ ವೆಂಕಣ್ಣಾ ಏಳು; ಅದು ನೋಡು, (ಬಲವಿಂಗಿನಲ್ಲಿ ಗಂಟೆ) ಪರದೆ ಏಳೋ ಗಂಟೆ ಆತು. ಉಳಿದ ಪಾರ್ಟೆಲ್ಲಾ ತಯಾರ್‍ಯಾಗ್ಯಾರ; ನಡೀ ನೀ ಲಗೂ. (ವೆಂಕಣ್ಣ ಒನಪು ಮಾಡುತ್ತ ಸೆರಗೆಳೆಯುತ್ತ ಹೋಗುವನು.)

ಪ್ರಹ್ಲಾದ :—ಈ ಪಾರ್ಟೆಲ್ಲಾ ಪಾಠ ಮಾಡಿದ್ದು ಬರಾಬ್ಬರಿ ಆಗೇದೋ ಇಲ್ಲೋ? ಗ್ರ್ಯಾಂಡ ರಿಹರ್ಸಲ್ಲು ಛಲೋ ಆಗಿತ್ತಿಲ್ಲೋ?

ಕುಲಕರ್ಣಿ :—ಎಲ್ಲೀ ಗ್ರಾಂಡ್ ರಿಹರ್ಸಲ್ರೀ; ಎಲ್ಲಾ ಅಕ್ಷರತ ಇಲ್ಲೇ ಆಗ್ಬೇಕಾಗೇದ. ರಿಹರ್ಸಲ್ಲು ಮಾಡಬೇಕಾದ್ರ ಒಬ್ಬ ಸೂಳೀಮಗನೂ ಹೊತ್ತಿಗೆ ಬರ್ತಿದ್ದಿಲ್ಲ. ನಾಟಕಾ ಬರದ ತಪ್ಪಿಗೆ ಯಾವದಾದ್ರೂ ಬದಲು ಪಾರ್ಟು ದಿನಾ ನಾನೇ ಮಾಡ್ಬೇಕಾಗ್ತಿತ್ತು. ಏನೋ ಸ್ಟೇಜಿನ ಮ್ಯಾಲೆ ಎಲ್ಲಾ ಛಲೋ ಆದೀತು ಅಂತ ಆಶಾ!

ಪ್ರಹ್ಲಾದ :—ಅಂತೂ ನಾಟಕ ಮುಗಿದ ಮ್ಯಾಲೆ ಜನರಿಗೆ 'ನಾಡಹಬ್ಬದ ಅವಸರದಲ್ಲಿ, ಕೇವಲ ಹದಿನೈದೇ ದಿನಗಳಲ್ಲಿ ಈ ಹೊಸನಾಟಕವನ್ನು ಬಹು ಪ್ರಯಾಸದಿಂದ ತಯಾರಿಸಿದ್ದರಿಂದ ತಪ್ಪು ತಡೆ ಆದದ್ದು ಸ್ವಾಭಾವಿಕ; ಅವನ್ನೆಲ್ಲ ಉದಾರ ಹೃದಯದ ನೋಟಕರು ಹೊಟ್ಟೆಯಲ್ಲಿ ಹಾಕಿಕೊಳ್ಳುವರೆಂದು ನಂಬಿ ಆದದ್ದಕ್ಕಾಗಿ ನಮ್ಮ ನಾಡಹಬ್ಬದ ಪತಿಯಿಂದ ಶ್ರೀ. ಕುಲಕರ್ಣಿ ಕಂಪೂದವರಿಗೆ ನಾವು ಆಭಾರಿಗಳಿದ್ದೇವೆ.' ಅಂತ ಹೇಳೊ ಪ್ರಸಂಗ ಬರ್ತದ ಕಾಣಸ್ತದ.

ಕುಲಕರ್ಣಿ :—ಮೊದಲು ಸ್ವರೂಪನಾಶ ಆಗಿದ್ದರ, ಮ್ಯಾಲ ಅಷ್ಟುಮಾತ್ರ ಮಾಡಬ್ಯಾಡ ಮಹಾರಾಯಾ! ನೋಡಲ್ಲೆ ಸೀನು ಸುರುವಾತು. (ನೋಡಿ ನೋಡಿ) ಹಾಂ ಏನಡ್ಡಿಯಿಲ್ಲ; ಮೊದಲ್ನೇ ಸೀನ ಮಾತ್ರ ಅಭ್ರಾಟ ಸುರೂ ಆತು.

ಪ್ರಹ್ಲಾದ :—ಪ್ರಾಮ್ಟಿಂಗಿಗೆ ಯಾರು ನಿಂತಾರ ಅವರು?

ಕುಲಕರ್ಣಿ :—ಅವರು ಬಂಡೆಪ್ಪ ಮಾಸ್ತರು.

ಪ್ರಹ್ಲಾದ :—ಛೀ ನಿಮ! ಪ್ರಾಮ್ಟಿಂಗಿಗೆಲ್ಲಾ ಮಾಸ್ತರ್ನ ನಿಂದ್ರಿಸಬೇಕು? ತಪ್ಪಿದವರಿಗೆ ಹೇಳಿಕೊಡೋ ಜಾತೇ ಮಾಸ್ತರದು?

ಕುಲಕರ್ಣಿ :—ಹೊತ್ತಿಗ್ಯಾರೂ ಸಿಗದಿದ್ರೇನು ಮಾಡೋದೂ? ನೀವು ಹೋಗ್ತೀರೇನೂ? ವಕೀಲರ ಜಾತಿ ನಿಮ್ಮದೂ, ಮಾತು ಕಲಿಸಿ ಕೊಡ್ಲಿಕ್ಕೆ ನಿಮಗ ಛಲೋ ಬರ್ತದ ಹೋಗ್ರಿ. ಮತ್ತ ಆ ಬಂಡೆಪ್ಪ ಮಾಸ್ತರನ್ನ ಬಣ್ಣಾ ಬಡಿಯೋವಲ್ಲೆ ಕಳ್ಸಿಕೊಡ್ರಿ. ಆ ಮಾಲತೀದು ಮೇಕಪ್ಪಿನ್ನೂ ಪೂರಾ ಆಗಿಲ್ಲಾ. ಹೂಂ ಹೋಗ್ರಿ ಲಗೂ. ಮತ್ತ ಪ್ರಾಮ್ಟಿಂಗ ಬರಾಬ್ಬರಿ ಮಾಡ್ರಿ. (ಪ್ರಹ್ಲಾದ ಹೋಗುವನು. ಕುಲಕರ್ಣಿ ರಂಗಭೂಮಿಯತ್ತ ತಿರುಗಿ ಅಲ್ಲಿದ್ದ ನಟರಿಗೆ, ಹಿಂದೆ ಸರಿ, ಮುಂದೆ ಸರಿ, ಎಂದು ಸನ್ನೆಮಾಡುತ್ತ.) ಏ ಚಿದಂಬರಾ, ಅತ್ತಲಾಗ ಆಡಿಯನ್ಸದ ಕಡೆಗೆ ತಿರುಗೋ; ನನ್ನ ಕಡೆಯೇನು ನೋಡ್ತೀ! ಏನಂದೀ, ಮುಂದಿನ್ದು ಪಾಠ ಬರವಲ್ಲದು; ಪ್ರಾಮ್ಟರು ಎಲ್ಲಿ ಹೋದ್ರು! ನಮ್ಮ ಪ್ರಹ್ಲಾದರಾಯರೂ? ಈ ವಕೀಲರ ಜಾತಿ ಒತ್ತಟ್ಟಿಗೆ ಧ್ಯಾನ ಇಟ್ಟು ಕೊಡೋದು? ಅಕಾ, ಪ್ರಾಮ್ಟ ಮಾಡೋದ್ಬಿಟ್ಟು ಹರಟೇ ಹೊಡೀಲಿಕ್ಕೆ

ಹತ್ತಿದಾ. ಇದರ್ಕಿಂತ ಬಂಡೆಪ್ಪ ಮಾಸ್ತರs ಛಲೋ........ಏ ಚಿದಂಬರಾ, ನೆನಪು ಮಾಡಿಕೊ ಮಾರಾಯಾ! ಇಲ್ಲದಿದ್ದರ ಸ್ವಲ್ಪ ಅತ್ಲಾಗ ಸರಿ, ಪ್ರಹ್ಲಾದರಾಯ ಇದ್ದ ಕಡೇ! ಏನ್ಮಾಡೋದೂ ಕಾಪೀ ಬ್ಯಾರೇ ಒಂದs ಅದs !...ಚಿದಂಬರಾ, ನೆನಪಾಗದಿದ್ರೂ, ಸಿಂದರ್ಬ್ಯಾಡಾ; ಕೈಗಂಟು ಹಾಕಿಯಾದ್ರೂ ಹೊಡಿ ನೀ! ಹುಷಾರಿ ಇದ್ದೀ! (ಇಷ್ಟರಲ್ಲಿ ಬಂಡೆಪ್ಪ ಓಡಿ ಬರುವನು) ಯಾಕ್ರೀ ಬಂಡೆಪ್ಪ ಮಾಸ್ತರ ಏನಾತು?

ಬಂಡೆಪ್ಪ :—ಎರಡನೇ ಸೀನದಾಗ ಮಾಲತೀ ನಾರಾಯಣ ಮೊದಲಿಗೇ ಹೋಗಬೇಕಲ್ಲ? ಆದ್ರ ಅವಗ ಸೀರಿ ಉಟಕೊಳ್ಳಲಿಕ್ಕೆ ಬರವಲ್ಲದೂ! ಆ ಪಾಯ್ಜಾಮಾದ ಮ್ಯಾಲೆ ಉಡಸಲಿಕ್ಕೆ ನನಗ ಬರವಲ್ಲದು!

ಕುಲಕರ್ಣಿ :—ಅದ್ಯಾಕ್ರೀ! ಹೊಸಾ ಪದ್ಧತೀ ಪ್ರಕಾರ ದುಂಡುಸೀರಿ ಉಡ್ಸೋದೂ; ಕಚ್ಚಿ ಇಲ್ಲಾ ಏನಿಲ್ಲಾ! ಅಷ್ಟು ಬರೋದಿಲ್ಲೇನು?

ಬಂಡೆಪ್ಪ :—ನಮ್ಮ ಗ. ಟ್ರೇ. ಕಾ., ಹೆ. ಟ್ರೇ ಕಾ. ಬ್ಯಾರೇ ಬ್ಯಾರೇ ಇದ್ದ ದರಿಂದೋ ಏನೋ, ನಾವು ಸೀರೀ ಉಡಸೋ ವಿಧಾಯಕ ಕಲಾ ಮಾತ್ರ ಕಲೀಲಿಲ್ಲ.

ಕುಲಕರ್ಣಿ :—ಬರೇ ವಿಧ್ವಂಸಕ ಕಲಾದೊಳಗಷ್ಟs ನಿಮ್ಮ ಚಾತುರ್ಯ ಕಾಣ ಸ್ತsದ; ಇರಲಿ. ನನಗೀಗ ಇಲ್ಲಿಂದ ಬರೋ ಹಾಂಗಿಲ್ಲಾ! ಆ ನಾರಾಯಣನ ಹೆಂಡ್ತಿನ್ನs ಕರೀರಿ! ಅಲ್ಲಿ ಹೆಂಗ್ಸರೊಳಗ ಕೂತಿದ್ದಾಳೂ! ತನ್ನ ಗಂಡ್ಗಷ್ಟು ಸೀರಿ ಉಡಸನ್ನಿ. ಹೂಂ ಹೋಗ್ರೀ! (ಆತ ಹೋಗಲು, ರಂಗದ ಕಡೆ ನೋಡಿ) ಎಲಾ ಇದರs! ಮೊದಲ್ನೇ ಸೀನು ಮುಗೀತೇನು ಇತ್ಲಾಗ ಮಾತಾಡೋದ್ರಾಗs! (ಸೆಟ್ಟರ ವೇಷದ ಚಿದಂಬರಗೆ) ಏನೋ ಚಿದಂಬರಾ ಮೊದಲ್ನೇ ಸೀನು ಇಷ್ಟು ಲಗೂ ಹ್ಯಾಂಗ ಮುಗೀತು?

ಚಿದಂಬರ :—ಮಾತು ಮರತವ್ರೋ ಅಂತ ಬಡಕೊಂಡೆ! ಒಬ್ಬರಾದ್ರೂ ಪ್ರಾಮ್ಟು ಮಾಡಿವ್ರ ದೇವರಾಣಿ!

ಕುಲಕರ್ಣಿ :—ಮತ್ತ ಪ್ರಹ್ಲಾದರಾಯನ್ನs ಕಳ್ಸಿದ್ದೆನಲ್ಲೋ? ನಿನಗೂ ಅತ್ತತ್ತ ಸರೀ ಅಂತ ಸನ್ನಿ ಮಾಡಿದ್ದೆ!

ಚಿದಂಬರ :—ಆದ್ರ ನಾ ಸ್ಟೇಜಿನ ಮ್ಯಾಲ ಇತ್ತಲಾಗಿದ್ದೆ; ಪ್ರಹ್ಲಾದ ರಾಯಗ ಎದುರಾಗಿ ನಾ ನಿಂತದ್ದರಿಂದ ನನ್ನ ಅವಾ ಪ್ರತಿವಾದಿ ಅಂತ

ತಿಳಕೊಂಡನೋ ಏನೋ? ನನಗೇನು ಹೇಳಿಕೊಡಲಿಲ್ಲಾ. ಎಲ್ಲಾ ತನ್ನ ಕಡೇ ನಿಂತವ್ರಿಗೇ ಹೇಳತಿದ್ದಾ. ನಾಯೇನ್ಮಾಡ್ಲೀ?

ಕುಲಕರ್ಣಿ :— ಅಲ್ಲೋ, ನೀಯಿಷ್ಟು ಹುಷಾರಿ; ಕೈಲೆ ಹಾಕಿ ಮಾತಾಡಿದ್ರೇ ನ್ಗಂಟುಹೋಗ್ತಿತ್ತು.

ಚಿದಂಬರ :— ಹಂಗs ಮಾಡಿದೆ. ಆದರ ನನಗ ಮಾತು ಮರ್ತ್ಹಾವs ನಾ ಮಾತಾಡೋದು ಕೈಗಂಟಿಂದೂ ಅಂತ ರಂಗಗ, ಹನುಮರೆಡ್ಡಿಗೆ ತಿಳಿದ್ರ ಹೌದಲ್ಲೋ ಮೇಳಗೂಡೋದು ಮಾತು! ನನ್ನ ಮಾತ ಕೇಳಿ ಅವ ರಿಬ್ಬರೂ ತಾವs ಮಾತು ಮರ್ತೇವಿ ಅಂತ ತಿಳಕೊಂಡ್ರೇನೋ, ಪ್ಯಾ...ಪ್ಯಾ--ಅನ್ನಲಿಕ್ಕೆ ಹತ್ತಿದರು. ತನ್ನ ಕಡೀ ಮಂದಿ ಪ್ಯಾ ಪ್ಯಾ ಆದ ಕೂಡಲೇ ಪ್ರಹ್ಲಾದರಾಯ ಪ್ರಾಮ್ಟಿಂಗು ಬಿಟ್ಟು ನನ್ನ ಕ್ರಾಸು ಎಗ್ಝಾಮಿನ್ ಮಾಡಲಿಕ್ಕೆ ಸ್ಟೇಜಿನ ಮ್ಯಾಲೇ ಬರೋಹಾಂಗ ಕಾಣಿಸ್ತೂಂತ "ನಡೆಯಿರಿನ್ನು ಮುಂದಿನ ಕಾರ್ಯಕ್ಕೆ ಪ್ರಸುತ್ತರಾಗುವಾ" ಅಂತ ಕಡೀ ಮಾತು ಹೇಳಿ ಸೀನು ಮುಗಿಸಿದೆ. ಆದ್ರ ಆ ಪಡದೇ ಜಗ್ಗಾವ ಎಲ್ಲೋ ಓಡಿಹೋಗಿದ್ದ ಅಂತ ಸ್ಟೇಜು ಬರೇದು ಬಿತ್ತು. ಅಂತ ಮತ್ತೊಮ್ಮೆ ಹೋಗಿ ಎರಡು ನಗೀ ಮಾತು ಆಡಿ ಬಂದೇ ಅಂತ ನೋಡವ್ರಿಗೆ ಸೀನು ನಡುವೇ ಸೀನಿಧಾಂಗ ಆಗಲಿಲ್ಲ.

ಕುಲಕರ್ಣಿ :— ಆತು ಬಿಡು! ಎರಡನೇ ಸೀನು ಮೂರನೇ ಸೀನು ಒಂಧ್ಯಾಂಗಾದ್ರೂ ಆದ್ರ ಕೆಲಸ ಪಾರಾಗ್ತsದ.

ಚಿದಂಬರ :— ಎರಡನೇ ಸೀನು ರೆಡೀ ಇಲ್ಲೇನು ಇನ್ನೂ! ನೋಡು ಸ್ಟೇಜು ಮತ್ತ ಬರೇದು ಬಿತ್ತೂ ಅಂತ ಜನ ಸಿಳ್ಳು ಕೇಕಿ ಹೊಡೀಲಿಕ್ಕೆ ಹತ್ತಿದ್ರು. (ಸಿಳ್ಳು, ಚಪ್ಪಾಳೆ, ಕೇಕೆಗಳ ಸಪ್ಪಳ) ಮತ್ತೊಮ್ಮೆ ನಾನs ಹೋಗಿ ಬರ್ಲ್ಯಾ? (ಇಷ್ಟರಲ್ಲಿ ನಾರಾಯಣ ಸಜ್ಜಾಗಿ ಬರುವನು) ನಡಿಯೂ ಮಾಲತೀಬಾಯಿ, ಲಗೂ ನಡೀ; ಇಲ್ಲಿ ಮಿಂಗಿಸ್ಯಾಗ ಯಾಕಿಷ್ಟು ಒನಪೂ? ಅಲ್ಲೆ ರಂಗದ ಮ್ಯಾಲೆ ಹೋದ್ಮ್ಯಾಲೆ ಮಾಡು ನಿನ್ನ ಶೃಂಗಾರ! ನಮ್ಮ ಕಿಟ್ಯಾ, ಪುಟ್ಯಾ, ಭೀಮರಾಯಾ ಅವರೆಲ್ಲಾ ಹದಿನೈದಿಪ್ಪತ್ತ ಮಂದಿ ನೀ ಸ್ಟೇಜಿನ ಮ್ಯಾಲ ಬಂದ ಕೂಡ್ಲೆ ಚಪ್ಪಾಳಿ ಹೊಡೀಬೇಕಂತ ಸಜ್ಜಾಗಿ ಮುಂದಿನ ಸಾಲಿನಾಗs ಕೂತಾರ!

ನಾರಾಯಣ :—(ತನ್ನ ವೇಷಭೂಷಣ ಒಯ್ಯಾರದಿಂದ ನೋಡಿಕೊಳ್ಳುತ್ತ) ಹಾಂ! ಕೂಡಿದ ಮಂದಿಯೆಲ್ಲಾ ಚಪ್ಪಾಳಿ ಹೊಡದಾರು! ಅದರಾಗೇನೂ? ಮೇಕಪ್ಪು ಆಗೇಧ್ಯಾಂಗ?

ಕುಲಕರ್ಣಿ :—ಅದೆಲ್ಲಾ ಸರಿ! ಆದ್ರ ಸೀರಿ ಉಟಗೊಳ್ಳಲಿಕ್ಕೆ ಬರೂದುಲ್ಲ ಅಂತ ಅಳ್ತಿದ್ದೆಂತ! ನಿನ್ನ ಹೆಂಡ್ತಿ ಬರಬೇಕಾತೂ ಕಡೀಕೆ! ಈಗಾದ್ರೂ ಬರಾಬರಿ ಉಟಗೊಂಡೀಯಿಲ್ಲೊ! ಸ್ಟೇಜಿನ ಮ್ಯಾಲ ಕಳಕೊಂಡೀ!

ನಾರಾಯಣ :—ಒಳಗ ಇಡೀ ಪಾಯ್ಜಾಮಾ ಅದs ಏಳು! ಏನು ಘಾಬ್ರಿ ಆಗಬ್ಯಾಡಾ!

ಕುಲಕರ್ಣಿ :—ಮಗನೇ, ನಿನ್ನ ಸೀರಿ ಬಿಚ್ಚಿದರ, ನನ್ನ ನಾಟಕಾ ಬತ್ತಲೇ ಆಗ್ತsದ; ತಿಳೀತs! ಏನಾದ್ರೂ ಗದ್ದಲಾ ಮಾಡಿದ್ರ ಒದ್ದು ಬಿಟ್ಟೇನೂ. ಹೋಗು ಅಲ್ಲಿ ನೋಡು ಸ್ಟೇಜಿನ ಮ್ಯಾಲ ನಿನ್ನ ಗಂಡ ಗೋವಿಂದಾಚಾರಿ, ನಿನ್ನ ಹಾದೀ ನೋಡ್ಕೋತ ನಿಂತಾನs! (ನಾರಾಯಣ ರಂಗದ ಕಡೆ ಹೋಗುವನು) ಮತ್ತಾ ಸುಂದ್ರಾಸಾನೀ ಎತ್ತಲಾಗ ಹೋದಾ? ಕರೀರಿ ಅವನ್ನ. ಆಗಲೇ ಟೋಪಣ ತೆಗೆದಿಟ್ಟು ಬಂದಿದ್ದಾ; ಆಯ್ತಾ ಹೊತ್ತಿಗೆ ಟೋಪಣ ಇಲ್ದ ಹೋದಾನು ಸ್ಟೇಜಿನ ಮ್ಯಾಲೆ!

ಚಿದಂಬರ :—ಇಕಾ ಬಂದಾ ಸುಂದರಾಸಾನಿ! ಏ ಸಾನೀ ನಡೀ ಬ್ಯಾಗs! ಟೋಪಣ ಅದs ಇಲ್ಲೋ ಅಂತ ಕೇಳ್ತಿದ್ದ ಕುಲ್ಕರ್ಣಿ!

ಕುಲಕರ್ಣಿ :—ನಡಿಯೋ ಮಾರಾಯ ನಿಂದs ಬಾದಿತು ಪಾರ್ಟು!

ಬಂಡೆಪ್ಪ :—(ಸುಂದ್ರಾಸಾನಿಯ ವೇಷದಲ್ಲಿದ್ದ ವೆಂಕಣ್ಣನೊಡನೆ ಬಂದು) ವೆಂಕಣ್ಣ ಆಯ್ತಾ ಹೊತ್ತಿಗೆ ಅಡ್ಡೀ ಮಾಡ್ಯಾನ!

ಕುಲಕರ್ಣಿ :—ಮತ್ತೇನಪಾ ಮಾರಾಯಾ! ಇಕಾ ನಿನಗ ಬೇಕಾದ್ರ ಸಾಷ್ಟಾಂಗ ನಮಸ್ಕಾರಾ ಹೊಡೀ ಅಂದ್ರ ಹೊಡೀತೀನಿ.

ಬಂಡೆಪ್ಪ :—ಅವಾ ನತ್ತು ಇಲ್ಲದ ಪಾರ್ಟ ಮಾಡ್ಲಿಕ್ಕೆ ಒಲ್ಲನಂತ! ಯಾದೀಯೊಳಗ ಇದ್ದಿಲ್ಲಾಂತ ಅವನ್ನ ತಂದಿಲ್ಲಾ.

ಕುಲಕರ್ಣಿ :—(ಕೆರಳಿ) ಏ ವೆಂಕಣ್ಣಾ, ನತ್ತಿದ್ದರೇನು ಕಿವೀಗೆ ತೂಗ ಹಾಕ್ಕೋತಿದ್ದೇನು? ಗಂಡಸು ಹೆಣ್ಪಾರ್ಟ ಮಾಡಿದ್ರ ನತ್ತು ಹಾಕಲಿಕ್ಕಾದರೂ ಹ್ಯಾಂಗ ಬರ್ತsದ?

ಬಂಡೆಪ್ಪ:—ಅವು ಕ್ಲಿಪ್ಪಿನ್ನವು ಇರ್ತಾವ ಖರೇ; ಆದ್ರ ಇವಾ ಸಣ್ಣಾವ ಇದ್ದಾಗ, ಮಂತ್ರದ ಮುರುವು ಹಾಕಲಿಕ್ಕೆ ಮೂಗು ಚುಚ್ಚಿಸಿದ್ದರಂತ, ಅದಕ ನಮಗ ಮೂಲಾಗೇದ; ತನಗ ಖರೇ ನತ್ತs ಬೇಕಂತ ಕೂತಾನ!

ಕುಲಕರ್ಣಿ:—(ಮತ್ತಿಷ್ಟು ಕೆರಳಿ) ಏ ವೆಂಕ್ಯಾ, ಆ ನಿನ್ನ ಮೂಗಿನ್ತೂತಿ ನ್ಯಾಗ ಮೂಗದಾಣಾ ಹಾಕೇನು ನಡಿ ಸುಮ್ಮನs; ಏ, ದಬ್ರ್ಯೋ ಅವನ್ನ, ಸ್ಟೇಜಿನ ಮ್ಯಾಲ ದಬ್ರಿ! (ಸೆಡಸೆಡುವು ಮಾಡುತ್ತಿದ್ದ ವೆಂಕ ಣ್ಣನ್ನ ಅವರು ಎಳೆಯುವರು) ನಡೀಪಾ, ಅಲ್ಲೇ; ಸ್ಟೇಜಿನ್ಮ್ಯಾಲೆ ಆ ಮಾಲತಿನ್ನ ಶೂಟ ಮಾಡೋ ಹೊತ್ತಾತೂ, ನೀಯಿಲ್ಲೇ ನಿಂತೀದಿ; ಶೂಟ ಮಾಡಿ ಮಾಲತಿ ನೆಲಕ್ಕ ಬಿದ್ದ ಕೂಡಲೆ, ಹಾಡು ಬೇಕಂದಿದ್ದಿ! ಅದರಂತೆ ಹಾಕೀವಿ! ಗುಂಡಾಚಾರಿ, ಮದ್ದಪ್ಪ, ಪೇಟಿ ತಬ್ಲಾ ತಯಾರಿಟ್ಟು ನಿನ್ನ ಹಾದೀನ ನೋಡ್ಲಿಕ್ಕೆ ಹತ್ಯಾರs; ನಡೀ, ನಡೀ.

ಕುಲಕರ್ಣಿ:—(ಕೈ ಜಾಡಿಸುತ್ತ) ಸೂಳೇಮಕ್ಕಳ ತಂದು! ಬ್ಯಾಡಾ ಮಾರಾಯಾ; ಈ ನಾಟಕಾ ಮಾಡೋ ಕಾಟಾ! ಮೊದ್ಲ ನಾಟಕಾ ಬರಿಯೋದs ದಡ್ಡತನಾ; ಆದರಾಗ ಇಂಥಾ ಮಂಗನ ಮಕ್ಕಳ್ನ ಕಟ್ಟಿಕೊಂಡು ನಾಟಕಾ ಹೂಡೋದು ಇಲ್ಲದ ಮುಡ್ಡತನಾ! (ಬಂಡೆ ಪ್ಪನು ಕೈ ತಿರುವುತ್ತ ರಂಗದತ್ತ ಸರಿಯುವನು.)

ಚಿದಂಬರ:—(ಒಂದು ಕಡೆ ಗಾಳಿಬೀಸುತ್ತ ನಿಂತವ ತಟ್ಟನೆದ್ದು) ಯಾಕ್ರೀ ಇನ್ನೂ ಶೂಟಿಂಗದ ಸಪ್ಪಳ ಬರಲಿಲ್ಲಾ! (ತೆರೆಯ ಕಡೆ ನೋಡುವನು) ನಮ್ಮ ವೆಂಕಣ್ಣ ಹಾಡಿನ್ದ ಶಿಂದ ಗಂಟಲಾ ಖ್ಯಾಖರಿಸಲಿಕ್ಕೆ ಹತ್ಯಾ ನಲ್ಲಾ! ಅಕಾ ಅತ್ತಲಾಗ ಪೇಟೀ ತಬಲಾನೂ ಸುರುವಾದ್ವು! ಅಲ್ಲ್ರೀ ಶೂಟಿಂಗ ಮಾಡೋದು ಮೊದ್ಲೋ, ಹಾಡು ಮೊದ್ಲೋ?

ಕುಲಕರ್ಣಿ:—ಆ ವೆಂಕ್ಯಾನ ಮನಸಿಗೆ ಬಂಧಾಂಗ ಮಾಡ್ಲಿ! ನಾಟಕ ಮುಗಿದ ಮ್ಯಾಲೆ ಬೆಳಗ್ತೀನಿ ಅವನ್ನ ಚರಟಾನs! ಅವಾ ನಾವಲಿಗಾ; ನಾ ಬ್ರಾಹ್ಮಣಾ! ಆದ್ರೀ ಸಾರೆ ನಾನೇ ಅವನ ಇದಿರುಗಷ್ಟಾ ಮಾಡ್ದೇ ಬಿಡೋದುಲ್ಲ! ನೋಡಲ್ಲೇ ಧನೀ ತಗದಾ! ಏನ್ಹಾಡ್ತಾನಿವ ತನ್ನಲೀ!

ಚಿದಂಬರ:—ಆದ್ರ---ಅಕಾ---ಅಕಾ---ಆಡಿಯೆನ್ಸದೊಳಗ ಗದ್ದಲ ಎತ್ತ್ಯ! (ಹೊರಗಡೆ ಗದ್ದಲ) ಏನಾತ್ರೀ? ಕುಲ್ಕರ್ಣಿ ನೋಡ್ಯೇರ ನೋಡ್ರಿ!

ಬಂಡೆಪ್ಪ :—(ಓಡಿ ಬಂದು)ಜನಾಯೆಲ್ಲಾ ಭಯಂಕರ ಗದ್ದಲಾ ಮಾಡ್ಲಿಕ್ಕೆ ಹತ್ತ್ಯಾರ ಕುಲಕರ್ಣಿ! (ಕುಲಕರ್ಣಿ ಕಕ್ಕಾವಿಕ್ಕಿಯಾಗುವನು)

ಚಿದಂಬರ :—ಏನು ಆತ್ಯೇನು ?

ಬಂಡೆಪ್ಪ :—ಹಿಂದಿನವರಿಗೆ ವೆಂಕಣ್ಣನ ಮಾತೂ, ಹಾಡು ಒಂದೂ ಕೇಳಿಸ ವಲ್ಲವಂತ, ಗದ್ದಲಾ ಮಾಡಬ್ಯಾಡ್ರೋ, ಹಾಡ ಕೇಳ್ರಿ ಅಂತ ಮುಂದಿ ನವರು ಹಿಂದಿನವರಿಗೆ ಕೂಗ್ತಾರ! ಅತ್ತಲಾಗs ಆ ಮಾಲತಿ ಯಾವಾಗ ತಾ ಶೂಟ ಮಾಡಿಸಿಕೊಂಡು ನೆಲಕ್ಕ ಬಿದ್ದೇನೋ ಅಂತ ಕಾದು ನಿಂತಾನ. ನಮ್ಮ ಗೋವಿಂದಾ ಶೂಟ ಆದ ಕೂಡ್ಲೇ ಸುಂದ್ರಾ ಸಾನಿನ್ನ ಅಪ್ಪಿಕೊಳ್ಳಿಕ್ಕೆ ಅಂತ ವಿಂಗಿನ ಮರೆಗೆ ಕೈಚಾಚಿ ನಿಂತಾನ! ಆದ್ರ ಈ ಸುಂದ್ರಾಸಾನೀ ಹಾಡು ಬಿಡವಲ್ಲಾ!

ಕುಲಕರ್ಣಿ :—ಛೀ ಛೀ! ಸಾಕಪಾ ಇವನ ಹಾಡೂ! ಜನರ ಗದ್ದಲ ಇನ್ನೂ ಹೆಚ್ಚಾತೂ! ಯಾರಾದ್ರೂ ಹೋಗಿ ಅವನ್ನೂ ತ್ತಿಗ್ಗಿ ಹಿಚಗ್ರೋ!

ಚಿದಂಬರ :—ಅವನ್ನುತ್ತಿಗ್ಗಿ ಹಿಚಿಗಿದ್ರ ನಿನ್ನ ನಾಟಕದ ಕುತ್ಗೀನೇ ಹಿಚಿಕಿ ಧಾಂಗ ಆಗ್ತsದ; ಯಾಕಂದ್ರ ನಿನ್ನ ನಾಟಕದಾಗ ಸಾಯೋಕೀ ಮಾಲತೀ! ಸುಂದ್ರಾಸಾನಿಯಲ್ಲ! ಆದ್ರ, ಇದೇನಿದೂ! ಈ ವೆಂಕಣ್ಣ ಹಾಡು ಮುಗಿಸಿ ಶೂಟ ಮಾಡ್ಲಿಕ್ಕೆ ಹೊರಟಿದ್ದಾ; ಅಷ್ಟರಾಗ ಜನಾ ಒನ್ಸ್ಮೋರ್ ಅನ್ನಲಿಕ್ಕೆ ಹತ್ತಿತಲ್ಲಾ! ಅಕಾ ಅರ್ಧಾ ಬಿದ್ದಂಥಾ ಮಾಲತಿ ಮತ್ತ ಎದ್ದು ನಿಂತಾ! ಏನೀ ಒನ್ಸ್ಮೋರೂಂತೀನಿ!

ಬಂಡೆಪ್ಪ :—ಅದೆಲ್ಲಾ ವೆಂಕಣ್ಣನ ಕಾಯಕ; ತನ್ನ ಗೆಳೆಯರನ್ನ ಅತ್ಲಾಗ ಇತ್ಲಾಗ ಕೂಡಿಸಿ ಒನ್ಸ್ಮೋರ ಅನ್ನಲಿಕ್ಕೆ ಹೇಳಿಟ್ಟಾನ ಮೊದ್ಲs! ನನಗೇನ್ಗೊತ್ತಿಲ್ಲೇನೂ! (ಒಳಗೆ ಹೋಗುವನು)

ಕುಲಕರ್ಣಿ :—ಛೀ, ಛೀ, ಛೀ ಛೀ. ಹಸಗೆಟ್ಟಿತು ಆಟಾ! ಏ ಸೆಟ್ಟೀ, ನಿನ್ನ ಬಡಿಗೀ ತಾಯಿಲ್ಲೆ; ಆ ವೆಂಕ್ಯಾಗ ವಿಂಗಿನ್ಯಾಗ ನಿಂತs ತಿವೀತೀನಿ!

ಚಿದಂಬರ :—ಆಗಲಿ ಬಿಡಪಾ! ಹಾಡಿಕೊಳ್ಳಿ! ಈ ಸಾರೆ ಧನೀ ದೊಡ್ಡದು ಮಾಡ್ತ್ಯಾನs! ಜನರೂ ತಣ್ಣಗಾಗ್ತ್ಯಾರs!

ಕುಲಕರ್ಣಿ :—ಆದ್ರ ಇವನ್ನ ನೋಡಿ ಆ ನಾರಾಯಣ ಶೂಟ ಮಾಡ್ಸಿ ಕೊಂಡು ಸತ್ತಮ್ಯಾಲೆ ಎದ್ದು ಹಾಡ್ತ್ಯಾನೂಂತ ನನ್ನ ಚಿಂತಿ. ಮೊದಲ್ನೇ

ಸೀನದಾಗ ಒಂದು ಹಾಡು ಕೆಡ್ಸ್ಯಾನ ಬ್ಯಾರೆ! (ಇಷ್ಟರಲ್ಲಿ ಮನೋಹರನ ವೇಷದಲ್ಲಿದ್ದ ಗೋವಿಂದ ಗಡಿಬಿಡಿಯಿಂದ ಬರುವನು) ಯಾಕ ಣಾ ಗೋವಿಂದಾ! ಅಲ್ಲೆ ಸುಂದ್ರಾಸಾನಿ ನಿನ್ನ ಹೆಣ್ತಿನ್ನ ಶೂಟಮಾಡ್ಲಿಕ್ಕೆ ತಯಾರಾಗ್ಯಾಳ; ನೀಯಿಲ್ಲೆ ಯಾಕ ಓಡಿಬಂದಿ, ಅತ್ತಲಾಗ ಸ್ಟೇಜಿನ ಮ್ಯಾಲ ಓಡಿಹೋಗೋದು ಬಿಟ್ಟೊ?

ಗೋವಿಂದ :—ಹೌದೋ ನನ್ನ ಮೀಸಿ ಎಲ್ಲೊ ಬಿದ್ದು ಹೋಗ್ಯಾವ್ರೋ! ಏನ್ಮಾಡ್ಲಿಂತೀನಿ!

ಚಿದಂಬರ :—ನೀನು ಆಧುನಿಕ ಪದವೀಧರನಾದ ಗಂಡ ಅಥವಾ ಮಿಂಡಾ! ನಿನಗ ಮೀಸಿಲ್ಲದಿದ್ರ ನಡಿಯೋದಿಲ್ಲೇನೂ? ಹೊಗ್ಹೊಗೂ! ಸುಂದ್ರಾ ಸಾನಿ ಶೂಟಮಾಡ್ಲಿಕ್ಕೆ ಕೈಯೆತ್ತಿದಳೂಂದೆ!

ಕುಲಕರ್ಣಿ :—ಮುಂದ ಆ ಸುಂದ್ರಾಸಾನೀ ಇವಗ ಮೀಸೀ ಹೊತ್ತ ಗಂಡ್ಸೂಂತ ಅಂತಾಳಲ್ಲ! ಅದ್ಕೇನ್ಮಾಡೋದು?

ಚಿದಂಬರ :—ಮೀಸಿ ಹೊತ್ತಿದ ಗಂಡ್ಸೂಂತಂದ್ರ ಆತು!

ಕುಲಕರ್ಣಿ :— ಇವಗ ಮೀಸಿ ಇಲ್ಲಾಂತ ಅಷ್ಟು ಮಾತು ಬದಲು ಮಾಡಿ ಕೊಂಬೋ ಬುದ್ಧಿ ಇರಬೇಕಲ್ಲಾ ನಮ್ಮ ವೆಂಕಣ್ಣಗ!

ಚಿದಂಬರ :—ಹಾಂಗಾರ ನನ್ನ ಮೀಸೀ ಹಚ್ಚಿಕೋ ಹಿಡಿ. (ತೆಗೆದುಕೊಡುವನು)

ಗೋವಿಂದ :— ಅಲ್ಲಪಾ! ನನ್ನವು ಚಾರ್ಲಿಚಾಪ್ಲಿನ ಕಟ್ಟಿನ ಮೀಸಿ!

ಕುಲಕರ್ಣಿ :—ಇರ್‍ಲಿ ಹೋಗ್ಮಾರಾಯಾ! ಶೂಟಾತೂ! ಹೋಗೋ! (ರಂಗದ ಮೇಲೆ ಬಂದೂಕಿನ ಸಪ್ಪಳ! ‘ ಅಯ್ಯೋ ಪ್ರಿಯಾ ಪ್ರಿಯಕರಾ, ಎಂಬ ಚೀತ್ಕಾರದ ಧ್ವನಿ. ಗೋವಿಂದ ಮೀಸೆ ಕಸಿದುಕೊಂಡು ಓಡುವನು)

ಕುಲಕರ್ಣಿ :—ಅಂತೂ ಎರಡನೇ ಸೀನೊಂದು ಮುಗಧಾಂಗ ಆತು. ಇನ್ನ ಮೂರನೆದ್ದು ಒಂದುಳೀತೂ!

ಬಂಡೆಪ್ಪ :—(ಓಡಿಬಂದು) ಎಲ್ಲಾ ಘಾತಾತೂಂದೆ!

ಕುಲಕರ್ಣಿ :—ಏನಾತಪ್ಪಾ ಮತ್ತs ಅರೇಬಿಯನ್ನ ನಾಯಿಟ್ಸದಾಗಿನ ದೆವ್ವ ಬಂಧಾಂಗ ಬರ್‍ತಾವಲ್ಲಾ ಈ ವಿಘ್ನ ಎಲ್ಲಾ ಕಡಿಂದನೂ!

ಬಂಡೆಪ್ಪ :—ಮೂರನೇ ಸೀನಿನ್ಯಾಗ ಬರೋ ನಾರದನ್ನ ಸಿಂದ ಗಡ್ಡಾ ತರ್‍ಲಿಕ್ಕೆ ಮರ್‍ತಾನs ಆ ಜೀನಗಾರ ಜಗಪ್ಪಾ!

ಚಿದಂಬರ :—ಅಲ್ಲಾ ಈ ನಾಟಕದಾಗಿನ್ನಾರದಾ ಆಧುನಿಕ ನಾರದಾ; ಗಡ್ಡ ಇಲ್ಲಿದ್ರೂ ನಡೀತದ.

ಕುಲಕರ್ಣಿ :—(ತಲೇಮೇಲೆ ಕೈಯಿಟ್ಟುಕೊಂಡು ಕೂಡುತ್ತ) ಅಂತೂ ಉರಲು ಕೊರಳಿಗೇ ಬಂತ್ರೆಪೋ, ಬಂತೂ!

ಪ್ರಹ್ಲಾದ :—(ಓಡುತ್ತಾ ರಂಗದ ಕಡೆಯಿಂದ ಬಂದು) ಕುಲಕರ್ಣೀ, ಕುಲಕರ್ಣೀ ಘಾತಾತೂ ಅಂದೆ! (ಕುಲಕರ್ಣಿ ಕೂತಲ್ಲಿಂದಲೇ ಹೌಹಾರಿ ಮೋರೆ ಮೇಲೆ ಮಾಡಿ ಕೆರಳಿದಂತೆ ಪ್ರಹ್ಲಾದನನ್ನು ನಿಟ್ಟಿಸುವನು)

ಚಿದಂಬರ :—ಏನಾಯಿತೇನೂ? (ರಂಗದ ಕಡೆ ನೋಡಿ) ಎಲಾ ಇವನ! ಆಂ!! ಕುಲಕರ್ಣೀ, (ಕುಲಕರ್ಣಿಯೂ ಎದ್ದು ರಂಗದತ್ತ ದಂಗು ಬಡೆದು ನೋಡುತ್ತಿರಲು) ಏ ಕುಲಕರ್ಣಿ, ಎರಡನೇ ಸೀನೂ ಇನ್ನೂ ಮುಗಿದೇ ಇಲ್ಲಲ್ಲಾ. ಆಂ! ಸಿನೇಮಾದಾಗ ಫಿಲ್ಮು ಹರಿದಾಗ ಗೊಂಬಿ ನಿಂತಲ್ಲೇ ನಿಂದ್ರೋ ಹಾಂಗ ಆ ಸುಂದ್ರಾಸಾನೀ ಮತ್ತ ಮನೋಹರ ಗೋವಿಂದಾಚಾರೀ ಆ್ಯಕ್ಟಿಂಗ್ ಮಾಡಮಾಡ್ತ ಕಲ್ಲು ಬಡಿದು ನಿಂತ್ಹಾಂಗ ನಿಂತಾರಲ್ಲಾ! ಆತೇನಿವ್ರಿಗೇ? ಆ ಮಾಲತಿ ಮಾತ್ರ ಸತ್ತಿದ್ರೂ ಕಕ್ಕಾವಿಕ್ಕಿಯಾಗಿ ಅತ್ತಲಾಗಿತ್ತಲಾಗ ನೋಡಲಿಕ್ಕೆ ಹತ್ತ್ಯಾನ! ಈ ಸೀನು ಇನ್ನೂ ಯಾಕ ಮುಗೀವಲ್ಲದೂ? ಪರದೆ ಯಾಕ ಬೀಳವಲ್ಲದೂಂತೀನಿ!

ಪ್ರಹ್ಲಾದ :—ಪರದೆ ಏನ್ಬೀಳತದ ತಂತಲೀ! ಆ ನಾರಾಯಣಭಟ್ಟಾ ಶೂಟು ಮಾಡಿಸಿಕೊಂಡು ಎಡಮಗ್ಗಲು ಬೀಳೋದು ಮರತು ಬಲಮಗ್ಗಲು ಬಿದ್ದು ಮೂರನೆ ಸೀನಿನ ದಶಿಂದ ರಸ್ತಾಪರದೆ ಬೀಳೋವಲ್ಲೇ ಅಡ್ಡಾಗಿ ಮಲಗ್ಯಾನ; ಸತ್ತಾವ ಸರಿಯೋದು ಹ್ಯಾಂಗ? ಅಂತ ಪರದೆ ಕೆಳಗ ವ್ಯಾಲ ಹಣಿಕಿಹಾಕಲಿಕ್ಕೆ ಹತ್ತ್ಯೇದ!

ಕುಲಕರ್ಣಿ :—ಮತ್ತೀ ವೆಂಕಣ್ಣಾ ಗೋವಿಂದಾ ಏನ್ಕತ್ತೀ ಕಾಯ್ತಾರ ಹಾಂಗ ನಿಂತೂ?

ಪ್ರಹ್ಲಾದ :—ಗೋವಿಂದಾ, ಸುಂದ್ರಾಸಾನಿನ್ನ ಸಾಮಾಧಾನ ಮಾಡೋ ಜಂಭದ ಮಾತಾಡೋವಾಗ ಮೀಸೀ ವ್ಯಾಲ ಹಾಕಿದ ಕೈಗುಂಟ ಮೀಸೀನೇ ಕಿತ್ತಿಬಂದದ್ದರಿಂದ ಅವಾ ಹೀಂಗ (ತನ್ನ ಕೈಯಿಂದ ತುಟಿಯ

ಹತ್ತರ ಮೀಸೆ ಹಿಡಕೊಂಡು ನಿಂತದ್ದರ ನಕಲುಮಾಡಿ ತೋರಿಸುತ್ತ ಸೆಟೆದು ನಿಂತು) ಸೆಟೆದು ನಿಂತಾನs ಮತ್ತ ಆ ಸುಂದ್ರಾಸಾನಿ, ಗೋವಿಂದಾ ಆಕಿನ್ನ ಅಡ್ರಾಸಿ ಅಪ್ಪಿಕೊಂಡಾಗ, ಕಟ್ಟಿಕೊಂಡ ಎರಡೂ ಎದೀ ಉದುರಿ ಬಿದ್ವು ಅಂತ (ತನ್ನೆರಡೂ ಕೈಗಳನ್ನೂ ತನ್ನ ಎದೆಯ ಹತ್ತಿರ ಮೊಲೆಯಾಕಾರವಾಗಿ ಹಿಡಿದು ಕಳಚಿ ಬಿದ್ದ ಕ್ರಮವನ್ನು ಅನುಕರಿಸುತ್ತ, ನಂತರ ಬಗ್ಗಿ ಸೆರಗು ಅವಚಿಕೊಂಡದ್ದನ್ನೂ ತೋರಿಸುತ್ತ) ಆಕಿ ಬಗ್ಗಿ ಎದೀಗೆ ಸೆರಗು ಅವಚಿಕೊಂಡಾಕಿ ಮೋರೆ ಮೇಲೆತ್ತಧಾಂಗ ಆಗಿ ಹಾಂಗs ನಿಂತಾಳ, ಜನರೆಲ್ಲಾ, ಏನೋ ಆದ ಅದ್ಭುತ ತಿಳೀದೆ, ಮತ್ತೇನೋ ಅದ್ಭುತ ಆಗೋದಂತ ದಂಗಬಡಿದು ಕೂತಾರ!

ಕುಲಕರ್ಣಿ :—(ಹಣೆ ಹಣೆ ಗಟ್ಟಿಸಿಕೊಳ್ಳುತ್ತ) ಆಯಿತಪಾ; ಕಷ್ಟಾs, ಪೂರಾs ಆತು! ಈ ಮೆಂಕ್ಯಾ, ಜಾತೀ ನಾವಲಿಗ್ಯಾ ಕಡೀಕೆ ನಂದs ಇದಿರುಗಪ್ಪಾ ಮಾಡಿದಾ! (ಹಾಹಾರಿದಂತೆ) ಇನ್ನೇನುಳೀತೂ! ಹಾಕ್ರೀ, ಅಂಕ ಪರದೆ; ಬಿಡ್ರಿ ಅಂಕ ಪರದೆ; ಒಗೀರಿನ್ನ ಅಂಕ ಪರದೆ!

ಚಿದಂಬರ :—ಕಡೀ ಸೀನಿಂದಶಿಂದ ನಾರದ ತಯಾರಾಗ್ಯಾನಲ್ಲ! ಮುಂದ ಗತಿ!

ಕುಲಕರ್ಣಿ :—ಮುಂದನುತೀ, ಆ ನಾರದ ಬರೋದ್ರಾಗs ನಮ್ಮ ನಾಟಕೆಲ್ಲಾ ನಾರಿ ಗೊಮ್ಮಾs ಅಂಥೋತು! ಇನ್ನೆಲ್ಲಿ ನಾಟಕಾ? ಅಂಕಪರದೆ ಇಳಿಸಿರ್ಯೋ ಲಗೂನ; ನಾ ಮುಂದಿಗೆ ಮುಖಾ ತೋರಿಸೋ ಹಾಂಗಿಲ್ಲಾ; ಹೂಂ! ಕೆಡವ್ರಿ, ಅಂಕ ಪರದೆ !!! ಕೆಡವ್ರೋ ಕೆಡವ್ರಿನ್ನ !!! (ಗಂಟಲ ಹಿಚುಕಿಕೊಳ್ಳುತ್ತ ಕೂಗಿ ಕುಸಿಬೀಳುವನು; ಮತ್ತೆ ಒಂದು ಕೈಯಿಂದ ಪರದೆ ಇಳಿಸಲು ಸನ್ನೆಯನ್ನು ಮಾಡುತ್ತಿರುವನು. ಆತನ ನಾಟಕದ ಅಂಕ ಪರದೆಯ ಗಂಟೆಯೊಡನೆ ಈ ಪ್ರಹಸನ ಅಂಕಪರದೆಯೂ ಇಳಿಯುವುದು.)

— ಮುಗಿಯಿತು —

೮

ಸೌಂದರ್ಯೋಪಾಸಕ

(ಒಂದು ವಿಡಂಬನ)

ಪಾತ್ರಗಳು

ಗೋಪಾಲ	:	ಒಬ್ಬ ತರುಣ ಕಲಾಕಾರ
ಕೃಷ್ಣ	:	ಆತನ ಕವಿ-ಮಿತ್ರ
ವೇಣು	:	ಗೋಪಾಲನ ಪ್ರೇಯಸಿ ಯಾಗಬೇಕಾದವಳು

ಪಾತ್ರ ಪರಿಚಯ

ಗೋಪಾಲ ಒಬ್ಬ ತರುಣ ಕಲಾಕಾರ. ಸ್ವಲ್ಪಮಟ್ಟಿನ ಕೀರ್ತಿಯನ್ನೂ ಗಳಿಸಿದವ. ಆತನಲ್ಲಿ ಕಲಾತ್ಮಕವಾದ ಅಹಂಕಾರವೂ ಅದಕ್ಕೂ ಹೆಚ್ಚಾಗಿ ಆವೇಶವೂ ಇವೆ. ತಾನೊಬ್ಬ ವಾಸ್ತವಕಲೆಯ ಪುರೋಗಾಮಿ ಎಂಬ ಅಭಿಮಾನಿಯಾತ. ಆದರ್ಶವಾದವನ್ನು ಹಳಿಯುತ್ತಿದ್ದ ಆತನ ಜೀವನದಲ್ಲಿ ಆತನ ಕಲೆಯಲ್ಲಿದ್ದ ವಾಸ್ತವವಾದವಿರದೆ ಆದರ್ಶವಾದದ ಹಳವಂಡವೇ ಇತ್ತು. ಆದರೆ ಕಲೆಯ ವಾಸ್ತವತೆಯ ಬಗ್ಗೆ ಮಾತ್ರ ಆತ ಪ್ರತಿವಾದಿ ಭಯಂಕರನೇ. ಆದರೂ ಆತನ ದೃಷ್ಟಿ ಗಟ್ಟಿಯಾದಷ್ಟು ವಿಚಾರಗಳು ಗಟ್ಟಿಯಾಗಿರಲಿಲ್ಲ. ತುಂಬ ಓದಿದವನಾದರೂ ಹೆಚ್ಚು ಅರಗಿಸಿಕೊಂಡವನಲ್ಲ. ಹೆರವರ ವಿಚಾರಗಳೇ ಆತನಲ್ಲಿ ಸ್ವಂತ ವಿಚಾರಕ್ಕಿಂತಲೂ ಪ್ರಬಲವಾಗಿವೆ. ಆದ್ದರಿಂದ ಆತನಲ್ಲಿ ಗೊಂದಲಗೇಡಿತನವೂ ಅಪ್ರಾಸಂಗಿಕತೆಯೂ ಕಾಣುವದುಂಟು. ಕವಿಯಾದ ಆತನ ಗೆಳೆಯ ಕೃಷ್ಣನಿಗೆ ಗೋಪಾಲನ ಬಲಾಬಲವೆಲ್ಲ ಗೊತ್ತು. ಆತನಲ್ಲಿ ಸ್ಥೈರ್ಯ, ಅವಧಾನ, ಚಾತುರ್ಯ ಇವೆ. ವೇಣು ಒಬ್ಬ ಸಾಧುಸ್ವಭಾವದ ಸರಲಹೃದಯದ ತರಳೆ. ಅವಳದು ಹೆಚ್ಚಾಗಿ ಪೋಷಕ ಪಾತ್ರ.

೧ನೇ ನೋಟ

(ಬೆಳಗಿನ ೯ ಗಂಟೆ. ಗೋಪಾಲ ಕುಂಚಕಡ್ಡಿಗಳೊಂದಿಗೆ ತನ್ನ ಕೆಲಸದ ಹಲಗೆಯ ಹತ್ತಿರ ಅಣಿಯಾಗಿದ್ದಾನೆ. ಒಂದು ಬದಿಗೆ ಅದೇ ಮುಗಿಸಿದ ಚಿತ್ರವೊಂದು ಇನ್ನೂ ತೀವಟಿಗೆಯ ಮೇಲೆಯೇ ಇದೆ. ಇಡೀ ಕೋಣೆಯೆಲ್ಲ ಕಲಾಕಾರನಿಗೊಪ್ಪುವಂತೆ ಸಜ್ಜಿತವಾಗಿದೆ. ಗೋಪಾಲ ಕೈಯ ಕುಂಚಕಡ್ಡಿಗಳನ್ನು ಬದಿಗಿರಿಸಿ, ಹತ್ತಿರದ ಮೇಜಿನ ಮೇಲೆ ಹರವಿದ್ದ ಭಾವಚಿತ್ರಗಳನ್ನು ನೋಡುತ್ತ ತಲ್ಲೀನನಾಗಿದ್ದು ಕೆಲಹೊತ್ತಿನ ಮೇಲೆ ಉದ್ವೇಗಪರವಶನಾಗುತ್ತಾನೆ.)

ಗೋಪಾಲ :—ಸೌಂದರ್ಯವೇ ಸತ್ಯ; ಸತ್ಯವೇ ಸೌಂದರ್ಯ! ಆದರೆ ಎಲ್ಲಿದೆ ಆ ಸೌಂದರ್ಯ? ಆ ಸತ್ಯವಾದರೂ ಎಲ್ಲಿದೆ? ವಿಕಾರವಶನಾಗಿ ಕಾಲಕಾಲದ ವರೆಗೂ ಆ ಸೌಂದರ್ಯದ ನೆಲೆಯರಿಯಲು ಹಂಬಲಿಸಿದ್ದೇನೆ; ಹವಣಿಸಿದ್ದೇನೆ. ಈ ಸೌಂದರ್ಯ ಸತ್ಯಗಳೆರಡೂ ಮಾಯಾಮೃಗದಂತಿವೆ. ಮಾನವರ ಮಲಗಿದ ಹೃದಯಗಳನ್ನು ಚೈತನ್ಯಮಯವಾಗಿಸಬಲ್ಲ ದಿವ್ಯ ಸೌಂದರ್ಯದ ಸೀಮಾತೀತವಾದ ಅಮರ ಚಿತ್ರವೊಂದನ್ನು ಬಣ್ಣದಲ್ಲಿಳಿಸಿ ಮೂಡಿಸಬೇಕೆಂದು ಎಷ್ಟೋ ಸಲ ಹಾತೊರೆದಿದ್ದೇನೆ; ಕಾತರಗೊಂಡಿದ್ದೇನೆ; ಯಾತನೆಗೀಡಾಗಿದ್ದೇನೆ. ಆ ಅಮರನಾದ, ಅಗಾಧವಾದ, ಅದ್ವಿತೀಯವಾದ ದಿವ್ಯವಾದ ಭವ್ಯವಾದ ರೂಪರಾಶಿಯೊಂದು ನನ್ನ ಕಣ್ಣಿಗೆ ಕಾಣಬಾರದೇ! ಒಂದೇ ಒಂದು ಕಣ್ಣಿಂಬಾಗಬಲ್ಲ ಹೆಣ್ಣುರೂಪು! (ಎಂದು ವಿಚಾರಲೀನನಾಗಿ ಮೈ ಮರೆಯುತ್ತಿರುವಾಗಲೇ, ಒಮ್ಮೆಲೇ ಎಚ್ಚತ್ತು) ಆಂ, ಏನೆಂದೆ? ಹೆಣ್ಣುರೂಪು! ಅದೇಕೆ ಹೆಣ್ಣುರೂಪು! ಈ ಮಾತೇಕೆ ಬಂತು ಬಾಯಿಗೆ!! ಸೌಂದರ್ಯಕ್ಕೇನು ಹೆಣ್ಣೇ ನಿಜವಾದ ನೆಲೆಯೇ? ಕವಿಗಳೆಂಬವರು ನೆಲಮುಗಿಲಿನ ನೋಟಗಳನ್ನು, ಬನಬೆಟ್ಟಗಳ ಬೆಡಗನ್ನು, ಸರಿತ್ಸಾಗರಗಳ ಸಡಗರವನ್ನು, ಸೃಷ್ಟಿಯ ಸೊಬಗನ್ನು, ಕಲೆಯ ಕುಸುರನ್ನು, ಹಕ್ಕಿಪಕ್ಕಿಗಳ ಚಕ್ಕಂದವನ್ನು—ಹಾಗೆಯೇ ಹೆಣ್ಣಿನ ಚೆಲುವನ್ನೂ ಒಲಿದೊಲಿದು ಬಣ್ಣಿಸಿದ್ದಾರೆ; ಸರಿ. ಆದರೆ ನಾನು ಮಾತ್ರ ಹೆಣ್ಣಿನ ಚೆಲುವೊಂದೇ ಸೌಂದರ್ಯದ ಪರಾಸೀಮೆಯೆಂದು ಏಕೆ ಬಗೆದಿರುವೆ?......................ನಾನಂತೂ ಕವಿಗಳ

ಮಾಟ್ಟವನ್ನು ಮೀರಬಲ್ಲ ಕಲಾಕಾರ; ಚೆಲುವಿಗೆ ನೆಲೆಯಾಗಬಲ್ಲ ಚಿತ್ರಗಳನ್ನು ಎಷ್ಟೊ ಬರೆದಿದ್ದೇನೆ. ನಾನು ಬಣ್ಣಿಸಿದ ನುಣ್ಣನೆಯ ಪರ್ವತಗಳಲ್ಲಿ, ಕಣ್ತಂಪಿನ ದರಿಕೊಳ್ಳಗಳಲ್ಲಿ, ಇಂಪಾಗಿ ಹಾಡುವ ಗುಡ್ಡದ ಸರುವುಗಳಲ್ಲಿ, ಅಬ್ಬರಿಸಿ ಹರಿದೋಡುವ ಹೊಳೆಗಳ ಹೊಳವಿನಲ್ಲಿ, ಸಂಜೆ ಮುಂಜಾವುಗಳ ಬಣ್ಣದಾಟದ ರಂಜನೆಯಲ್ಲಿ, ಸಂಪಿಗೆಯ ಸೊಂಪಿನಲ್ಲಿ, ಮಲ್ಲಿಗೆಯ ಮಾಧುರ್ಯದಲ್ಲಿ, ಪಾರಿಜಾತದ ಪರವಶತೆಯಲ್ಲಿ ಸೌಂದರ್ಯವನ್ನು ಸೂಸಲುಸೂಸಲಾಗಿ ಚೆಲ್ಲುವರಿಸಿದ್ದೇನೆ; ನಿಜ. ಆದರೂ ನನಗೆ ತಣಿವಿಲ್ಲ. ಆದರೆ—ಆಂ—! ಹೆಣ್ಣುರೂಪು! ಹೌದ್ಹೌದು! ಹೆಣ್ಣುರೂಪು! ಅದರಲ್ಲಿ ಏನೋ ಅಗಾಧತೆಯಿದೆ. ಹೆಂಣಿನಲ್ಲಾವುದೋ ಒಂದು ಒಡೆಯದ ಒಡಪಿನ ಮಾಟವಿದೆ. ಆ ಚೆಲುವಿನ ಹೊಳವೇನೋ ನನಗೆ ಕಂಡಂತಾಗುತ್ತಿದೆಯಾದರೂ, ಅದರ ನಿಲುವು–ನೆಲೆಗಳು ಮಾತ್ರ ಅಳತೆಗೆ ಬರಲೊಲ್ಲವು. ಹೆಂಣಿನ ರೂಪು; ಹೆಂಣಿನ ಚೆಲುವು ಅದೇ ಕಲಾಕಾರರ ಕುಶಲತೆಗೆ ಬಲವು; ಹಾ! ಎಷ್ಟು ಸೆಳವಿನ ಬಲೆಯೆಳತವಿದೆ ಅವಳ ಚೆಲುವಿನಲ್ಲಿ! ಕಂಡೆ, ನಿಜವಾಗಿ ಕಂಡೆ. (ಧ್ಯಾನಪರನಾಗಿ) ಹೆಂಣ ಚೆಲುವೇ ನಿಜವಾದ ಸೌಂದರ್ಯ! (ಉದ್ಘೋಷಿಸುತ್ತ) ಹೌದ್ಹೌದು! ಹೆಣ್ಣೇ ಸೌಂದರ್ಯ; ಸೌಂದರ್ಯವೇ ಸತ್ಯ! (ಎಣಿಕೆಹಾಕುತ್ತ) ಎಂದರೇನಾಯಿತು! ಹೆಣ್ಣೇ ಸತ್ಯವೆಂದಾಯಿತಲ್ಲ! ಹಾ! ಇದೇನು? ಹೆಂಣು ಸತ್ಯವೇ?? ಇದೆಂಥಾ ಒಡಪು! ಬಿನ್ನಾಣಾ!! ಅದೇಕೆ, ವಿರೋಧಾಭಾಸ!!! (ಅಟ್ಟಹಾಸದಿಂದ) ಹೆಣ್ಣೆಂದಾದರೂ ಸತ್ಯವಾದೀತೇ? ಹಾಗೆ ನೋಡಿದರೆ ಆ ಸತ್ಯವೆನ್ನುವದೇ ಒಂದು ಹೆಂಣು. ಹೊಸ ಹರೆಯದ ಹುಡುಗಿಯ ಒನಪು ಒಯ್ಯಾರದಿಂದ ಅನಂತ ಕಾಲದ ಶೋಧಕರಿಗೂ, ಋಷಿಗಳಿಗೂ ಕಾಣದೆ ಅಡಗಿ ಮಾಟವೋಡಿಯಾಡುವ ಆ ಸತ್ಯವೇ ತೆರೆಮರೆಯ ಮೋರೆ ಮುಸುಕಿನ ಹೆಂಣು! ನಮ್ಮ ಹಿರಿಯರು ಎನ್ನಲಿಲ್ಲವೇ! "ಹಿರಣ್ಮಯೇನ ಪಾತ್ರೇಣ ಸತ್ಯಸ್ಯಾಪಿಹಿತಂ ಮುಖಂ!!". (ವಿಚಾರವಶನಾಗಿ ನೆಟ್ಟನೋಟದಿಂದ ಕುಳಿತುಬಿಡುತ್ತಾನೆ.)

ಇಷ್ಟರಲ್ಲಿ, ವಾಡಿಕೆಯಂತೆ ರವಿವಾರದ ಚಿಟ್ಟಿಗಾಗಿ ಬಂದ ಆತನ ಗೆಳೆಯ ಕೃಷ್ಣನು ಮೆಲ್ಲನೆ ಹಿಂಬದಿಯಿಂದ ಆತನನ್ನು ಸಮೀಪಿಸಿ, ಹೆಗಲ ಮೇಲೆ ಕೈಯಿಟ್ಟು ಮಾತನಾಡುತ್ತಾನೆ.)

ಕೃಷ್ಣ :—ಇದೇನು ಗೋಪಾಲ! ಹೀಗೆ ಕುಳಿತಿರುವಿ. ನಿನಗೇನು ಮಂಕು ಹಿಡಿದಿದೆಯೇ? ಯಾವದೊಂದು ಮಾಟದ ಸೊಂಕು ಬಡಿದಿದೆಯೇ ?

ಗೋಪಾಲ :—(ಆತನನ್ನು ಮಾಲಿಸುತ್ತ) ಹೌದು ಕೃಷ್ಣ; ಮಂಕೇ ಅನ್ನು. ಅಥವಾ ಒಂದು ಭೂತದ ಸೊಂಕೂ ಅನ್ನು. ನನಗಂತೂ ಈ ಹುಚ್ಚು ಬಿಡಲೊಲ್ಲದು. ನಾನು ಹುಚ್ಚ; ನಿಜವಾದ ಹುಚ್ಚ; ಕೃಷ್ಣ, ಈ ಸತ್ಯ–ಸೌಂದರ್ಯಗಳ ಭ್ರಮೆ ನನ್ನನ್ನು ಬಡಿದು ತಿನ್ನುತ್ತಲಿದೆ. ಏನದರ ಮೋಹಕತೆ! ಎಷ್ಟದರ ಆಕರ್ಷಣೆ! ಇದೆ ಇದೆ ಎಂಬಲ್ಲಿಯೇ ಇಲ್ಲವಾಗುತ್ತದೆ. ಕಂಡಲ್ಲಿ ಕಾಣಲೊಲ್ಲದು; ಕಾಣುವಲ್ಲಿ ಕೈಗೆ ಸಿಕ್ಕಲೊಲ್ಲದು; ಕೈಗೆ ಸಿಕ್ಕಿದ್ದು ಬಂಣದಲ್ಲಿ ಬರಲೊಲ್ಲದು! ಕೃಷ್ಣ, ನೀ ಹೇಳು; ಹೆಣ್ಣು ಚೆಲುವಿನ ಆವಿಷ್ಕಾರ ಅಹುದೇ ?

ಕೃಷ್ಣ :—ಹೌದು ಗೋಪಾಲ; ನಾನಂತೂ ಹಾಗೆ ತಿಳಿದಿದ್ದೇನೆ; ನಂಬಿದ್ದೇನೆ.

ಗೋಪಾಲ :—ಸರಿ, ಬಿಡು; ನಿನ್ನ ಹಲವು ಕವನಗಳಲ್ಲಿ ನೀನು ಆ ಮಾತನ್ನೇ ಹಾಡಿರುವುದನ್ನು ನಾನು ಬಲ್ಲೆ.................ಅದೋ ಆ ನಿನ್ನ ಕವನ—"ಚಿಕ್ಕೆಯ ಬೆಳಕಿನ..............."

"ಚಿಕ್ಕೆಯ ಬೆಳಕಿನ ನಟ್ಟಿರುಳಿನಲೀ
ಬನದೆಡೆಯೇಕಾಂತದ ದಾರಿಯಲೀ
ಕೊಳ್ಳವನಪ್ಪಿದ ಕತ್ತಲೆಯಲ್ಲೀ
ಮರಡಿಯೇರಿ ನಾವ್ ನಿಂತಿರುವಲ್ಲೀ
ಮುಗಿಲಿನ ಮೈಮೆರಗಿನ ಸೀಮೆಯಲೀ
ಕಂಗಳನರೆಚಾಚಿದ ಚಂದ್ರನಲೀ
ನಲ್ಲಳ ಕುಡಿನಗೆ ಬಿಂಬಿಸುತಿತ್ತು;
ಬಯಲನು ಬೆಳಕಿಲಿ ತುಂಬಿಸುತಿತ್ತು."

ಕೃಷ್ಣಾ; ಆ ಕೊನೆಯ ಎರಡು ಸಾಲುಗಳಲ್ಲಂತೂ ಒಂದು ಕುಂಚದ ಕೈವಾಡವೇ ಮೂಡಿದಂತಿದೆ (ಆ ಸಾಲುಗಳನ್ನು ಮತ್ತೆ ಮತ್ತೆ ಹೇಳಿ)

ಆಹಾ! ಹಾಗೆಯೇ, ಕೃಷ್ಣ, ನಾನು ಕೂಡ ಅದಕ್ಕೂ ಉನ್ನತ ವಾದ ಸೌಂದರ್ಯಸಿದ್ಧಿಯ ಆವಿಷ್ಕಾರವನ್ನು ಬಣ್ಣದಲ್ಲಿಳಿಸಿ ಕುಂಚ ದಿಂದ ಕುದುರಿಸಿ ಜಗತ್ತಿಗೆಲ್ಲ ಕಾವ್ಯಕ್ಕಿಂತ ಕಲೆಯೇ ಶ್ರೇಷ್ಠವೆಂದು ಸಾರಲು ಅದೆಷ್ಟೊ ತವಕಿಸುತ್ತಿದ್ದೇನೆ. ಅದೇ, ನನ್ನ ಜೀವನದ ಹಿರಿಯಾಸೆ; ಆದರ್ಶ. ಆದರೇನು ಮಾಡಲಿ! ಆ ದೃಷ್ಟಿ, ಆ ನೋಟ ಕಣ್ತಪ್ಪಿಸುತ್ತಿದೆ; ಕುಂಚದ ತುದಿಯವರೆಗೂ ಬಂದಂತೆನಿಸುವ ಆ ಆವಿಷ್ಕಾರ ಬಣ್ಣವಲ್ಲಿಳಿಯುವ ಮೊದಲೇ ಬಯಲಾಗುತ್ತದೆ. ಆ ಸೌಂದರ್ಯಸಿದ್ಧಿಗೇನು ಮಾಡಲೀ?

ಕೃಷ್ಣ :—ಆದರೆ ಗೋಪಾಲ, ನೀನು ನಿನ್ನ ಸಾಧನೆಯನ್ನು ತಪ್ಪು ತುದಿ ಯಿಂದ ಆರಂಭಿಸಿರುವೆ. ಅಂತೇ ಈ ಗೊಂದಲಗೇಡು.

ಗೋಪಾಲ :—ತಪ್ಪು ತುದಿಯಿಂದಲೇ? ಹಾಗಾದರೆ ಸರಿಯಾದ ತುದಿ ಯಿರುವದಾದರು ಎಲ್ಲಿ? ನಿಮಗೆ ಕವಿಗಳಿಗೇನಂತೆ! ಯಾವುದೋ ಮೂಲೆಯಲ್ಲಿ ಕುಳಿತು ಗಾಳಿಯಲ್ಲಿ ನೂಲು ತೆಗೆದು ಮಾಟಮುರಿಗೆಯ ನಾಲ್ಕು ಪ್ರಾಸದ ಸಾಲುಗಳನ್ನು ಹೆಣೆದರೆ ಆಯಿತು ಕಾವ್ಯ. ಕಲೆ ಹಾಗೆಯೇ? ಅದೊಂದು ಜೀವನಿರ್ಮಾಣ. ಕಾವ್ಯ ಒಂದು ಉಸಿರು; ಕಲೆಯೊಂದು ಪ್ರಾಣವತ್-ಮೂರ್ತಿ. ಕಲೆ ಸತ್ಯವಾದದ್ದು, ಸೌಂದರ್ಯ ಮಯವಾದದ್ದು.

ಕೃಷ್ಣ :—ನಿನ್ನೀ ತತ್ತ್ವದಲ್ಲಿ ನಿಜಾಂಶವಿದ್ದರೂ, ನೀನೀ ಮಾತುಗಳನ್ನು ಇಡಿಯಾಗಿ ಜೋಡಿಸಿ ನೋಡಿಲ್ಲ.

ಗೋಪಾಲ :—ಇದು ತಪ್ಪು ಕೃಷ್ಣಾ; ನಾನು ಕಲಾಕಾರ, ಕವಿಯಲ್ಲ ಎಂಬುದನ್ನು ಪೂರಾ ತಿಳಿದುಕೋ. ನಾನೆಂದೂ ಕವಿಗಳಂತೆ ಗಾಳಿ ಮಾತುಗಳನ್ನು ಆಡುವವನಲ್ಲ. ನಾನು ನನ್ನ ತತ್ತ್ವಗಳನ್ನು ಅನು ಭವದ ಒರೆಗೂ, ಅವೆರಡನ್ನೂ ಪ್ರತ್ಯಕ್ಷ ಪ್ರಯೋಗಗಳ ಒರೆಗೂ, ಹಚ್ಚದೆ ನನ್ನ ಕಲೆಯನ್ನು ಬೆಳೆಸಿಲ್ಲ. ನಿಜವಾದ ಕಲಾಕಾರನ ರೀತಿಯೇ ಹಾಗೆ. ಅಂತೆಯೇ ಇದು ನೋಡು, ಇಷ್ಟೆಲ್ಲ ಭಾವಚಿತ್ರಗಳನ್ನು ಕಲೆ ಹಾಕಿದ್ದೇನೆ. ಇದೇಕೆ, ಗೊತ್ತೇ? ನಾನೀಗ ಹೊಸ ಹಾದಿಯ ವಾಸ್ತವ ಕಲಾಮಾರ್ಗವನ್ನು ಸ್ಥಾಪಿಸುವ ಎತ್ತುಗಡೆಯಲ್ಲಿದ್ದೇನೆ.

ಇದು ನೋಡು ಇವೆಲ್ಲ ನನ್ನ ಹೊಸ ಪ್ರಯೋಗದ ಸಾಧನಗಳು (ಹತ್ತರದ ಕಾಚಿನ ಕಪಾಟನಲ್ಲಿ ಹೊಂದುಗೂಡಿಸಿಟ್ಟ ನೂರಾರು ಫೋಟೋಗಳನ್ನು ತಂದು ಕೃಷ್ಣನೆದುರು ಇರಿಸುತ್ತಾನೆ. ಅವುಗಳಲ್ಲಿ ಕೆಲವನ್ನು ನೋಡಿ—)

ಕೃಷ್ಣ :—ಇದೇನು ಗೋಪಾಲಾ, ಇವಕ್ಕೆಲ್ಲಾ, ಎಷ್ಟು ಹಣ ಬಡಿದಿದ್ದೀಯಲ್ಲಾ; ಇಷ್ಟನ್ನೆಲ್ಲಾ ಅದ್ಹೇಗೆ ದೊರಕಿಸಿದೆ! ಎಷ್ಟು ಮೋಹಕವಾದ ಮೂರ್ತಿಗಳಿವು!!

ಗೋಪಾಲ :—ಛೀ! ಹುಚ್ಚಾ; ಏನಾದರೊಂದು ಅನ್ನಬೇಡ. ಹೆಚ್ಚಾದರೆ, ಒಂದು ಹತ್ತು ರೂಪಾಯಿ ವೆಚ್ಚ ಮಾಡಿದ್ದೇನು. ಅಷ್ಟೇ.

ಕೃಷ್ಣ :—ಏನು ಹತ್ತೇ ರೂಪಾಯಿಗೆ ಇಷ್ಟೊಂದು ಭಾವಚಿತ್ರಗಳೇ! ಆದರೆ ಇವರೆಲ್ಲ ನಿಜವಾದ ತರುಣಿಯರಂತೇ ಕಾಣುತ್ತಾರಲ್ಲೋ. ಇವರಲ್ಲಿ ಬಲು ಜನ ಮನೋಹರಿಯರೇ. ಕೆಲವರಂತೂ ಸೌಂದರ್ಯದ ಪಡಿಯಚ್ಚುಗಳೆ.

ಗೋಪಾಲ :—ನಿನಗೇನು ಹುಚ್ಚು ತಲೆಗೇರಿತ್ತೇ ಕೃಷ್ಣ. ಮೋಹಕವೆನ್ನು, ಮನೋಹರವೆನ್ನು; ನಡೆದೀತು. ಆದರೆ ಸೌಂದರ್ಯದ ಮಾತೆತ್ತಬೇಡ. ನನ್ನನ್ನು ಕೇಳಿದರೆ, ಇವರಲ್ಲಿ ಒಬ್ಬರಲ್ಲೂ ಸೌಂದರ್ಯದ ನಿಜಾಂಶವಿಲ್ಲವೇ ಇಲ್ಲ;................ಎಂದರೆ ಕಲಾದೃಷ್ಟಿಯ ಸೌಂದರ್ಯವಿಲ್ಲ. ನೀವು ಕವಿಗಳು ಇದಕ್ಕೇ ಸೌಂದರ್ಯವೆನ್ನುತ್ತೀರೋ ಏನೋ! ಈ ಒನಪು–ಒಯ್ಯಾರ ಬೆಡಗು–ಬಡಿವಾರಗಳಿಗೆ ಸೌಂದರ್ಯವೆನ್ನುವದೇ? ಕಲೆಯ ದೃಷ್ಟಿ ಕವಿಗಳಿಗೆ ಬರುವದೆಂತು!

ಕೃಷ್ಣ :—ಆಗಲೆಪ್ಪಾ, (ಅಣಕದ ನಗೆಯಿಂದ) ನೀನೆಂದಂತೇ ಆಗಲಿ. ಆದರೆ ಇವನ್ನಿಷ್ಟೆಲ್ಲ ಕೂಡಿಸಿದ್ದುದರ ಗುಟ್ಟನ್ನಷ್ಟು ಹೇಳಿಬಿಡಲ್ಲಾ!

ಗೋಪಾಲ :—ನೀನೇ ಸ್ವಲ್ಪ ತಲೆತುರಿಸಿಕೊಂಡು ನೋಡಲ್ಲಾ!

ಕೃಷ್ಣ :—ಕವಿಗಳಿಗೆಲ್ಲಾ ಇದು ಹೇಗೆ ತಿಳಿದೀತು. ಗಾಳಿಯ ನೂಲಿನಿಂದ ನಾವು ನಿನ್ನಂತೆ ಜೇಡನ ಜಾಲವನ್ನು ಹೇಗೆ ಹೆಣೆಯಬಲ್ಲೆವು! ಇದೇನೋ ಬಹು ಅದ್ಭುತವನ್ಯವಾದ ಕಲಾತ್ಮಕವಾದ ಹಂಚಿಕೆಯಿಂ

ಬೇಕು. ಏನು ಕ್ಯಾಮೆರಾ ಹಿಡಕೊಂಡು ಬೀದಿ ಬೀದಿ ಅಲೆದು ಇವನ್ನೆಲ್ಲಾ ಸಂಗ್ರಹಿಸಿದಿಯೇನು?

ಗೋಪಾಲ :—(ಬಿದ್ದು ಬಿದ್ದು ನಕ್ಕು) ಶುದ್ಧ ಕವಿಯೋ ಕೃಷ್ಣಾ ನೀನು ಶುದ್ಧ ಕವಿ. ಕಲೆಯ ಕುರುಹೇ ಗೊತ್ತಿಲ್ಲ ನಿನಗೆ. ನೀನು ಹೇಳೋದು ಕಾಲೇಜ–ಪೋಲಿಗಳ ಗತ್ತು ಅಷ್ಟೇ!

ಕೃಷ್ಣ :—ಸರಿ, ಪ್ರಗತಿಗುಣಕ್ಕನುರೂಪವಾಗಿ ಕಾಲೇಜಿನ ಎಲ್ಲೆಯನ್ನು ಮೀರಿದ ನೀನು ಈ ಯುಕ್ತಿಯಲ್ಲೂ ಆ ಕಾಲೇಜಿನ ಪೋಲಿಗಳಿಗಿಂತ ಮುಂದುವರಿದಿರಬೇಕು. ಹೇಳು ನೋಡುವಾ, ಏನಂಥಾ ಹಿರಿ ಹಂಚಿಕೆ?

ಗೋಪಾಲ :—ಅಂಥ ದೊಡ್ಡ ಮಾತೇನೂ ಇಲ್ಲವೇ ಇಲ್ಲ ಇದರಲ್ಲಿ. ಈಗಿನ ದಿನಗಳಲ್ಲಿ ಈ ಚೆಲುವೆಯರ ಬೇಟೆಯಾಡುವದು ಅಗ್ಗದ ಮಾತು. ಮೂರು–ನಾಲ್ಕು ರೂಪಾಯಿ ವೆಚ್ಚಮಾಡಿ, 'ಹಿಂದು,' 'ಭಾರತಿ'ಯಲ್ಲೊ 'ಕನ್ನಡ ಕಂಠೀರವ'ದಲ್ಲೊ ಒಂದು ಜಾಹೀರಾತು ಕೊಟ್ಟರೆ ಇಂಥ ಭಾವಚಿತ್ರಗಳು ಸೂಡುಗಟ್ಟಲೆ ಬರುತ್ತವೆ.

ಕೃಷ್ಣ :—ಸೂಡುಗಟ್ಟಲೇ...........ಪುಕ್ಕಟೆ........! ಅಂ, ಅದ್ಹೇಗಪ್ಪಾ?

ಗೋಪಾಲ :—ಹೇಗಂದರೆ, ಹೇಳಿದ ಹಾಗೆ.

ಕೃಷ್ಣ :—ಇಷ್ಟೆಲ್ಲಾ?

ಗೋಪಾಲ :—ಹೂಂ, ಇಷ್ಟೆಲ್ಲಾ; ಬೇಕಾದರೆ ಇನ್ನಿದರಷ್ಟು! ಇತ್ತ ನೋಡು. ಈ ಆಲ್ಬಮ್ಮಿನಲ್ಲಿ, ಮೊನ್ನೆ ತಾನೆ ಹೊಚ್ಚ ಹೊಸದಾಗಿ ಬಂದ ಭಾವಚಿತ್ರಗಳೆಲ್ಲಾ ಇವೆ. ಹಿಂದುಸ್ತಾನ ಟ್ಯಾಮ್ಸಿನಲ್ಲಿ ಕೊಟ್ಟ ಜಾಹೀರಾತಿನ ಫಲವಿದು. ಇವಿಷ್ಟೇ ಸುಮಾರು ಒಂದು ನೂರಾದಾವು. ಇವೆಲ್ಲಾ ಸೇರಿದರೆ, ಒಟ್ಟು ಮುನ್ನೂರು ಮಿಕ್ಕಿ ಹೋಗಿವೆ.

ಕೃಷ್ಣ :—ದೇವರೇ– –! ಸರಿ. ನಿನ್ನೀ ಪದ್ಧತಿಯೆಲ್ಲಾ ಬಹು ಕ್ರಮಬದ್ಧವಾಗಿದೆ—ಅಂದರೆ ನಿಜವಾಗಿ ಕಲಾತ್ಮಕವಾಗಿದೆ, ಸುಳ್ಳಲ್ಲ. ಆದರೆ ಭಾವಚಿತ್ರಗಳನ್ನು ನೀನು ದೊರಕಿಸಿದ್ದರ ಗುಟ್ಟೇ ರಟ್ಟಾಗಲೊಲ್ಲವಲ್ಲಾ! ಇವರೆಲ್ಲಾ ಸಿನೇಮಾ ಸ್ಟಾರಗಳಂತೂ ಅಲ್ಲವಷ್ಟೇ?

ಗೋಪಾಲ :—ಛೇ ಛೇ; ಇವರೆಲ್ಲಾ, ನನಗೆ ತಿಳಿದ ಮಟ್ಟಿಗೆ ಕುಲೀನ ತರುಣಿಯರೇ. ಹೆಚ್ಚಾದರೆ ಇವರಲ್ಲಿ ಕೆಲವರು ಕಾಲೇಜ–ಸ್ಟಾರ್ಸು ಆಗಿದ್ದಾರು.

ಕೃಷ್ಣ :—ಹಾಗಾದರಂತೂ ಒಗಟ ಇನ್ನಷ್ಟು ಬಿಗಿಯಾಯಿತು; ಇಂಥ ಕುಲೀನ ಸ್ತ್ರೀಯರು ಇಷ್ಟು ಮಂದಿ ನಿನಗೇನೆಂದು ಒಂದು, ಸೊಟ್ಟ ಜಾಹೀರಾತಿಗಾಗಿ ತಮ್ಮ ಫೋಟೊ ಕಳಿಸ್ಯಾರೂ!

ಗೋಪಾಲ :—ಏನೆಂದು ಕಳಿಸ್ಯಾರೇ! ಇದೆಲ್ಲಾ ಉನ್ಮಾದ, ಕೃಷ್ಣಾ, ಉನ್ಮಾದ; ನನಗೋ ಕಲೆಯ ಉನ್ಮಾದ; ಇವರೆಲ್ಲರಿಗೆ ಹಣ, ಅಂತಸ್ತು, ಪದವಿಗಳ ಉನ್ಮಾದ. ನವಯುವತಿಯರಲ್ಲಿ ಈ ಬೇಟಕ್ಕೆ ಬಲಿಬೀಳುವವರೆಷ್ಟೊ ಇದ್ದಾರಲ್ಲಾ! (ಹಿಂದಿರುಗಿ ಒಂದು ಜಾಹೀರಾತಿನ ಪುಟವನ್ನು ತಂದು) ಇದು ನೋಡು; ಇವೇ ಜಾಹೀರಾತುಗಳು; ಇವನ್ನೋದಿದರೆ ಒಗಟ ಬಿಚ್ಚುವದು.

ಕೃಷ್ಣ :—ಏನೂ! ಯಾವುದು, ಎಲ್ಲಿ?

ಗೋಪಾಲ :—ಅದೋ ಅಲ್ಲಿ; ಆ "ವಧುಗಳು ಬೇಕು" ಎಂಬ ತಲೆಕಟ್ಟಿನ ಕೆಳಗೆ ಓದು, ಹಾಂ, ಅದೇ ಮೂರನೇ ಜಾಹೀರಾತು. ಹೂಂ, ಓದು, ಗಟ್ಟಿಯಾಗಿ ಓದಲ್ಲಾ!

ಕೃಷ್ಣ :—(ಅನುಮಾನಿಸುತ್ತ ಆರಂಭಿಸಿ, ಮುಂದೆ ಗಟ್ಟಿಯಾಗಿ ಓದುವನು) "ಬೇಕಾಗಿದೆ—ಅತ್ಯಂತ ಸುಂದರ-ಸುಸ್ವರರೂಪಿಯಾದ ಉಚ್ಚ ಕುಲದ ತರುಣ ವಧು, ವಿಲಾಯತಿಯಿಂದ ಹಿಂದಿರುಗಿದ, ಮುಂಬಾಯಿ ವಿದ್ಯಾಖಾತೆಗೆ ಹೊಂದಿದ ತರುಣ ಪ್ರೊಫೇಸರನಿಗೆ ಬೇಕಾಗಿದೆ: ತಿಂಗಳಾ ೮೦೦ರೂಪಾಯಿ ಪಗಾರ; ದೊಡ್ಡ ಉತ್ಪನ್ನದಾರರ ಮನೆತನ, ಜಾತಿ-ಧರ್ಮಗಳ ನಿರ್ಬಂಧವಿಲ್ಲ, ಕೂಡಲೇ ಫೋಟೋದೊಂದಿಗೆ ಎಲ್ಲಾ ವಿವರ ತಿಳಿಸಿ"............ಇತ್ಯಾದಿ....ಇತ್ಯಾದಿ.................... ಇದೇನೋ ಗೋಪಾಲಾ, ಇದರಲ್ಲಿ ಒಂದೂ ಮಾತೂ ನಿನಗನ್ವಯಿಸುವದಿಲ್ಲ; ಇದು ನೀನು ಕೊಟ್ಟ ಜಾಹೀರಾತಂತೂ ಇರಲಾರದು. ಮೇಲಾಗಿ....................

ಗೋಪಾಲ :—ಇರವೇ ಏನೋ ಹುಚ್ಚೀ! ಇದೆಲ್ಲಾ ಕಲೆ, ಕವಿಗಳೇ. ಇದೊಂದು ಜಾಹೀರಾತೇ ೯೫ ಫೋಟೊಗಳನ್ನು ತಂದಿತು. ಇದು ನೋಡು, ಮತ್ತೊಂದು, ಇದನ್ನೋದು.

ಕೃಷ್ಣ :—"ಸರ್ವಾಂಗ ಸುಂದರಳೂ ಅಂತ್ಯಂತ ಸುಸ್ವರೂಪಿಯೂ ಆದ ತರುಣ ವಧು ೩೦ ವಯಸ್ಸಿನ ಬ್ರಾಹ್ಮಣ ಬ್ಯಾರಿಷ್ಟರನೊಬ್ಬನಿಗೆ ಬೇಕಾಗಿದೆ. ಸ್ಥಳ ಬೆಂಗಳೂರು, ತಿಂಗಳೊಂದಕ್ಕೆ ೨೦೦೦ ರೂಪಾಯಿ ಉತ್ಪನ್ನ. ನಿಜವಾದ ಚೆಲುವೆಯರಷ್ಟೇ, ತೀರ ಹೊಸ ಫೋಟೋದೊಂದಿಗೆ ಬರೆದುಕೊಳ್ಳಬೇಕು...........ಬಾಕ್ಸ ನಂಬರ್ ೯೭೨........ ಇತ್ಯಾದಿ. ಇತ್ಯಾದಿ" ಇದೂ ನಿನ್ನದೋ?

ಗೋಪಾಲ :—(ತಲೆದೂಗುತ್ತ) ಸರಿ; ಇದರಿಂದ ಸುಮಾರು ನೂರಿಪ್ಪತ್ತು ಒಳ್ಳೊಳ್ಳೇ ಫೋಟೋ ಬಂದವು; ಇವೆಲ್ಲಾ ಈ ಕಟ್ಟಿನಲ್ಲಿವೆ. ಇರಲಿ; ಅದನ್ನೋದು.

ಕೃಷ್ಣ :—"ಮಧ್ಯಪ್ರಾಂತದಲ್ಲಿ ಕಲೆಕ್ಟರನಾದ ಒಬ್ಬ ಬಂಗಾಲೀ I. C. S. ತರುಣನಿಗೆ..........." ಸರಿ ಗೋಪಾಲ, ಪ್ರೊಫೇಸರ್, ಬ್ಯಾರಿಸ್ಟರ್, I. C. S. ಎಲ್ಲಾರೂ ಉಳ್ಯಾಡಿದ್ದಾರಲ್ಲಾ ನಿನ್ನ ಕೈಯಲ್ಲಿ...........

ಗೋಪಾಲ :—ಇದರಿಂದಲೂ ಸುಮಾರು ಅಷ್ಟೇ ಫೊಟೋಗಳು ಬಂದವು. ಇಕಾ, ಇವೊಂದು ೪-೬ ಇವೆ; ನೋಡು.

ಕೃಷ್ಣ :—ಸರಿ, ಕಲಾಕಾರರೇ, ತಿಳಿದಂತಾಯಿತು ಬಿಡಿ. ಅಂತೂ ತಾವು "ಹುಡುಕುತ್ತಿನ ಹಿಗ್ಗಿನಾ ದಾರೀ ಮದುವೀಯ ಹಡಗವನ್ನೇರಿ" ಅಂತ ಹೊರಟೇರಲ್ಲಾ! ಅಲ್ಲಪಾ, ಆರ್ಟಿಸ್ಟಾ, "ಈ ಜನ್ಮಾನೇ ಕಲೆಗಾಗಿ ಅರ್ಪಿಸಿದ್ದೇನೆ; ಕಲೆಯೇ ನನ್ನ ಅರ್ಧಾಂಗಿ" ಎನ್ನುತ್ತಿದ್ದಾ ನೀನೂ ಮದುವೆಯ ಹಂಬಲಕ್ಕೆ ಬಿದ್ದೆಯಾ ಕೊನೆಗೆ! ನೋಡುವಾ, ಈ ಯುವತಿಯರೆಲ್ಲ ತಮ್ಮ ತಮ್ಮ ಪತ್ರಗಳಲ್ಲಿ ಏನೇನು ಬರೆದಿದ್ದಾರೆ!

ಗೋಪಾಲ :—ಅದೆಲ್ಲಾ ನನಗೇನು ಗೊತ್ತು ಮಹಾರಾಯಾ! ನನಗೆ ಬೇಕಾದದ್ದು, ನನ್ನ ಸೌಂದರ್ಯಸಿದ್ಧಿಯ ಪ್ರಯೋಗಕ್ಕೆ ಸಾಧನವಾದ ಫೊಟೋ ಮಾತ್ರ; ಅದಕ್ಕಾಗಿ ಒಂದು ಒಳ್ಳೇ ಯುಕ್ತಿ ಮಾಡಬೇಕಿತ್ತು ಅಷ್ಟೇ. ಕಲಾಕಾರನಿಗೆ ಬೇಕಾದದ್ದು ಹೆಣ್ಣಲ್ಲ, ಅದರ ರೂಪು; ಆ ರೂಪದ ಕಳೆಯಾದ ಸೌಂದರ್ಯ; ಆ ಸೌಂದರ್ಯವನ್ನು ಬೆಳಗುವ ಸತ್ಯ; ಆ ಸತ್ಯದ ಹಿಂದಿನ ತತ್ವ; ಆ ತತ್ವದ ಸತ್ವ. ತಿಳಿಯಿತೇ ಕವಿಗಳೇ! ಇದೋ ಇಲ್ಲಿ ನೋಡಿರಿ; ಇದು ಇನ್ನೂ ಇದೇ

ಮುಗಿಸಿಟ್ಟ ಚಿತ್ರ. ಇದರಲ್ಲಿ ವಾಸ್ತವ ಕಲೆಯ ತಿರುಳನ್ನೇ ಕರಗಿಸಿ ಬೆರೆಸಿಬಿಟ್ಟಿದ್ದೇನೆ. (ಚಿತ್ರವಿದ್ದ ತೀವಟಗೆಯನ್ನು ಸಮೀಪಿಸಿ) ಇದೋ ಈ ಚಿತ್ರವೆಂದರೆ ಸುಮಾರು ಒಂದೂವರೆ ತಿಂಗಳದ ಸತತ ಪರಿಶ್ರಮ ಪರಿಶೋಧನೆಗಳ ಫಲ. ಇಷ್ಟೆಲ್ಲಾ ಭಾವಚಿತ್ರಗಳಲ್ಲಿ ನನ್ನ ಒರೆಗೆ ಸ್ವಲ್ಪ ಮಟ್ಟಿಗಾದರೂ ಬಂದುವೆಂದರೆ (ಫೋಟೊದ ರಾಶಿಯಿಂದ ಮೂರನ್ನು ಆರಿಸಿ ಎತ್ತಿಹಿಡಿದು ತೋರಿಸುತ್ತ) ಇಕಾ ಇವು ಮೂರು. ಆದರೂ ಇವುಗಳಲ್ಲೂ ಯಾವುದೇ ಒಂದರಲ್ಲಿಯೂ ಚೆಲುವು ಪರಿಪೂರ್ಣವಾಗಿಲ್ಲ. ಅಂತೇ ಈ ಮೂರರ ಸಾರವನ್ನೇ ತೆಗೆದು ಸೇರಿಸಿ, ಈ ಚಿತ್ರವನ್ನು ಬಣ್ಣಿಸಿದ್ದೇನೆ.

ಕೃಷ್ಣ :—ತಿಳಿಯಿತು, ತಿಳಿಯಿತು, ಕಲಾಶ್ರೇಷ್ಠಿಗಳೇ! ನಿಮ್ಮ ಸಕ್ರಿಯಾತ್ಮಕ ಸಪ್ರಯೋಗಾತ್ಮಕ ಸಂಶೋಧನೆಗಳಿಂದ ನೀವು ಅಭಿನವ ರವಿವರ್ಮರೇ ಆಗಲು ಹೊರಟಂತೆ ಕಾಣುತ್ತದೆ. ಇರಲಿ ಗೋಪಾಲಾ, ನೀನು ನಿನ್ನ ಜಾಹೀರಾತುಗಳಲ್ಲಿ ಕುಲೀನ ಯುವತಿಯರನ್ನೇ ಏಕೆ ಅನ್ವಯಿಸಿರುವೆ? ಸೌಂದರ್ಯವೇನು ಕುಲೀನರಲ್ಲೆ ಇರುವದುಂಟೇ!

ಗೋಪಾಲ :—ಇನ್ನುಳಿದ ಬಿಡಾಡಿಗಳು ನಮಗೆ ಮಾಡೆಲ್ಲಾಗಿ ಸಿಕ್ಕೇ ಸಿಗುತ್ತವಲ್ಲಾ! ಆದರೆ ಕುಲೀನ ತರುಣಿಯರ ಶಾಲೀನತೆಯ ಹಿಂದೆ ಹೂವಿನೊಳಗಡಗಿದ ಗಂಧದಂತೆ ಸೌಂದರ್ಯವಿರಬಹುದೆಂದು ಭಾವಿಸಿ ಹೀಗೆ ಮಾಡಿದ್ದು.

ಕೃಷ್ಣ :—ಆದರೆ, ಗೋಪಾಲಾ, ಇದು ಅಸಹ್ಯವಾದ ಅದೇಕೆ ಹೇಸಿಗೆ ತರುವಂಥ ಮಾತಲ್ಲವೇ?

ಗೋಪಾಲ :—ಪೆದ್ದ ಕೃಷ್ಣಾ, ಅದಕ್ಕೇ ಕವಿಗಳ ಕಲ್ಪನೆ ಮೊಣಕಾಲ ಕೆಳಗೆ ಎನ್ನುವದು. ಇದೆಲ್ಲಾ ಒಂದು ಅಭ್ಯಾಸ, ಪ್ರಯೋಗ ಸಂಶೋಧನೆಗಾಗಿ ಎಂಬದು ನಿನಗೇಕೆ ತಿಳಿಯಲೊಲ್ಲದೋ ಕಾಣೆ.

ಕೃಷ್ಣ :—ಅದೆಲ್ಲಾ ಸರಿ; ಆದರೆ ಈ ನಿರ್ದೋಷಿ ತರುಣಿಯರನ್ನು ಹೀಗೆ ಮೋಸಗೊಳಿಸಬಹುದೇನಯ್ಯಾ!

ಗೋಪಾಲ :—ಮೋಸವೆಲ್ಲಿಯದೋ; ಅಥವಾ ಆದರೂ ಏನು ತಪ್ಪು. ಅದು ಅವರಿಗೆ ತಕ್ಕದ್ದೇ. ಇವರಲ್ಲಿ ಸತ್ಯ-ಸೌಂದರ್ಯಗಳ ಅಂಶ

ವಾದರೂ ಹುಡುಕ ಹೋಗಿ ನಾನೂ ಮೋಸಗೊಳ್ಳಲಿಲ್ಲವೇ! ಸರಿ ಮೋಸಕ್ಕೆ ಮೋಸ. ತಮ್ಮ ಬೆಡಗು ಬಿನ್ನಾಣಗಳಲ್ಲಿ ಇದ್ದ ಸ್ವಲ್ಪ ಸ್ವಾಭಾವಿಕ ಸೌಂದರ್ಯದ ಅಂಶಗಳನ್ನೂ ಇವರು ಅಡಗಿಸಿ ಬಿಟ್ಟಿದ್ದಾರೆ. ಇವರೀ ಹಗರಣ ನನಗಂತೂ ಶುದ್ಧ ಕಾಡುತನವಾಗಿ ಕಾಣುವದಲ್ಲದೆ, ಕಲೆಯ ಅವಮಾನವೂ ಹೌದು.

ಕೃಷ್ಣ :—ಅಲ್ಲವೋ ಗೋಪಾಲ, ನೀನೇ ಇದರಲ್ಲಿ ಮೊದಲು ತಪ್ಪು ತಿಳುವಳಿಕೆಗೆ ಅನುವುಗೊಟ್ಟೆ. ಅಲ್ಲದೆ ನೀತಿಯ ದೃಷ್ಟಿಯಿಂದಲೂ........

ಗೋಪಾಲ :—ಹುಚ್ಚ ಕವಿಯೇ, ನಾವು ಕಲಾವಿದರು ನೀತಿ-ಅನೀತಿಗಳಿಂದ ಅತೀತರು. ನೀತಿಗೂ ಕಲೆಗೂ ಸಂಬಂಧವಾದರೂ ಏನು?

ಕೃಷ್ಣ :—ಆದರೆ ಇಷ್ಟೆಲ್ಲಾ ಯುವತಿಯರು ನಿನ್ನ ಬಗ್ಗೆ ಏನೆಂದುಕೊಂಡಾರು ಎಂಬ ವಿಚಾರವೂ ಬೇಡವೇ!

ಗೋಪಾಲ :—ಅನ್ನುತ್ತಾರೇನು ಹಿಂದೇ ಕೂಳು. ಇದೆಲ್ಲಾ ಇತ್ತೀಚಿನ ಮ್ಯಾಟ್ರಿಮೋನಿಯಲ್ ಮಾರ್ಕೇಟಿನ ವಾಡಿಕೆಯಲ್ಲವೇ. ಎಲ್ಲವೂ ಕಾನ್ಫಿಡೆನ್‌ಶಲ್ ಅಲ್ಲವೇನಯ್ಯಾ? ಪ್ರತಿಯೊಬ್ಬಳೂ ಮತ್ತೊಬ್ಬ ಳಾವುಳೋ ಆರಿಸಲ್ಪಟ್ಟಿರಬೇಕೆಂದು ಸಮಾಧಾನ ಹಚ್ಚಿಕೊಳ್ಳುವಳು, ಅಷ್ಟೇ! ಇದೆಲ್ಲಾ ವ್ಯವಹಾರದ ರಾಜಬೀದಿ. ಕೃಷ್ಣಾ, ಸ್ವಲ್ಪ ವಾಸ್ತವವಾದಿಯಾಗು; ವ್ಯವಹಾರ ವಾದಿಯಾಗು! ತಿಳಿಯಿತೇ! ಅದೇಕೆ ಬಹಳ ಯೋಚನೆಯಲ್ಲಿ ಬಿದ್ದೆ! ಏಕೆ ನನ್ನ ಮಾತೆಲ್ಲ ನಿನಗೆ ಹಿಡಿಯಲಿಲ್ಲವೇ!

ಕೃಷ್ಣ :—(ವಿಚಾರಗಳನ್ನು ಒಮ್ಮೆಲೇ ಕೊಡವಿ) ಹಿಡಿಯಿತು ಗೋಪಾಲಾ, ಪಟ್ಟಾಗಿ ಹಿಡಿಯಿತು. ಸರಿ, ಸರಿ; (ಚಿಟಕೆ ಹೊಡೆದು ಚಟ್ಟನೆದ್ದು) ಆಗಲಿ ಗೋಪಾಲಾ, ನನಗೂ ಒಂದು ವ್ಯವಹಾರದ ಮಾತೇ ಹೊಳಿಯಿತು. ಹೇಳು, ನೀನು ನಿಜವಾಗಿಯೂ ಸೌಂದರ್ಯದ ಸತ್ಯ ವನ್ನೂ, ಸತ್ಯದ ಸೌಂದರ್ಯವನ್ನೂ ಹಾಗೆಯೇ ಬಾಳಿನ ಸತ್ಯ ಸೌಂದರ್ಯಗಳೆರಡನ್ನೂ ಕಣ್ಣಾರೆ ಕಾಣಬೇಕೆನ್ನುವಿಯಾ?

ಗೋಪಾಲ :—ಬೇರೇನು ಹೇಳಲಿ. ಅದಕ್ಕಾಗಿಯೇ ಅಲ್ಲವೇ ನಾನಿಷ್ಟೆಲ್ಲಾ ತಡಬಡಿಸುತ್ತಿರುವುದು.

ಕೃಷ್ಣ :—ಹಾಗಾದರೆ ನನ್ನದೊಂದು ಮಾತು ಕೇಳು. ನೀನು ಪಡೆಯ ಬೇಕೆಂದು ಹಂಬಲಿಸುವದನ್ನು ನಿನ್ನ ಕಲೆಯಂತೂ ತರಲಿಲ್ಲ. ಇನ್ನು ನಮ್ಮ ಅಲ್ಪಕಾವ್ಯಕ್ಕೆ ಒಂದು ಚ್ಯಾನ್ಸು ಕೊಟ್ಟು ನೋಡು.

ಗೋಪಾಲ :—ಗಾಳಿಯ ತೆರೆಯಂತಹ ಕವಿತೆಯ ಮುಟ್ಟಕ್ಕೆ ಸೌಂದರ್ಯಗಳು ಇಳಿದಾವೇನಯ್ಯ. ಎಲ್ಲಿ ನನ್ನ ಕಲೆಯೇ ಕೈಯೂರಿತೊ ಅಲ್ಲಿ ನಿನ್ನ ಕಾವ್ಯ ಡೊಗ್ಗಾಲೂರಿದಂತೇ ಸರಿ. ಆದರೂ ಆಗಲಿ, ನಿನ್ನ ಬಿನ್ನಹಕ್ಕೆ ಮನ್ನಣೆ ಕೊಡುತ್ತೇನೆ. ನೀನು ಮಾಡುವ ಕರಾಮತ್ತಾದರೂ ಏನು ಹೇಳು?

ಕೃಷ್ಣ :—ಹೆಚ್ಚೇನಿಲ್ಲ; ನಿನ್ನಂತಹದೇ ಒಂದು ಪ್ರಯೋಗಮಾಡಿ ನೋಡುತ್ತೇನೆ; ಆದರೆ ಒಬ್ಬ ಕವಿಯ ರೀತಿಯಿಂದ; ಅಷ್ಟೇ ಅಂತರ.

ಗೋಪಾಲ :—ಏನು? ನೀನೂ ಜಾಹೀರಾತು ಕೊಡುವವನೇನು? (ಮುಗುಳುನಗುತ್ತ) ಆದರೆ ಆ ರೀತಿ ಹೇಯವೆಂದು ಈ ಮೊದಲು ನೀನೇ ಅಂದಿಯಲ್ಲಾ!

ಕೃಷ್ಣ :—ಆದರೆ ನಾನು ಮಾಡುವದು ಒಬ್ಬ ಕವಿಯ ಕೈವಾಡದಿಂದ. ರೀತಿಯ ಗುಣದೋಷಗಳನ್ನು ಕಾರ್ಯಸಫಲತೆಯಿಂದಲ್ಲವೆ ಅಳೆಯು ವದು! ಇರಲಿ. ಇದೀಗ ನನ್ನ ರವಿವಾರದ ವಾಡಿಕೆಯ ಹೊರಡುವ ಹೊತ್ತಾಯಿತು. ನಾನು ಬರಲೇ?

ಗೋಪಾಲ :—(ಗಡಿಯಾಳ ನೋಡಿ) ಸರಿ. ಏಳು ಗಂಟೆ; ನೀನು ಏಳುವ ಹೊತ್ತಾದಂತೇ ಸರಿ. ಮುಂದಿನ ರವಿವಾರ ಬಂದೇ ಬರುವಿಯಲ್ಲವೇ?

ಕೃಷ್ಣ :—ಖಂಡಿತ; ರೂಢಿಯನ್ನೇಕೆ ತಪ್ಪಿಸಲಿ! ಅಲ್ಲದೆ ಇಷ್ಟೆಲ್ಲಾ ಗಡಿಬಿಡಿ ಯಲ್ಲೂ ವಾರಕ್ಕೊಮ್ಮೆಯಾದರೂ ನಿನ್ನನ್ನು ಕಾಣದೆ ಸಮಾಧಾನ ವಾಗುವದಿಲ್ಲ. (ಹೊರಡುತ್ತ) ಆಗಲಿ, ಬರುತ್ತೇನೆ. ಆ ರವಿವಾರದ ವರೆಗೆ ನನ್ನೀ ಹೊಸ ಪ್ರಯೋಗದ ಪರಿಣಾಮವೇನಾಗುವದೆಂದೂ ಕಾಯುವ! (ಹೋಗುತ್ತಾನೆ: ತೆರೆ)

೨ನೇ ನೋಟ

(ಮುಂದೆ ಎರಡು ವಾರಗಳು ಕಳೆದ ಮೇಲೆ, ರವಿವಾರ. ಅದೇ ಕೋಣೆ; ಅದೇ ಏರ್ಪಾಡು; ಆದರೆ ಮೇಜು ಒಂದು ಬದಿಗಿರಿಸಿದೆ; ತೀವಟಿಗೆ ಮೂಲೆಗೆ ಸರಿಸಲ್ಪಟ್ಟದೆ. ಕೋಣೆಯ ಮಧ್ಯದಲ್ಲಿ ಅವೇ ಎರಡು ಕುರ್ಚಿಗಳಿವೆ)

ಗೋಪಾಲ :—(ಉದ್ವೇಗಭರಿತನಾಗಿ ಅತ್ತಿಂದಿತ್ತ ಸುತ್ತುತ್ತ) ಹೌದು, ಸರಿ...........ಆಗದೇನು?...........ಅಯ್ಯೋ ಏನು ಭಯಂಕರ......... ಆಹಾ! ಏನು ಅದ್ಭುತ...........ಹಾಹಾ...........ಏನು ರಮ್ಯ........ ರಮಣೀಯ...........ಆದರೆ ಈ ಕಿಚ್ಚು...........ಈ........ಆಸೆ........ ಬೇಡ ಬೇಡ...........(ಮತ್ತೆರಡು ಸಲ ಸುತ್ತಾಡಿ).............ಬೇಡವೇ ಬೇಡ...........ಆದರೆ...........ನಾನು...........ನನ್ನ ಕಲೆ........... ಉಸ್ಸ್....... ಆ ಸೌಂದರ್ಯ...........ಉಸ್ಸ್ ಉಸ್ಸ್........ಆ ಸತ್ಯ...........ಉಸ್ಸ್ !!! (ತಲೆ ಹಿಡಿದುಕೊಂಡು ಕುರ್ಚಿಯಲ್ಲಿ ಕುಸಿ ಬೀಳುವನು; ಮುಂದೆ ಒಂದೆರಡು ನಿಮಿಷಗಳಲ್ಲೇ ಕೃಷ್ಣನು ಬರುವನು.)

ಕೃಷ್ಣ :—ಮತ್ತೇನು ಗೋಪಾಲಾ, ಹೇಗಿದ್ದೀಯಾ?

ಗೋಪಾಲ :—(ಚಂಗನೆದ್ದು, ಹಿಂದೆ ಕೈಕಟ್ಟಿ ಆತನನ್ನೆದುರಿಸಿ ನಿಂತು) ಹಾಂ! ಏನು? ಹೌದ್ಹೌದು; ಸರಿ; ಸ್ವಲ್ಪಮಟ್ಟಿಗೆ...........ಪರವಾಯಿಲ್ಲಾ; ಇದೇನೋ; ನೀನು ಯಾವಾಗ ಬಂದೆ? ಅಂ, ಅಲ್ಲಲ್ಲ;........... ನೀನು...........ಏನಂದೆ....... ! ಅಂ, (ಮೆಲ್ಲಗೆ ಚೇತರಿಸಿಕೊಳ್ಳುವನು)

ಕೃಷ್ಣ :—ಸರಿ, ಸರಿ; ತಿಳಿಯಿತು; ಇದೆಲ್ಲಾ ಕಲೆಯ ಲಕ್ಷಣವೆಂದೇ ಕಾಣುತ್ತದೆ. ಇರಲಿ ಗೋಪಾಲ; ಚಿಂತೆಯಿಲ್ಲ. ನನ್ನ ಜಾಹೀರಾತಿಗೆ ಬೇಕಾದ ಉತ್ತರವೇ ಬಂದಿರಬೇಕು; ಹೌದೇ?

ಗೋಪಾಲ :—ಹೀಗೂ, ಸರಿ; ಹಾಗಾದರೆ, (ಪೂರಾ ಎಚ್ಚತ್ತು) ಅಲ್ಲೋ, ಹೋದ ರವಿವಾರ ಬರುತ್ತೇನೆಂದವ ಏಕೆ ಬರಲಿಲ್ಲಾ? ನಿನ್ನ ದಾರಿ ಕಾಯುತ್ತ ಈ ಹದಿನೈದು ದಿನಗಳನ್ನು ಹೇಗೆ ಕಳೆದೆನೋ ನಾನೇ ಅರಿಯೆ!

ಕೃಷ್ಣ :—ನಾನು ಹೋದ ವಾರ ನಮ್ಮ ಸಾಹಿತ್ಯ ಸಭೆಯ ಕೆಲಸದಲ್ಲಿ ತೊಡಗಿಕೊಂಡು ಬಾರದೆ ಹೋದೆ. ಆದರೆ ನೀನೇಕೆ ಅಷ್ಟು ಕಾತರಗೊಂಡೆ? ಮತ್ತೆ ಭಾವಚಿತ್ರಗಳ ಸುರಿಮಳೆ ಬಂದಿತೇ?

ಗೋಪಾಲ :—ಕೇಳಬಾರದು. ನೀನು ಕೊಟ್ಟ ಜಾಹೀರಾತನ್ನು ನಾನು ನೋಡಿರದಿದ್ದರೂ, ನಿನ್ನಂಥ ಕವಿಯ ಕೈಗೆ ಒಬ್ಬ ಕಲಾಕಾರನ ಗೆಲುವು ಹೇಗೆ ಬಂದೀತೋ, ಮಳ್ಳ ಕಪಿಯೇ!

ಕೃಷ್ಣ :—ಹಾಗಾದರೆ ನಿನ್ನ ಪರವಾಗಿ ಈ ಸಲ ನಾನು ಕೊಟ್ಟ ಜಾಹೀರಾತಿಗೆ ಒಂದೂ ಪ್ರತ್ಯುತ್ತರವಿಲ್ಲವೋ—ಒಂದೂ ಭಾವಚಿತ್ರ............

ಗೋಪಾಲ :—ಭಾವಚಿತ್ರವಂತೆ! ಅದೇನು ಪುಕ್ಕಟೆಯ ಮಾತೇ! ಇದು ನೋಡು, ಇದೊಂದು ಸೊಟ್ಟ ಪತ್ರ ಮಾತ್ರ ಬಂದಿದೆ. ನೀನು ಮೂರು ಸಲ ಮೂರು ಪೇಪರುಗಳಲ್ಲಿ ಹಾಕಿದ ಜಾಹೀರಾತಿಗೆ ಇದೇ ಬಹುಮಾನ!

ಕೃಷ್ಣ :—ಇದೊಂದೇನೇ! (ತೆಗೆದುಕೊಳ್ಳುತ್ತ ಕುರ್ಚಿಯ ಮೇಲೆ ಕುಳ್ಳಿರುವನು)

ಗೋಪಾಲ :—ಸರಿ, ಅದೊಂದೇ!

ಕೃಷ್ಣ :—ಹಾಗಾದರೆ ಇದರಲ್ಲಿ ಖಂಡಿತ ವಿಶೇಷಾರ್ಥವಿದೆ. ನೀನು ಓದಿರುವೆಯೇನೋ?

ಗೋಪಾಲ :—ಪತ್ರದೊಡನೆ ಭಾವಚಿತ್ರವಿರುತ್ತಿದ್ದರೆ, ನಾನದರ ಕಡೆ ಕಣ್ಣಾ ಹಾಕುತ್ತಿರಲಿಲ್ಲ; ಇದೊಂದೇ ಇದ್ದುದರಿಂದ ಏನೋ ಹಾಗೆ ಒಮ್ಮೆ ನೋಡಿದೆ ಅಷ್ಟೇ. (ಸ್ವಲ್ಪ ಅತ್ತಿತ್ತ ಸುತ್ತಾಡುತ್ತಲೇ ಇರುವನು)

ಕೃಷ್ಣ :—(ಪತ್ರವನ್ನೋದುತ್ತ) ಹಾಗಾದರೆ ಈ ಬಗ್ಗೆ ನಿನ್ನ ಅಭಿಪ್ರಾಯ ಏನಾಗಿದೆ?

ಗೋಪಾಲ :—ಅಭಿಪ್ರಾಯವಿಲ್ಲಾ—ಗಭಿಪ್ರಾಯವಿಲ್ಲಾ; ನಾನದರ ಬಗ್ಗೆ ವಿಚಾರ ಮಾಡಿದ್ದರೆ ಹೌದಲ್ಲೋ...........!

ಕೃಷ್ಣ :—ಅಂತೂ ನಿನ್ನ ಕಲಾಶಕ್ತಿಗೆ ಈ ಸಲ ಬಲಿ ಸಿಕ್ಕಲಿಲ್ಲಾ ಅನ್ನು.

ಗೋಪಾಲ :—ಅದಕ್ಕಲ್ಲ ಕೃಷ್ಣ; ನನಗೇಕೊ ಈ ಕೆಲವು ದಿನ ಒಂದು ವಿಚಿತ್ರವಾದ, ಅದ್ಭುತವಾದ ಅನುಭವವು ಒಳಗೊಳಗೇ ಅನಿಸ ಹತ್ತಿದೆ. ಅದರಿಂದ ನಾನು ದಿಙ್ಮೂಢನಾದಂತೆ ಆಗಿಬಿಡುತ್ತೇನೆ, ಒಮ್ಮೊಮ್ಮೆ

ಕೃಷ್ಣ :—ಅದೇನು ಈ ಪತ್ರದಿಂದ ಹಾಗಾಯಿತೇ!

ಗೋಪಾಲ :—ಛೇ, ಇರಲಾರದು, ಕೃಷ್ಣ.

ಕೃಷ್ಣ :—ಹಾಗಾದರೆ, ಮತ್ತೊಂದು ಹೊಸ ಚಿತ್ರಾವನ್ನೇನಾದರೂ ಆರಂಭಿಸಿರಬೇಕು, ಅಪ್ಪನವರು! ಇಲ್ಲದಿದ್ದರೆ ಈ ಅವಸ್ಥೆ..........

ಗೋಪಾಲ :—ಇಲ್ಲಿಲ್ಲ, ಕೃಷ್ಣ, ಚಿತ್ರವಂತೂ ಅಲ್ಲ. ಆದರೆ ಈ ವಾರವೆಲ್ಲ ಯಾವದೋ ಒಂದು ಬಗೆಯ ಧ್ಯಾನವಶನಾಗಿ ಕನಸಿನ ಕಣ್ಮಾಯೆಗೆ ಸಿಕ್ಕಂತಾಗಿಬಿಟ್ಟಿದ್ದೇನೆ.

ಕೃಷ್ಣ :—ಆದರೆ, ಗೋಪಾಲ, ನಿನ್ನಂಥ ವಾಸ್ತವವಾದಿಯು ಹೀಗೆ ಕನಸಿನ ಜಾಲಗಳಿಗೆ ಬಲಿಬೀಳಬಹುದೇನಯ್ಯಾ! ಅದು ನಮ್ಮ, ಕವಿಗಳ ಕೆಲಸಾ!

ಗೋಪಾಲ :—ಏನೋ, ನಾ ಹೇಳಲಾರೆ. ಈ ಒಂದು ವಾರವೆಲ್ಲಾ ನನ್ನಲ್ಲೇನೋ ಹೊಸ ಬದಲಾವಣೆ ಆದಂತೆ ಕಾಣಿಸುತ್ತದೆ. ಈ ಕಳೆದ ನಾಲ್ಕಾರು ದಿನಗಳಿಂದಂತೂ ಯಾವುದೋ ಒಂದು ತಿಳಿಯಲಾಗದ ಹೇಳಲು ಬಾರದ ಭಾವಸಂಚಾರದ ಸೆಳವಿಗೆ ಸಿಕ್ಕಿಕೊಂಡಿದ್ದೇನೆ. ನನಗೂ ಸ್ವಲ್ಪ ಕಾವ್ಯಾವೇಶದ ಹುಚ್ಚು ಹೊಕ್ಕಿತೇನೋ ಅನಿಸುತ್ತದೆ.

ಕೃಷ್ಣ :—ಹಾಗಾದರೆ ಅದೊಂದು ಶುಭಲಕ್ಷಣವೇ ಎನ್ನುವಾ! ಹೀಗಾದದ್ದೇನು ಈ ಪತ್ರ ಬಂದಾಗಿನಿಂದಲೋ?

ಗೋಪಾಲ :—ಛೇ ಛೇ; ಈ ವಾರವೆಲ್ಲಾ ಹೀಗೇ ಕಳೆದಿದ್ದೇನೆ.

ಕೃಷ್ಣ :—ಸರಿ, ನಾನು ಈ ಪತ್ರದಲ್ಲೇನೋ ವಿಶೇಷ ಅರ್ಥವಿದ್ದಿರಬೇಕೆಂದೆನಲ್ಲಾ; ಅದು ಸರಿಯೇ! ಸ್ವಲ್ಪ ತಡೆ, ನಾನಿದನ್ನಷ್ಟು ಪೂರಾ ಓದಿಬಿಡುತ್ತೇನೆ. (ಓದುತ್ತಾನೆ).

ಗೋಪಾಲ :—ಓದಿಕೋ, ಓದಿಕೋ; ಅದೊಂದು ದೊಡ್ಡ ಅರ್ಜಿಯ ಹಾಗೇ ಇದೆ. (ವಿಚಾರವಶನಾಗಿ ಒಂದೆರಡು ಸುತ್ತು ಸುತ್ತುತ್ತಾನೆ).

ಕೃಷ್ಣ :—(ಕೊನೆಕೊನೆಯ ಭಾಗ ಓದುತ್ತ) ಅಯ್ಯೋ............ಚ್ಚು.... ....ಚ್ಚು............ಪಾಪ............ಬಡಪ್ರಾಣಿ! (ಮೋರೆಯೆತ್ತಿ) ಗೋಪಾಲಾ, ಇದೊಂದು ಹೃದಯದ ಮನವಿಯೇ ಆಗಿದೆ ನೋಡು. ಅಹಾ, ಎಷ್ಟು ಕರುಳು ಕರಗಿಸುವಂತಹ ಮಾತು! (ಏಳುತ್ತ) ಈ ಜೀವನದ ಕಾವ್ಯಗಾನವೆಂದಿಗೂ ಸಾಯುವದಲ್ಲ, ನಿಜ. ಆದರೆ ಅದರ ಸಾಯುವ ಸಂಕಟದಂಥ ಆರ್ತ ನಾದ ಎಲ್ಲೆಲ್ಲೂ ಕೇಳದಿಲ್ಲವಲ್ಲಾ! ಗೋಪಾಲಾ, ಈ ಪತ್ರ ನನ್ನನ್ನು ಕರಗಿಸಿಬಿಟ್ಟಿತು ನೋಡು.

ಗೋಪಾಲ :—ನನಗೂ ಒಮ್ಮೆ ಎದೆಗರಗಿದಂತಾಗಿತ್ತು, ಹಾಗಾದರೆ.

ಕೃಷ್ಣ :—ನಿನಗೂ ಆಯಿತೇ! ಹಾಗಾದರೆ ನೀನು ಈಕೆಗೆ ಉತ್ತರ ಬರೆದೆಯಾ ? (ಕುಳಿತು ಮತ್ತೊಮ್ಮೆ ಪತ್ರ ನೋಡುತ್ತಾನೆ)

ಗೋಪಾಲ :—ಇಲ್ಲ; ಕೃಷ್ಣ; ಅಂದರೆ, ಬರೆಯಲಾರದೆ ಹೋದೆ.

ಕೃಷ್ಣ :—ಹಾಗಾದರೆ, ಈ ಹೆಣ್ಣುಮಗಳು ದಾರಿಕಾಯ್ದು ಬೇಸತ್ತಿದ್ದಾಳು.

ಗೋಪಾಲ :—ಆದರೆ, ನನ್ನನ್ನು ನೋಡಬಾರದೇ; ಈ ಕನಸಿನ ತಿರುಗಣಿಗೆ ಬಿದ್ದು ನಾನೂ ಸತ್ತಿದ್ದೇನೆ.

ಕೃಷ್ಣ :—ನಿನಗೇನು ಭೂತ ಬಡಿದುಕೊಂಡಿದೆಯೋನೋ !

ಗೋಪಾಲ :—ಅಂದರೂ ಸರಿ. ಇಷ್ಟೆಲ್ಲಾ ದಿನ ನಾನೊಂದು ಸೌಂದರ್ಯದ ಆವಿಷ್ಕಾರಕ್ಕಾಗಿ ಹಾತೊರೆಯುತ್ತಿದ್ದೆನಲ್ಲಾ; ಆ ಅಖಂಡ ಅಮರ ಸೌಂದರ್ಯದ್ದೇ ಒಂದು ಮೂರ್ತಿ ಬಂದು ನನ್ನನ್ನು ಭ್ರಮಿಸುವಂತೆ ಮಾಡುತ್ತಿದೆ.

ಕೃಷ್ಣ :—ಹಾಗಾದರೆ, ನಾನು ಹೇಳಲೇ?....ಈ ತರುಣಿಯಲ್ಲಿ ನಿನಗೆ ಅಗಾಧವಾದ ಅನುರಾಗವುಂಟಾಗಿದೆ.

ಗೋಪಾಲ :—(ಬದಿಯ ಕುರ್ಚಿಯಲ್ಲಿ ಬಂದು ಕುಳಿತು) ಇರಲಾರದು ಕೃಷ್ಣ. ನನ್ನ ಮಟ್ಟಿಗೆಂದರೆ, ನಾನೀಕೆಯ ವಿಚಾರವನ್ನೇ ತಲೆಯಲ್ಲಿ ಹಾಕಿಕೊಳ್ಳಲಿಲ್ಲ.

ಕೃಷ್ಣ :—ಇವಳಂಥ ತರುಣಿಯರು ನಿನ್ನಂಥ ಕಲಾಕಾರನ ತಲೆಯಲ್ಲೂ, ಎದೆಯಲ್ಲೂ ತಾವೇ ಹೊಕ್ಕುಬಿಡುತ್ತಾರೆ; ನೀವು ತಲೆಯಲ್ಲಿ ಹಾಕಿಕೊಳ್ಳುವಷ್ಟು ಹೊತ್ತು ಅವರು ತಡೆಯುವದಿಲ್ಲ.

ಗೋಪಾಲ :—ಆದರೆ ನಿಜವಾಗಿ ಕೃಷ್ಣ, ನಾನೊಂದು ಅಪೂರ್ವವಾದ ಹೊಸ ಚಿತ್ರದ ಹೊಳವನ್ನು ಕಂಡುಕೊಳ್ಳುತ್ತಿದ್ದೇನೆ. ಆ ಅಮರಸೌಂದರ್ಯದ ಮೂರ್ತಿಯೆಂದೆನಲ್ಲಾ, ಅದನ್ನು ನನ್ನ ಚಿತ್ರದಲ್ಲಿಳಿಸಿ ಜೀವಂತವಾಗಿ ಮಾಡುವ ಹಾತೊರೆಯಲ್ಲಿದ್ದೇನೆ ನಾನೀಗ.

ಕೃಷ್ಣ :—ಹಾಗಾದರೆ ಮತ್ತೆ ಆ ಭಾವಚಿತ್ರಗಳ ಬೆಡಗಿಗೆ ಬಲಿಬಿದ್ದೆಯೇನು!

ಗೋಪಾಲ :—ಛೇ. ಹಾಳಾದವು ಆ ಭಾವಚಿತ್ರ, (ಆವೇಶದಿಂದ) ನಿಜವಾಗಿ ಹೇಳಲೇ ಕೃಷ್ಣ; ಈ ಸಲ ಈ ನನ್ನ ಚಿತ್ರದ ಹೊಳವು, ಒಳಗಿಂದಲೇ ಮೂಡಿಬರುವಂತಿದೆ,—ನನ್ನ ಹೃದಯದೊಳಗಿಂದ.

ಕೃಷ್ಣ :—ಹೀಗೇನೂ? ಅಯ್ಯೋ ಪಾಪ! ಗೋಪಾಲಾ, ನೀನೂ ಕೊನೆಗೆ ಕವಿಗಳ ಅಡ್ಡದಾರಿಯನ್ನೇ ಹಿಡಿದೆಯಲ್ಲಾ!

ಗೋಪಾಲ :—ಛೇ, ನಾನೇಕೆ ಆ ಅಡ್ಡದಾರಿ ತುಳಿಯಲಿ! ನನ್ನ ಕಲ್ಪನೆಯ ಆಳ, ಅಗಾಧತೆ, ಅದ್ಭುತರಮ್ಯತೆ, ಅಸೀಮ ರಮಣೀಯತೆ ಇವೆಲ್ಲಾ ಕವಿಗಳಿಗೇನು ಬಂದಾವು? ಇದೊಂದು ಅನಪೇಕ್ಷಿತ ದೃಷ್ಟಾಂತವೇ! ಆದರೆ ಕೇವಲ ಸತ್ಯವಾದ ಸ್ವರೂಪವಂತವಾದ ದೃಷ್ಟಾಂತ. ಕಣ್ಣೆದುರು ಸ್ಥಿರವಾಗಿ ನಿಂತು ಕಾಣಿಸಿಕೊಳ್ಳುವ ದೃಷ್ಟಾಂತವಿದು. (ಎದ್ದು ಅನುಕರಿಸುತ್ತ) ಇಕಾ ನೋಡು, ಇಲ್ಲೇ ಇದೆ. ಬಂತು, ಬಂತು, ಎದುರಿಗೇ ಬಂತು. ನೋಡು ಬೆಳಕು ಬಂತು. ಮಲ್ಲಿಗೆಯ ರಸವೇ ಹರಿದು ಬರುವಂತಹ ಮೆಲ್ಲನ್ನ ಬೆಳಕು! ಸವಿಸವಿಯಾದ ತಂಪಿನ ಬೆಳಕು; ನುಣುಪಿನ ಬೆಳಕು! ಹಿಮಾಚಲದ ಉತ್ತುಂಗ ಶಿಖರದೊಡಲಿಂದ ಹರಿದುಬರುವ ಗಂಗಾಪ್ರವಾಹದಂತಹ ಆ ಪ್ರಕಾಶ, ಆ ಅಮೃತಮಯವಾದ ಕಣ್ಣಕಿಂಡಿಗಳೊಳಗಿಂದ ಹೇಗೆ ಸೂಸಿ, ಸುರಿದು ಬರುತ್ತಿದೆ ನೋಡು! (ಮುಂದರಿದು ಏನನ್ನೊ ಅನುಸರಿಸುವವನಂತೆ) ಆ ಬೆಳಕಿಗೆ ತಾಯಿಯಾದ ಆ ಸ್ನೇಹಪೂರಿತ ಕಣ್ಣುಗಳು, ಆ ಕಣ್ಣಿಗೆ ತವರಾದ ಆ ದಿವ್ಯಸೌಂದರ್ಯದ ರೂಪು, ಅವೆರಡನ್ನು ಆವರಿಸಿ ನಿಂತ ಆ ಸ್ವಚ್ಛಂದ ಶಾಂತಿಯ ಬಿಳಿ ಛಾಯೆ, ಎಷ್ಟು ರಮ್ಯ! ಎದುರೆದುರೇ ನಿಂತು ಕಣ್ತುಂಬಿ ಕೈತುಂಬಿ ಬಂದ ಈ ಸೌಂದರ್ಯರಾಶಿಯನ್ನು ಬಣ್ಣದಲ್ಲಿಳಿಸಿಕೊಳ್ಳಬೇಕೆಂದರೆ ನನಗೆ ಶಕ್ತಿಯೇ ಸಾಲದಾಗಿದೆ. (ಮೆಲ್ಲನೆ ತನ್ನ ಕುರ್ಚಿಯತ್ತ ಹಿಂಜರಿಯುತ್ತ) ಏನು, ಈ ರೂಪವನ್ನು ದಕ್ಕಿಸಿಕೊಳ್ಳುವ ಶಕ್ತಿ ನನ್ನ ಕಣ್ಣಿಗೂ ಕೈಗೂ ಬರಲೊಲ್ಲದಲ್ಲ. ಹಾಯ್! ನಾನೆಷ್ಟು ನಿರ್ಬಲ! (ಕುರ್ಚಿಯಲ್ಲಿ ಕುಸಿಬಿದ್ದು, ಕೆಲಹೊತ್ತು ನೆಟ್ಟ ನೋಟದಿಂದ ನೋಡುತ್ತಿದ್ದವನು, ಒಮ್ಮೆಲೇ ಚೀರಿ) ಅಯ್ಯೋ, ಆ ಬೆಳಕು ಕಂದಹತ್ತಿತು; ಆ ರೂಪು ಕುಂದಹತ್ತಿತು. ಅದೇನು ಮಟ ಮಾಯವಾಯಿತಲ್ಲ! (ತಡೆತಡೆದು ಸಣ್ಣ ದನಿಯಲ್ಲಿ) ಆದರೆ, ಸ್ನೇಹಮಯವಾದ ನಿರ್ಮಲ ನೋಟದ ಕಂಗಳು, ಅವು ಮಾತ್ರ ಅಂತರಾಳದಿಂದಲೇ ನನ್ನನ್ನು ಮಾಲಿಸುತ್ತವೆ. ಅವುಗಳಿಂದ ಮಹಾಸಾಗರವ

ಹೊಯ್ದಾಟದಂತೆ ಬೆಳಕು ಉಕ್ಕಿಬರುತ್ತಿದೆ. ಕೃಷ್ಣ, ಅದೋ ಆ ಬೆಳಕನ್ನೇ ನಾನು ಬಯಸಿದ್ದು! ಅದು ನನ್ನ ಕಣ್ಣುಗಳನ್ನು ತುಂಬಿಸಿ ಎದೆಯಲ್ಲೆಲ್ಲ ತೊನೆದಾಡಿ ಮೈಯೆಲ್ಲೆಲ್ಲ ಮೆರಗಾಗಿ ಹರಿದು ಚಿಮ್ಮು ವಂತೆನಿಸುತ್ತದೆ. ಕೃಷ್ಣಾ, ಆ ಬೆಳಕಿನ ಹೊಳವನ್ನೇ ನನ್ನ ಕಲೆಯ ಎರಕವನ್ನಾಗಿಸಬೇಕೆಂದು ಈ ಸುದಿನವೆಲ್ಲ ಹಾತೊರೆದದ್ದು! ಇಂತಹ ಬೆಳಕೇ ನನ್ನ ಎಲ್ಲ ಚಿತ್ರಗಳಲ್ಲೂ ಮೈದುಂಬಿ ಹೊರಸೂಸಿ ಲೋಲಕದ ಬಣ್ಣಬೆಳಕಾಗಿ ಚಿಮ್ಮಿ ಬರಬೇಕೆಂಬದೇ ನನ್ನ ಹಂಬಲ. ನೋಡುವವರ ನೋಟದಲ್ಲಿ ನನ್ನ ಚಿತ್ರಗಳ ಕಳೆ ಬೆಳಕಾಗಿ ನಾಟಿ. ಹೊಂಪುಳಿಯ ತನಿರಸದ ಹಾಡಾಗಿ ಹರಿದಿರಬೇಕು! ಅದು ನನ್ನ ಕಲೆಯ ಪರಾ-ಕಲ್ಪನೆ. ಕಲೆಯೆಂದರೆ ಚೆಲುವಿನ ಹೊಳೆ; ನಲವಿನ ಹಾಡು! ಹಾಗಾಗಬೇಕು ನನ್ನ ಚಿತ್ರಗಳು ಕೃಷ್ಣ; ಕುಂಚದ ಒಂದೊಂದು ಎಳೆತ ಎದೆಯಲ್ಲಿ ಮಾತ್ರ ಮೊಳಗಿಸುವಂತಿರಬೇಕು. (ತತ್ತರಿಸುವ ಚೀರುದನಿಯಲ್ಲಿ) ಆದರೆ, ಕೃಷ್ಣ; ಏನು, ಇದೇನು! ನಾ ಕಂಡ ಬೆಳಕಿನಲ್ಲಿ ನಾನೇ ಮುಳುಗಿ ಹೋಗುವಂತೆನಿಸುತ್ತದೆ. ಇದರ ಸೆಳವು ನನ್ನನ್ನೇ ಕೊಚ್ಚಿಕೊಂಡೊಯ್ಯುವಂತಿದೆ. ಇದು ನನ್ನಿಂದ ನುಸುಳಿ ಮೀರಿ ಹೋಗುತ್ತಿದೆ. ಈ ಬೆಳಕು ನನ್ನ ಕುಂಚ ಬಣ್ಣಗಳಲ್ಲಿ ಹಿಡಿಸುವಂತಹದಲ್ಲ; ನನ್ನ ಚಿತ್ರಗಳಲ್ಲಿ ಇದು ನಿಲ್ಲುವಂತಹದಲ್ಲ! ವಿಶ್ವಾಮಿತ್ರನ ಮೇನಕೆಯಂತೆ, ಪುರೂರವನ ಊರ್ವಸಿಯಂತೆ, ಶಂತನು ವಿಗೊಲಿದ ಗಂಗೆಯಂತೆ ನನ್ನ ಕೈಯಲ್ಲಿ ನೆಳಲಿನ ಹೊಳವಿರಿಸಿ ಮಾಯವಾಗುವಂತಹದೀ ಬೆಳಕು. ಇದನ್ನೂ ಹೇಗೆ ತಡೆಯಲಿ! ಸೋತೆ!! ಅಯ್ಯೋ, ಸೋತೆ! ಓ....ಓ....ಓ (ಬಿಕ್ಕಳಿಸುತ್ತ ಅಂಗೈ ಯಿಂದ ಮೋರೆ ಮುಚ್ಚಿ ತಿರುಗಿ ನಿಲ್ಲುವನು.)

ಕೃಷ್ಣ :—ಪಾಪ, ಸೌಂದರ್ಯದ ಕುಡಿತ ತಲೆಗೇರಿದೆ! ಈತನನ್ನು ಕಲಾತ್ಮಕ ವಾಗಿಯೇ ಬೇರೆಡೆಗೆ ಎಳೆಯಬೇಕು....ಗೋಪಾಲಾ, ಏ ಗೋಪಾಲಾ!

ಗೋಪಾಲ :—(ತುಂಬುಗಣ್ಣುಗಳಿಂದ ಆತನನ್ನು ನೂಲಿಸುತ್ತ) ಹಾಂ! ಏನೆಂದೇ?

ಕೃಷ್ಣ :—ಅಲ್ಲಾ ಗೋಪಾಲಾ, ಬಂಗಾಲೀ ಚಿತ್ರಕಲೆಯ ಬಗ್ಗೆ ನಿನ್ನ ಅಭಿಪ್ರಾಯವೆಲ್ಲಾದರೂ ಬದಲಾಗಿದೆಯೇ?

ಗೋಪಾಲ :—(ಕುರ್ಚಿಯಲ್ಲಿ ಕೂಡುತ್ತ) ಕೇಳಬೇಡ; ಬಂಗಾಲೀ ಕಲೆಯಲ್ಲಿ ವಾಸ್ತವತೆಯು ಗಂಧವೇ ಇಲ್ಲ, ಅದೆಂತಹ ಕಲೆ?

ಕೃಷ್ಣ :—ಹಾಗಾದರೆ, ನಮ್ಮ ವೆಂಕಟಪ್ಪನವರ ಕಲೆ ಹೇಗೆ?

ಗೋಪಾಲ :— ಅವರ ಕೆಲವು ಕೃತಿಗಳು ಕಲೆಯ ಕಟ್ಟೆಯ ಹತ್ತಿರ ಹತ್ತಿರ ಬಂದಾವು. ಅವರ ನೀಲಗಿರಿಯ ದೃಶ್ಯಗಳು ಮಾತ್ರ ಅಪ್ರತಿಮ ವಾಗಿವೆ. ಆದರೂ ಅವರ ಕೃತಿಗಳಲ್ಲಿ ಏನೋ ಒಂದು ಕೊರತೆ ಇದೆ. ಅವುಗಳಲ್ಲಿ ಸೌಂದರ್ಯ ಮೂಕವಾದಂತೆ ಇದೆ. ಅದು ಹರಿಯುವದಿಲ್ಲ, ಹಾಡುವದಿಲ್ಲ.

ಕೃಷ್ಣ :—ಅದೇನೊ ಹೇಳುತ್ತಾರಲ್ಲಾ "ಕಲೆ ಹೆಪ್ಪುಗಟ್ಟಿದ ಸಂಗೀತಾ" ಎಂದು. ವೆಂಕಟಪ್ಪನವರ ಕೃತಿಗಳು ಈ ಒರೆಗೆ ಪೂರಾ ಒಪ್ಪುತ್ತವೆಂದು ಬಲು ಕಲಾವಿದರು ಅನ್ನುತ್ತಾರಲ್ಲ.

ಗೋಪಾಲ :—ಅಲ್ಲಿಯೇ ನಾನು ಒಪ್ಪುವದಿಲ್ಲ, ನೋಡು. ಕಲೆಯು ಒಂದು ಸ್ಥಾಪಿತ ಸೃಷ್ಟಿಯಾಗಬಾರದೆಂಬುದೇ ನನ್ನ ಹೊಸ ಕಲಾಮಾರ್ಗದ ಸಿದ್ಧಾಂತ. ಕಲೆಯಲ್ಲಿ ಚೆಲುವು ತುಳುಕಬೇಕು, ಹೊಯ್ದಾಡಬೇಕು, ಹೊನಲಾಗಿ ಹರಿಯಬೇಕು. ಕಲಾಕಾರ ತನ್ನ ಕೃತಿಗಳಲ್ಲಿ ಪ್ರಾಣ ಪ್ರತಿಷ್ಠಾಪನೆ ಮಾಡಿ, ಅವುಗಳನ್ನು ಚೈತನ್ಯಮಯವಾಗಿಸಿ, ನೋಡುವವರ ಚೈತನ್ಯವನ್ನೂ ಚಲಿಸುವಂತೆ ಮಾಡುತ್ತಾನೆ. ಅದಕ್ಕಾಗಿಯೇ ನಾನೀಗ ಹಂಬಲಿಸುತ್ತಿರುವುದು, ಆದರೆ ಅಂಥ ಕಲೆ ಏಕೋ ನನ್ನ ಕೈತಪ್ಪಿಸುತ್ತದೆ. ಕಣ್ಮುಂದೆ ಕಟ್ಟಿದಂತಿದ್ದ ಸೌಂದರ್ಯವನ್ನು ಕುಂಚಕ್ಕಿಳಿಸಲಾರದೆ ಹೆಣಗಿ ಹೆಣವಾಗುತ್ತಿದ್ದೇನೆ ಕೃಷ್ಣಾ. ಆ ಸೌಂದರ್ಯದ ಬಿಂಬ ಕೈಗೆ ಬಾರದು, ಕಣ್ಣಿಂದ ಸಾಗದು ಎಂಬಂತಾಗಿದೆ.

ಕೃಷ್ಣ :—ಹೀಗಾಗಿ ಎಷ್ಟು ದಿನವಾಯಿತು ಗೋಪಾಲ?

ಗೋಪಾಲ :—ಹೋದ ರವಿವಾರದಿಂದ, ಹಗಲು ಇರುಳು ಆ ಬೆಳಕಿನ ಬಿಂಬ ಕಣ್ಣನ್ನೇ ಕೀಳುವಂತಿದೆ.

ಕೃಷ್ಣ :—ಅದೆಂಥಾ ಮೂರ್ತಿ? ಬಣ್ಣಿಸಿ ಹೇಳು ನೋಡುವಾ!

ಗೋಪಾಲ :—ಮೂರ್ತಿಯಲ್ಲವಯ್ಯಾ, ಬಿಂಬಾ! ಆಕಾರಾತೀತವಾದ ಬಿಂಬವದು. ಹಾಂ! ಹಾಂ! (ಧ್ಯಾನಿಸುತ್ತ)............ಹೌದು ಹೌದು.

ಒಮ್ಮೊಮ್ಮೆ ಒಂದು ಅಸ್ಪಷ್ಟ ಹೆಣ್ಣಿನ ಚೆಲುವೊಂದು ಆ ಬಿಂಬದಲ್ಲಿ ಕಂಡಂತಾಗುತ್ತದೆ.

ಕೃಷ್ಣ :—ಹೆಂಣಿನ ಮೂರ್ತಿಯೇ!

ಗೋಪಾಲ :—ಹೌದೆಂತ ಕಾಣುತ್ತದೆ............ಅಥವಾ, ಏನು ಗಂಡೋ ....ಇಲ್ಲ, ತಿಳಿಯುವದಿಲ್ಲ ಬಿಡು; ಹೋಗಲಿ, ಆಕಾರದಿಂದೇ ನಂತೆ? ನನಗೆ ಬೇಕಾದುದು ಆ ಕೊನೆಯಿಲ್ಲದ ಚೆಲುವಿನ ಹೊನಲು; ಅದಕ್ಕೆ ಉಗಮಸ್ಥಾನವಾದ ಆ ದಿವ್ಯ ಕಣ್ಣುಗಳು.

ಕೃಷ್ಣ :—ನಮಗೆ ಕವಿಗಳಿಗೂ ಆಕಾರ ಅಷ್ಟು ಮಹತ್ತ್ವದ್ದಲ್ಲ. ಎಲ್ಲ ಆದರ್ಶಾತ್ಮಕವಾದ ಕಲೆಯೂ ಆ ಆಕಾರಾತೀತ ಸೌಂದರ್ಯವನ್ನೇ ಕುರಿತಿರುವದು.

ಗೋಪಾಲ :—ಆದರೆ ನಿಜವಾದ ಕಲೆ ಸತ್ಯವಾಗಿರಬೇಕು, ವಾಸ್ತವವಾಗಿರಬೇಕು; ಜೀವಂತವಾಗಿರಬೇಕು. ನನ್ನ ಕಲೆಯ ಉದ್ದೇಶ ಅದು.

ಕೃಷ್ಣ :—ಸರಿ, ಗೋಪಾಲಾ; ಆದರೆ ನೀನು ಆ ಹೆಣ್ಣುಮಗಳಿಂದ ಆ ಪತ್ರ ಬಂತೆಂದೆಯಲ್ಲಾ! ನಿನಗೆ ಈ ಬಿಂಬದರ್ಶನವಾಗಹತ್ತಿದ್ದು ಆಮೇಲೋ ಅದಕ್ಕೂ ಮೊದಲೋ?

ಗೋಪಾಲ :—ರವಿವಾರ....ಸರಿ, ಅವೊತ್ತೂ ರವಿವಾರ; ಹೌದು ಆ ರವಿವಾರದಿಂದಲೇ ಹೀಗಾದ್ದು.

ಕೃಷ್ಣ :—ಆ ಪತ್ರವನ್ನೋದಿದ ಮೇಲೆ ಅದರಲ್ಲಿ ಇಂಥ ಮಾರ್ಮಿಕತೆ ಇದ್ದಂತೆ ನನಗೂ ಅನಿಸಿತ್ತು.

ಗೋಪಾಲ :—ಅದರಲ್ಲಿ ಅಂಥದೇನಿದೆ ಬಿಡು!........ಹಾ...ಹಾ....! ಹೌದು ಕೃಷ್ಣ; (ನೆನೆಸಿ) ನೀನಂದಂತೆ, ಆ ಪತ್ರವನ್ನೋದಿದೊಡನೆ ಏನೋ ಎದೆಯಲ್ಲಿ ತಟ್ಟಿದಂತಾಗಿತ್ತು ನಿಜ. ಆದರೆ ಅದೆಲ್ಲದರ ಮರ್ಮ ನಾನರಿಯಲಿಲ್ಲ. ಅಂದಿನಿಂದಲೇ ಈ ಬೆಳಕಿನ ಬಿಂಬದ ಕಣ್ಣಾಟ ಕಟ್ಟಿದಂತಾದ್ದರಿಂದ, ಪಾಪ, ನಾನು ಅವಳ ಪತ್ರದ ಅರ್ಥದ ಗೋಜಿಗೇ ಹೋಗಲಿಲ್ಲ. ಆದರೆ, ಕೃಷ್ಣ; ನೀನು ಕೊಟ್ಟ ಜಾಹೀರಾತಾದರೂ ಏನಿತ್ತು?

ನೀನು ಸರ್ವಸ್ವತಂತ್ರತೆಯನ್ನು ಬೇಡಿದ್ದರಿಂದ ನಾನು ಅದರ ಗೋಜಿಗೂ ಹೋಗಿರಲಿಲ್ಲ. ನೀನಾ ಜಾಹೀರಾತಿನಲ್ಲಿ ಬರೆದದ್ದಾದರೂ ಏನು?

ಕೃಷ್ಣ :—ಇಕಾ, ಇಲ್ಲಿಯೇ ಇದೆ; (ಕಿಸೆಯಿಂದ ತೆಗದು) ನೋಡು!

ಗೋಪಾಲ:—ನೀನೇ ಓದು ಕೃಷ್ಣ.

ಕೃಷ್ಣ :—(ಓದುವನು) ಒಬ್ಬ ಕೀರ್ತಿವಂತನಾದ ತರುಣನಾದ ಸುರೂಪಿಯಾದ ಕಲಾಕಾರನಿಗೆ ತಕ್ಕವಳಾದ ಸುಂದರ ಸುಸ್ವಭಾವದ ವಧು ಬೇಕು. ಕುಲೀನಳಾದ ಕುಮಾರಿ ಇಲ್ಲವೆ ವಿಧವೆಯಾದರೂ ಸರಿ. ಬಡವಿಯಾಗಿದ್ದರೆ ಇನ್ನೂ ಮೇಲು. ತೀರ ಹೊಸ ಭಾವಚಿತ್ರದೊಂದಿಗೆ ಕೆಳಗಿನ ವಿಳಾಸಕ್ಕೆ ಬರೆಯುವುದು...." ಇತ್ಯಾದಿ.

ಗೋಪಾಲ :—ಇದೇನೋ ಕೃಷ್ಣ; ನನ್ನ ಮನಸ್ಸಿನಲ್ಲಿದ್ದ ನಿರ್ಧಾರವನ್ನೆಲ್ಲಾ ನಿಜವಾಗಿ ಹಾಕಿಬಿಟ್ಟೇದಿ.

ಕೃಷ್ಣ :—ಅದು ಕವಿಗಳ ರೀತಿ.

ಗೋಪಾಲ :—ಆದರೆ ನಾನು ಇದೀಗ ಮದುವೆಯ ಎಣಿಕೆಯನ್ನೇ ಹಾಕಿಲ್ಲವಲ್ಲ! ಎಂದ ಮೇಲೆ ಕವಿಯ ಸತ್ಯ ಸತ್ತಂತಾಯಿತಷ್ಟೇ!

ಕೃಷ್ಣ :—ಆ ಮಾತೆಲ್ಲ ಕವಿಯ ಪಾಲಿಗಿರಲಿ. ನಿನಗಾದಂತೆ ಕವಿಗೂ ಒಂದು ಬಗೆಯ ದೃಷ್ಟಾಂತವಾಗಿದ್ದರೂ ಇರಬಹುದು.

ಗೋಪಾಲ :—ಓಹೋ, ನೀನೂ ದೃಷ್ಟಾಂತಿಯಾದೆಯೇನು?

ಕೃಷ್ಣ :—ಕವಿಗಳಿಗೆ ದೃಷ್ಟಾಂತಗಳೇ ಕಿಚ್ಚಿನ ಕುಲುಮೆ; ಕಲಾಕಾರರಿಗೆ ಅವು ಬರೀ ಹೊಗೆಯಾಟದ ಚಿಲುಮೆ. ಕಲೆಯ ಸೀಮೆಯಾಚೆಗೆ ಕಾವ್ಯದ ನಾಡು ಆರಂಭವಾಗುತ್ತದೆ.

ಗೋಪಾಲ :—ಆದರೆ ಕವಿಗಳೇ, ಕಲೆಯು ನಿಸ್ಸೀಮ, ಸೀಮಾತೀತವೆಂಬುದನ್ನೇ ತಾವು ಮರೆತಂತೆ ಕಾಣುತ್ತದೆ. ಜೀವನವೆಷ್ಟು ನಿತ್ಯವೋ ನಿಸ್ಸೀಮವೋ ಅಷ್ಟೇ ನಿತ್ಯ ನಿಸ್ಸೀಮವಾದದ್ದು ಕಲೆ.

ಕೃಷ್ಣ :—ಜೀವನದ ಆ ತತ್ವಗಳು ಅಂತಿರಲಿ. ಇಂತಹ ನಿಸ್ಸೀಮ ವಾಸ್ತವವಾದಿಯಾದ ನೀನು ನಿನ್ನ ಬಾಳಿನ ಮೂಲಭೂತವಾದ ಒಂದೆರಡು

ವಾಸ್ತವಿಕ ತತ್ವಗಳನ್ನು ತಿಳಿಯದೆ ಹೋದೆಯಲ್ಲ! ನಿಜವಾಗಿ ನೋಡಿದರೆ ನೀನೊಬ್ಬ ಒಣ ತತ್ವವಾದಿಯೇ!

ಗೋಪಾಲ :—ಹಾಗೆನ್ನಬೇಡ ಕೃಷ್ಣ; ಜೀವನದ ವಾಸ್ತವಿಕತೆಯಿಂದ ನಾನೆಂದೂ ಹಿಂದೆಗೆಯುವವನಲ್ಲ.

ಕೃಷ್ಣ :—ಹಾಗಾದರೆ ನನ್ನ ಮಾತು ಕೇಳು; ಈ ಹೆಂಣುಮಗಳನ್ನು ಬೆಟ್ಟಿಗೆ ಕರಿಸೋಣ. ನೀನು ಆ ದೃಷ್ಟಾಂತದ ಆದರ್ಶಸೌಂದರ್ಯದ ಹಂಬಲಕ್ಕೆ ಬಿದ್ದು, ಜೀವನದಲ್ಲಿಯ ನೈಜ ಸೌಂದರ್ಯವನ್ನೇ ಮರೆತಿರುವೆ.

ಗೋಪಾಲ :—ಛೇ. ಕೃಷ್ಣ; ನಾನಿವಳನ್ನು ಮದುವೆಯಾಗುವದು ಅಸಾಧ್ಯವೇ!

ಕೃಷ್ಣ :—ನೀನಿಲ್ಲದಿದ್ದರೆ, ನಾನಾದರೂ ಆಗಲೇಬೇಕಾದೀತು. ಇದೇನು ಪ್ರಕೃತಿಯ ನೋಜೆಂದೆಯಾ! ಇದೋ ಅವಳ ಮನವಿಯನ್ನಾದರೂ ನೋಡು.....................ಒಬ್ಬ ತರುಣ ವಿಧವೆ, ಜೀವನಸಾಗರದಲ್ಲಿ ಏಕಾಕಿ, ನಿಸ್ಸಹಾಯಳು; ಅಂತರಂಗದ ಆಕಾಂಕ್ಷೆಗಳನ್ನು ಹುದುಗಿಸಿ ಹೊಟ್ಟೆಯ ಪಾಡಿಗಾಗಿ ಹೆಣಗಾಡಬೇಕು! ಸಮಾಜಸಮನ್ವಯದ ತತ್ವಗಳನ್ನು ಎತ್ತಿಹಿಡಿಯುವ ನೀನು ಇಂತಹಳೊಬ್ಬಳನ್ನೇ ಮದುವೆಯಾಗಬಯಸುತ್ತಿದ್ದೆಯಲ್ಲವೆ? ಇದು ನೋಡು, ಇವಳು ಸಂಗೀತದಲ್ಲಿ ಕುಶಲಳಂತೆ; ಕಲೆಯನ್ನೂ ಸ್ವಲ್ಪ ಬಲ್ಲಳಂತೆ!

ಗೋಪಾಲ :—ಅದೇನೋ ಸರಿ,............ (ತಲೆತುರಿಸಿಕೊಳ್ಳುತ್ತ) ಅವಳ ಹೆಸರೇನೋ ಕೃಷ್ಣ; ಮರೆತೇ ಹೋಗಿದೆಯಲ್ಲ!

ಕೃಷ್ಣ :—ಹಾಂ! ಇಲ್ಲಿದೆ ನೋಡು; "ವೇಣೂ" ಅಂತ ಸಹಿ ಮಾಡಿದ್ದಾಳೆ. (ಮತ್ತೆ ಹುಡುಕಿ ನೋಡಿ) ಇವಳೇನೋ ಒಂದು ಹುಡುಗೆಯರ ಮಿಡಲ್ ಸ್ಕೂಲಿನ ಮಿಸ್ಟ್ರೆಸ್ ಇದ್ದ ಹಾಗೆ ಕಾಣುತ್ತದೆ. ಇದು ನೋಡು, 'ನೀವು ಕೇಳಿದಂತೆ ಫೋಟೋ ಕಳಿಸಲು ಸಾಧ್ಯವಾಗಲಿಲ್ಲ, ಬೇಕಾದರೆ ಬಂದು ಬೆಟ್ಟಿಯಾಗುತ್ತೇನೆ' ಎಂಬದಾಗಿ ಬರೆದಿದ್ದಾಳೆ. ಪಾಪ, ಬಹಳ ಕಠಿಣ ಸ್ಥಿತಿಯಲ್ಲಿರಬೇಕು. ನೀನು ಆದರ್ಶವನ್ನಿಟ್ಟುಕೊಂಡಿರಲಿಲ್ಲವೇ

ಆರಿಸಿದರೆ ಇಂಥವಳೊಬ್ಬಳನ್ನೇ ಜೀವನದ ಜೊತೆಗಾರ್ತಿಯಾಗಿ ಆರಿಸ ಬೇಕೆಂದು !

ಗೋಪಾಲ :—ಅದೆಲ್ಲಾ ನಿಜ, ಆದರಿವಳು ನನ್ನ ಕಲಾಜೀವನಕ್ಕೆ ತಕ್ಕ ಜೊತೆಗಾರ್ತಿಯಾದಾಳೆಂದು ಯಾತರ ಮೇಲಿಂದ ?

ಕೃಷ್ಣ :—ಅದನ್ನು ನೋಡೋಣವಂತೆ. ಸಧ್ಯ ಇವಳನ್ನು ಬೆಟ್ಟಿಗೆ ಕರೆ ಸೋಣ. ಇದೇ ಊರವಳು. ಮುಂದಿನ ರವಿವಾರ, ನಾನೂ ವಾಡಿಕೆ ಯಂತೆ ಬರುವ ಹೊತ್ತನ್ನೇ ಗೊತ್ತುಮಾಡಿ ಇವಳಿಗೆ ಇಂದೇ ಬರೆದು ಹಾಕುತ್ತೇನೆ. ಸಧ್ಯ, ನಾನು ಹೊರಡುವ ಹೊತ್ತಾಯಿತು. ಅಲ್ಲಿಯ ವರೆಗೆ ನಿನ್ನ ದೃಷ್ಟಾಂತದ ಅಂತ ಹೇಗೇನು ಆದೀತು ನೋಡುವಾ ! (ಏಳುತ್ತ) ನಾನು ಹೊರಡಲೆ ?

ಗೋಪಾಲ :—ಸರಿ, ಮುಂದಿನ...........ರ....ವಿ....ವಾ....ರ....!

(ತೆರೆಯಿಳಿಯುವದು)

೩ನೇ ನೋಟ

[ಎಂಟು ದಿನಗಳ ನಂತರ; ರವಿವಾರ ಮಧ್ಯಾಹ್ನದ ಹೊತ್ತು. ಗೋಪಾಲನ ಮಲಗುವ ಕೋಣೆ. ಪಲ್ಲಂಗದ ಹಾಸಿಗೆಯ ಮೇಲೆ ಆತ ಚಿಂತಾಮಗ್ನನಾಗಿ ಕುಳಿತಿದ್ದಾನೆ. ತೆರೆಯೆದ್ದ ಕೆಲಹೊತ್ತಿನ ನಂತರ, ಉದ್ವಿಗ್ನತೆಯ ಆವೇಶದಿಂದ ಒಮ್ಮೆಲೇ ಸಿಡಿದೆದ್ದು ಕೂಗುತ್ತಾನೆ]

ಗೋಪಾಲ :—ಅಯ್ಯೋ ದೇವರೇ ಕಾಯಪ್ಪಾ ಕಾಯೋ; ನಾನಿದನ್ನು ತಾಳಲಾರೆ....ತಡೆಯಲಾರೆ! ಏನೀ ಪರಿತಾಪ! ಎಷ್ಟು ಉನ್ಮಾದವಿದು!! ಯಾತಕ್ಕಿಷ್ಟು ಸಂಕಟ!!! ಹಾಯ್ ಹೃದಯ ಬಿರಿದಾದರೂ ಹೋಗಬಾರದೇ! ಕಣ್ಣೋ ಕುಕ್ಕಿ ಕುಸಿಬಿದ್ದವು. ಕುಡಿತದ ಉನ್ಮಾದದ ತಿರುಗಣಿಗೆ ಸಿಕ್ಕಂತೆ ಜಗತ್ತೆಲ್ಲ ತಿರ್‍ರನೆ ತಿರುಗುವಂತಿದೆಯಲ್ಲಾ! ಅಯ್ಯೋ ನನ್ನ ಕಣ್ಣೊಡೆದು ಹೋಗಲಿ; ತಲೆ ಸೀಳಿ ಹೋಗಲಿ; ಬುದ್ಧಿ ಸೀದು ಹೋಗಲಿ. ಈ ಸೌಂದರ್ಯದ ಭೀಕರತೆ ನನ್ನನ್ನು ಹಣಿಯುತ್ತಿದೆ; ಈ ಬೆಳಕಿನ ಪ್ರಖರತೆ ಕತ್ತಲೆಯ ಕಾರ್ಮೋಡಗಳನ್ನೆ ಕವಿಸುತ್ತಿದೆ ನನ್ನ ಕಣ್ಣಲ್ಲಿ. ಅಯ್ಯೋ ಇದೇನು ಸೌಂದರ್ಯದ ಸಾಕ್ಷಾತ್ಕಾರವೋ, ಭ್ರಮೆಯೋ?

(ತಲೆ ಭಾರವಾಗಿ ಕುಸಿಬೀಳುತ್ತಾನೆ; ಅಷ್ಟರಲ್ಲಿ ಕೃಷ್ಣನು ಬರುತ್ತಾನೆ.)

ಕೃಷ್ಣ :—ಅಂತೂ ಗೊತ್ತುಮಾಡಿದ ಹೊತ್ತಿಗೆ ಮೊದಲೇ ಬಂದಂತಾಯಿತು. ಇನ್ನು ಕಾಲುಗಂಟೆಗೆ ಆ ಹೆಣ್ಣುಮಗಳು ಬರಬೇಕು. ಗೋಪಾಲಾ, ಏ ಗೋಪಾಲಾ; ಎಲ್ಲಿದ್ದೀ; ಏನಿನ್ನೂ ಮಲಗಿದ್ದೀಯೇನು? (ಹತ್ತಿರ ಹೋಗಿ ಅಲ್ಲಾಡಿಸುತ್ತ) ಏಳಯ್ಯಾ, ಏಳು!

ಗೋಪಾಲ :—ಉಸ್ಸ್; ಏನು ಕೃಷ್ಣನೇ, ಬಂದೆಯಾ! ಸರಿ; ಉಸ್ಸ್.

ಕೃಷ್ಣ :—ಇದೇನು ಗೋಪಾಲಾ, ಈ ಅವತಾರ! ನಿನ್ನ ಪ್ರೇಯಸಿಯ ದರ್ಶನಕ್ಕೆ ಸಿಂಗಾರವಾಗಿ ಸಜ್ಜಿತನಾಗಿರಬಹುದೆಂದು ತಿಳಿದಿದ್ದೆ! ಆದರೇನು, ನಿನ್ನ ಮೈಯಲ್ಲಿ ಚೆನ್ನಾಗಿಲ್ಲವೇ? (ಎಬ್ಬಿಸುತ್ತ) ಹೌದಲ್ಲೊ, ಗೋಪಾಲಾ, ನಿನಗೆ ಜ್ವರ ಬಂದಿದೆ. ಮೈ ಬೆಂಕಿಯಾಗಿದೆಯಲ್ಲ!

ಗೋಪಾಲ :—ನನ್ನ ಜೀವನವೇ ಜ್ವರದ ಕುಂಡವಾಗಿದೆ ಕೃಷ್ಣ! ನಾ ತಾಳಲಾರೆ; ಅದೋ ಬಂತು; ನಾನು ಹೇಳುತ್ತಿದ್ದೆನಲ್ಲ, ಆ ಸೌಂದರ್ಯ ಬಂತು. ಅದರ ವಿಶ್ವರೂಪದ ಅಗಾಧತೆಯೆದುರು ನಾನು ಕಮರಿ ಹೋಗುತ್ತಿದ್ದೇನೆ. ನೋಡೋ ಕೃಷ್ಣಾ; ಬಂತು; ಅದೇ ಬಂತು; ಕಾಯಿ ಕೃಷ್ಣಾ; ನನ್ನನ್ನು ಹಿಡಿದುಕೊ! ಸೌಂದರ್ಯದಲ್ಲೂ ಇಂಥ ಭೀಕರತೆಯೇ!............ಬಂತು,............ಬಂತು,............ಬಂತು! (ಕೃಷ್ಣ ಗೋಪಾಲನನ್ನು ಮೆಲ್ಲಗೆ ಮಲಗಿಸಿ ಹೊದಿಸಿ ಮಲಗಿಸುತ್ತಾನೆ. ಒಳಗೆ ಹೋಗಿ, ಟೀಪಾಯ್, ನೀರು, ಗ್ಲಾಸು, ಕಪ್ಪು, ಬಟ್ಟಲ ತಂದಿಟ್ಟುಕೊಂಡು, ಹಣೆಗೆ ಕೋಲನ್‌ವಾಟರದ ಪಟ್ಟಿ ಹಾಕಿ, ಬದಿಯಲ್ಲಿ ಕುರ್ಚಿಯೆಳೆದು ಕುಳ್ಳಿರುವನು)

ಕೃಷ್ಣ :—ಗೋಪಾಲ; ಏ ಗೋಪಾಲ!

ಗೋಪಾಲ :—ಹಾ! ಏನು?...........ಏನು!

ಕೃಷ್ಣ :—ನಿನಗೇನಾಗಿದೆ ಗೋಪಾಲ; ಏನು ಸಂಕಟವೇ!

ಗೋಪಾಲ :—ನೀನು ಬಂದೀಯಾ? ಕೃಷ್ಣ,...........ಬಾ ಸ್ವಲ್ಪ ಹತ್ತಿರ ಬಾ. ನನ್ನ ಹತ್ತಿರ ಕೂತುಕೋ!

ಕೃಷ್ಣ :—(ಹತ್ತಿರ ಸರಿದು) ನಿನಗೇನಾಗುತ್ತಿದೆ? ಹೇಳು ಗೋಪಾಲ!

ಗೋಪಾಲ :—ಉಸ್ಸ್; ಎಲ್ಲಿ, ಕೃಷ್ಣ ನನಗೆ ಸ್ವಲ್ಪ ಕೈ ಕೊಡು........... (ಕೃಷ್ಣ ಆಸರ ಕೊಡಲು ಆತ ಅರ್ಧ ಎದ್ದು ಪಲ್ಲಂಗದ ಕಟ್ಟೆಗೆ ಆತು ಒರಗಿ ಕುಳ್ಳಿರುತ್ತಾನೆ).............ಉಸ್ಸ್..............ಕೃಷ್ಣ. ಸ್ವಲ್ಪ ನೀರು! ಬಾಯಾರಿ ಗಂಟಲೊಣಗಿ ಹೋಗಿದೆ ನೋಡು! (ಕೃಷ್ಣ ಗ್ಲಾಸಿನಲ್ಲಿ ನೀರು ಕುಡಿಸುತ್ತಾನೆ) ಕೃಷ್ಣ, ಇಲ್ಲೇ ಕುಳಿತುಕೋ, ಇಕಾ, ಇಲ್ಲಿ, ಮೇಲೆ; ನನ್ನ ಹತ್ತಿರವೇ ಇರು ಕೃಷ್ಣ, ಬಿಟ್ಟು ಹೋಗಬೇಡ. ನಾನು ತತ್ತರಿಸಿ ಹೋಗಿದ್ದೇನೆ. ಇದೋ ಅದು ಬರುವ ಹೊತ್ತಾಯಿತು. ದಿನಾಲು ಸರಿಯಾಗಿ ಈ ಹೊತ್ತಿಗೆ ಬರುತ್ತದೆ ಆ ಹಳವಂಡ! ಹೋದ ರವಿವಾರದಿಂದ ಈ ಹಳವಂಡ ನನ್ನನ್ನು ಹಣ್ಣುಮಾಡುತ್ತಿದೆ. ಆ ಯಾವುದೋ ಅವ್ಯಕ್ತ ಶಕ್ತಿ ನನ್ನನ್ನು ತಿಕ್ಕಿ ಮುಕ್ಕುವಂತೆನಿಸುತ್ತದೆ. ಮಿತಿಯಿಲ್ಲದ ಬೆಳಕಿನ ಪ್ರವಾಹಗಳು ದೆವ್ವನ ಗಾಳಿಯಂತೆ ಎರಿ

ಬರುತ್ತವೆ. ನಾನು ಹೇಳಿದ್ದೆನಲ್ಲ....ಅದೇ ಸೌಂದರ್ಯದ ಮಾಟ ಇದೆಲ್ಲ. ಅದೇ ಅದೇ...........ನೋಡು...........ಅವಳೇ........... ಅವಳೇ! ಅದೋ ಅಲ್ಲಿ—ಆ ಹೆಂಣರೂಪು! (ಚೀರುತ್ತಾನೆ)

ಕೃಷ್ಣ :—(ಅತ್ತಿತ್ತ ನೋಡಿ) ಯಾ ರೂಪು ಗೋಪಾಲಾ! ಎಲ್ಲಿ!

ಗೋಪಾಲ :—ಅದೇ ಕೃಷ್ಣ! ಅದೇ; ಆ ಬೆಳಕು...........ಆ ಬೆಳಕು!

ಕೃಷ್ಣ :—ಆ ಬೆಳಕೇ; ಹೋಗಲಿ ಬಿಡು; ಸ್ವಲ್ಪ ಕಣ್ಣು ತೆರೆ ಎಂದರೆ ಅದು ಯಾವುದೂ ಕಾಣುವದಿಲ್ಲ.

ಗೋಪಾಲ :—ಇಲ್ಲಿಲ್ಲ...........ಬಂದಳೋ ಕೃಷ್ಣ, ಬಂದಳು!

ಕೃಷ್ಣ :—ಇಲ್ಲ ಗೋಪಾಲಾ, ಅವಳು ಬರುವದಕ್ಕೆ ಇನ್ನೂ ವೇಳೆಯಿದೆ.

ಗೋಪಾಲ :—ಇಲ್ಲ ಕೃಷ್ಣ ಬಂದಿದ್ದಾಳೆ...........ಇದೋ ನನ್ನನ್ನು ಅವಚಿಕೊಂಡಳು. ಹೋದೆ—ನಾ ಹೋದೆ...........ಎಲ್ಲಾ ತಣ್ಣಗಾದೆ. ನಾ ಕರಗಿಬಿಟ್ಟೆ...........ಕರಗಿದೆ...........ಕರಗಿದೆ. ಉಸ್ಸ್........... (ನಿಶ್ಚೇಷ್ಟನಾಗಿ ಹಾಸಿಗೆಯ ಮೇಲೆ ಬೀಳುತ್ತಾನೆ. ಕೃಷ್ಣ ಆತನನ್ನು ಸರಿಯಾಗಿ ಒರಗಿಸಿ, ತಣ್ಣೀರಿಂದ ಮೋರೆ ಒರಿಸಿ ಗಾಳಿ ಹಾಕುತ್ತಾನೆ)

ಕೃಷ್ಣ :—ಪಾಪ! ಕೊನೆಗೆ ಮೂರ್ಛೆಯೂ ಬಂತಲ್ಲ. ಹಾಂ! ಇದೇನು ಕಣ್ಣು ತಿರುಗುತ್ತಿವೆ! (ಉಸಿರು ನಾಡಿ ನೋಡಿ) ಇದೇನು, ಗತಿಯೂ ಮುಂದವಾಗುವಂತೆ ಕಾಣುತ್ತದೆ. ಹೋಗಿ ಡಾಕ್ಟರರನ್ನಾದರೂ ಕರಕೊಂಡು ಬರಲೇ! ಆದರೆ...........(ಅತ್ತಿತ್ತ ಸುತ್ತುತ್ತ) ಆದರೆ.... ....ಇಲ್ಲಿ...........ಈತನ ಹತ್ತಿರ...........ಆಗಲಿ, ಐದು ನಿಮಿಷದಲ್ಲಿ...........(ಎಂದು ಬಾಗಿಲ ಕಡೆ ಹೋಗುವಷ್ಟರಲ್ಲಿ ಎದುರಿಗೆ ವೇಣು ಬರುತ್ತಾಳೆ. ಅವಳನ್ನು ಕಂಡು ಕೃಷ್ಣ ಅವಾಕ್ಕಾಗುತ್ತಾನೆ. ಅವನ ರೀತಿಯಿಂದ ಅವಳೂ ಅನುಮಾನದಲ್ಲಿ ಬೀಳುತ್ತಾಳೆ.)

ವೇಣು :—(ಅನುಮಾನಿಸುತ್ತ) ಅಲ್ಲ, ಶ್ರೀ ಗೋಪಾಲರಾಯರ ಮನೆ ಇದೇ ಏನು? (ಕೃಷ್ಣ ಹೂಗೊಡಲು) ನಾನೇ...........ನನ್ನ ಹೆಸರು ವೇಣು ಅಂತ. (ಒಂದು ಪತ್ರ ಹೊರದೆಗೆದು) ಈ ಪತ್ರ............... ಹೋದ ವಾರ...........ಆ ಪತ್ರ...........ಅದಕ್ಕಾಂತ ನಿಮ್ಮನ್ನ......

.......ಅಲ್ಲಲ್ಲ..........ಗೋಪಾಲರಾಯರನ್ನ ಭೆಟ್ಟಿಯಾಗಲಿಕ್ಕಂತ ಬಂದೆ. ಮತ್ತ ಗೋಪಾಲ....ರಾ....ಯ....ರೆಂದರೆ....ನೀ...........

ಕೃಷ್ಣ :—ಅಲ್ಲಲ್ಲ, ನಾ ಗೋಪಾಲಲ್ಲ; ಗೊತ್ತಾತು, ಒಳಗೆ ಬರ್ರಿ. ನಾನು ಗೋಪಾಲನ ಗೆಳೆಯ. (ಕುರ್ಚಿ ಕೊಡುತ್ತ) ಕೂಡ್ರಿ. ನಾವೂ ನಿಮ್ಮ ಹಾದೀನs ನೋಡತಿದ್ದಿವಿ. ಆದರ....ಮತ್ತ....ಏನಂದ್ರs....ಏನಿಲ್ಲ ಇಲ್ಲಾ....ಕೂಡ್ರಿ, ಕೂಡ್ರಿ; (ಅವಳು ಕೂಡುವಳು) ಇಲ್ಲಿ ನೋಡ್ರಿ.... ಮತ್ತs ಎಲ್ಲಾ ಸರಿ....ಮತ್ತೇನಂದ್ರ ನಾ ಒಂತುಸಾ ಅವಸರದಾಗ ಇದ್ದೇನಿ. ಈಗಿಂದೀಗ ಡಾಕ್ಟರನ್ನ ಕರಕೊಂಡು ಬರಬೇಕಾಗೇದ. ಅಲ್ಲಿ ನೋಡ್ರಿ, ಗೋಪಾಲ ಅಲ್ಲಿ ಮಲಕೊಂಡಾನ. ಇದೇ ಈಗ ಆತಗ ಸ್ವಲ್ಪ ಮೂರ್ಛಾ ಬಂಧಾಂಗ ಆಗೇದ. (ಅವಳ ಮೈಯದುರುವದು; ಒಮ್ಮೆಲೆ ಗಾಬರಿಯಾಗುವಳು.)

ವೇಣು :—ಹಾ! ಏನಂದ್ರಿ........ನಿದ್ದೆ ಹತ್ತೇದೇನು?

ಕೃಷ್ಣ :—ಇಲ್ಲ; ಸ್ವಲ್ಪ ಎಚ್ಚರ ತಪ್ಪಿಧಾಂಗ ಆಗೇದ; ಇಲ್ಲಿ ಬರ್ರಿ, ನೋಡ್ರಿಲ್ಲೆ (ಅವಳು ಹತ್ತಿರ ಬರಲು ಮೋರೆಯ ಮುಸುಕು ತೆರೆದು ತೋರಿಸುವನು. ಗೋಪಾಲ ಪ್ರಶಾಂತ ಸ್ತಬ್ಧತೆಯಲ್ಲಿ ಮಲಗಿರುವನು. ಆತನನ್ನು ನೋಡುತ್ತಲೇ ಅವಳ ಮೈಯೆಲ್ಲೆಲ್ಲ ನಡುಕ ಹುಟ್ಟಿ ಬಾಯಿಂದ "ಅಯ್ಯೋ!" ಎಂಬ ಆರ್ತಚೀತ್ಕಾರ ಕೇಳಬರುವದು) ವೇಣಕ್ಕಾ, ನೀವು ಸ್ವಲ್ಪ ಇಲ್ಲಿಯೇ ಕುಳಿತಿರ್ರಿ. ಏನು ಹೆದರುವ ಕಾರಣವಿಲ್ಲ. ನಾನು ಓಡಿಹೋಗಿ ಡಾಕ್ಟರರನ್ನು ಕರೆದುಕೊಂಡು ಬರುತ್ತೇನೆ. ಏನೇ ಆಗಲಿ ನೀವು ಹೊತ್ತಿಗೆ ಬಂದದ್ದೂ ಒಂದು ಸುದೈವವೇ! ನಾ ಈಗ ಬಂದೆ, ನೀವಿಲ್ಲೇ ಹತ್ತರ ಕೂತಿರ್ರಿ.

ವೇಣು :—ಆಗಲಿ ಆಗಲಿ; ನಾ ಅವರ್ನ ನೋಡ್ತಿರ್ತೇನಿ. ನೀವು ಲಗೂ ಹೋಗಿ ಡಾಕ್ಟರ್ನ ಕರಕೊಂಡs ಬರ್ರಿ. ನಾ ಏನ್ ಬೇಕಾದ್ದೆಲ್ಲಾ ನೋಡಿಕೋತೇನಿ. (ಕೃಷ್ಣ ಹೊರಗೋಡುವನು. ವೇಣು ಕುರ್ಚಿಯನ್ನು ಪಲ್ಲಂಗದ ಬದಿಗಿರಿಸಿ, ಸುತ್ತಲಿನ ಸಾಮುಗ್ರಿಯನ್ನು ಓರಣಿಸಿ, ಕುರ್ಚಿಯ ಬೆನ್ನನ್ನು ಹಿಡಿದುಕೊಂಡು ಗೋಪಾಲನಲ್ಲಿಯೇ ನೋಟವನ್ನಿರಿಸಿ ನಿಲ್ಲುವಳು) ಈತನ ಮೋರೆಯು ಕಳೆಯೆಷ್ಟು ಆಕರ್ಷಕವಾಗಿದೆ! ನಿಜವಾಗಿ ಈತ

ಬಹಳೇ ಯೋಗ್ಯತೆಯ ಪ್ರಾಣಿಯಿರಬೇಕು. ಆದರೆ....ಪಾಪ....ಇವರಿಗೇನು ದುಃಖವಿರಬಹುದೋ! (ಹತ್ತಿರ ಹೋಗಿ ಆತನ ಹೊದಿಕೆಯನ್ನು ಸರಿಪಡಿಸುವಳು. ಒಬ್ಬಳೇ ಆದುದರಿಂದ ಸ್ವಲ್ಪ ದಂಗಾಗಿ ಸುತ್ತಲೂ ಹುಡುಕುವಾಗ ಆ ಬದಿಯ ಸೆಲ್ಫಿನ ಮೇಲಿದ್ದ ಬೀಸಣಿಕೆ ಕಣ್ಣಿಗೆ ಬೀಳಲು ಅದನ್ನೆತ್ತಿಕೊಂಡು ಬದಿಯ ಕುರ್ಚಿಯ ಮೇಲೆ, ಗಾಳಿಹಾಕುತ್ತ ಕುಳಿತುಕೊಳ್ಳುವಳು. ಕೆಲಹೊತ್ತು ಎಲ್ಲ ಶಾಂತವಾಗಿರಲು, ಗೋಪಾಲ ನಡುವೆಯೇ ಒಮ್ಮೆಲೇ ಮೆಟ್ಟಿಬಿದ್ದು ಚೀರಿಕೊಳ್ಳುತ್ತ ಕೈಚಾಚಿ ಏಳುವನು. ಆತನ ಕೂಗಿನಿಂದ ವೇಣು ತುಂಬ ಗಾಬರಿಗೊಂಡು ಚೀತ್ಕರಿಸಿ ನಡುಗುವಳು. ಬೀಸಣಿಕೆ ಕೆಳಗೆ ಬೀಳುವದು. ಒಂದು ಕೈಯಿಂದ ಪಲ್ಲಂಗದ ತೋಳನ್ನೇ ಆವಚಿಕೊಂಡು ನೆಟ್ಟ ನೋಟದಿಂದ ಅವನನ್ನೇ ನೋಡುತ್ತಿರುವಳು. ಆತ ಕೈಚಾಚಿ ಅವಳನ್ನೇ ಹಿಡಿಯಬಂದಂತೆ ಅವಳ ಗಾಬರಿ ಹೆಚ್ಚಿ ದನಿಯೂ ಹೊಮ್ಮು ಬರುವುದು) ಅಯ್ಯೋ, ದೇವರೇ, ಇದೇನು ಬಂತಪ್ಪಾ; ವಿಚಿತ್ರ ಸಂಕಟ! (ಆತ ಅವಳನ್ನು ಹಿಡಿದುಕೊಳ್ಳಲು ಇನ್ನೂ ಗಾಬರಿಯೂ ನಡುಕವೂ ಹೆಚ್ಚುವುದು.)

ಗೋಪಾಲ :—ಹಾ! ಹಾ! ನನ್ನ ಕಲಾದೇವಿಯೇ, ಕೊನೆಗೆ ನೀನೇ ನನ್ನೆಡೆಗೆ ಬಂದುಬಿಟ್ಟೆಯಾ? ಇಷ್ಟು ದಿನ ಹಲುಬಿ ಹಂಬಲಿಸಿದ್ದರೂ ಅದೇಕೆ ಬಂದಿರಲಿಲ್ಲ? ಹೇ ಸೌಂದರ್ಯನಿಧಿಯೆ! ಕೊನೆಗಿಂದು ನಿನ್ನನ್ನು ಪಡೆದೆ. ಈಗ ನನ್ನ ಕಲೆ ಧನ್ಯವಾಯಿತು. ಈಗ ಬರೆಯುತ್ತೇನೆ; ಬಣ್ಣ ತುಂಬಿಸುತ್ತೇನೆ; ಇಂದಿಗೆ ನನ್ನ ಕುಂಚಗಳಲ್ಲಿ ಹೊಸ ಚೈತನ್ಯ ಹರಿದು ಬಂತು. ಹಾಗೇ ಇರು, ಚೆಲುವಿನ ನೆಲೆಯೇ, ಸ್ಥಿರವಾಗಿರು; ನೈಜವಾಗಿರು. ನನ್ನ ವಾಸ್ತವ ಕಲೆಗೆ ಆಧಾರವಾಗಿ ಇಂತಹ ಸ್ಥಿರಸೌಂದರ್ಯದ ರೂಪೇ ಬೇಕಾಗಿತ್ತು. ಈಸು ದಿನ ಕರಗಿಹೋಗುವ ಬೆಳಕಿನ ಕನಸುಗಳನ್ನು ಕಂಡು ಕೈಸೋತು ಹೋಗಿದ್ದೆ. ಹಾಗೆ ಇರು; ಮಸಳಿಸಬೇಡ ಚೆಲುವೇ! ಮರೆಯಬೇಡ ನನ್ನ ಬಲವೇ! ಬಾರೆನ್ನ ಕಲೆಯೇ! (ಗಾಬರಿಯಲ್ಲಿ ನಡುಗುತ್ತಿದ್ದ ವೇಣು ಸ್ವಲ್ಪ ಕೊಸರಿಕೊಳ್ಳುವಳು. ಗೋಪಾಲ 'ಹಾಯ್ ಹಾಯ್' ಎನ್ನುತ್ತ ಮತ್ತೆ ಉನ್ಮಾದವಶನಾಗಿ ಹಿಂದೆ ಬೀಳುವನು... ಹಾಸಿಗೆಯಲ್ಲಿಯೇ ಹೊರಳಾಡುವನು) ಅಯ್ಯೋ, ಹೋಯ್ತು ಕೃಷ್ಣಾ ಮತ್ತೆ ಹೋಗಿಬಿಟ್ಟಿತು. ಕೃಷ್ಣಾ, ಏ ಕೃಷ್ಣಾ, ಸ್ವಲ್ಪ ನೀರಾದರೂ ಕೊಡು ನಾರಾಯಣಾ. (ವೇಣು ಲಗುಬಗೆಯಿಂದ ನೀರು ತಂದು

ಕುಡಿಸ ಹೋಗುವಳು) ಹಾ ಇಲ್ಲಿ ಬಂದಿತ್ತೊ ಕೃಷ್ಣಾ; ಇಕಾ; ಇಕಾ ಇಲ್ಲೇ........(ವೇಣು ತಡವರಿಸುವಳು) ಹೋತು, ಹೋತು. ಅದ್ಯಾಕ ಸಿಕ್ಕೀತಪಾ! ಕೃಷ್ಣಾ, ನೀರು ತಂದಿಯಾ! ಕುಡಿಸು ಸ್ವಲ್ಪ. ಕಣ್ಣು ಏನು ಉರೀತಾವಂದೀ. ತೆರೆಯುಲಿಕ್ಕೆ ಬರವಲ್ಲವು ನೋಡು. ನೀರು, ಸ್ವಲ್ಪ ನೀರು! (ವೇಣು ಸ್ವಲ್ಪ ಮತ್ತಿಷ್ಟು ಧೈರ್ಯದಿಂದ ಮುಂಬಂದು ಮೆಲ್ಲಗೆ ನೀರು ಕುಡಿಸುವಳು. ನೀರು ಗುಟಕರಿಸುವಂತೆಯೇ ಗೋಪಾಲನ ಕಣ್ಣು ಅರೆಯುರಳಿ ಅವಳ ಕಣ್ಣಲ್ಲೇ ನಾಟ ನಿಲ್ಲುವವು. ಇರ ಇರು ವಂತೆಯೇ ಕಣ್ಣು ಪೂರಾ ಅರಳುವವು. ಇಬ್ಬರೂ ನೋಟ ನೆಟ್ಟು ನಿಲ್ಲು ವರು; ಗೋಪಾಲನಿಗೆ ಒಮ್ಮೆಲೇ ಕಾವ್ಯಸ್ಫೂರ್ತಿಯಾಗುವದು)

“ಬಂತು ಬಂತೆಲೆ ಬಂತು ಮತ್ತೆ ಬಂದಿತು ಚೆಲುವು
ಹೃದಯದೀ ಹಡದಿಯಲಿ ನಡೆದುಕೊಂಡು ।
ನೋಡು! ಈ ಜೀವನದ ಕನಸುಗಳು ಎಚ್ಚತ್ತು
ಸಾಲಾಗಿ ನಿಂತಿಹವು ಹಿಂಡು ಹಿಂಡು ॥

ಬೆಂಕಿಯಲ್ಲೀ ಬೆಳಕು ತಂಪಿನಾ ತವರೂರು
ಕಲ್ಪಕತೆಯರಳಿಸುವ ದಿವ್ಯದೃಷ್ಟಿ ।
ಸಾಕಾರ ರೂಪದಲಿಯವತರಿಸಿತೀ ಚೆಲುವು
ಕಲೆಯ ಬೆಲೆಯಿಳಿಸಿತೀ ನವ್ಯಸೃಷ್ಟಿ ॥

ಕೈಯೆ ಕುಂಚವು ನಿನ್ನ ಮೈಯು ಚಿತ್ರದ ಹಲಗೆ
ಹಾಡುವೀ ಹೃದಯ ಬಣ್ಣದ ಕುಡಿಕೆಯೂ ।
ಹೊಸ ನೋಟದೀ ಹೊಳವು ಮೂಡೆ ಹರಿಯಿತು ಇಂದು
ಧ್ಯೇಯಗಳ ಚಿಂತನೆಯ ಚಡಪಡಿಕೆಯೂ” ॥

ಬಾ. ಬಾ! ನನ್ನ ಜೀವನದಾಸೆಯೇ! ನನ್ನ ಹೃದಯವನ್ನಾರಿಸಿದ ಸತ್ಯ ರೂಪವೇ—ಬಾ, ಬಾ...........(ಅವಳ ಕೈಯನ್ನು ಎದೆಗವಚಿಕೊಂಡು ಒರಗಿಕೊಂಡು ಉನ್ಮಾದಸಮಾಧಿಗತನಾಗುತ್ತಾನೆ. ಅಷ್ಟರಲ್ಲಿ ಕೃಷ್ಣ ಡಾಕ್ಟರರ ಲೆದರಬ್ಯಾಗನ್ನು ಹಿಡಿದುಕೊಂಡು ಲಗುಬಗೆಯಿಂದ ಬರುತ್ತಾನೆ; ವೇಣು-ಗೋಪಾಲರು ಇದ್ದ ಸ್ಥಿತಿಯನ್ನು ನೋಡಿ ಬೆರಗುಗೊಳ್ಳುತ್ತಾನೆ.

ಆತನನ್ನು ಕಂಡು ವೇಣು ಕೈಕೊಸರಿ ಏಳಲು ಯತ್ನಿಸುತ್ತಾಳೆ. ಗೋಪಾಲ ಅವಳನ್ನು ಬಿಡದೆ ಎಳೆದುಕೊಳ್ಳುತ್ತಾನೆ).

ಕೃಷ್ಣ :—ಸರಿ ಸರಿ, ನಾನೇ ಹುಚ್ಚ; ಈ ಗೋಪಾಲನ ಬೇನೆಗೆ ತಕ್ಕ ಮದ್ದು ಕೊಡಬಲ್ಲ ಡಾಕ್ಟರು ಇಲ್ಲಿಯೇ ಬಂದಿದ್ದಾಗ ನಾನು ತಿಳಿಯದೇ ಬೇರೊಬ್ಬ ಡಾಕ್ಟರರನ್ನು ಹುಡುಕಿಕೊಂಡು ಹೋದೆ! (ಗೋಪಾಲ ಕೃಷ್ಣನನ್ನು ಪರಿಶೀಲಿಸುತ್ತಾ ಮೆಲ್ಲಗೆ ಮೆಲ್ಲಕ್ಕೇಳುತ್ತಾನೆ; ಆ ಹೊತ್ತು ಸಾಧಿಸಿ ವೇಣು ಕೈ ಬಿಡಿಸಿಕೊಂಡು ಮೂಲೆಗೆ ಸರಿದು ಹೋಗುತ್ತಾಳೆ).

ಗೋಪಾಲ :—ಕೃಷ್ಣಾ, ಇಷ್ಟೊತ್ತು ಎಲ್ಲಿ ಹೋಗಿದ್ದೆಯೋ ಮಾರಾಯಾ! ಹೊತ್ತಿಗೆ ಸರಿಯಾಗಿ ತಪ್ಪಿಸಿಕೊಂಡಿದ್ದಿಯಲ್ಲಾ. ಈ ಹೊತ್ತು, ಇದೇ ಈಗ ನಾನಿಷ್ಟು ದಿನವೆಲ್ಲ ಕಂಡು ಕಂಡು ಬಣ್ಣದಲ್ಲಿಳಿಸಲಾರದೆ ಸೋತಿದ್ದೆನಲ್ಲಾ ಆ ಅಖಂಡ ಸೌಂದರ್ಯದ ರೂಪು ನನಗೆ ಪ್ರತ್ಯಕ್ಷವಾಗಿ ದರ್ಶನ ಕೊಟ್ಟಿತು. ಇದೊಂದು ಸಾಕ್ಷಾತ್ಕಾರದ ದಿನ ಕೃಷ್ಣ. ಹಿಂದಿನಂತೆ ಹಳವಂಡವಾಗಿ ಅದು ಇಂದು ನನ್ನನ್ನು ಕಾಡಲಿಲ್ಲ. ತನ್ನ ಭೀಕರವಾದ ನಿಸ್ಸೀಮವಾದ ರೂಪವನ್ನು ಬಿಟ್ಟು ಆ ಸೌಂದರ್ಯ ಇಂದು ಪ್ರಶಾಂತವಾದ ರೂಪ ತಾಳಿ ಕೈಯಳವಾಗಿ ಬಂದುಬಿಟ್ಟಿತು. ತನ್ನ ಸತ್ಯಸ್ವರೂಪದಲ್ಲಿ ನನ್ನ ಎದೆ ತಟ್ಟಿತು. ನಿರಂತರವಾದ ನದಿಯಂತೆ ಬೆಳಕನ್ನು ಹರಿಸುವ ಆ ಉಜ್ವಲ ತೇಜಸ್ಸಿನ ಕಣ್ಣುಗಳಿಂದ ನನ್ನ ಸೌಂದರ್ಯದ ಅಧಿದೇವತೆ ನನ್ನನ್ನು ಮುಟ್ಟಿ ತಟ್ಟಿ ಮುಂಡಾಡಿದಳು. ಇಂದು ನನ್ನ ಕಲಾಸಾಧನೆಯ ಸಿದ್ಧಿಯಾಯಿತು. ಇದೋ, ಆ ಅಚ್ಚಳಿಯದ ಸೌಂದರ್ಯದ ನಿಧಿಯು ಈಗಲೂ ನನ್ನೆದುರು ಮೂರ್ತಿಮತ್ತಾಗಿ ನಿಂತುಕೊಂಡಿದೆ (ವೇಣುವನ್ನು ತೋರಿಸುತ್ತ) ಅದೋ ಅಲ್ಲಿ. ಅದೇ ನನ್ನ ಕಲಾಮೂರ್ತಿ! ಅದು ಇನ್ನೆಂದೂ ನನ್ನಿಂದ ಕಳೆದು ಹೋಗಲಾರದು. ಕೃಷ್ಣ, ನಿನಗೂ ಆ ದಿವ್ಯರೂಪವನ್ನು ಕಾಣುವ ಕಣ್ಣುಗಳು ಇರಬಾರದಿತ್ತೇ ಎಂದೆನಿಸುತ್ತದೆ. ಆದರೇನು ನೀನು ಕಲಾಕಾರನಲ್ಲ; ಬರೀ ಕನಸು ಕಾಣುವ ಕವಿ! ನನ್ನಂತೆ ನೀನು ಆ ಸಿದ್ಧಿಗಾಗಿ ತೊಳಲಲಿಲ್ಲ, ಬಳಲಲಿಲ್ಲ; ಅಂದಮೇಲೆ ನಿನಗೆ ಅದು ಕಂಡೀತಾದರೂ ಹೇಗೆ? (ವೇಣುವಿನಲ್ಲೆ ಕಣ್ಣಿಟ್ಟು ಧ್ಯಾನಸ್ಥನಾಗುವನು)

ಕೃಷ್ಣ :—ಆದರೆ ಗೋಪಾಲ ನಿನ್ನ ಕಣ್ಣಿಗೆ ಕಾಣುತ್ತಿರುವ ಆ ದಿವ್ಯ ದೇವತೆಯ ರೂಪು ನಿನ್ನಂತೆಯೇ ನನಗೂ ಅಚ್ಚಳಿಯದೆ ಕಾಣುತ್ತಿರುವದಲ್ಲ!

ಗೋಪಾಲ :—ಇಲ್ಲದ ಸಂಟು ಬಡಿಯಬೇಡಾ! ಆ ರೂಪವನ್ನು ಕಾಣಲು ಕಲಾಕಾರನ ಕಣ್ಣುಗಳೇ ಬೇಕು; ಕಲಾಕಾರನ ಜನ್ಮವೇ ಬೇಕು.

ಕೃಷ್ಣ :—ಆದರೆ ಗೋಪಾಲ; ನಿನ್ನಂಥ ಕಲಾಕಾರನ ಸಹವಾಸಯೋಗದಿಂದ ನನ್ನ ಕಣ್ಣಿಗೂ ಆ ರೂಪು ನಿಚ್ಚಳವಾಗಿ ಕಾಣುವಷ್ಟು ಪರಿಪೂರ್ಣ ವಾಗಿದೆ ಆ ನಿನ್ನ ಸೌಂದರ್ಯಸಾಕ್ಷಾತ್ಕಾರ. ಅದು ನನ್ನಂಥ ಕವಿಯ ಕಣ್ಣಿಗೂ ಕಾಣುವದಲ್ಲದೆ ಸ್ಪರ್ಶಗೋಚರವೂ ಆಗಿದೆ. ನೀನೂ ಕೂಡ ಆ ನಿನ್ನ ಕಲಾದೃಷ್ಟಿಯನ್ನು ಬದಿಗಿರಿಸಿ, ಕೇವಲ ನಿನ್ನ ತೊಗಲಿನ ಕಣ್ಣಿಂದ ನೋಡಿದರೂ ಕೈಯಿಂದ ಮುಟ್ಟಿದರೂ ಅದು ಸಾಧ್ಯವಿದೆ. ಇಕಾ (ವೇಣುವನ್ನು ಕರೆತಂದು ಅವಳ ಕೈಯನ್ನು ಆತನ ಕೈಯಲ್ಲಿರಿಸುತ್ತಾನೆ) ನೋಡಿದಿಯಾ!

ಗೋಪಾಲ :—(ಮೆಲ್ಲನೆ ಎದ್ದು ವೇಣುವನ್ನು ಮುಟ್ಟಿ ತಟ್ಟಿ ನೋಡಿ ಬೆರಗು ಗೊಂಡವನಂತೆ ಕೃಷ್ಣನತ್ತ ಸರಿಯುತ್ತ) ಹೌದೋ ಕೃಷ್ಣಾ............ ಅಕಾ, ಅಲ್ಲಿ ನೋಡು! ಆ ಹೆಂಗಸು ನಿನಗೆ ಕಾಣುತ್ತಾಳೇನು?

ಕೃಷ್ಣ :—ಸ್ಪಷ್ಟವಾಗಿ ನಖಶಿಖಾಂತ ಕಾಣುತ್ತಾಳೆ.

ಗೋಪಾಲ :—ಹಾಗಾದರೆ ನೀನೇನು ಕನಸಿನಲ್ಲಿಲ್ಲವಷ್ಟೇ?

ಕೃಷ್ಣ :—ಛೇ ಛೇ, ನಾನೂ ಇಲ್ಲ; ನೀನೂ ಇಲ್ಲ.

ಗೋಪಾಲ :—ಆದರೆ ಅಲ್ಲಿ ಒಬ್ಬ ರಮಣಿಯು ನಿಂತಿಲ್ಲವೇ? ಅವಳು ಯಾರು ಗೊತ್ತೇ ನಿನಗೆ?

ಕೃಷ್ಣ :—ತಕ್ಕಮಟ್ಟಿಗೆ ಗೊತ್ತಿದೆ. ಆದರೆ ಇಷ್ಟೊತ್ತಿಗೆಂದರೆ ನನಗಿಂತಲೂ ನಿನಗೇ ಅವಳ ಗುರುತು ಹೆಚ್ಚಾಗಿರಬೇಕಲ್ಲ!

ಗೋಪಾಲ :—ಇಲ್ಲ ಬಿಡು. ನನಗವಳ ಗುರುತೇ ಇಲ್ಲ. ಆದರೆ ನನ್ನ ದೃಷ್ಟಾಂತಗಳಲ್ಲಿ ನಾನು ಕಾಣುತ್ತಿದ್ದ ನನ್ನ ಕಲೆಯ ಅಧಿದೈವತೆ

ಯಾವ ಸತ್ಯ-ಸೌಂದರ್ಯಗಳ ಮೂರ್ತಿಯಂತೆಯೇ ಇವಳು ಭಾಸವಾಗುತ್ತಾಳೆ.

ಕೃಷ್ಣ :—ಗೋಪಾಲ, ಇದು ಭಾಸ-ಗೀಸವಲ್ಲ; ಇಷ್ಟು ದಿನ ನೀನು ಹುಡುಕುತ್ತಿದ್ದ ಸೌಂದರ್ಯದ ಸತ್ಯವೇ ಇವಳು. ಈ ತತ್ತ್ವವನ್ನು ನನ್ನ ಕಾವ್ಯ ಕಿವಿಮಾತಾಗಿ ನನಗೆ ಹೇಳಿತ್ತು. ನೀನಿವಳನ್ನು ಹೊಸದಾಗಿ ಅರಿಯುವ ಕಾರಣವೇನಿಲ್ಲ. ನಿನ್ನ ಕಲೆ ಕಣ್ತೆರೆಯುವ ಮೊದಲೇ ನಿಮ್ಮಿಬ್ಬರ ಕಳೆ ಕೂಡಿಹೋಗಿವೆ. ಇವಳು ವೇಣು, ಗೋಪಾಲ!

ಗೋಪಾಲ :—ವೇಣು!—ವೇಣು?..........ಯಾವ ವೇಣು............ ಹಾಂ...........ಹಾಂ (ಧ್ಯಾನಿಸಿ) ಸರಿ ಸರಿ!...........ಹಾಂ! ಆ ವೇಣುವೇ ಇವಳು! (ತಡೆದು) ಛೇ ಛೇ ಕೃಷ್ಣ! ನಿನಗೆ ಭ್ರಮೆ! ಇವಳೊಂದು ಮಾನವೀ ಮೂರ್ತಿಯೆಂದು ತಿಳಿದೆಯೇನು? ನೋಡು ಇವಳು ನನ್ನ ಕಲಾದರ್ಶದ ತದ್ರೂಪ ದೃಷ್ಟಾಂತವಾಗಿದ್ದಾಳೆ—ಅಮರ ಮೂರ್ತಿಯಾಗಿದ್ದಾಳೆ.

ಕೃಷ್ಣ :—ಕಣ್ತೆರೆದು ನೋಡು ಗೋಪಾಲ; ಎಚ್ಚತ್ತು ನೋಡು. ನಿನ್ನ ಕಲಾಲೋಕದಿಂದ ಈ ಮರ್ತ್ಯಲೋಕಕ್ಕೆ ಇಳಿದು ನೋಡು. ಅಲ್ಲಿ ನೀನು ಕಂಡ ಆ ಅಮರಮೂರ್ತಿಯೇ ಇಲ್ಲಿ ವೇಣುವಾಗಿ ಬಂದಿದೆ.

ಗೋಪಾಲ :—ಏನೆಂದಿ! ಅದೇ ಮೂರ್ತಿಯೇ ಇದು! ಅಂ! ಕವಿಗಳಿಗೆ ಇದೆಲ್ಲಾ ಮುಂಗಡವಾಗಿ ತಿಳಿಯುವದುಂಟೇ? (ವೇಣುವನ್ನು ಚೆನ್ನಾಗಿ ದೃಷ್ಟಿಸಿ, ಮೆಲ್ಲನೆ ಅವಳನ್ನು ಸಮೀಪಿಸಿ ಕಣ್ತುಂಬಾ ನೋಡಿ, ಅವಳ ಕೈಹಿಡಿದು ಸವರುತ್ತಾ) ಓ! ಓಹೋ! ಅದೇ ಬೆಳಕು; ಅದೇ ಲಾವಣ್ಯ; ಅದೇ ರೂಪು; ಅದೇ ಸೌಂದರ್ಯ! ಆದರೆ ಇದೆಲ್ಲಾ ಎಷ್ಟು ಸತ್ಯ ಸತ್ಯವಾಗಿದೆಯಲ್ಲಾ! (ಅವಳನ್ನುದ್ದೇಶಿಸಿ) ಹೇ ಚೆಲುವೇ; ನೀನೇನು ವೇಣುವೋ ಇಲ್ಲವೇ ನನ್ನ ಆದರ್ಶಗಳ ನನ್ನ ದೃಷ್ಟಾಂತಗಳ ಅಧಿದೈವತೆಯೋ?

ವೇಣು :—ಹೌದು, ನಾನು ವೇಣು ಅಂತೂ ನಿಜವೇ. ಮತ್ತೆ ನೀವು ಬಯಸಿದರೆ, ನಾನು ಎರಡೂ ಆಗಬಲ್ಲೆ.

ಗೋಪಾಲ :—ಸರಿ, ಸರಿ!...........(ಮೆಲ್ಲಗೆ ಹಾಸಿಗೆಯಲ್ಲಿ ಕುಸಿಬೀಳುತ್ತ, ಅವಳಲ್ಲಿ ನೆಟ್ಟ ನೋಟ ಕೀಳಲಾರದೆ ಕೈಗಳಿಂದ ಕಣ್ಮುಚ್ಚಿ ಕೆಲಹೊತ್ತು ಸುಮ್ಮನಿದ್ದು)...........ಕೃಷ್ಣ, ಈವೊತ್ತು ರವಿವಾರವೇನೋ!

ಕೃಷ್ಣ :—(ನಟನೆಯ ನಮ್ರತೆಯಿಂದ) ಹೌದು ಮಹಾಪ್ರಭೂ.

ಗೋಪಾಲ :—ಹೊತ್ತೆಷ್ಟಾಗಿರಬಹುದೀಗ?

ಕಷ್ಣ :—ಜೀಯಾ, ಮಧ್ಯಾಹ್ನ ಮೂರು ಗಂಟೆ.

ಗೋಪಾಲ :—ಹಾಗಾದರೆ ನಾವು ಗೊತ್ತುಮಾಡಿದ ಹೊತ್ತೇ ಇದು.

ಕೃಷ್ಣ :—ಹೌದು ಒಡೆಯಾ!

ಗೋಪಾಲ :—...........ಮತ್ತೆ...........ಇವಳು ವೇಣು...........ಸರಿ (ಕೃಷ್ಣ ಹೊರಹೊರಡುವದನ್ನು ನೋಡಿ), ಎಲ್ಲಿಗೆ ಹೊರಟೆ ಕೃಷ್ಣಾ?

ಕೃಷ್ಣ :—ಇನ್ನು ಇಲ್ಲೇನು ಕಾರಭಾರ ನನಗೆ; ಇದಿಷ್ಟು ಆ ಡಾಕ್ಟರರಿಗೆ ರಿಟರ್ನ್ಡ್ ವಿಥ್ ಥ್ಯಾಂಕ್ಸ್ ಮಾಡಿ ಬರ್ತೇನಿ.

ವೇಣು :—ಅಲ್ಲ ನೀನು ಡಾಕ್ಟರರನ್ನು ಕರೆತರಲು ಹೋಗಿದ್ದಿಲ್ಲವೇ?

ಕೃಷ್ಣ :—ಹೌದು; ಅವರು ನನ್ನ ಹಿಂದೇ ಹೊರಟಿದ್ದರು; ಆದರೆ ಸಧ್ಯ ಇಲ್ಲಿ ಇಬ್ಬರು ಡಾಕ್ಟರರ ಅವಶ್ಯಕತೆಯೇನಿದ್ದಂತೆ ಕಾಣುವದಿಲ್ಲ. (ಗೋಪಾಲನನ್ನುದ್ದೇಶಿಸಿ) ಕಲಾಮಯರಾದ ರೋಗಿಗಳೇ, ನಿಮಗೆ ತಕ್ಕಂತೆ ಕಲಾಮಯರಾದ ಡಾಕ್ಟರರೇ ಸಿಕ್ಕಿದ್ದಾರಲ್ಲ; ಇನ್ನು ನಮ್ಮದೇನು ಕೆಲಸ ಇಲ್ಲಿ! ಬರುತ್ತೇನೆ ನಾನಿನ್ನು.

ಗೋಪಾಲ:—ಹಾಗಲ್ಲ ಕೃಷ್ಣ. ನಿಲ್ಲು. ಇವೊತ್ತಿನ ಮಾತನ್ನಷ್ಟು ಮುಗಿಸಬೇಕಲ್ಲವೇ?...........ಇವರೂ...........

ಕೃಷ್ಣ :—ಕತೆಯೇ ಮುಗಿದ ಮೇಲೆ ಮಾತೇನುಳಿಯಿತೋ! ತಾರುಣ್ಯದ ಪುಣ್ಯಾಹವಾಚನೆ ತಾನೇ ನಡೆದಾಗ ಕವಿಯ ಪೌರೋಹಿತ್ಯ ಅಲ್ಲಿಗೇ ಮುಗಿದಂತೆ.

ಗೋಪಾಲ :—ವೇಣು, ನಿನ್ನದೇನು ಅಭಿಪ್ರಾಯ?

ಕೃಷ್ಣ :—ಕವಿಗಳು ಸತ್ಯದ ದತ್ತಕ ಪುತ್ರರಲ್ಲವೇ!

ಗೋಪಾಲ :—(ಅವಳನ್ನು ಬದಿಗೆಳೆಯುತ್ತ ಕೈಹಿಡಿದು) ವೇಣು, ಇವೊತ್ತಿನ ಈ ಆಭಾಸವೇ ಅನ್ನು, ಸತ್ಯವೇ ಅನ್ನು—ಇದರ ಉನ್ಮಾದವನ್ನು ನೀನು ನನ್ನ ಬಾಳಿನಲ್ಲಿ ತುಂಬಿಸಬಲ್ಲಿಯಾದರೆ ಈ ಜೀವನವೇ ನಿಜವಾದ ಕಲೆ; ಉಳಿದುದೆಲ್ಲಾ ಹೊಲೆ ಎಂದು ನಾನು ಸಾರಿಸಾರಿ ಹೇಳಬಲ್ಲೆ.

ವೇಣು :—ಆ ಕಲೆಯೇ ನಿಜವಾದ ಸೌಂದರ್ಯ.

ಕೃಷ್ಣ :—ಆ ಕಲೆಯಲ್ಲಿ ಹೆಣ್ಣಿನ ಕೈವಾಡವಿದ್ದರೆ ಅಂಥ ಸೌಂದರ್ಯವೇ ನಿತ್ಯಸತ್ಯ.

ಗೋಪಾಲ :—ನಿಜ ಕೃಷ್ಣ, ನಾನು ಸುಮ್ಮನೇ ಸತ್ಯದ ಮೋರೆಗೆ ಮುಸುಕಿದೆಯೆಂದು ಬಗೆದಿದ್ದೆ.

ವೇಣು :—ಮುಸುಕಿದ್ದರೆ, ಅದಿರುವುದು ಕಣ್ಣಿಗಲ್ಲದೆ ಸತ್ಯಕ್ಕಲ್ಲ.

ಕೃಷ್ಣ :—ಗೋಪಾಲ; ಇಷ್ಟು ದಿನ ಪಂಡಿತರಿಗೂ ತಿಳಿಯದ ಗೊಡ್ಡು ತತ್ತ್ವಗಳ ಗುಡ್ಡಗಳನ್ನೇ ಹೊರುತ್ತಿದ್ದೆ; ಇದೀಗ ಪಾಮರರೂ ತಿಳಿಯುವಂಥ ಈ ಒಂದು ಮುತ್ತಿನಂಥ ಕೆಲಸ ಮಾಡಿದೆಯಲ್ಲ; ಇದೇ ನಿಜವಾದ ಕಲೆ. ಇನ್ನುಮೇಲೆ ನೀನು ಸತ್ಯಸೌಂದರ್ಯಗಳ ಆದರ್ಶವುಳ್ಳ ಚಿತ್ರಗಳನ್ನು ಬೇಕಾದಷ್ಟು ಬಣ್ಣಿಸು ಗೋಪಾಲ!

ಗೋಪಾಲ :—ಇನ್ನಾ ಕಲೆಗೆ ನಮಸ್ಕಾರ. ಈ ಚೆಲುವನ್ನು ಪ್ರತ್ಯಕ್ಷವಾಗಿ ಪಡೆದ ಮೇಲೆ ನನ್ನ ಚಿತ್ರಗಳೆಲ್ಲಾ ಈ ದೇವಿಗೆ ನಿವಾಳಿಸಲು ತಕ್ಕುವಾದಾವು.

ವೇಣು :—ಸರಿ, ಇನ್ನುಮೇಲೆ ಜೀವನದ ಕಲೆಯೇ ಕಲೆ!

ಕೃಷ್ಣ :—ಹಾಗಾದರೆ ಕಪಿ ಗೆದ್ದಂತಾಯಿತಲ್ಲವೇ ಗೋಪಾಲ! ಕಲೆಯ ಸೀಮೆ ಮುಗಿದಲ್ಲಿ ಕಾವ್ಯದಾರಂಭವೆಂದು ನಾನೆಂದಿರಲಿಲ್ಲವೇ! ನಿಮ್ಮ ಜೀವನದ ಅಖಂಡ ಕಾವ್ಯದ ನಾಂದಿ ಇಂದಾಯಿತು. ಸತ್ಯ–ಸೌಂದರ್ಯಗಳಿಗೆ ಕಲೆಯು ಕಟ್ಟು, ಪ್ರೀತಿಯ ಛಂದವಿದ್ದಲ್ಲಿ ಜೀವನದ ಕಾವ್ಯ ಪುಟಿದು ಬಂದೀತು. ಆಗಲೇ ನಾನು ಹೊರಗಿನಿಂದ ಬರುತ್ತಿದ್ದಾಗ್ಗೆ,

ವೇಣುವಿನ ಮೊದಲ ಸೋಂಕಿಗೆ ನಿನ್ನ ಕಲೆ, ಕಾವ್ಯವಾಗಿ ಹೋಗ
ಚಿಮ್ಮಲಿಲ್ಲವೇ! ಈಗ ಹೇಳು ಕಲೆ ಹೆಚ್ಚೋ ಕಾವ್ಯ ಹೆಚ್ಚೋ?

ಗೋಪಾಲ :—ಇದಕ್ಕೆ ನಮ್ಮ ಕಲಾದೇವಿಯೇ ತೀರ್ಪು ಕೊಡಲಿ.

ವೇಣು :—(ಕೃಷ್ಣನನ್ನನುಲಕ್ಷಿಸಿ) ಜೀವನದ ಕಾವ್ಯವನ್ನು ಗುರುತಿಸುವದೂ ಒಂದು ಕಲೆಯೆಂಬದನ್ನು ಕವಿಗಳೂ ಮರೆಯಬಾರದು; (ಗೋಪಾಲನನ್ನನುಲಕ್ಷಿಸಿ) ಕಲೆ ಸಜೀವವಾದಂತೆ ಆವಿಷ್ಕರಿಸಿ ಎದೆಯಲ್ಲಿ ಮಾತು ಮೊಳಗಿಸುವಂತಾಗುವದೇ ಕಾವ್ಯವೆಂದು ನಮ್ಮ ಕಲಾಕಾರರೂ ಮರೆಯಬಾರದು. ಮೌನಿಯಾದ ಕಾವ್ಯವೇ ಕಲೆ; ಹಾಡುಕ್ಕಿಸುವ ಕಲೆಯೇ ಕಾವ್ಯ!

ಗೋಪಾಲ :
ಕೃಷ್ಣ : } ಸರಿಯಾದ ತೀರ್ಪು, ಸರಿಯಾದ ತೀರ್ಪು.

(ವೇಣು ನಡುವಾಗುವಂತೆ ನಿಂತು ಮೂವರೂ ಕೈಹಿಡಿದುಕೊಂಡು ಉಲ್ಲಾಸಪರರಾಗುತ್ತಾರೆ; ತೆರೆ ತಟ್ಟನೆ ಇಳಿಯುತ್ತದೆ.)

— ಮುಗಿಯಿತು —